ಸಂವಾದ

ಸೆಪ್ಟೆಂಬರ್ ೨೦೦೭ ರೂ. ೨೦



ನೆನಪು:
ಬರ್ಗ್‌ಮನ್



ಗೌರವ:
ಸಾಯಿನಾಥ್

ಮನಸು ಕದಡಿದ ಬಾಲಕರ ಬವಣೆ

ಸಂವಾದ

ಮಾಸ ಪತ್ರಿಕೆ

ಸಂಪುಟ ೫ ಸಂಚಿಕೆ ೧೧
ಸೆಪ್ಟೆಂಬರ್ ೨೦೦೭

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಾ॥ ಡಿ. ಡೊಮಿನಿಕ್
ಬಿ.ಯು.ಸುಮಾ
ಡಾ॥ ಜಿ. ಪಾಂಡುನಾಯಕ್
ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ
ಅಂಜನಾನಗರ, ಮಾಗಡಿ ರಸ್ತೆ.
ವಿಶ್ವನೀಡಂ ಅಂಚೆ
ಬೆಂಗಳೂರು-೫೬೦ ೦೯೧
✆ ೨೩೨೮೭೯೪೩/೯೪೪೮೦ ೪೮೩೦೬
ಇ-ಮೇಲ್ : samvaada@hotmail.com
honnapura@yahoo.co.in

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
✆ 080-23287943, 94480 48306
e- mail : samvaada@hotmail.com
honnapura@yahoo.co.in

EDITOR :
INDUDHARA HONNAPURA

ಒಳಪುಟಗಳಲ್ಲಿ

- ಪತ್ರಗಳು ೦೩
- ಹೊಸ ಪುಸ್ತಕ ೦೪
- ಅಂತರಂಗ ೦೫
- ಮುಂಬೈ ಸ್ಫೋಟದ ತೀರ್ಪು ೦೬
  - ನಾ. ದಿವಾಕರ
- ನಕ್ಸಲ್ ಚಳವಳಿಯ ಗೆಳೆಯರಿಗೆ... ೦೮
  - ಕಿರಣ ಎಂ. ಗಾಜನೂರು
- ಗ್ರಾಮೀಣ ಭಾರತ... ೧೦
  - ಪಿ. ಸಾಯಿನಾಥ್







- ವಿಶಿಷ್ಟ ಪತ್ರಕರ್ತ ಪಿ. ಸಾಯಿನಾಥ್ ೧೨
  - ಅನುಪಾ ಹೊನ್ನೇಕೂಲು
- 'ನಾನು ಡಾಕ್ಟರ್ ಆಗದಿದ್ದರೆ... ೧೪
  - ಅಜಯ್ ಕುಮಾರ್‌ಸಿಂಗ್
- ಮದ್ರಾಸ್ ಐಐಟಿ: ಮೀಸಲಾತಿಯಲ್ಲಿ ದಲಿತರಿಗೆ ಪಂಗನಾಮ ೧೫
  - ಪಿ.ಸಿ.ವಿ. ಕುಮಾರ್
- ಬುದ್ಧನೆಡೆಗೆ ಮರಳಿ ಮನೆಗೆ
  - ವಿ. ಶ್ರೀನಿವಾಸ ಪ್ರಸಾದ್ ೧೮
  - ಇಂದೂಧರ ಹೊನ್ನಾಪುರ ೨೦
- ಮೆರವಣಿಗೆ (ಕಥೆ) ೨೪
  - ಡಾ॥ ಅನಸೂಯ ಕಾಂಬಳೆ
- ಮನಸ್ಸು ಕದಡಿದ ವಾಚಕರವಾಣಿ ೨೮
  - ರಹಮತ್ ತರೀಕರೆ
- ಚೆಸ್ ಆಟದಲ್ಲಿ ಸೋತ ಎರ್ನಸ್ಟ್ ಇಂಗ್ಮರ್ ಬರ್ಗ್‌ಮನ್ ೩೧
  - ಕೃಷ್ಣ ಮಾಸಡಿ
- ದಲಿತ ಸಂಸ್ಕೃತಿ ಪರಿಭಾಷೆಗಳು ೩೪
  - ಲಕ್ಕೂರು ಸಿ. ಆನಂದ
- ದಲಿತ್ ಡೈರಿ ೩೮
  - ಚಂದ್ರಭಾನ್ ಪ್ರಸಾದ್/ ಡೊಮಿನಿಕ್
- ಬುದ್ಧಾಯಣ ೪೨
  - ಸಿ. ಎಚ್. ರಾಜಶೇಖರ್

ಕವನಗಳು :
- ಪಯಣದ ಕೊನೆಯ ಹಾದಿಯೂ... ೧೭



ಮುಖಪುಟ ವಿನ್ಯಾಸ: ರಾಠೋಡ್
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)



ಚಾಮಲಾಪುರಕ್ಕೆ ಬೆಂಕಿ ಹಚ್ಚಿ ನಂದಿಸದಿರಿ ಮೈಸೂರನ್ನು

ಪ್ರಿಯ ಸಂಪಾದಕರೇ

ಕಲ್ಲಿದ್ದಲನ್ನು ಅವಲಂಬಿಸುವ ಉಷ್ಣ ವಿದ್ಯುತ್ ಉತ್ಪಾದಿಸುವ ಸ್ಥಾವರ ಚಾಮಲಾಪುರದಂತಹ ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಸ್ಥಾಪಿಸಲು ಹೊರಟಿರುವುದಕ್ಕೆ ಮೈಸೂರಿನ ಜಿಲ್ಲಾದ್ಯಂತ ಜನರು ವಿರೋಧಿಸುತ್ತಿದ್ದಾರೆ. ಏತನ್ಮಧ್ಯೆ ವಿಜ್ಞಾನಿಗಳು ಇಂತಹ ಸ್ಥಾವರಗಳ ಬಗ್ಗೆ ಪ್ರಚಾರ ಮಾಡುತ್ತಿರುವ ಸ್ತುತಿ ಸ್ತೋತ್ರಗಳನ್ನು ಆಲಿಸಿದರೆ ಈ ಯೋಜನೆ ಒಂದು ಪಟ್ಟಭದ್ರ ಹಿತಾಸಕ್ತಿಗಳ ಕೃಪಾ ಪೋಷಿತ ಮೇಳದ "ಭಸ್ಮಾಸುರ" ಪ್ರಸಂಗದ ಬಗ್ಗೆ ಸಂಶಯ ಉಳಿಯುವುದಿಲ್ಲ.

ಉಷ್ಣವಿದ್ಯುತ್ ಸ್ಥಾವರಕ್ಕೆ ಇಂಧನವಾಗಿ ಭಾರತದಲ್ಲಿ ಬಹುಮಟ್ಟಿಗೆ "ಸಿ" ಗ್ರೇಡ್ ಗುಣಮಟ್ಟದ ಕಲ್ಲಿದ್ದಲನ್ನು ಬಳಸಿ, ಪರಿಸರವನ್ನು ಡಿಗ್ರೇಡ್ ಮಾಡಲಾಗುತ್ತಿದೆ– ಬದಲಿ ಇಂಧನವನ್ನಾಗಿ ಅನಿಲವನ್ನೋ, ತೈಲವನ್ನೋ ಬಳಸಬಹುದಾದರೂ ದೇಶದ ಉಷ್ಣ ವಿದ್ಯುತ್ ಸ್ಥಾವರಗಳ ಪೈಕಿ ಶೇ. ೮೨.೫ ಕಲ್ಲಿದ್ದಲಾಧಾರಿತವೇ ಆಗಿವೆ. ಉಳಿದಂತೆ ಶೇ. ೧೬ ಅನಿಲಾಧಾರಿತ ಹಾಗೂ ಶೇ. ೧.೫ ತೈಲಾವಲಂಭಿತ. ಈ ಕಲ್ಲಿದ್ದಲಾಧಾರಿತ ಸ್ಥಾವರಗಳು ವಾಯು ಮಾಲಿನ್ಯ ಉಂಟು ಮಾಡುವುದರಲ್ಲಿ ಅಗ್ರಸ್ಥಾನದಲ್ಲಿವೆ. ತ್ಯಾಜ್ಯ ಉತ್ಪಾದನೆಯಲ್ಲೂ, ನೀರಿನ ಬಳಕೆಯಲ್ಲಿ ಇವು ಮೇಲುಗೈ ಸಾಧಿಸಿವೆ. ಮಿಗಿಲಾಗಿ ಇಂಗಾಲದ ಡೈ ಆಕ್ಸೈಡ್‌ನಂತಹ ಹಸಿರು ಮನೆ ಅನಿಲದ ಹೇರಳ ವಿಸರ್ಜನೆ–ಇವುಗಳ ಸಾಧನೆ.

ಮೈಸೂರಿನಲ್ಲಿ ಈಗಾಗಲೇ ಕುಡಿಯುವ ನೀರಿನ ಸಮಸ್ಯೆ ಬಹಳಷ್ಟಿರುವುದರಿಂದ ಹಾಗೂ ಕಬಿನಿ ಸುತ್ತ ಮುತ್ತ ಪ್ರದೇಶಗಳಿಗೆ ರೈತರಿಗೂ ನೀರು ಕೊಡಲು ಸಾಧ್ಯವಾಗಿಲ್ಲ. ಇಂತಹುದರಲ್ಲಿ ಈ ಕಲ್ಲಿದ್ದಲಿನ ಸ್ಥಾವರ ಚಾಮಲಾಪುರಕ್ಕೆ ಬಂದರೆ ಜಾಸ್ತಿ ಪ್ರಮಾಣದ ನೀರು ಇಲ್ಲಿಗೆ ಸರಬರಾಜು ಮಾಡಬೇಕಾಗುತ್ತದೆ.

ಇದಲ್ಲದೆ ಮೈಸೂರು ನಗರ ಒಂದು ಪಾರಂಪರಿಕ ಸಾಂಸ್ಕೃತಿಕ ಮತ್ತು ಪ್ರವಾಸೋದ್ಯಮ ನಗರವೆಂದು ಹೆಸರು ಪಡೆದಿದೆ. ಕೆ.ಆರ್.ಎಸ್., ಕಬಿನಿ, ತಾರಕ, ನಾಗರಹೊಳೆ, ಬಂಡಿಪುರ, ಮೈಸೂರು ಮುಂತಾದವುಗಳಿಗೆ ಈ ಉಷ್ಣ ವಿದ್ಯುತ್ ಸ್ಥಾವರದಿಂದ ಬಹಳಷ್ಟು ಅಪಾಯಕಾರಿ.

ಕಲ್ಲಿದ್ದಲು ಬಳಸುವ ೫೦೦ ಮೆಗಾವ್ಯಾಟ್ ಸಾಮರ್ಥ್ಯದ ಒಂದು ಉಷ್ಣ ವಿದ್ಯುತ್ ಸ್ಥಾವರ ದಿನ ಒಂದಕ್ಕೆ ೧೦೫ ಟನ್‌ನಷ್ಟು ಗಂಧಕದ ಡೈ ಆಕ್ಸೈಡ್‌ನ್ನು, ೨೪ ಟನ್ ನೈಟ್ರಸ್ ಆಕ್ಸೈಡನ್ನೂ, ಎರಡೂವರೆ ಟನ್ ತ್ಯಾಜ್ಯ ವಸ್ತುಗಳನ್ನು, ಮೂರೂವರೆ ಸಾವಿರ ಟನ್‌ನಷ್ಟು ಹಾರುಬೂದಿಯನ್ನೂ ವಿಸರ್ಜಿಸುತ್ತದೆ. ದಿನವೊಂದಕ್ಕೆ ಒಂದು ಟನ್ ಹಾರು ಬೂದಿ ವಿಲೇವಾರಿಗೆ ಒಂದು ಚದರ ಮೀಟರ್ ಭೂಮಿ ಬೇಕಾದೀತೆಂಬ ಲೆಕ್ಕ ಹಿಡಿದರೂ ೧೦೦೦ ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಗೂ ೮೦ ಘನ ಮೀಟರ್‌ನ ನೀರನ್ನು ಕುಡಿದು, "ಜಲ ಪಿಶಾಚಿ"ಗಳಂತೆ ವರ್ತಿಸುತ್ತವೆ.

ಈ ಸ್ಥಾವರಗಳಿಂದ ಪಾದರಸದಂತಹ ವಿಷಯುಕ್ತ ಲೋಹದ ಅಂಶವೂ ಹೊರಬೀಳುತ್ತದೆ. ಇದಕ್ಕೆ ಕಾರಣ, ಭಾರತದ ಕಲ್ಲಿದ್ದಲಿನ ೦.೨೫ ಪಾಲಿನಲ್ಲಿ ಪಾದರಸ ಸೇರಿದೆ. ಇಂಥ ವಿಷಪೂರಿತ ಸ್ಥಾವರವನ್ನು ಹೊರುವ ಶಕ್ತಿ ಚಾಮಲಾಪುರದಂತಹ ಪ್ರದೇಶಕ್ಕಿದೆಯೇ? ಮೈಸೂರು ಸುತ್ತಮುತ್ತಲ ಪ್ರದೇಶದಲ್ಲಿ ಕಳೆದೊಂದು ದಶಕದಲ್ಲಿ ನಶಿಸಿಹೋದ ವಿಶಿಷ್ಟ ಜಾತಿಯ ಪ್ರಾಣಿ ಸಂತತಿಗಳು, ಸಸ್ಯ ಸಂಕುಲಗಳು, ಅರಣ್ಯ, ಕೆರೆಗಳು ಕೃಷಿ ಭೂಮಿಗಳು ಕಳೆದ ೧೦೦೦ ವರ್ಷಗಳಲ್ಲಿ ಉಂಟಾದ ನಷ್ಟದಷ್ಟೇ ಆಗಿದೆ.

ಇಂತಹ ಉಷ್ಣ ವಿದ್ಯುತ್ ಸ್ಥಾವರವನ್ನು ದಕ್ಷಿಣ ಭಾರತದ ಪರಿಸರ ಸೂಕ್ಷ್ಮ ಪ್ರದೇಶದ ಫಲವತ್ತಾದ ಕೃಷಿ ಭೂಮಿಯಲ್ಲಿ ಸ್ಥಾಪಿಸಬೇಕೇ? ಇಲ್ಲಿಯ ಅಳಿದುಳಿದ ಪರಿಸರಗಳು, ರೈತರು, ಗ್ರಾಮಸ್ಥರು, ಹಾರುಬೂದಿಯ ನಾಮ ಬಳಿದುಕೊಂಡು ನಿರ್ನಾಮವಾಗಬೇಕೆ? ಜನರ ಸ್ವಾಸ್ಥ್ಯ ಕೆಡಿಸುವಂತಹ ಈ ವಿಷಪೂರಿತ ಘಟಕದಿಂದ ಜೀವ ಸಂಕುಲ ನಾಶವಾಗಬೇಕೆ? ಬೇರೆಯವರಿಗೆ ಬೆಳಕು ನೀಡಲು ಹೋಗಿ ಮೈಸೂರಿನ ಬೆಳಕನ್ನು ನಂದಿಸದಿರಿ!

ಎಂ. ಲಕ್ಷ್ಮಣ,
(ಸಂಚಾಲಕರು–ಎ.ಸಿ.ಐ.ಸಿ.ಎಂ)
ಮೈಸೂರು

ಪತ್ರಗಳು

ಕಲಾತ್ಮಕ ಅರ್ಥವಂತಿಕೆ

ಪ್ರಿಯ ಸಂಪಾದಕರೆ,

ಜೂನ್ ತಿಂಗಳ ಸಂವಾದ ನೋಡಿದೆ. ತುಂಬಾ ಚೆನ್ನಾಗಿ ಮೂಡಿ ಬಂದಿದೆ. ಇಂದಿನ ದಿನಗಳಲ್ಲಿ ಹಗಲು ಗರ್ಭಗಳನ್ನೇ ಸೀಳಿ ಹೊರ ಬರುವ 'ಬ್ಲಾಕ್ ಪೇಪರ್ಸ್' (Black Papers)ಗಳು ಸೃಷ್ಟಿಯಾಗುತ್ತಿರುವ ಸಂದರ್ಭದಲ್ಲಿ ಸಾಹಿತ್ಯಿಕ, ಸಾಂಸ್ಕೃತಿಕ, ರಾಜಕೀಯ ವಾತಾವರಣದ ಸಂದರ್ಭದಲ್ಲಿ ತನ್ನ ವಿಶಿಷ್ಟತೆಯನ್ನು ಮೆರೆಯುವ ಪತ್ರಿಕೆಯಾಗಿ, ಅರ್ಥವಂತಿಕೆಯಿಂದ 'ಸಂವಾದ' ಮೂಡಿಬರುತ್ತಿದೆ ಲೇಖನಗಳು ಅರ್ಥವತ್ತಾಗಿ, ವಿಚಾರ ಪೂರ್ಣ ಚರ್ಚೆಗೆ ಆಹ್ವಾನಿಸುವ ಧಾಟಿಯಲ್ಲಿವೆ. ಕವಿತೆಗಳು ಮತ್ತೆ ಮತ್ತೆ ಓದಬೇಕೆನಿಸುತ್ತವೆ. ಇಂತಹ ಕಲಾತ್ಮಕ ಅರ್ಥವಂತಿಕೆಗೆ ಸಾಕ್ಷಿಯಾದ ತಮಗೆ ಧನ್ಯವಾದಗಳು.

ಗುಂಡೀಗೆರೆ ವಿಶ್ವನಾಥ್
ಬೆಂಗಳೂರು

ವಿತಂಡ ರಾಜಕಾರಣ; ವಿಫಲ ಮನಸ್ಸು

ಪ್ರಿಯ ಸಂಪಾದಕರೇ,

ಇಂದು ಬೆಳಿಗ್ಗೆ ಡಿಪಾರ್ಟ್‌ಮೆಂಟ್‌ಗೆ ಬಂದವನೆ ಪ್ರಮುಖ ಕೆಲಸ ಮುಗಿಸಿದಾಗ ಮನಸ್ಸು ನಿರಾಳವಾಗಿತ್ತು. ಟೇಬಲ್ಲಿನ ಮೇಲೆ ಕಣ್ಣು ಹಾಯಿಸಿದಾಗ 'ಸಂವಾದ' ಕಂಡು ನಿಮ್ಮಗಳ ನೆನಪು ಬಂತು. ಮೊದಲು ಸಂಪಾದಕರಿಗೆ ಬರೆದ ಪತ್ರ ಓದಿದೆ. ಮಾಯಾವತಿಯವರ ರಾಜಕೀಯ ವಿತಂಡತ್ವ ಮತ್ತು ದಲಿತರ ಇಬ್ಬಂದಿ ವಿಚಾರ ಮತ್ತು ನೀತಿಯ ಬಗ್ಗೆ ಎಚ್.ಎಸ್. ದೊರೆಸ್ವಾಮಿರವರ ಅವರ ಅನಿಸಿಕೆಯಲ್ಲಿ ಸತ್ಯ ಮತ್ತು ನಿಷ್ಠುರತೆ ಇತ್ತು ಎಂದೆನಿಸಿತು.

ಬಸವಣ್ಣ ಯಾರಾದರೇನಂತೆ? ಆತನ ವಿಚಾರಧಾರೆ ಮರೆತು ಬಸವಣ್ಣನನ್ನೆ 'ಬಂಡವಾಳ' ಮಾಡಿಕೊಂಡಿರುವ ಲಿಂಗಾಯತರಿಗೆ ಬಸವಣ್ಣ ಬ್ರಾಹ್ಮಣನಲ್ಲದಿರಬಹುದು, ಅದರಲ್ಲೂ ದಲಿತನಾಗಿದ್ದಿರಬಹುದು ಎನ್ನುವ ವಿಷಯ ಆಘಾತ ಉಂಟುಮಾಡಿರುವುದರಲ್ಲಿ ಆಶ್ಚರ್ಯವೇನಿದೆ? ಲಿಂಗಾಯತರು ದಿವಾಳಿತನದ ಬಗ್ಗೆ ಹೇಸಿಗೆ ಉಂಟಾಗುತ್ತದೆ. ಇವರ 'ಹೋರಾಟ' ಬಸವಣ್ಣನವರ ವಿಚಾರಧಾರೆಗೆ ತಂದ ಅಪಮಾನವೆಂದೆನಿಸಿ ಕೋಪವುಂಟಾಗುತ್ತದೆ.

ಸಣ್ಣಕತೆ 'ಬಲಿ'ಯನ್ನು ಎವೆಯಿಕ್ಕದೆ ಓದಿ ಮುಗಿಸಿದೆ. 'ಬಲಿ' ನನ್ನನ್ನು ಒಲಿಸಿತಾದರೂ ಒಂದು ತಾಸಿನ ಮೊದಲು ನಿರಾಳವಾಗಿದ್ದ ನನ್ನ ಮನಸ್ಸು ವಿಫಲಗೊಂಡು ವಿಲವಿಲ ಒದ್ದಾಡಿತು.

ಬಿ.ಎಸ್. ಸತ್ಯನಾರಾಯಣ
ಕೃಷಿವಿಶ್ವವಿದ್ಯಾಲಯ, ಬೆಂಗಳೂರು

'ಕಾಯ್ದಿಟ್ಟುಕೊಳ್ಳುವ ಪತ್ರಿಕೆ'

ಮಾನ್ಯ ಸಂಪಾದಕರೇ,

'ಸಂವಾದ' ಕಾಯ್ದಿಟ್ಟುಕೊಳ್ಳುವ ಪತ್ರಿಕೆ ಎಂದು ಬೇರೆ ಹೇಳಬೇಕಾಗಿಲ್ಲ. ಇದು ತನ್ನ ಘನತೆಯನ್ನು ಹೆಚ್ಚಿಸಿಕೊಳ್ಳುತ್ತಲೇ ಸಾಗಿದೆ. ಕಳೆದುಹೋದ 'ಸುದ್ದಿ ಸಂಗಾತಿ'ಯನ್ನು ಮರೆಯಿಸುವ ಶಕ್ತಿ ಇದಕ್ಕಿದೆ.

ಅರ್ಜುನ ಕೋರಟಕರ, ಜಮಖಂಡಿ

ಚಂದಾ ವಿವರ

ಬಿಡಿ ಪ್ರತಿ ರೂ.೨೦/-

೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವಿದ್ಯಾರ್ಥಿಗಳು/ಕಾರ್ಯಕರ್ತರಿಗೆ		
ರೂ.೧೦೦/-	ರೂ.೩೦೦/-	ರೂ.೫೦೦/-
ನೌಕರರು ಮತ್ತು ವೃತ್ತಿಪರರಿಗೆ		
ರೂ.೨೦೦/-	ರೂ.೫೦೦/-	ರೂ.೮೦೦/-
ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ		
ರೂ.೨೪೦/-	ರೂ.೬೦೦/-	ರೂ.೧೦೦೦
ವಿಶೇಷ ಹಿತೈಷಿ ಚಂದದಾರರಿಗೆ		
ರೂ.೫೦೦/-	ರೂ.೧೫೦೦/-	ರೂ.೨೫೦೦/-

ಆಜೀವ ಚಂದಾ ರೂ.೫,೦೦೦/-
ಪೋಷಕ ಚಂದಾ ರೂ.೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು.

ಹೊಸ ಪುಸ್ತಕ

ರಂಗಸಿರಿ

ಲೇ: ಡಾ. ಗವಿಸಿದ್ದಪ್ಪ ಎಚ್.ಪಾಟೀಲ್

ಬೆಲೆ: ರೂ. ೭೫/-

ಉತ್ತಮ ಅಧ್ಯಾಪಕ, ಕವಿ, ಕತೆಗಾರ, ಸಂಶೋಧಕ, ಭಾಷಣಕಾರ, ಸಾಹಿತಿಯಾಗಿ ಗಮನ ಸೆಳೆದಿರುವ ಡಾ. ಗವಿಸಿದ್ದಪ್ಪ ಪಾಟೀಲರ ಉಪನ್ಯಾಸ, ಅಭಿನಂದನಾ ಗ್ರಂಥ, ಪತ್ರಿಕೆಗಳಲ್ಲಿ ಪ್ರಕಟಗೊಂಡಿರುವ ಸಾಂದರ್ಭಿಕ ಲೇಖನಗಳ ಸಂಗ್ರಹ ಈ ಕೃತಿ. ಕನ್ನಡ ವೃತ್ತಿ ರಂಗಭೂಮಿ, ನಾಟಕ, ಸಾಹಿತ್ಯ ಕುರಿತು ಬರೆದ ಲೇಖನಗಳು ಇಲ್ಲಿವೆ. ಹವ್ಯಾಸಿ ತಂಡಗಳು, ರಂಗಭೂಮಿ ಕುರಿತ ಸಮಗ್ರ ಪರಿಚಯ ಇದೆ. ರಂಗ ಭೂಮಿ ಕುರಿತಂತೆ ಸಂಶೋಧನೆ ಮಾಡುವ ವಿದ್ಯಾರ್ಥಿಗಳ ಅಧ್ಯಯನಕ್ಕೆ ಯೋಗ್ಯ ಕೃತಿ.

ಪ್ರಕಾಶಕರು: ಶ್ರೀ ಸಿದ್ದಲಿಂಗೇಶ್ವರರ ಪ್ರಕಾಶನ, ಗುಲ್ಬರ್ಗಾ

ದೇಸಿ ನಗು

ಲೇ: ಎಂ.ಎಸ್.ಮೂರ್ತಿ

ಬೆಲೆ: ರೂ. ೭೫/-

ಚಿತ್ರ ಕಲಾವಿದ ಎಂ.ಎಸ್. ಮೂರ್ತಿ ಅವರ ಪ್ರಬಂಧಗಳ ಸಂಕಲನ ಈ ಕೃತಿ. ದಶಕಗಳ ಹಿಂದೆ ಪತ್ರಿಕೆಗಳಲ್ಲಿ ಪ್ರಕಟ ಗೊಂಡ ಅಂಕಣ, ಲೇಖನಗಳು ಇಲ್ಲಿವೆ. ಕಲಾವಿದ ಬಾಲ್ಯದ ಬದುಕಿನಲ್ಲಿ ಕಂಡ, ಹುಟ್ಟಿಕೊಂಡ ಪ್ರಶ್ನೆಗಳು, ಸಂವೇದನೆಗಳು, ಕುತೂಹಲಗಳಿಂದ ರೂಪುಗೊಂಡ ಪ್ರಬಂಧಗಳು ಇವು. ಕೆಲವು ವ್ಯಕ್ತಿ ಚಿತ್ರಗಳನ್ನೂ ಈ ಕೃತಿ ಒಳಗೊಂಡಿದೆ. ಶೀರ್ಷಿಕೆ ಅತ್ಯಾಕರ್ಷಕ. ಇಲ್ಲಿನ ಪ್ರಬಂಧಗಳು ಸುಲಭವಾಗಿ ಓದಿಸಿ ಕೊಂಡು ಹೋಗುತ್ತವೆ. ಕಲಾವಿದನೊಬ್ಬನ ಸಾಮಾಜಿಕ ಜವಾಬ್ದಾರಿಗೆ ಕೃತಿ ಸಾಕ್ಷಿಯಾಗಿದೆ.

ಪ್ರಕಾಶಕರು: ಅಭಿನವ ಪ್ರಕಾಶನ, ಬೆಂಗಳೂರು.



ಶಬ್ದವಿಲ್ಲದ ಯುದ್ಧ

ಲೇ; ಬರಗೂರು ರಾಮಚಂದ್ರಪ್ಪ

ಬೆಲೆ: ರೂ. ೧೩೦/-

ಸಾಹಿತ್ಯ, ಸಿನಿಮಾ, ಜನಸಂಸ್ಕೃತಿಯ ಕ್ಷೇತ್ರದಲ್ಲಿ ತಮ್ಮ ವಿಶಿಷ್ಟ ಚಿಂತನೆ ಮತ್ತು ಕ್ರಿಯೆಯ ಮೂಲಕ ನಾಡಿನ ಸಾಮಾಜಿಕ ಚಲನೆಗೆ ಕಾರಣರಾದ ಬರಗೂರರ ಈ ಕೃತಿ ಸಾಹಿತ್ಯ ಲೋಕಕ್ಕೆ ಮತ್ತೊಂದು ಮೌಲಿಕ ಕೊಡುಗೆ. ಕೃತಿಯ ಮೊದಲ ಭಾಗದಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದ ಚಿಂತನಾ ಲೇಖನಗಳು, ಎರಡ- ಭಾಗದಲ್ಲಿ ಏಳು ವ್ಯಕ್ತಿ ಚಿತ್ರಗಳು ಹಾಗೂ ಮೂರನೇ ಭಾಗದಲ್ಲಿ 'ಪ್ರಜಾವಾಣಿ ಪತ್ರಿಕೆ'ಯಲ್ಲಿನ ಅಂಕಣ ಬರಹಗಳು ಈ ಸಂಗ್ರಹದಲ್ಲಿದೆ. ಹೊಸ ಚಿಂತನಾ ಕ್ರಮಗಳ ಬಗ್ಗೆ ತಿಳಿಯ ಬಯಸುವವರು ಓದಬೇಕಾದ ಕೃತಿ ಇದು.

ಪ್ರಕಾಶಕರು: ಅಂಕಿತ ಪುಸ್ತಕ, ಬೆಂಗಳೂರು





ಸಾಹಿತ್ಯ ಸಲ್ಲಾಪ

ಲೇ: ಡಾ.ದಸ್ತಗೀರ್ ಸಾಬ್ ದಿನ್ನಿ

ಬೆಲೆ: ರೂ. ೪೦/-

ಕಾವ್ಯ, ಸಂಶೋಧನೆ, ವಿಮರ್ಶೆ ಹೀಗೆ ಹಲವಾರು ಕ್ಷೇತ್ರದಲ್ಲಿ ತೊಡಗಿಸಿಕೊಂಡಿ ರುವ ಉಪನ್ಯಾಸಕ, ಸಾಹಿತಿ ಡಾ. ದಸ್ತಗೀರ್ ಸಾಬ್ ದಿನ್ನಿ ಅವರ ವಿವಿಧ ವಿಮರ್ಶಾ ಲೇಖನಗಳ ಸಂಕಲನ ಇದು. ನವೋದಯ, ನವ್ಯ, ಬಂಡಾಯ, ವಚನ ಸಾಹಿತ್ಯಕ್ಕೆ ಸಂಬಂಧಿಸಿದ ೧೫ ಲೇಖನಗಳು ಈ ಕೃತಿಯಲ್ಲಿವೆ. ಲೋಹಿಯಾ ಅವರಿಂದ ಗಾಢ ಪ್ರಭಾವಕ್ಕೆ ಒಳಗಾಗಿರುವ ಲೇಖಕರ ಮಾನವೀಯ ಸಂವೇದನೆಯಿಂದ ಕೂಡಿರುವ ಉತ್ತಮ ವಿಮರ್ಶಾ ಲೇಖನಗಳ ಸಂಗ್ರಹವಿದು.

ಪ್ರಕಾಶಕರು: ಕನಸು ಪ್ರಕಾಶನ, ರಾಯಚೂರು

ಶಬರಿ

ಲೇ: ಬರಗೂರು ರಾಮಚಂದ್ರಪ್ಪ

ಬೆಲೆ: ರೂ. ೫೦/-

ಬುಡಕಟ್ಟು ಜನರ ಬವಣೆಯ ಬದುಕಿನ ಜತೆಗೆ ಅವರ ಚಲನಶೀಲ ಸಂಸ್ಕೃತಿಯನ್ನು ಅನಾವರಣಗೊಳಿಸುವ ವಿಶಿಷ್ಟ ಕಾದಂಬರಿ ಇದು. ಇದರಲ್ಲಿ ಬುಡಕಟ್ಟು ಸಂಸ್ಕೃತಿಯ ಕೆಲವು ಆಚರಣೆಗಳು, ಮೂಢನಂಬಿಕೆಗಳ ಪ್ರಸ್ತಾಪವೂ ಇದೆ. ಕಾದಂಬರಿಯ ನಿರೂಪಣೆಯಲ್ಲಿ ಕಾವ್ಯಾತ್ಮಕ ಶೈಲಿಯಿದೆ. "ಶಬರಿ" ಕನ್ನಡ ಕಾದಂಬರಿ ಲೋಕಕ್ಕೆ ಒಂದು ಅಪರೂಪದ ಕಾಣಿಕೆ. ಕುವೆಂಪು ವಿಶ್ವವಿದ್ಯಾಲಯದ ಬಿಎಬಿಎಸ್ಸಿ ತರಗತಿಯ ೩ನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ೨೦೦೭-೦೮ನೇ ಸಾಲಿಗೆ ಅವಿಸ್ತರ ಭಾಷಾ ಪಠ್ಯಪುಸ್ತಕವಾಗಿ ಆಯ್ಕೆ ಮಾಡಲಾಗಿದೆ.

ಪ್ರಕಾಶಕರು: ಅಂಕಿತ ಪುಸ್ತಕ, ಬೆಂಗಳೂರು

ಮಲ್ಲಾಬಾದಿ ವೀರಭದ್ರಪ್ಪ

ಲೇ: ಬಿ.ಸಿ. ಜವಳಿ

ಬೆಲೆ: ರೂ. ೫/-

ಲಿಂಗಾಯತ ಸಮಾಜದ ಮತ್ತೊಬ್ಬ ಗಣ್ಯವ್ಯಕ್ತಿ ಮಲ್ಲಾಬಾದಿ ವೀರಭದ್ರಪ್ಪ ಅವರ ಜೀವನಚರಿತ್ರೆ ಇದು. ಹತ್ತನೇ ತರಗತಿಗೆ ಓದು ನಿಲ್ಲಿಸಿದ ವೀರಭದ್ರಪ್ಪ ತಮ್ಮ ಆಸಕ್ತಿ ಹಾಗೂ ಪರಿಶ್ರಮದಿಂದ ವಿಶ್ವವಿದ್ಯಾಲಯದ ವಿದ್ವಾಂಸರೂ ತಲೆದೂಗುವಂತೆ ಹಳೆಗನ್ನಡ, ನಡುಗನ್ನಡ ಸಾಹಿತ್ಯದ ವ್ಯಾಖ್ಯಾನ ಮಾಡುತ್ತಿದ್ದುದು ಅಚ್ಚರಿ. ಈ ಹಿರಿಯ ಚೇತನದ ಸಾಧನೆಗಳನ್ನು ಕೃತಿಯಲ್ಲಿ ಪರಿಚಯಿಸಲಾಗಿದೆ.

ಸಿಂಪಿ ಲಿಂಗಣ್ಣ

ಲೇ: ವೀರೇಂದ್ರ ಸಿಂಪಿ

ಬೆಲೆ: ರೂ. ೨೦/-

ಖ್ಯಾತ ಸಾಹಿತಿ ಸಿಂಪಿ ಲಿಂಗಣ್ಣ ಅವರ ಜೀವನ ಚರಿತ್ರೆ ಇದು.ಸಿಂಪಿಯರವ ಬಾಲ್ಯ, ಸಾಹಿತ್ಯ ರಚನೆ ಆರಂಭ, ಶಿಕ್ಷಕ ವೃತ್ತಿ, ಪತ್ರಿಕೋದ್ಯಮ ಹೀಗೆ ಅವರ ಜೀವನದ ವಿವಿಧ ಹಂತಗಳ ಚಿತ್ರಣ ಇಲ್ಲಿದೆ.

'ಕುಂಚಬ್ರಹ್ಮ ಮಡಿವಾಳಪ್ಪ ಮಿಣಜಗಿ'

ಲೇ: ಶಾ.ಮಂ. ಕೃಷ್ಣರಾಯ

ಬೆಲೆ: ರೂ. ೩೦/-

ಕಲಾವಿದ ಮಡಿವಾಳಪ್ಪ ಮಿಣಜಗಿ ಅವರ ಜೀವನಚರಿತ್ರೆ ಇದು. ಹುಬ್ಬಳ್ಳಿಯಲ್ಲಿ ಕಲಾ ಶಾಲೆ ಆರಂಭಿಸಿ ನೂರಾರು ವಿದ್ಯಾರ್ಥಿಗಳನ್ನು ತಯಾರು ಮಾಡಿದ ಮಹಾನ್ ಕಲಾವಿದರಾದ ಮಿಣಜಗಿ ಅವರ ಜೀವನ ಕುರಿತು ಅಧ್ಯಯನಾಸಕ್ತರಿಗೆ ಉತ್ತಮ ಮಾಹಿತಿ ಇದರಿಂದ ದೊರೆಯುತ್ತದೆ.

ಮೇಲಿನ ಮೂರು ಪುಸ್ತಕಗಳ ಪ್ರಕಾಶಕರು: ಲಿಂಗಾಯತ ಅಧ್ಯಯನ ಸಂಸ್ಥೆ, ಗದಗ

ಸಂಪಾದಕೀಯ

ಅಂತರಂಗ

ಬೂಟಾಟಿಕೆಗೆ ೬೦ ವರ್ಷ!

ಆಗಸ್ಟ್ ೧೫ರ ಬುಧವಾರ ಬೆಳಿಗ್ಗೆ ವಾಕಿಂಗ್ ಮುಗಿಸಿ ಬರುವಷ್ಟರಲ್ಲಿ ನನ್ನ ಮೊಬೈಲ್ ತುಂಬಾ ೬೦ನೇ ಸ್ವಾತಂತ್ರ್ಯೋತ್ಸವದ ಸಂದೇಶಗಳು ತುಂಬಿದ್ದವು. ಸಾಮಾನ್ಯವಾಗಿ ಹಬ್ಬದ ದಿನಗಳಲ್ಲಿ ಇದು ಸಾಮಾನ್ಯ. ಪರಿಚಯದ ಸ್ನೇಹಿತರು, ಸರ್ಕಾರಿ ನೌಕರರು, ವ್ಯಾಪಾರ ವಹಿವಾಟುಗಳಲ್ಲಿ ತೊಡಗಿಕೊಂಡಿರುವ ಜನ ಇಂಥ ಸಂದರ್ಭಗಳಲ್ಲಿ ಶುಭಾಶಯಗಳನ್ನು ಹೆಚ್ಚಾಗಿ ವಿನಿಮಯ ಮಾಡಿಕೊಳ್ಳುತ್ತಾರೆ. ನನಗೆ ಇಂಥ ಶುಭಾಶಯ ಕಳುಹಿಸುವುದು ಸ್ವೀಕರಿಸುವುದು ಎರಡೂ ಅಲರ್ಜಿ.

ಬಂದ ಸಂದೇಶಗಳಲ್ಲಿ ಕೆಲವು ಕೇವಲ ಶುಭಾಶಯಗಳಾಗಿದ್ದರೆ, ಕೆಲವು ಸ್ವಾತಂತ್ರ್ಯದ ಅಸ್ತಿತ್ವವನ್ನು ಪ್ರಶ್ನಿಸುವಂತಿದ್ದವು. ವಿಶ್ವವಿದ್ಯಾಲಯದ ಅಧ್ಯಾಪಕ ಗೆಳೆಯನೊಬ್ಬ '೬೦ ವರ್ಷದ ಗುಲಾಮಗಿರಿಯ ಸ್ವಾತಂತ್ರ್ಯಕ್ಕೆ ಧಿಕ್ಕಾರವಿರಲಿ' ಎಂಬ ಸಂದೇಶ ಕಳುಹಿಸಿದ್ದ. ದಲಿತ ಚಳವಳಿಯ ಗೆಳೆಯನೊಬ್ಬ 'ಸಮಾನತೆ ಇಲ್ಲದ ಸ್ವಾತಂತ್ರ್ಯ ಅರ್ಥಹೀನ' ಎಂದು ಕಳುಹಿಸಿದ್ದ. ಇತ್ತೀಚೆಗಷ್ಟೇ ಕವಿತೆ ಬರೆಯಲು ಆರಂಭಿಸಿರುವ ಕೋಲಾರದ ಯುವತಿಯೊಬ್ಬಳು 'ದಿನವೊಂದಕ್ಕೆ ೬ ಮಂದಿ ದಲಿತರ ಕೊಲೆ, ೧೪ ಮಂದಿ ಮಹಿಳೆಯರ ಮಾನಭಂಗ, ಹಸಿವಿಗಾಗಿ ಮಕ್ಕಳ ಮಾರಾಟ, ಕುಡಿಯುವ ನೀರಿಗೂ ಚೀರಾಟ, ಸ್ವಾತಂತ್ರ್ಯೋತ್ಸವಕ್ಕೆ ಜಯವಾಗಲಿ!' ಎಂದು ವ್ಯಂಗ್ಯವಾಗಿ ಸಂದೇಶ ರವಾನಿಸಿದ್ದಳು.

ಸ್ವಾತಂತ್ರ್ಯ ದಿನಾಚರಣೆ ಕುರಿತು ಬರೆಯುವುದು ಎಷ್ಟು ಹಳಸಲು ವಿಚಾರವೆಂಬುದು ನಿಮಗೆಲ್ಲ ಗೊತ್ತಿದೆ. ಆದರೂ ಅದು ನಿರ್ಲಕ್ಷಿಸಬೇಕಾದ ಸಂಗತಿಯೇನೂ ಅಲ್ಲ. ಅದು ಎಷ್ಟು ಅರ್ಥಪೂರ್ಣವಾಗಿದೆ ಅಥವಾ ನಗೆಪಾಟಲಿಗೆ ಈಡಾಗಿದೆ ಎಂಬುದಕ್ಕಿಂತ ಅದನ್ನು ಅರ್ಥಪೂರ್ಣಗೊಳಿಸುವುದು ಹೇಗೆ ಎಂಬುದರ ಬಗ್ಗೆ ನಾವೆಲ್ಲ ಚಿಂತಿಸಿದರೆ ಒಳ್ಳೆಯದು ಅನ್ನಿಸುತ್ತದೆ. ನಮ್ಮ ಸ್ವಾತಂತ್ರ್ಯವಾಗಲಿ ಪ್ರಜಾಪ್ರಭುತ್ವವಾಗಲಿ ಅವುಗಳ ಮೂಲ ಸ್ವರೂಪದಲ್ಲಿ ಅಪ್ರಸ್ತುತವೂ ಅಲ್ಲ, ಅರ್ಥಹೀನವೂ ಅಲ್ಲ. ಆದರೆ ಅವುಗಳನ್ನು ಅವುಗಳ ಮೂಲ ಚೇತನದೊಂದಿಗೆ ಜಾರಿಗೊಳಿಸಲು ವಿಫಲವಾಗಿರುವುದೇ ಅವು ತಮ್ಮ ಮೂಲ ಸ್ವರೂಪಗಳನ್ನು ಕಳೆದುಕೊಳ್ಳಲು ಕಾರಣವಾಗಿದೆ ಅನಿಸುತ್ತಿದೆ.

'ಸ್ವಾತಂತ್ರ್ಯ' ತನ್ನ ನಿಜದ ಅರ್ಥದಲ್ಲಿ ದೇಶದ ಪ್ರತಿಯೊಬ್ಬ ಪ್ರಜೆಯೂ ಅನುಭವಿಸುವಂತಾದಾಗ ಮಾತ್ರ ಅದರ ಅರ್ಥವಂತಿಕೆ ಉಳಿಯುತ್ತದೆ. ಅಂದರೆ ಹಸಿದವನಿಗೆ ಅನ್ನ ಸಿಕ್ಕಿದರೆ ಮಾತ್ರ ಸ್ವಾತಂತ್ರ್ಯಕ್ಕೆ ಅರ್ಥ ಎಂದರೆ ಅದು ಸೀಮಿತ ವ್ಯಾಖ್ಯಾನ ಮಾತ್ರ ಆಗಬಹುದು. ಆದರೆ ಹಸಿದವನಿಗೆ ಸ್ವಾತಂತ್ರ್ಯದ ಅರ್ಥ ಅಷ್ಟೇ! ನನಗೆ ಈಗಲೂ ಆಶ್ಚರ್ಯ ಎನಿಸುವುದು ೧೯೪೭ ಆಗಸ್ಟ್ ೧೪ರ ರಾತ್ರಿ ನೆಹರೂ, ಪಟೇಲ್ ಮುಂತಾದವರೆಲ್ಲ ಸ್ವಾತಂತ್ರ್ಯದ ಬಾವುಟ ಹಾರಿಸಿ ಸಂಭ್ರಮಿಸುತ್ತಿದ್ದಾಗ, ಅದಕ್ಕಾಗಿ ಹಂಬಲಿಸಿದ ಗಾಂಧಿ ಪಶ್ಚಿಮ ಬಂಗಾಳದ ನೌಕಾಲಿಯಲ್ಲಿ ಉಪವಾಸ ಮಾಡುತ್ತಿದ್ದರು. ಅಂದರೆ ಗಾಂಧಿಗೆ ಸ್ವಾತಂತ್ರ್ಯದ ಬಾವುಟ ಹಾರಿಸುವುದಕ್ಕಿಂತ ಆಂತರಿಕ ಕ್ಷೋಭೆಗೆ ತುತ್ತಾಗಿದ್ದ ನೌಕಾಲಿಯ ಜನಕ್ಕೆ ನೆಮ್ಮದಿಯ ಸ್ವಾತಂತ್ರ್ಯ ನೀಡುವುದು ಮಹತ್ವದ್ದಾಗಿತ್ತು!

ಸ್ವಾತಂತ್ರ್ಯದ ಪರಿಕಲ್ಪನೆಯನ್ನೇ ಪುನರ್ ವ್ಯಾಖ್ಯಾನ ಮಾಡಿದ್ದ ಅಂಬೇಡ್ಕರ್ ಕೇವಲ ರಾಜಕೀಯ ಸ್ವಾತಂತ್ರ್ಯದಿಂದ ಸಮಾಜದಲ್ಲಿ ಯಾವುದೇ ಬದಲಾವಣೆ ತರಲು ಸಾಧ್ಯವಿಲ್ಲ ಎಂದು ಬಲವಾಗಿ ನಂಬಿದ್ದರು. ರಾಜಕೀಯ ಸ್ವಾತಂತ್ರ್ಯ ನಾಡಿನ ದೀನ ದಲಿತರ ಕಣ್ಣೊರೆಸುವ ತಂತ್ರ ಮಾತ್ರವಾಗಿರದೆ ಸ್ವಾಭಿಮಾನ ಮತ್ತು ಸಮಾನತೆಯನ್ನು ಬದುಕಿನ ಎಲ್ಲ ಕ್ಷೇತ್ರಗಳಲ್ಲಿ ಮತ್ತು ಎಲ್ಲ ಹಂತಗಳಲ್ಲಿ ಪ್ರಾಮಾಣಿಕವಾಗಿ ಅವುಗಳ ಮೂಲ ಸ್ವರೂಪದಲ್ಲಿ ಜಾರಿಗೆ ತರುವಂತಾಗಬೇಕೆಂಬುದು ಅವರ ಕನಸಾಗಿತ್ತು. ಆದರೆ ಸ್ವಾತಂತ್ರ್ಯಾನಂತರದ ಈ ಅರವತ್ತು ವರ್ಷಗಳನ್ನು ಅವಲೋಕಿಸಿದರೆ ನಿರಾಶೆ-ಹತಾಶೆಯ ಹೊರತಾಗಿ ಆಸೆಯ ಸಣ್ಣ ಬೆಳಕಿನ ಕಿರಣವೂ ಕಾಣಿಸುವುದಿಲ್ಲ.

ಸ್ವಾತಂತ್ರ್ಯಾನಂತರದ ಪರಿಸ್ಥಿತಿಯನ್ನೇ ನೋಡಿ. ನೆಹರೂ ಪ್ರಣೀತ ಸಮಾಜವಾದ ಇಡೀ ದೇಶದಲ್ಲಿ ಬಡವ ಶ್ರೀಮಂತರ ನಡುವಿನ ಅಂತರವನ್ನು ಮತ್ತಷ್ಟು ಹೆಚ್ಚಿಸಿತೇ ಹೊರತು ಬೇರೇನೂ ಮಾಡಲಿಲ್ಲ. ೯೦ರ ದಶಕದ ಉದಾರೀಕರಣ ನೀತಿಯಿಂದಾಗಿ ಸಾರ್ವಜನಿಕ ಉದ್ದಿಮೆಗಳೆಲ್ಲಾ ಒಂದೊಂದಾಗಿ ಮುಚ್ಚುತ್ತಿವೆ ಇಲ್ಲ ಖಾಸಗಿಯವರಿಗೆ ಹಸ್ತಾಂತರವಾಗುತ್ತಿವೆ. ಅಭಿವೃದ್ಧಿಯ ಹೆಸರಿನಲ್ಲಿ ದೇಶದಲ್ಲಿ ಸಾವಿರಾರು ಕೋಟಿ ವೆಚ್ಚವಾಗುತ್ತಿದ್ದರೂ ಅದರ ಲಾಭ ಸಾಮಾನ್ಯರಿಗೆ ಸಿಗುತ್ತಿಲ್ಲ. ರಾಜಕಾರಣಿಗಳ 'ಕಿಕ್‌ಬ್ಯಾಕ್ ಚೀಲ'ಗಳು ಮಾತ್ರ ಇಂಥ ಅಭಿವೃದ್ಧಿಯಿಂದ ತುಂಬುತ್ತಿವೆಯೇ ಹೊರತು ಬೇರೇನೂ ಪ್ರಯೋಜನವಾಗುತ್ತಿಲ್ಲ.

ಈ ಅರವತ್ತು ವರ್ಷಗಳ ಅವಧಿಯಲ್ಲಿ ದೇಶವನ್ನು ಆಳಿದ ಎಲ್ಲ ಪಕ್ಷ-ಸರ್ಕಾರಗಳೂ ನೊಂದವರ ಪರವಾದ ತಮ್ಮ ಬದ್ಧತೆಯನ್ನು ಸಾಬೀತು ಪಡಿಸುವಲ್ಲಿ ಸಂಪೂರ್ಣವಾಗಿ ಸೋತಿವೆ. ಅಭಿವೃದ್ಧಿಯ ಪರಿಕಲ್ಪನೆ ಸಮಾನತೆಯ ತಳಹದಿಯ ಮೇಲೆ ಬೆಳೆಯ ಬೇಕೆಂಬ ಕನಿಷ್ಠ ಜ್ಞಾನವೂ ಅವರಿಗಿದ್ದಂತಿಲ್ಲ. ಸುಮಾರು ೪೦ ವರ್ಷಗಳಷ್ಟು ದೀರ್ಘ ಕಾಲ ದೇಶವನ್ನು ಆಳಿದ ಕಾಂಗ್ರೆಸ್ ಹಸಿವು, ಬಡತನ ಮತ್ತು ಅಸ್ಪೃಶ್ಯತೆಗಳನ್ನು ಬಂಡವಾಳ ಮಾಡಿಕೊಂಡಿತೇ ಹೊರತು ಅವುಗಳ ಪರಿಹಾರಕ್ಕೆ ಉಪಾಯಗಳನ್ನು ಕಂಡುಕೊಳ್ಳಲಿಲ್ಲ. 'ಗರೀಬಿ ಹಟಾವೊ' ಘೋಷಣೆಯಲ್ಲಿ ಸರ್ಕಾರವನ್ನು ಪುನರ್ ಸ್ಥಾಪಿಸಿಕೊಳ್ಳುವ ಕುತಂತ್ರವಿತ್ತೇ ಹೊರತು ನೆಮ್ಮದಿಯ ಬದುಕು ನೀಡುವ ಮಮತೆ ಇರಲಿಲ್ಲ. ಕಾಂಗ್ರೆಸ್ ಆಡಳಿತಾನಂತರದ ೧೫-೨೦ ವರ್ಷಗಳನ್ನು ಹಂಚಿಕೊಂಡ ಇತರ ಪಕ್ಷಗಳದ್ದೂ ಅದೇ ಕತೆ.

ತೃತೀಯ ರಂಗದ ಹೆಸರಿನಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಯೇತರ ಪಕ್ಷಗಳು ಅತ್ಯಂತ ಹೊಣೆಗೇಡಿಗಳಂತೆ ವರ್ತಿಸಿದವು. ಅವಕ್ಕೆ ರಾಷ್ಟ್ರದ ಹಿತಕ್ಕಿಂತ ವೈಯಕ್ತಿಕ ಪ್ರತಿಷ್ಠೆಗಳೇ ದೊಡ್ಡವಾಗಿದ್ದವು. ಸದಾ ಪರಸ್ಪರರನ್ನು ಕಾಲೆಳೆಯುವುದರಲ್ಲೇ ನಿರತವಾದ ತೃತೀಯ ರಂಗದ ಪಕ್ಷಗಳು ದೇಶವನ್ನು ಕೋಮುವಾದಿಗಳ ಕೈಗೊಪ್ಪಿಸಿ ಬೇಜವಾಬ್ದಾರಿಯಿಂದ ನಡೆದುಕೊಂಡವು.

ದೇಶದ ಹಸಿವು-ಬಡತನ ಅಸ್ಪೃಶ್ಯತೆಗಳಂತ ಗಂಭೀರ ಸಮಸ್ಯೆಗಳನ್ನು ಯಾರೂ ಹೃದಯಪೂರ್ವಕವಾಗಿ ಪರಿಹರಿಸಲು ಪ್ರಯತ್ನಿಸಲೇ ಇಲ್ಲ. ಇದರ ಪರಿಣಾಮ ಸಮಾಜದಲ್ಲಿ ಅಸಹನೆ-ಹಾಹಾಕಾರ ಇಂದು ತಲೆ ಎತ್ತಿ ನಿಂತಿವೆ. ನಿರಂತರ ಶೋಷಣೆ ನಕ್ಸಲ್‌ವಾದವನ್ನು ಹುಟ್ಟು ಹಾಕಿದೆ. 'ಸ್ವಾತಂತ್ರ್ಯ' ಕೇವಲ ಬೂಟಾಟಿಕೆಯಾಗಿ ಕಾಣಿಸುತ್ತಿದೆ. ಅನ್ಯಾಯದ ವಿರುದ್ಧ ಸೆಟೆದು ನಿಲ್ಲುವ ಶಕ್ತಿಗಳ ಹುಟ್ಟಡಗಿಸಲು ಸ್ವಾತಂತ್ರ್ಯದ ಬಳಕೆಯಾಗುತ್ತಿದೆ.

೬೦ ವರ್ಷಗಳ ಸ್ವಾತಂತ್ರ್ಯ ಸ್ವಾಭಿಮಾನಕ್ಕೆ ಬದಲಾಗಿ ದಾಸ್ಯವನ್ನು ಬಳವಳಿಯಾಗಿ ಕೊಟ್ಟಿದೆ. ಇಂಥ ಸಂದರ್ಭದಲ್ಲಿ ಸ್ವಾಭಿಮಾನಿ ಭಾರತೀಯ ತ್ರಿವರ್ಣ ಧ್ವಜ ಹಿಡಿದು ಜನಗಣಮನ ಹಾಡಬೇಕೆ? ಅಥವಾ ಮತ್ತೊಂದು ಸ್ವಾತಂತ್ರ್ಯ ಹೋರಾಟಕ್ಕೆ ಇಳಿಯಬೇಕೆ? ಭಾರತೀಯರ ಈ ಗೊಂದಲ ಬೇಗ ಬಗೆಹರಿಯಲಿ.

○ ಇಂದೂಧರ ಹೊನ್ನಾಪುರ

ಮುಂಬೈ ಸ್ಫೋಟದ ತೀರ್ಪು

ನಾ. ದಿವಾಕರ

ಸಂಜಯ್ ದತ್‌ರವರ ವೈಯಕ್ತಿಕ ಅಪರಾಧ ಅಥವಾ ಶಿಕ್ಷೆಗಿಂತಲೂ ಹೆಚ್ಚಾಗಿ, ಭಯೋತ್ಪಾದನೆಯನ್ನು ನಮ್ಮ ಸಮಾಜ ವಿಶ್ಲೇಷಿಸುವ ರೀತಿ ಮತ್ತು ನ್ಯಾಯಾಂಗದ ಪಾತ್ರವನ್ನು ಕುರಿತದ್ದು ಇಲ್ಲಿ ಉದ್ಭವಿಸುವ ಪ್ರಶ್ನೆ. ವೈಯಕ್ತಿಕ ನೆಲೆಗಟ್ಟಿನಲ್ಲಿ ಸಂಜಯ್ ದತ್‌ರವರನ್ನು ಬೆಂಬಲಿಸುವುದಾಗಲೀ, ವಿರೋಧಿಸುವುದಾಗಲೀ, ಸಮಸ್ಯೆಗೆ ಪರಿಹಾರ ಸೂಚಿಸುವುದಿಲ್ಲವೆಂಬ ಅಂಶವನ್ನು ನಾವಿಂದು ಗ್ರಹಿಸಬೇಕಾಗಿದೆ. ೧೯೯೩ರ ಮುಂಬೈ ಸರಣಿ ಸ್ಫೋಟದ ಮುನ್ನ ನಡೆದ ಕೆಲವು ಘಟನಾವಳಿಗಳನ್ನು ವಸ್ತುನಿಷ್ಟವಾಗಿ ವಿಶ್ಲೇಷಿಸುವುದು ಅತ್ಯಗತ್ಯವಾಗಿದೆ. ಭಾರತದಲ್ಲಿ ಭಯೋತ್ಪಾದಕ ಕೃತ್ಯಗಳ ಉಗಮಕ್ಕೆ ಕಾರಣವಾದ ಕೆಲವು ರಾಜಕೀಯ, ಸಾಂಸ್ಕೃತಿಕ, ಧಾರ್ಮಿಕ ಬೆಳವಣಿಗೆಗಳನ್ನು ಬದಿಗಿಟ್ಟು, ಕೇವಲ ಭಯೋತ್ಪಾದಕತೆಯಿಂದ ಉಂಟಾದ ಪ್ರಕ್ಷೋಭವನ್ನೇ ಮೂಲ ವಸ್ತುವನ್ನಾಗಿರಿಸಿಕೊಂಡಾಗ, ಸಂಜಯ್ ದತ್‌ರವರಂತಹ ಅಪರಾಧಿಗಳು ಹೇರಳವಾಗಿಕಂಡುಬರುವ ಸಾಧ್ಯತೆಗಳಿವೆ.

೧೯೯೩ರಲ್ಲಿ ಸಂಭವಿಸಿದ ಮುಂಬೈ ಸರಣಿ ಸ್ಫೋಟದ ಅಪರಾಧಿಗಳಿಗೆ ೧೪ ವರ್ಷಗಳ ನಂತರವಾದರೂ ಶಿಕ್ಷೆಯಾಗುತ್ತಿರುವುದು ಸ್ವಾಗತಾರ್ಹವೇ. ಭಾರತೀಯ ನ್ಯಾಯಾಂಗ ಕ್ಷೇತ್ರದಲ್ಲಿ ಈ ವಿಳಂಬವೇನೂ ಹೊಸತಲ್ಲ. ನಮ್ಮ ನ್ಯಾಯಾಲಯಗಳಲ್ಲಿ ಕೊಳೆಯುತ್ತಿರುವ ಮೊಕದ್ದಮೆಗಳ ಸಂಖ್ಯೆ ಮತ್ತು ಜೈಲುಗಳಲ್ಲಿ ನರಳುತ್ತಿರುವ ವಿಚಾರಣಾಧೀನ ಖೈದಿಗಳ ಸಂಖ್ಯೆಯನ್ನು ನೋಡಿದರೆ, ಮುಂಬೈ ಸರಣಿ ಸ್ಫೋಟದ ತೀರ್ಪು ಶೀಘ್ರಗತಿಯಲ್ಲೇ ಪ್ರಕಟಗೊಂಡಿದೆ ಎಂದು ಹೇಳಬಹುದು. ಕಳೆದ ಎರಡು ತಿಂಗಳಿನಿಂದ ನಡೆಯುತ್ತಿರುವ ಈ ಪ್ರಕ್ರಿಯೆಗೆ ಒಂದು ಚುರುಕು ಮುಟ್ಟಿರುವುದು ಖ್ಯಾತ ಚಲನಚಿತ್ರ ನಟ, ಮುನ್ನಾಭಾಯಿ ಖ್ಯಾತಿಯ ಸಂಜಯ್ ದತ್‌ರವರ ಬಂಧನದ ನಂತರವೇ. ಸಂಜಯ್ ದತ್‌ಗೆ ಆರು ವರ್ಷಗಳ ಕಠಿಣ ಸಜೆ ವಿಧಿಸಿರುವುದರ ವಿರುದ್ಧ ಅನೇಕ ದನಿಗಳು ಕೇಳಿಬರುತ್ತಿವೆ. ಸಂಜಯ್ ಶಿಕ್ಷೆಗೆ ಅರ್ಹ ಎನ್ನುವವರ ಸಂಖ್ಯೆಯೂ ಹೆಚ್ಚಾಗಿದೆ. ತಮ್ಮ ಚಿತ್ರದ ಮೂಲಕ ಗಾಂಧಿ ತತ್ವಗಳಿಗೆ ಒಂದು ವಿಭಿನ್ನ ಆಯಾಮ ನೀಡಿದ ಸಂಜಯ್ ದತ್, ಈಗ ಗಾಂಧೀಜಿಯವರು ಸೆರೆವಾಸ ಅನುಭವಿಸಿದ ಯರವಾಡ ಜೈಲಿನಲ್ಲಿ ಬಂಧಿಯಾಗಿರುವುದೂ ಮಾಧ್ಯಮಗಳಲ್ಲಿ ರೋಮಾಂಚಕತೆಗೆ ಎಡೆ ಮಾಡಿಕೊಟ್ಟಿದೆ.

ಈ ಹಿನ್ನೆಲೆಯಲ್ಲಿ ಸಂಜಯ್ ತಪ್ಪಿತಸ್ಥನೇ ಎಂಬ ಪ್ರಶ್ನೆ ಪ್ರಮುಖವಾಗಿ ಮೂಡಿಬರುತ್ತಿದೆ. ಕೆಲವು ಖಾಸಗಿ ಟಿ.ವಿ. ಚಾನಲ್‌ಗಳಲ್ಲಿ ಈ ಪ್ರಶ್ನೆಯನ್ನೇ ಒಂದು ಚರ್ಚೆಯ ವಿಷಯವನ್ನಾಗಿ ಪರಿಗಣಿಸಿ, ಗಂಭೀರವಾದ ಚರ್ಚೆಗಳೂ ನಡೆಯುತ್ತಿವೆ. ಆದರೆ ಸ್ವತಃ ಸಂಜಯ್ ದತ್‌ರವರೇ ತಾವು ತಪ್ಪು ಮಾಡಿರುವುದಾಗಿ ಒಪ್ಪಿಕೊಂಡಿರುವುದರಿಂದ, ಈ ಚರ್ಚೆಗಳು ಕೆಲವೊಮ್ಮೆ ಬಾಲಿಶ ಸ್ವರೂಪ ಪಡೆದುಕೊಳ್ಳುತ್ತವೆ. ತಾನು ಪ್ರಸ್ತುತ ಪರಿಸ್ಥಿತಿಯಲ್ಲಿ ಶಿಕ್ಷೆ ಅನುಭವಿಸುವ ಮನಸ್ಥಿತಿಯಲ್ಲಿಲ್ಲ, ಹಾಗಾಗಿ ಶಿಕ್ಷೆಯನ್ನು ಮುಂದೂಡಿ ಎನ್ನುವುದೇ ಸಂಜಯ್‌ರವರ ನಿವೇದನೆಯಾಗಿತ್ತು. ಇಲ್ಲಿ ಮನಸ್ಥಿತಿ ಎಂದರೆ ಅವರ ಚಿತ್ರಗಳಲ್ಲಿ ನಿರ್ಮಾಪಕರು ಹೂಡಿರುವ ಬಂಡವಾಳವೆಂದೂ ಅರ್ಥೈಸಬಹುದು. ಬಾಲಿವುಡ್ ಎಂದು ಕರೆಯಲಾಗುವ ಹಿಂದಿ ಚಲನಚಿತ್ರ ರಂಗಕ್ಕೂ, ಭೂಗತ ದೊರೆಗಳಿಗೂ ಇರುವ ಸಂಬಂಧ, ಸಂಜಯ್ ದತ್‌ರವರ ಬಂಧನದ ಹಿಂದಿನ ದನಿಗಳಲ್ಲಿ ಗುರುತಿಸುವುದು ಕಷ್ಟವೇನಲ್ಲ.

ಇಲ್ಲಿ ಉದ್ಭವಿಸುವ ಪ್ರಶ್ನೆ ಸಂಜಯ್ ದತ್‌ರವರ ವೈಯಕ್ತಿಕ ಅಪರಾಧ ಅಥವಾ ಶಿಕ್ಷೆಗಿಂತಲೂ ಹೆಚ್ಚಾಗಿ, ಭಯೋತ್ಪಾದನೆಯನ್ನು ನಮ್ಮ ಸಮಾಜ ವಿಶ್ಲೇಷಿಸುವ ರೀತಿ ಮತ್ತು ನ್ಯಾಯಾಂಗದ ಪಾತ್ರವನ್ನು ಕುರಿತದ್ದಾಗಿದೆ. ವೈಯಕ್ತಿಕ ನೆಲೆಗಟ್ಟಿನಲ್ಲಿ ಸಂಜಯ್ ದತ್‌ರವರನ್ನು ಬೆಂಬಲಿಸುವುದಾಗಲೀ, ವಿರೋಧಿಸುವುದಾಗಲೀ, ಸಮಸ್ಯೆಗೆ ಪರಿಹಾರ ಸೂಚಿಸುವುದಿಲ್ಲವೆಂಬ ಅಂಶವನ್ನು ನಾವಿಂದು ಗ್ರಹಿಸಬೇಕಾಗಿದೆ. ೧೯೯೩ರ ಮುಂಬೈ ಸರಣಿ ಸ್ಫೋಟದ ಮುನ್ನ ನಡೆದ ಕೆಲವು ಘಟನಾವಳಿಗಳನ್ನು ವಸ್ತುನಿಷ್ಟವಾಗಿ ವಿಶ್ಲೇಷಿಸುವುದು ಅತ್ಯಗತ್ಯವಾಗಿದೆ. ಭಾರತದಲ್ಲಿ ಭಯೋತ್ಪಾದಕ ಕೃತ್ಯಗಳ ಉಗಮಕ್ಕೆ ಕಾರಣವಾದ ಕೆಲವು ರಾಜಕೀಯ, ಸಾಂಸ್ಕೃತಿಕ, ಧಾರ್ಮಿಕ ಬೆಳವಣಿಗೆಗಳನ್ನು ಬದಿಗಿಟ್ಟು, ಕೇವಲ ಭಯೋತ್ಪಾದಕತೆಯಿಂದ ಉಂಟಾದ ಪ್ರಕ್ಷೋಭವನ್ನೇ ಮೂಲ ವಸ್ತುವನ್ನಾಗಿರಿಸಿಕೊಂಡಾಗ, ಸಂಜಯ್ ದತ್‌ರವರಂತಹ ಅಪರಾಧಿಗಳು ಹೇರಳವಾಗಿ ಕಂಡುಬರುವ ಸಾಧ್ಯತೆಗಳಿವೆ.

ಮುಂಬೈ ಸರಣಿ ಸ್ಫೋಟಗಳಲ್ಲಿ ಸಾವು ನೋವುಗಳನ್ನು, ಅಪಾರ ನಷ್ಟವನ್ನು ಅನುಭವಿಸಿದವರ ಅಭಿಪ್ರಾಯ ಸಂಗ್ರಹಿಸಿದಲ್ಲಿ, ಸಂಜಯ್ ದತ್‌ರವರಂತಹವರಿಗೆ ಎಂದೋ ಶಿಕ್ಷೆಯಾಗ ಬೇಕಿತ್ತು, ಕೇವಲ ಆರು ವರ್ಷಗಳ ಜೈಲು ಶಿಕ್ಷೆ ಸಾಲದು, ಮರಣ

ದಂಡನೆಯಾಗಬೇಕು ಎಂಬ ಒಕ್ಕೊರಲ ದನಿ ಕೇಳಿಬರಬಹುದು. ಇದು ಸ್ವಾಭಾವಿಕವೂ ಹೌದು. ತಮ್ಮದೇ ಆದ ಜೀವನ ಜಂಜಾಟಗಳಲ್ಲಿ ಸೊರಗಿರುವ ಜನತೆ, ತಮ್ಮದಲ್ಲದ ತಪ್ಪಿಗೆ ಶಿಕ್ಷೆ ಅನುಭವಿಸುವುದಾದರೆ, ಈ ಶಿಕ್ಷೆಗೆ ಕಾರಣರಾದವರನ್ನು ಶಿಕ್ಷಿಸಲು ಬಯಸುವುದು ಅವರಿಗೆ ಸಹಜವೂ ಹೌದು. ಇದು ಸಾಮಾಜಿಕ ನ್ಯಾಯದ ಒಂದು ಮುಖ. ನ್ಯಾಯಾಂಗವೂ ಇದೇ ದಿಕ್ಕಿನಲ್ಲಿ ಯೋಚನೆ ಮಾಡುತ್ತದೆ. ಸಂಜಯ್ ದತ್‌ಗೆ ಶಿಕ್ಷೆ ಪ್ರಕಟಿಸಿದ ನಂತರ ನ್ಯಾಯಾಧೀಶರು "ನಿಮ್ಮ ನೂರು ವರ್ಷ ಆಯಸ್ಸಿನಲ್ಲಿ ಕೇವಲ ಆರು ವರ್ಷ ಕಸಿದುಕೊಂಡಿದ್ದೇವೆ, ಇನ್ನುಳಿದ ವರ್ಷಗಳಲ್ಲಿ ನೀವು ಅಂದುಕೊಂಡಿದ್ದನ್ನು ಸಾಧಿಸಬಹುದು" ಎಂದು ಹೇಳಿರುವುದು ಈ ದಿಕ್ಕಿನಲ್ಲೇ ಸಾಗುತ್ತದೆ.

ಸಂಜಯ್ ದತ್ ಆಗಲೀ, ಯಾಕೂಬ್ ಮೆನನ್ ಆಗಲೀ ಒಂದು ಅಪರಾಧದಲ್ಲಿ ತೊಡಗಿದ್ದುದು ಯಾವುದೋ ಒಂದು ಸಾಂಘಿಕ ಸ್ವರೂಪದ ದುಷ್ಟ ಕೂಟಗಳ ಪ್ರೇರೇಪಣೆಯಿಂದ. ಈ ಸಾಂಘಿಕ ಶಕ್ತಿಗಳ ಉದಯ ಮತ್ತು ಬೆಳವಣಿಗೆಗೆ ಪೂರಕವಾದ ಸನ್ನಿವೇಶಗಳನ್ನು ಸೃಷ್ಟಿಸಿರುವ ಅನೇಕ ಸಂಗತಿಗಳು ತೆರೆಮರೆಯಲ್ಲೇ ಕಾರ್ಯ ನಿರ್ವಹಿಸುತ್ತವೆ, ಇಂದಿಗೂ ನಿರ್ವಹಿಸುತ್ತಿವೆ. ಅಮಾಯಕ ಜನತೆಯ ಅಸಹಾಯಕತೆಯನ್ನು ಬಳಸಿಕೊಂಡು, ಸಾಮಾಜಿಕ ದುಷ್ಕೃತ್ಯಗಳಲ್ಲಿ ತೊಡಗುವ, ಈ ಸಂಘಟನೆಗಳು ಆಳುವ ವರ್ಗಗಳ ವಿರುದ್ಧ ಹೋರಾಡುವುದಕ್ಕಿಂತಲೂ, ಸಾಮಾಜಿಕ ಕ್ಷೋಭೆ ಹರಡುವುದನ್ನೇ ತಮ್ಮ ಮುಖ್ಯ ಧ್ಯೇಯವನ್ನಾಗಿರಿಸಿಕೊಂಡಿರುತ್ತವೆ. ಒಂದು ಸಮುದಾಯವನ್ನು ಪ್ರತಿನಿಧಿಸುವ ನೆಪದಲ್ಲಿ ಈ ಸಂಘಟನೆಗಳು ಒಂದು ರೀತಿಯಲ್ಲಿ ಆ ಸಮುದಾಯಗಳ ಆಕಾಂಕ್ಷೆಗಳನ್ನು, ನೋವುಗಳನ್ನು, ಆಕ್ರೋಶಗಳನ್ನು ತಮ್ಮ ಬಂಡವಾಳವನ್ನಾಗಿ ಮಾಡಿಕೊಳ್ಳುತ್ತವೆ. ತಮ್ಮ ಅನಿಸಿಕೆಗಳೇ ಇಡೀ ಸಮುದಾಯದ ಅಭಿಪ್ರಾಯವೆಂದು ಬಿಂಬಿಸುವ ಯತ್ನದಲ್ಲಿ ತಮ್ಮ ಎಲ್ಲಾ ಕೃತ್ಯಗಳೂ ಸಾಮುದಾಯಿಕ ಹಿತಾಸಕ್ತಿಯಿಂದಲೇ ಪ್ರೇರೇಪಿತವಾಗಿವೆ ಎಂಬ ನಂಬಿಕೆಯೊಂದಿಗೆ ಈ ಸಂಘಟನೆಗಳು ಕಾರ್ಯ ನಿರ್ವಹಿಸುತ್ತವೆ. ಈ ಕೃತ್ಯಗಳಿಗೆ ಆಂತರಿಕ, ಬಾಹ್ಯ ಸ್ವರೂಪದ ಬೆಂಬಲವೂ ಹೇರವಾಗಿರುವುದನ್ನು ಅಲ್ಲಗಳೆಯಲಾಗುವುದಿಲ್ಲ.

ಈ ಸಂಘಟನೆಗಳ ಕೃತ್ಯಗಳು ಮುಂಬೈ ಸ್ಫೋಟ, ಮಾಲೆಗಾಂವ್, ವಾರಣಾಸಿ ೧೧/೭ರ ರೈಲು ಸ್ಫೋಟಗಳಲ್ಲಿ ಪರ್ಯಾವಸಾನಗೊಂಡಾಗ, ಅದರ ಹಿಂದಿನ ಶಕ್ತಿಗಳು ಒಂದು ಸಮುದಾಯಕ್ಕೆ ಅಥವಾ ಕೋಮಿಗೆ ಸೇರಿರುವುದರಿಂದ ಅದಕ್ಕೊಂದು ಹಣೆಪಟ್ಟಿ ನೀಡುವಲ್ಲಿ ನಾಗರಿಕ ಸಮಾಜ ಸಾರ್ಥಕತೆಯನ್ನು ಕಂಡುಕೊಳ್ಳುತ್ತದೆ. ರಾಷ್ಟ್ರೀಯ ಮಟ್ಟದಲ್ಲಿ ಜಿಹಾದ್, ಭಯೋತ್ಪಾದನೆ, ಇಸ್ಲಾಮಿಕ್ ಟೆರರ್ ಇತ್ಯಾದಿಗಳು ಈ ನಿಟ್ಟಿನಲ್ಲೇ ಸಾಗುತ್ತವೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ತಾಲೀಬಾನ್ ರೂಪದಲ್ಲಿ ಪ್ರಕಟಗೊಳ್ಳುತ್ತವೆ. ಈ ಭಯೋತ್ಪಾದನೆಯನ್ನು ಹತ್ತಿಕ್ಕಲು ಸರ್ಕಾರಗಳು ಅನುಸರಿ ಸುವ ಅನೇಕ ಕರಾಳ ಶಾಸನಗಳು, ಉದಾಹರಣೆಗೆ ಪೋಟ, ಟಾಡಾ, ಮೋಕಾ, ಕೋಕಾ ಇತ್ಯಾದಿ, ಈ ಒಂದು ಸ್ವಯಂ ನಿರ್ಮಿತ ಚಕ್ರವ್ಯೂಹದಿಂದ ಹೊರಬರದೆ, ಗಿರಕಿ ಹೊಡೆಯುವುದನ್ನು ನೋಡಬಹುದು. ಈ ಶಾಸನಗಳಡಿಯಲ್ಲಿ ಬಂಧಿತರಾದವರನ್ನು ಭಯೋತ್ಪಾದಕರೆಂದೇ ಪರಿಗಣಿಸಲಾಗುವುದಲ್ಲದೆ, ಬಂಧಿತ ವ್ಯಕ್ತಿಗಳ ವಿಚಾರಣೆಯೂ ಇದೇ ಪರಿಧಿ

> **ಭಯೋತ್ಪಾದನೆಯನ್ನು, ಸಾಮಾಜಿಕ ಕ್ಷೋಭೆ ಹರಡುವ ಒಂದು ಸಾಧನ, ಸಾಮಾನ್ಯ ಜನತೆಯ ದೈನಂದಿನ ಜೀವನದಲ್ಲಿ ಒಂದು ರೀತಿಯ ಭಯದ ವಾತಾವರಣ ಸೃಷ್ಟಿಸುವ ಒಂದು ವಿಕೃತ ಪರಿಕಲ್ಪನೆ ಎಂಬ ದೃಷ್ಟಿಯಲ್ಲಿ ಅರ್ಥೈಸಿದಾಗ, ಭಯೋತ್ಪಾದನೆಗೂ ಮತ್ತು ಅದರ ಸುತ್ತ ಬೆಳೆಸಲಾಗಿರುವ ಸಾಮುದಾಯಿಕ ಚೌಕಟ್ಟಿಗೂ ಇರುವ ಸೂಕ್ಷ್ಮ ಸಂಬಂಧಗಳನ್ನು ಭಿನ್ನವಾಗಿ ನೋಡುವ ಸಾಧ್ಯತೆಗಳಿರುತ್ತವೆ.**

ಯಲ್ಲೇ ನಡೆಯುತ್ತದೆ. ಹಾಗಾಗಿಯೇ ಭಯೋತ್ಪಾದನೆ ಎಂಬ ಪದಪುಂಜವೇ ಒಂದು ಸಮುದಾಯಕ್ಕೆ ಸೀಮಿತವಾಗಿದೆ.

ಆದರೆ ಭಯೋತ್ಪಾದನೆಯನ್ನು, ಸಾಮಾಜಿಕ ಕ್ಷೋಭೆ ಹರಡುವ ಒಂದು ಸಾಧನ, ಸಾಮಾನ್ಯ ಜನತೆಯ ದೈನಂದಿನ ಜೀವನದಲ್ಲಿ ಒಂದು ರೀತಿಯ ಭಯದ ವಾತಾವರಣ ಸೃಷ್ಟಿಸುವ ಒಂದು ವಿಕೃತ ಪರಿಕಲ್ಪನೆ ಎಂಬ ದೃಷ್ಟಿಯಲ್ಲಿ ಅರ್ಥೈಸಿದಾಗ, ಭಯೋತ್ಪಾದನೆಗೂ ಮತ್ತು ಅದರ ಸುತ್ತ ಬೆಳೆಸಲಾಗಿರುವ ಸಾಮುದಾಯಿಕ ಚೌಕಟ್ಟಿಗೂ ಇರುವ ಸೂಕ್ಷ್ಮ ಸಂಬಂಧಗಳನ್ನು ಭಿನ್ನವಾಗಿ ನೋಡುವ ಸಾಧ್ಯತೆಗಳಿರುತ್ತವೆ. ಸಂಜಯ್ ದತ್ ಅಥವಾ ಮುಂಬೈ ಸ್ಫೋಟದ ಸುತ್ತ ನಡೆಯುತ್ತಿರುವ ವಿದ್ಯಮಾನಗಳನ್ನು ಈ ದೃಷ್ಟಿಯಿಂದಲೇ ನೋಡಬೇಕಾಗುತ್ತದೆ.

"ಅಸಹಾಯಕ ಜನತೆ ಅನುಭವಿಸಿದ ಕಷ್ಟ ನಷ್ಟಗಳಿಗೆ ನ್ಯಾಯ ದೊರಕಲು ೧೪ ವರ್ಷ ಕಾಯಬೇಕಾಯಿತು. ಇದು ಭಾರತೀಯ ನ್ಯಾಯಾಂಗದ ವೈಫಲ್ಯ, ತಪ್ಪಿತಸ್ಥರಿಗೆ ಶೀಘ್ರ ಮತ್ತು ಇನ್ನೂ ಉಗ್ರ ಶಿಕ್ಷೆ ಆಗಬೇಕು" ಎಂಬ ಅಭಿಪ್ರಾಯಗಳು ಹಲವೆಡೆಗಳಿಂದ ಕೇಳಿಬರುತ್ತಿವೆ. ಇದು ಸಹಜವೂ ಹೌದು. ಆದರೆ ಈ ಆಗ್ರಹಗಳ ಹಿಂದೆ ಮುಂಬೈ ಸರಣಿ ಸ್ಫೋಟಕ್ಕಿಂತಲೂ ಮುನ್ನ, ಎರಡು ಮೂರು ವರ್ಷಗಳ ಅವಧಿಯಲ್ಲಿ ನಡೆದ ವಿದ್ಯಮಾನಗಳ ಬಗ್ಗೆ ಕಾಳಜಿ ಇಲ್ಲದಿರುವುದು ದುರದೃಷ್ಟಕರ. ಸರಣಿ ಸ್ಫೋಟದಲ್ಲಿ ಮಡಿದವರ ಸಂಖ್ಯೆ ನೂರರ ಮಟ್ಟದಲ್ಲಿದೆ. ಈ ಕೃತ್ಯಗಳಿಂದ ನೊಂದ ಜನತೆಗೆ ನ್ಯಾಯ ದೊರೆಯಬೇಕಾದ್ದು ಸಹಜವೇ.

ಆದರೆ ಇದಕ್ಕೂ ಮುನ್ನ, ಅಯೋಧ್ಯೆಯ ಬಾಬ್ರಿ ಮಸೀದಿ ಧ್ವಂಸದ ನಂತರದಲ್ಲಿ ಮುಂಬೈ, ಸೂರತ್, ಅಹಮದಾಬಾದ್ ಮತ್ತಿತರ ನಗರಗಳಲ್ಲಿ ನಡೆದ ನರಮೇಧದಲ್ಲಿ, ೧೯೯೦ರ ಸೋಮನಾಥ ರಥಯಾತ್ರೆಯ ಸಂದರ್ಭದಲ್ಲಿ ದೇಶಾದ್ಯಂತ ಹರಡಿದ ಕೋಮುಜ್ವಾಲೆಯ ದಳ್ಳುರಿಯಲ್ಲಿ, ಬಾಬ್ರಿ ಮಸೀದಿಯ ಧ್ವಂಸದ ನಂತರದಲ್ಲಿ ನಡೆದ ಕೋಮುಗಲಭೆಗಳಲ್ಲಿ ೧೯೮೪ರಲ್ಲಿ ದೆಹಲಿಯಲ್ಲಿ ನಡೆದ ಸಿಖ್ ವಿರೋಧಿ ಗಲಭೆಗಳಲ್ಲಿ, ೨೦೦೨ರಲ್ಲಿ ಗುಜರಾತಿನ ಹತ್ಯಾಕಾಂಡದಲ್ಲಿ, ಸಾವಿರಾರು ಅಮಾಯಕ ಜೀವಗಳು, ಜಾತಿ, ಭಾಷೆ, ಧರ್ಮಗಳ ಎಲ್ಲೆಗಳನ್ನು ಮೀರಿ ಬೆಂದು ಹೋಗಿವೆ. ನಮ್ಮ ದೇಶದಲ್ಲಿ ನಿಜವಾದ ಜಾತ್ಯಾತೀತತೆ, ಧರ್ಮ ನಿರಪೇಕ್ಷತೆ ಎಲ್ಲಾದರೂ ಕಂಡು ಬಂದರೆ, ಅದು ಈ ಅಮಾಯಕ ಜೀವಗಳಲ್ಲಿ ಕಾಣಬಹುದು. ವಿಪರ್ಯಾಸವೆಂದರೆ, ಈ ದುಷ್ಕೃತ್ಯಗಳು ಮನುಕುಲ ವಿರೋಧಿಯಾದರೂ, ಸಾಮಾಜಿಕ ಕ್ಷೋಭೆಯನ್ನು ಹರಡುವ ಕೃತ್ಯಗಳಾದರೂ, ಇದನ್ನು ಭಯೋತ್ಪಾದನೆ ಎಂದು ಪರಿಗಣಿಸಲಾಗುವುದಿಲ್ಲ. ಈ ಮಾರಣ ಹೋಮಗಳಿಗೆ ಕಾರಣರಾದವರನ್ನು ಶಿಕ್ಷಿಸುವುದೂ ಇಲ್ಲ.

ಮಂದಿರ ಮಸೀದಿಗಳ, ಧರ್ಮ ಸಂರಕ್ಷಣೆಯ ಹೆಸರಿನಲ್ಲಿ ನಡೆಯುವ ಹತ್ಯೆಗಳು ಒಂದು ರೀತಿಯಲ್ಲಿ ಪಾವಿತ್ರ್ಯತೆಯನ್ನೋ, ಸಾರ್ಥಕತೆಯನ್ನೋ ಪಡೆದುಕೊಂಡುಬಿಡುತ್ತವೆ. ಹಾಗಾಗಿ ಭಯೋತ್ಪಾದನೆ ಎಂಬ ಹಣೆಪಟ್ಟಿ ಇಲ್ಲಿ ಅನ್ವಯಿಸಲಾಗುವುದಿಲ್ಲ. ನ್ಯಾಯಾಂಗ ಶಾಸ್ತ್ರದಲ್ಲಿ ಯಾವುದೇ ಅಪರಾಧವನ್ನು ವಿಶ್ಲೇಷಿಸುವಾಗ, ಕಾರಣ, ಪರಿಣಾಮ ಮತ್ತು ಉದ್ದೇಶಗಳನ್ನು ಪ್ರಧಾನ ಅಂಶಗಳನ್ನಾಗಿ ಪರಿಗಣಿಸಲಾಗುತ್ತದೆ. ಮೇಲೆ ಉಲ್ಲೇಖಿಸಲಾಗಿರುವ ಯಾವುದೇ ಘಟನೆ ಅಥವಾ ಪ್ರಕರಣಗಳಲ್ಲಿ ಈ ಮೂರು ಅಂಶಗಳನ್ನು ಗುರುತಿಸುವಾಗ, ಒಂದು ಸಮಾನತೆಯನ್ನು ಕಾಣಬಹುದಾಗಿದೆ. ಆದರೂ ಭಾರತೀಯ ಆಳುವ ವರ್ಗಗಳು ಈ ಸಮಾನತೆಯನ್ನು ಗುರುತಿಸುವಲ್ಲಿ ವಿಫಲವಾಗುತ್ತಿರುವುದು ಸ್ಪಷ್ಟವಾಗುತ್ತಿದೆ. ಈ ಅಂಶಗಳನ್ನು ಮುಂಬೈ ಸರಣಿ ಸ್ಫೋಟಗಳ ಪ್ರಕರಣದಲ್ಲಿ ಗುರುತಿಸಬಹುದಾಗಿದೆ. ಶ್ರೀ ಕೃಷ್ಣ ಸಮಿತಿಯ ವರದಿಯನ್ನು ಅನುಷ್ಠಾನಗೊಳಿಸಿದಲ್ಲಿ ೧೯೯೨ರ ಮುಂಬೈ ಗಲಭೆಗಳಲ್ಲಿ ಭಾಗಿಯಾಗಿದ್ದವರಿಗೆ ಶಿಕ್ಷೆಯಾಗುವುದಿಲ್ಲವೇ? ಗುಜರಾತ್ ಹತ್ಯಾಕಾಂಡದ ಬಗ್ಗೆ ಸಿದ್ಧವಾಗಿರುವ ವರದಿಯನ್ನು ಇನ್ನೂ ಏಕೆ ಧೂಳು ತಿನ್ನುತ್ತಿದೆ? ಅಯೋಧ್ಯಾ ಪ್ರಕರಣವೇಕೆ ಇನ್ನೂ ನ್ಯಾಯಾಂಗ ತಪಾಸಣೆಗೊಳಗಾಗಿಲ್ಲ? ೧೯೮೪ರ ಸಿಖ್ ನರಮೇಧದಲ್ಲಿ ಭಾಗಿಯಾದವರಿಗೆ ಶಿಕ್ಷೆಯಾಗಿಲ್ಲವೇಕೆ? ಈ ಹತ್ತು ಹಲವಾರು ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವುದು ಅವಶ್ಯಕವಾಗಿದೆ.

೧೯೯೧ರಲ್ಲಿ ಹಿಂದೆ ಆಂಧ್ರ ಪ್ರದೇಶದ ತ್ಸುಂಡೂರಿನಲ್ಲಿ ಸವರ್ಣೀಯರು ೮ ಜನ ದಲಿತರನ್ನು ಅಟ್ಟಿಸಿಕೊಂಡು ಹೋಗಿ, ಅವರ ದೇಹಗಳನ್ನು ತುಂಡು ತುಂಡಾಗಿ ಮಾಡಿ, ಚೀಲಗಳಲ್ಲಿ ಕಟ್ಟಿ ಬಿಸಾಡಿದ್ದ ಘಟನೆ ಇಂದಿಗೂ ಮೈ ಜುಮ್ಮೆನಿಸುವ ಘಟನೆ. ಈ ಘಟನೆಯ ವಿಚಾರಣೆ ಇತ್ತೀಚೆಗೆ ಮುಗಿದು ೫೬ ಅಪರಾಧಿಗಳಿಗೆ ಶಿಕ್ಷೆಯಾಗಿ, ೧೨೩ ಜನ ಖುಲಾಸೆಯಾಗಿದ್ದಾರೆ. ತೀವ್ರ ಪ್ರಮಾಣದ ಶಿಕ್ಷೆಯನ್ನೇನೂ ವಿಧಿಸಲಾಗಿಲ್ಲ. ಈ ಪ್ರಕರಣದ ಬಗ್ಗೆ, ಶಿಕ್ಷೆಯ ಪ್ರಮಾಣದ ಬಗ್ಗೆ, ಕರ್ನಾಟಕದ ಕಂಬಾಲಪಲ್ಲಿ ಪ್ರಕರಣದ ತೀರ್ಪಿನ ಬಗ್ಗೆ ಗಂಭೀರ ಚರ್ಚೆ ನಡೆದೇ ಇಲ್ಲ. ಅಥವಾ ಈ ದುಷ್ಕೃತ್ಯಗಳು ಭಯೋತ್ಪಾದನೆ ಎನಿಸಿಕೊಳ್ಳುವುದೂ ಇಲ್ಲ.

ಬಹುಶಃ ಕೆಲವು ಪದಗಳ ಬಳಕೆಯ ಹಿಂದೆಯೇ ಆ ಪದಗಳು ಪ್ರತಿನಿಧಿಸುವ ಕೃತ್ಯಗಳ ಸ್ವರೂಪವೂ ಅಡಗಿರಬಹುದು ಎನಿಸುತ್ತದೆ. ಈ ಸಮೀಪ ದೃಷ್ಟಿಕೋನವೇ ಇಂದು ಅನೇಕ ವಿರೋಧಾಭಾಸಗಳಿಗೆ ಎಡೆಮಾಡಿಕೊಟ್ಟಿರುತ್ತದೆ. ಮುಂಬೈ ಸ್ಫೋಟ ಪ್ರಕರಣ ಮತ್ತು ಸಂಜಯ್ ದತ್‌ನ ಶಿಕ್ಷೆಯ ವಿದ್ಯಮಾನವನ್ನೂ ಈ ದೃಷ್ಟಿಯಿಂದಲೇ ವ್ಯಾಖ್ಯಾನಿಸಲಾಗುತ್ತಿದೆ. ಇನ್ನಾದರೂ ನಮ್ಮ ಸಮಾಜ ಭಯೋತ್ಪಾದನೆಯ ವ್ಯಾಖ್ಯಾನವನ್ನು ವಿಭಿನ್ನ ರೀತಿಯಲ್ಲಿ ಮಾಡದೆ ಹೋದರೆ, ಸಂಜಯ್ ದತ್‌ಗಳು ಹೆಚ್ಚಾಗುತ್ತಾರೆ. ಗುಜರಾತ್–ಕಂಬಾಲಪಲ್ಲಿಗಳೂ ಹೆಚ್ಚುತ್ತಾ ಹೋಗುತ್ತವೆ. □

ಕರ್ನಾಟಕದಲ್ಲಿ ನಕ್ಸಲಿಸಂನ ಈ ಒಂದು ರಕ್ತ ಕ್ರಾಂತಿ ನೋಡುತ್ತಿದ್ದರೆ ಎಲ್ಲೋ ಒಂದು ಕಡೆ ನಮ್ಮ ಯುವ ಜನತೆಯ ಯೋಚನಾ ಲಹರಿ ಬದಲಾಗಬೇಕು ಅನ್ನಿಸುತ್ತದೆ. ನಕ್ಸಲಿಸಂನ ಮೂಲ ತತ್ವಗಳು, ಸಿದ್ಧಾಂತಗಳು, ಅದರಲ್ಲಿಯೂ ಅವರ ಸಾಮಾಜಿಕ ನ್ಯಾಯ ಪರಿಕಲ್ಪನೆ ಇಂದು ಅತ್ಯಂತ ಅಗತ್ಯವಾಗಿ ಸಮಾಜಕ್ಕೆ ಬೇಕಾಗಿರುವ ಅಂಶವಾಗಿದೆ. ಆದರೆ ಆ ಒಂದು ಗುರಿಸಾಧನೆಗೆ ಅವರು ಅಳವಡಿಸಿಕೊಂಡಿರುವ ಮಾರ್ಗ ತಪ್ಪಾಗಿದೆ. ನಕ್ಸಲಿಸಂ ಒಂದು ಜನಪರ ಹೋರಾಟವಾಗಬೇಕೇ ಹೊರತು ಪೋಲಿಸ್ ಮತ್ತು ನಕ್ಸಲರ ನಡುವಿನ ಕಾದಾಟವಾಗಬಾರದು. ಈಗ ಕರ್ನಾಟಕದಲ್ಲಿ ಆ ಪರಿಸ್ಥಿತಿ ನಿರ್ಮಾಣವಾಗಿದೆ. ನಕ್ಸಲಿಸಂನ ಮೂಲ ತತ್ವಗಳನ್ನು ಅರಿತು ಅದನ್ನು ಮತ್ತು ಆ ಒಂದು ಚಳವಳಿಯನ್ನು ಸಮಾಜದ ಮುಖ್ಯವಾಹಿನಿಗೆ ತರುವ ಅಗತ್ಯವಿದೆ ಮತ್ತು ಅದು ಸಾಧ್ಯವಿದೆ.

ಕಿರಣ. ಎಂ
ಗಾಜನೂರು

ಭಾರತದ ಆಂತರಿಕ ಭದ್ರತೆಗೆ ಚೀನಾ ಮತ್ತು ಪಾಕಿಸ್ತಾನ ಧಕ್ಕೆ ತರಲು ಪ್ರಯತ್ನಿಸುತ್ತಿದೆ ಎಂಬ ಗುಪ್ತಚರ ವಾರ್ತೆಯ ಹಿಂದೆಯೇ ಅಯೋಧ್ಯೆ ರಾಮಜನ್ಮ ಭೂಮಿ ಪ್ರವೇಶಕ್ಕೆ ಪ್ರಯತ್ನಿಸಿ ೬ ಉಗ್ರರ ಹತ್ಯೆಯಾಗಿದೆ. ಅಂತೆಯೇ ಕರ್ನಾಟಕದಲ್ಲಿ ಎನ್‌ಕೌಂಟರ್‌ಗೆ ಒಳಗಾದ ನಕ್ಸಲರ ಕೈಯಲ್ಲಿ ವಿದೇಶಿ ನಿರ್ಮಿತ ಎ.ಕೆ. -೪೭, ಸ್ಟೆನ್‌ಗನ್ ನಂತಹ ಶಸ್ತ್ರಾಸ್ತ್ರಗಳು ಸಿಗುತ್ತಿವೆ, ಹೈದರಾಬಾದ್ ಮಸೀದಿಯಲ್ಲಿ ಬಾಂಬ್ ಸ್ಫೋಟದಿಂದ ೧೨ ಮಂದಿ ಸಾವು, ಹಂಪಿಯಲ್ಲಿ ಉಗ್ರಗಾಮಿಯ ಬಂಧನ, ಮುಖ್ಯವಾಗಿ ಬೆಂಗಳೂರಿನ ಇಮ್ರಾನ್, ಹನೀಫ್, ಕಫೀಲ್‌ನಂತಹ ಉಗ್ರಗಾಮಿಗಳು ಬಂಧಿತರಾಗಿದ್ದಾರೆ. ಜತೆಗೆ ಹನೀಫ್, ಕಫೀಲ್‌ರಿಂದ ಲಂಡನ್ ವಿಮಾನ ನಿಲ್ದಾಣ ಸ್ಫೋಟದ ಸಂಚು. ಈಗ ಮೆಣಸಿನಹಾಡ್ಯದಲ್ಲಿ ನಕ್ಸಲರು ಮತ್ತು ಪೋಲಿಸರ ನಡುವಿನ ಕಾದಾಟದಲ್ಲಿ ೫ ಮಂದಿಯ ಸಾವು.

ಕಳೆದ ಕೆಲವು ತಿಂಗಳಿನ ಈ ಎಲ್ಲಾ ಘಟನೆಗಳನ್ನು ಗಮನಿಸಿದರೆ ಆಶ್ಚರ್ಯ, ಭಯ ಎರಡೂ ಆಗುತ್ತಿವೆ. ಅದಕ್ಕಿಂತ ಮುಖ್ಯವಾಗಿ ನಮ್ಮ ಯುವ ಜನತೆ ಎತ್ತಸಾಗುತ್ತಿದೆ ಎಂಬ ಅತಿ ದೊಡ್ಡ ಪ್ರಶ್ನೆ ನಮ್ಮ ಎದುರಿಗೆ ನಿಲ್ಲುತ್ತದೆ?

ಇಂದು ಭಾರತದಲ್ಲಿನ ಉಗ್ರಗಾಮಿಗಳ ಹತ್ಯಾಕಾಂಡ ಸಂಘಟನೆಗಳ ಮಾತು ಬಿಡಿ. ನಮ್ಮ ಶಾಂತ ಕರ್ನಾಟಕದ ಪರಿಸ್ಥಿತಿ ಏನಾಗಿದೆ? ಏಕೆ ಹೀಗೆ ನಕ್ಸಲಿಸಂ ಚಳವಳಿ ಹುಟ್ಟಿಕೊಂಡು ಅವು ಕ್ರಾಂತಿಯ ಹಾದಿ ಹಿಡಿದು ರಾಜ್ಯದ ಆಂತರಿಕ ಭದ್ರತೆಗೆ ಧಕ್ಕೆ ತರುತ್ತಿದೆ ಎಂದು ಯೋಚಿಸ ಹೊರಟರೆ ಸಿಗುವ ಉತ್ತರ ಇಂದು ಯುವ ಜನತೆ ಕ್ರಾಂತಿ ಬಯಸುತ್ತಿದೆ. ಒಂದೇ ದಿನ ಇಡೀ ವ್ಯವಸ್ಥೆಯನ್ನು ಕ್ರಾಂತಿಯಿಂದ ಬದಲಿಸಿ ಹೊಚ್ಚ ಹೊಸ ವ್ಯವಸ್ಥೆ ತರುವ ಕನಸು ಕಾಣುತ್ತಿವೆ. ಆದರೆ ಇದು ಸಾಧ್ಯವೇ? ಖಂಡಿತಾ ಇಲ್ಲ. ಯಾವ ಚಳವಳಿಗೆ ಸಮಾಜದ ಬೆಂಬಲ ದೊರಕುವುದಿಲ್ಲವೋ ಅಲ್ಲಿಯವರೆಗೆ ಆ ಚಳವಳಿ ಯಶಸ್ವಿಯಾಗಲು ಸಾಧ್ಯವಿಲ್ಲ. ಏಕೆಂದರೆ ನಾವು ಸಮಾಜ ಜೀವಿಗಳು. ಅದರಲ್ಲಿಯೂ ಒಂದು ವ್ಯವಸ್ಥೆಯ ಒಳಗೆ ಬದುಕುತ್ತಿದ್ದೇವೆ. ಆದರೂ ಕರ್ನಾಟಕದಲ್ಲಿ ನಕ್ಸಲಿಸಂನ ಈ ಒಂದು ರಕ್ತಕ್ರಾಂತಿ ನೋಡುತ್ತಿದ್ದರೆ ಎಲ್ಲೋ ಒಂದು ಕಡೆ ನಮ್ಮ ಯುವ ಜನತೆಯ ಯೋಚನಾ ಲಹರಿ ಬದಲಾಗಬೇಕು ಅನ್ನಿಸುತ್ತದೆ.

ನಕ್ಸಲಿಸಂನ ಮೂಲ ತತ್ವಗಳು ಸಿದ್ಧಾಂತಗಳು ಅದರಲ್ಲಿಯೂ ಅವರ ಸಾಮಾಜಿಕ ನ್ಯಾಯ (Social Justice) ಪರಿಕಲ್ಪನೆ ಇಂದು ಅತ್ಯಂತ ಅಗತ್ಯವಾಗಿ ಸಮಾಜಕ್ಕೆ ಬೇಕಾಗಿರುವ ಅಂಶವಾಗಿದೆ. ಆದರೆ ಆ ಒಂದು ಗುರಿಸಾಧನೆಗೆ ಅವರು ಅಳವಡಿಸಿಕೊಂಡಿರುವ ಮಾರ್ಗ ತಪ್ಪಾಗಿದೆ. ನಕ್ಸಲಿಸಂ ಒಂದು ಜನಪರ ಹೋರಾಟವಾಗಬೇಕೇ ಹೊರತು ಪೋಲಿಸ್ ಮತ್ತು ನಕ್ಸಲರ ನಡುವಿನ ಕಾದಾಟವಾಗಬಾರದು. ಈಗ ಕರ್ನಾಟಕದಲ್ಲಿ ಆ ಪರಿಸ್ಥಿತಿ ನಿರ್ಮಾಣವಾಗಿದೆ. ನಕ್ಸಲಿಸಂನ ಮೂಲ ತತ್ವಗಳನ್ನು ಅರಿತು ಅದನ್ನು ಮತ್ತು ಆ ಒಂದು ಚಳವಳಿಯನ್ನು ಸಮಾಜದ ಮುಖ್ಯವಾಹಿನಿಗೆ ತರುವ ಅಗತ್ಯವಿದೆ ಮತ್ತು ಅದು ಸಾಧ್ಯವಿದೆ.

ಹೇಗೆಂದರೆ .....

ಇಂದು ನಕ್ಸಲರು ಕಾಡಿನಲ್ಲಿ ವಾಸಿಸುತ್ತಾ ಅಲ್ಲಿನ ಜನರಿಗೆ



ನಕ್ಸಲ್ ಚಳವಳಿಯ ಗೆಳೆಯರಿಗೆ...

ಸಾಮಾಜಿಕ ತಿಳಿವಳಿಕೆ ನೀಡುತ್ತಾ ಅವರಲ್ಲಿ ಜಾಗೃತಿ ಮೂಡಿಸಲು ಪ್ರಯತ್ನಿಸುತ್ತಿದ್ದಾರೆ ಎಂಬುದು ನಿಜ. ಅಂತೆಯೇ ಅದೇ ನಕ್ಸಲರು ಯಾರದೋ ಪೋಲಿಸನ ಗುಂಡಿಗೆ ಎದೆಕೊಟ್ಟು ಅನಾಥವಾಗಿ ಸಾಯುತ್ತಿದ್ದಾರೆ. ಮತ್ತು ಅವರ ಸಾವು ಮೊದಲಿನ ರೀತಿ ಸಿಂಪಥಿಗೆ ಒಳಗಾಗುತ್ತಿಲ್ಲ. ಸಾಮಾಜಿಕ ಮನ್ನಣೆ ಪಡೆಯುತ್ತಿಲ್ಲ ಎಂಬುದು ಸತ್ಯವಾಗಿದೆ.

ಆದ್ದರಿಂದ ಇಂದು ಒಂದು ವ್ಯವಸ್ಥೆಯಲ್ಲಿ ಅದೂ ಗಾಂಧಿ ಹಾಕಿಕೊಟ್ಟ ಮಾರ್ಗದಲ್ಲಿ ನಡೆಯುತ್ತಿರುವ ನಾವು ಅದರಲ್ಲಿ ನಕ್ಸಲಿಸಂನಲ್ಲಿ ಗುರುತಿಸಿಕೊಂಡಿರುವ ಯುವಕರು ಏಕೆ ತಮ್ಮ ಒಂದು ಚಳವಳಿಯನ್ನು ಗಾಂಧಿ ಹಾಕಿಕೊಟ್ಟ ಅಹಿಂಸಾ ಮಾರ್ಗಕ್ಕೆ ತರಬಾರದು? ಉದಾಹರಣೆಗೆ ಜೀವದ ಹಂಗು ತೊರೆದು ಹೋರಾಡುತ್ತಿರುವ ಜೀವಕ್ಕೆ ಹೆದರದ ಜನತೆಗಾಗಿ ಅವರ ಸಮಸ್ಯೆಗಳಿಗಾಗಿ ಜೀವ ನೀಡಲು ಸಿದ್ದರಿರುವ ಈ ನಕ್ಸಲರು ಸಮಾಜದಲ್ಲಿನ ಮತ್ತು ಕಾಡಿನ ಗಿರಿಜನರ ಸಮಸ್ಯೆಗಳಿಗಾಗಿ ಒಂದು ಅಹಿಂಸಾತ್ಮಕ ಹೋರಾಟ ಹಮ್ಮಿಕೊಳ್ಳಲಿ. ಯಾವುದಾದರೂ ಜಿಲ್ಲಾಧಿಕಾರಿ ಅಥವಾ ಮುಖ್ಯಮಂತ್ರಿಗಳ ಕಚೇರಿಯ ಮುಂದೆ ಉಪವಾಸ ಸತ್ಯಾಗ್ರಹ ಕೈಗೊಳ್ಳಲು ಎಲ್ಲಿಯವರೆಗೆ ಸರ್ಕಾರ ನಮ್ಮ ಒಂದೂ ಬೇಡಿಕೆ ಮತ್ತು ಸಮಸ್ಯೆಗಳನ್ನು ಈಡೇರಿಸುವುದಿಲ್ಲವೋ ಅಲ್ಲಿಯವರೆಗೆ ಯಾವುದೇ ಒತ್ತಡಕ್ಕೆ ಮಣಿಯದೆ ಹೋರಾಟ ನಡೆಸಲಿ (ಉದಾ. ಮೇಧಾ ಪಾಟ್ಕರ್) ಅದರಲ್ಲಿ ಉಪವಾಸದಿಂದ ಒಬ್ಬೇ ಒಬ್ಬ ಸತ್ತರೂ ಸರಿ ಇಡೀ ಸಮಾಜ ಮರುಕ ಪಡುತ್ತದೆ. ಇಡೀ ವ್ಯವಸ್ಥೆ ನಕ್ಸಲಿಸಂನಂತಹ ಗರ್ವದಿಂದ ನೋಡುತ್ತದೆ. ಏಕೆಂದರೆ ಆ ಸಾವಿಗೆ ಒಂದು ಗುರಿ ಇದೆ. ನಿಜವಾಗಲು ಆತ ಮಹಾತ್ಮನಾಗುತ್ತಾನೆ. ಜತೆಗೆ ನಕ್ಸಲಿಸಂ ನಂತಹ ಜನಪರ ಚಳವಳಿಯನ್ನು ಸಮಾಜದ ಮುಖ್ಯವಾಹಿನಿಗೆ ತರಲು ಸಾಧ್ಯವಾಗುತ್ತದೆ. ಇದರಿಂದ ಹೋರಾಟಕ್ಕೆ ಜನ ಮನ್ನಣೆ ದೊರೆಯುತ್ತದೆ. ಹುತಾತ್ಮನಾದ ವ್ಯಕ್ತಿಯ ತಾಯಿ ತನ್ನ ಮಗನ ಸಾವನ್ನು ಹೆಮ್ಮೆಯಿಂದ ಸ್ವೀಕರಿಸುತ್ತಾಳೆ.

ಅದನ್ನು ಬಿಟ್ಟು ಯಾವುದೋ ಕಾಡಿನಲ್ಲಿ ಯಾರ ಮಕ್ಕಳೋ ಏನೋ ಪೋಲಿಸರ ಗುಂಡಿಗೆ ಅನಾಥವಾಗಿ ಸಾಯುವುದು ಎಷ್ಟು ಸೂಕ್ತ? ಜತೆಗೆ ರಾಜ್ಯ ವಿರೋಧಿ ಎಂಬ ಪಟ್ಟಬೇರೆ. ಯಾವ ತಾಯಿಯ ಮಗನಾದರೇನು ಸಾವು ಸಾವೇ ಅಲ್ಲವೇ? ಆದರೆ ಆ ಸಾವು ಆ ಬಲಿದಾನ, ತನ್ನ ನಂಬಿಕೆಗೆ, ಚಳವಳಿಗೆ, ಹೋರಾಟಕ್ಕೆ ಮುಖ್ಯವಾಗಿ ಸಾಮಾಜಿಕ ಮನ್ನಣೆಗೆ, ಸಾಮಾಜಿಕ ಸಮಸ್ಯೆಗಳ ನಿವಾರಣೆಗೆ ಎಷ್ಟರ ಮಟ್ಟಿಗೆ ಉಪಯೋಗವಾಗಿದೆ ಎಂಬುದು ಮುಖ್ಯ ಅಲ್ಲವೇ ಗೆಳೆಯ?

ಪ್ರತಿ ಬಲಿದಾನವೂ ಅತ್ಯಂತ ಅಮೂಲ್ಯ. ಸಾಮಾಜಿಕ ಸಮಸ್ಯೆಗಳಿಗಾಗಿ ಹೋರಾಡಿ ಬಲಿಯಾದ ನಕ್ಸಲರ ಆ ಎಲ್ಲಾ ಬಲಿದಾನಗಳಿಗೂ ನನ್ನ ನಮನ. ಆದರೆ ಅದರಿಂದ ಸಾಧಿಸಿದ್ದಾರೂ ಏನು? ತಾಯಿಯ ರೋದನೆ, ಕಣ್ಣೀರು, ಅಸಹಾಯಕತೆ ಮಾತ್ರ, ಅದಕ್ಕೆ ಗೆಳೆಯರೇ ಒಂದು ವ್ಯವಸ್ಥೆಯನ್ನು ಬದಲಾಯಿಸಲು ಹೊರಟರೆ ನಾವು ವ್ಯವಸ್ಥೆಯಲ್ಲಿ ಬದುಕಿಯೇ ಅದನ್ನು ಬದಲಾಯಿಸಬೇಕು ಎಂಬ ಹಿರಿಯರ ಮಾತು ನೆನಪಿಗೆ ಬರುತ್ತದೆ.

ಮಹಾತ್ಮಗಾಂಧಿ, ಸ್ವಾತಂತ್ರಕ್ಕಾಗಿ ಜೀವ ತೆತ್ತ ವ್ಯಕ್ತಿಗಳನ್ನು ಜನತೆ ಮತ್ತು ಇತಿಹಾಸ ಇಂದು ನೆನಪಿನಲ್ಲಿ ಇಟ್ಟುಕೊಂಡಿದೆ ಎಂದರೆ ಅವರ ಹೋರಾಟ ಮತ್ತು ಬಲಿದಾನಗಳು ಸಮಾಜದ ಮನ್ನಣೆ ಗಳಿಸಿದ್ದವು. ಆದ್ದರಿಂದ

ಇಂದು ಒಂದು ವ್ಯವಸ್ಥೆಯಲ್ಲಿ ಅದೂ ಗಾಂಧಿ ಹಾಕಿಕೊಟ್ಟ ಮಾರ್ಗದಲ್ಲಿ ನಡೆಯುತ್ತಿರುವ ನಾವು ಅದರಲ್ಲಿ ನಕ್ಸಲಿಸಂನಲ್ಲಿ ಗುರುತಿಸಿಕೊಂಡಿರುವ ಯುವಕರು ಏಕೆ ತಮ್ಮ ಒಂದು ಚಳವಳಿಯನ್ನು ಗಾಂಧಿ ಹಾಕಿಕೊಟ್ಟ ಅಹಿಂಸಾ ಮಾರ್ಗಕ್ಕೆ ತರಬಾರದು? ಉದಾಹರಣೆಗೆ ಜೀವದ ಹಂಗು ತೊರೆದು ಹೋರಾಡುತ್ತಿರುವ ಜೀವಕ್ಕೆ ಹೆದರದ ಜನತೆಗಾಗಿ ಅವರ ಸಮಸ್ಯೆಗಳಿಗಾಗಿ ಜೀವ ನೀಡಲು ಸಿದ್ದರಿರುವ ಈ ನಕ್ಸಲರು ಸಮಾಜದಲ್ಲಿನ ಮತ್ತು ಕಾಡಿನ ಗಿರಿಜನರ ಸಮಸ್ಯೆಗಳಿ ಗಾಗಿ ಒಂದು ಅಹಿಂಸಾತ್ಮಕ ಹೋರಾಟ ಹಮ್ಮಿಕೊಳ್ಳಲಿ.

ಇಂದಿಗೂ ಅವರ ನೆನಪು ಇದೆ, ಮುಂದೆಯೂ ಇರುತ್ತದೆ ಕೂಡ. ಆದರೆ ಪೋಲಿಸರ ಎನ್‌ಕೌಂಟರ್‌ನಲ್ಲಿ ಸತ್ತ ನಕ್ಸಲರ ಸಾವು? ನಿಜ, ಅದು ಬಲಿದಾನವೆ. ಆದರೆ ವ್ಯವಸ್ಥೆಯ ಬದಲಾವಣೆಗೆ ಕ್ರಾಂತಿ ಒಂದೇ ಮಾರ್ಗವಲ್ಲ ಗೆಳೆಯ. ಅದಕ್ಕಿಂತ ಮುಖ್ಯವಾಗಿ ಹೋರಾಟಕ್ಕೆ ಸಮಾಜದ ಮನ್ನಣೆ ಅಗತ್ಯ. ನಮ್ಮ ಯುವ ಜನತೆ. ನಕ್ಸಲಿಸಂ ಈ ನಿಟ್ಟಿನಲ್ಲಿ ಯೋಚಿಸುವ ಅಗತ್ಯತೆ ಇದೆ. ಏಕೆಂದರೆ ಒಂದು ವ್ಯವಸ್ಥೆಯನ್ನು ಬದಲಾಯಿಸಬೇಕು ಅಂದರೆ ನಾವು ಆ ವ್ಯವಸ್ಥೆಯಲ್ಲಿ ಬದುಕಲೇ ಬೇಕು ಅಲ್ಲವೇ ಗೆಳೆಯ?

.......ಯೋಚನಾ ಲಹರಿ ಹೀಗೆ ಮುಂದುವರಿಯುತ್ತಿದೆ. ಅತ್ತ ಮತ್ತೆ ಉಗ್ರರ ಆರ್ಭಟ ಕೇಳಿಸುತ್ತಿದೆ. ಇತ್ತ ಮತ್ತೆ ಮೂರು ಜನ ನಕ್ಸಲರು ಪೋಲಿಸರ ಗುಂಡಿನಿಂದ ಸ್ವಲ್ಪದರಲ್ಲಿಯೇ ಪಾರಾಗಿದ್ದಾರೆ ಎಂಬ ಸುದ್ದಿ ತಿಳಿಯುತ್ತದೆ. ಮತ್ತೆ ಯಾವ ತಾಯಿ ರೋದಿಸಬೇಕಾಗಿದೆಯೋ? ಮತ್ತು ದೇಶದ ಬಾಹ್ಯ ಶತ್ರುಗಳಾದ ಚೀನಾ ಮತ್ತು ಪಾಕಿಸ್ತಾನ ದೇಶದ ಆಂತರಿಕ ಭದ್ರತೆ ಕದಡಲು ಶಸ್ತ್ರಾಸ್ತ್ರ ಪೂರೈಸುತ್ತಿವೆ ಎಂಬ ಗುಪ್ತ ವಾರ್ತೆ ಬೆಳಕಿಗೆ ಬರುತ್ತಿದೆ. ಅದಕ್ಕೆ ಸಾಕ್ಷಿಯಾಗಿ ಬೆಂಗಳೂರಿನಲ್ಲಿ ಬಂಧಿತನಾದ ಉಗ್ರಗಾಮಿ ಇಮ್ರಾನ್ ಮನೆಯಲ್ಲಿ ಆಧುನಿಕ ಅಸ್ತ್ರಗಳು ದೊರೆತಿವೆ. ಜತೆಗೆ ಎನ್‌ಕೌಂಟರ್‌ನಲ್ಲಿ ಸತ್ತ ನಕ್ಸಲರ ಕೈಯಲ್ಲಿ ಎ.ಕೆ. – ೪೭, ಸ್ಟೆನ್‌ಗನ್‌ನಂತಹ ಆಧುನಿಕ ಅಸ್ತ್ರಗಳು ಅನಾಥವಾಗಿ ಬಿದ್ದಿವೆ. ಅವರಂತೆ ....

ನಿಜವಾಗಲೂ ದೇಶದ ಬಾಹ್ಯ ಶತ್ರುಗಳು ಯುವಕರ ಅಸಹಾಯಕತೆ, ಸಿಟ್ಟು, ಆಕ್ರೋಶ, ನಿರಾಸೆಯನ್ನೇ ಬಂಡವಾಳವನ್ನಾಗಿ ಮಾಡಿಕೊಂಡು ಅವರ ಮೂಲಕ ದೇಶದ ಆಂತರಿಕ ಭದ್ರತೆ ಕದಡಲು ಪ್ರಯತ್ನಿಸುತ್ತಿವೆಯೋ? (ಅಸ್ತ್ರಗಳನ್ನು ಸರಬರಾಜು ಮಾಡುವ ಮೂಲಕ) ಎಂಬ ಆಲೋಚನೆಯೇ ಭಯ ಹುಟ್ಟಿಸುವಂತಿದೆ.

ಮನಸ್ಸು ಮತ್ತು ಕಣ್ಣು ಮುಂದಿನ ಬೆಳವಣಿಗೆಗೆ ಕಾಯುತ್ತಿವೆ. ನಮ್ಮ ಯುವಕ ಎಂದು ಈ ನಿಟ್ಟಿನಲ್ಲಿ ಯೋಚಿಸುತ್ತಾನೆ......? □

ಸಂವಾದ



ಲೇಖಕರದಲ್ಲಿ ಮನವಿ

'ಸಂವಾದವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ–ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಸೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು. 'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ.

ಲೇಖನಗಳು ೨೦೦೦ ಪದಗಳ ಮಿತಿಯಲ್ಲಿರಬೇಕು.

ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

–ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು – ೫೬೦ ೦೯೧

ನಾಲ್ಕು ವಾರಗಳ ಹಿಂದೆ ದೇಶದ ಪ್ರಮುಖ ಆಂಗ್ಲ ಪತ್ರಿಕೆಯೊಂದರಲ್ಲಿ ಪ್ರಕಟವಾದ ಲೀಡ್ ಸುದ್ದಿ ಎಲ್ಲರ ಗಮನ ಸೆಳೆಯುವಂತಿತ್ತು. ಚಂಡೀಗಢದ ಯುವಕನೋರ್ವ 'ಫ್ಯಾನ್ಸಿ' ಸೆಲ್‌ಫೋನ್ ನಂಬರ್ ಪಡೆಯಲು ೧೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ ಸುದ್ದಿ ಅದು. ಈ ಸುದ್ದಿಯ ಬೆನ್ನು ಹತ್ತಲು ಉಳಿದ ಮಾಧ್ಯಮದವರಿಗೆ ಹೆಚ್ಚು ಸಮಯ ಬೇಕಾಗಲಿಲ್ಲ. ಮಗನ ಸಾಧನೆಯನ್ನು ಸಿಹಿಯ ಮೂಲಕ ಯುವಕನ ತಂದೆ ತಾಯಿಯರು ಹಂಚಿಕೊಳ್ಳುವ ದೃಶ್ಯಗಳು ಮಾಧ್ಯಮಗಳಲ್ಲಿ ಕಾಣಿಸಿದವು. ಈ ಘಟನೆಯು ಭಾರತದ ಹೊಸ ವಿಶ್ವಾಸವನ್ನು ಪ್ರತಿಬಿಂಬಿಸುತ್ತದೆ ಎಂಬಂತಹ ಸಂಪಾದಕೀಯಗಳು ಪತ್ರಿಕೆಗಳ ಮುಖಪುಟದ 'ವರದಿ'ಗಳಲ್ಲಿ ಬರಲಾರಂಭಿಸಿದವು. ಆರ್ಥಿಕ ಸುಧಾರಣೆ ಮತ್ತು ಉದಾರೀಕರಣದ ಈ ಕಾಲದಲ್ಲಿ ಇದು ನಮ್ಮ 'ರೈತಾಪಿ'ಯ ಚಿತ್ರಣ!

ಮೂಲ: ಪಿ. ಸಾಯಿನಾಥ್
ಅನು: ಸತ್ಯಪ್ರಕಾಶ್ ಎಂ. ಆರ್

ಗ್ರಾಮೀಣ ಭಾರತ ಒಂದು ಹಾಸ್ಯಾಸ್ಪದ ಪ್ರದೇಶವಾಗಿಬಿಟ್ಟಿದೆ. ಕಳೆದ ಅರವತ್ತು ವರ್ಷಗಳಲ್ಲಿ ಮೂರು ರಾಜ್ಯಗಳನ್ನು ಹೊರತುಪಡಿಸಿದರೆ ಇಡೀ ಭಾರತದಲ್ಲಿ ಭೂಸುಧಾರಣೆಯನ್ನು ಸರಿಯಾಗಿ ಅನುಷ್ಠಾನಗೊಳಿಸಲಾಗಿಲ್ಲ. ಆದರೆ ವಿಶೇಷ ಆರ್ಥಿಕ ವಲಯಗಳನ್ನು ಮಾತ್ರ ಆರು ತಿಂಗಳ ಅಲ್ಪ ಅವಧಿಯಲ್ಲಿಯೇ ಮಂಜೂರು ಮಾಡಲಾಗುತ್ತದೆ. ಸ್ವತಂತ್ರ ಬಂದು ಆರು ದಶಕಗಳು ಕಳೆದ ನಂತರವೂ, ರಾಚನಿಕ ಮತ್ತು ಇತರ ಅಸಮಾನತೆಗಳು ಏರುಮುಖ ಕಾಣುತ್ತಾ, ಗ್ರಾಮೀಣ ಭಾರತ ಬಹುದೊಡ್ಡ ಗಂಡಾಂತರಕ್ಕೆ ಸಿಲುಕಿದೆ.

ನಾಲ್ಕು ವಾರಗಳ ಹಿಂದೆ ದೇಶದ ಪ್ರಮುಖ ಆಂಗ್ಲ ಪತ್ರಿಕೆಯೊಂದರಲ್ಲಿ ಪ್ರಕಟವಾದ ಲೀಡ್ ಸುದ್ದಿ ಎಲ್ಲರ ಗಮನ ಸೆಳೆಯುವಂತಿತ್ತು. ಚಂಡೀಗಢದ ಯುವಕನೋರ್ವ 'ಫ್ಯಾನ್ಸಿ' ಸೆಲ್‌ಫೋನ್ ನಂಬರ್ ಪಡೆಯಲು ೧೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ ಸುದ್ದಿ ಅದು. ಈ ಸುದ್ದಿಯ ಬೆನ್ನು ಹತ್ತಲು ಉಳಿದ ಮಾಧ್ಯಮದವರಿಗೆ ಹೆಚ್ಚು ಸಮಯ ಬೇಕಾಗಲಿಲ್ಲ. ಮಗನ ಸಾಧನೆಯನ್ನು ಸಿಹಿಯ ಮೂಲಕ ಯುವಕನ ತಂದೆ ತಾಯಿಯರು ಹಂಚಿಕೊಳ್ಳುವ ದೃಶ್ಯಗಳು ಮಾಧ್ಯಮಗಳಲ್ಲಿ ಕಾಣಿಸಿದವು. ಈ ಘಟನೆಯು ಭಾರತದ ಹೊಸ ವಿಶ್ವಾಸವನ್ನು ಪ್ರತಿಬಿಂಬಿಸುತ್ತದೆ ಎಂಬಂತಹ ಸಂಪಾದಕೀಯಗಳು ಪತ್ರಿಕೆಗಳ ಮುಖಪುಟದ 'ವರದಿ'ಗಳಲ್ಲಿ ಬರಲಾರಂಭಿಸಿದವು. ಆರ್ಥಿಕ ಸುಧಾರಣೆ ಮತ್ತು ಉದಾರೀಕರಣದ ಈ ಕಾಲದಲ್ಲಿ ಇದು ನಮ್ಮ 'ರೈತಾಪಿ'ಯ ಚಿತ್ರಣ!

ಹಾಗಾದರೆ, ಇದು ನಿಜವಾಗಿ ಯಾವುದರ ಚಿತ್ರಣ? ಈ ದೇಶದಲ್ಲಿ ಐಷಾರಾಮಿ ಜೀವನ ನಡೆಸುತ್ತಿರುವ ಉಳ್ಳವರ ವರ್ಗವೊಂದಿದೆ. ಈ ವರ್ಗದವರಿಗೆ ಗಾಳ ಹಾಕಿ ಕೂತಿರುವ ಮಾಧ್ಯಮ ಕೂಡ ಇದೆ. ಈ ಗುಂಪಿಗೆ ಸೇರಿದ ಪ್ರಮುಖ ಮ್ಯಾಗಜೀನ್‌ನ ಪ್ರಕಾಶಕರು ನೀಡಿರುವ ಜಾಹೀರಾತೊಂದನ್ನು ನೋಡಿ; ಇದರ ಪ್ರಕಾರ "೧೧೫,೦೦೦ ಡಾಲರ್‌ಗಳಿಗೆ ಒಂದು ಬಾಕ್ಸ್‌ನಂತೆ, ೫೦೦ ಡ್ರ್ಯಾಗನ್ ಗುರ್ಖಾ ಸಿಗಾರ್‌ಗಳು ಈಗ ಮಾರಾಟಕ್ಕಿವೆ. ರಾಜಸ್ಥಾನಿ ರಾಜವಂಶಕ್ಕೆ ಸೇರಿದ, ಒಂಟೆಯ ಮೂಳೆಗಳಿಂದ ತಯಾರಿಸಿದ, ಸುಮಾರು ೮೦ ವರ್ಷಗಳಷ್ಟು ಹಿಂದಿನ ಬಾಕ್ಸ್‌ಗಳಲ್ಲಿ ಈ ಸಿಗಾರ್‌ಗಳು ಲಭ್ಯ".

ಭಾರತೀಯ ರೈತ ಕುಟುಂಬದ ಸರಾಸರಿ ಮಾಸಿಕ ವರಮಾನ ೧೫ ಲಕ್ಷಗಳಷ್ಟಂತೂ ಖಂಡಿತ ಇಲ್ಲ. ಇನ್ನು ೧೧೫,೦೦೦ ಡಾಲರ್‌ಗಳ ಹತ್ತಿರ ಸುಳಿವ ಯೋಚನೆಯನ್ನೂ ಮಾಡುವಂತಿಲ್ಲ. ಮಾಸಿಕ ವರಮಾನ ೫೦೩ ರೂ. ಮಾತ್ರ, ಇದು, ಭಾರತದ ಗ್ರಾಮೀಣ ಬಡತನದ ರೇಖೆಗಿಂತ ಹೆಚ್ಚೇನೂ ಇಲ್ಲ. ಈ ಸರಾಸರಿಯಲ್ಲಿ ಶ್ರೀಮಂತ ಭೂಮಾಲೀಕರು ಹಾಗೂ ಸಣ್ಣ ಭೂ ಹಿಡುವಳಿದಾರರು, ಇಬ್ಬರೂ ಸೇರಿದ್ದಾರೆ. ರಾಷ್ಟ್ರೀಯ ಸರಾಸರಿಗಿಂತ ಎರಡು ಪಟ್ಟು ಹೆಚ್ಚಿರುವ ಕೇರಳ ರಾಜ್ಯ ಕೂಡ ಈ ಪಟ್ಟಿಗೆ ಸೇರುತ್ತದೆ. ಪಟ್ಟಿಯಿಂದ ಕೇರಳ ಮತ್ತು ಪಂಜಾಬ್ ರಾಜ್ಯಗಳನ್ನು ತೆಗೆದರೆ, ಸರಾಸರಿ ಇನ್ನೂ ಕಡಿಮೆಯಾಗುತ್ತದೆ. ಹೌದು, ನಗರ ಪ್ರದೇಶಗಳಲ್ಲೂ ಅಸಮಾನತೆ ಗಂಭೀರವಾಗಿದೆ. ಮತ್ತು ಇನ್ನೂ ಹೆಚ್ಚುತ್ತಿದೆ. ಆದರೆ ಗ್ರಾಮೀಣ ಭಾರತದಲ್ಲಿ ಅಸಮಾನತೆಯ ಪ್ರಮಾಣ ಕಣ್ಣಿಗೆ ರಾಚುವಂತಿದೆ.

೫೦೩ ರೂಪಾಯಿಯಲ್ಲಿ ಶೇ. ೫೦ರಷ್ಟು ಆಹಾರಕ್ಕೆ ಮೀಸಲು. ಇನ್ನು ೧೮% ಬಟ್ಟೆಬರೆ, ಚಪ್ಪಲಿ, ಪೆಟ್ರೋಲ್-ಡೀಸಲ್‌ಗಳಿಗೆ ಖರ್ಚಾದರೆ, ಇನ್ನುಳಿದ ಅಲ್ಪಸ್ವಲ್ಪ ಹಣ, ಆರೋಗ್ಯ ಮತ್ತು ಶಿಕ್ಷಣಕ್ಕೆ ಖರ್ಚು ಮಾಡಲಾಗುತ್ತದೆ. ಆರೋಗ್ಯಕ್ಕೆ ೩೪ ರೂ. ಮತ್ತು ಶಿಕ್ಷಣಕ್ಕೆ ೧೭ ರೂ. ಹೀಗಾಗಿ, ಗ್ರಾಮೀಣ ಭಾರತೀಯರು ವಿಶಿಷ್ಟವಾದ ನಂಬರ್‌ಗಳಿರುವ ಸೆಲ್‌ಫೋನ್ ಖರೀದಿಸುವ ಹವ್ಯಾಸಕ್ಕಿಳಿಯುವುದು ದೂರದ ಮಾತು. ಭಾರತದಲ್ಲಿ ೫೦೩ ರೂಪಾಯಿಗಳಿಗಿಂತ ಕಡಿಮೆ ಅಂದರೆ ೨೨೫ ರೂಪಾಯಿ ಮಾಸಿಕ ವರಮಾನವಿರುವ ಸಾವಿರಾರು ಮನೆಗಳಿವೆ. ರಾಷ್ಟ್ರೀಯ ಸರಾಸರಿಗಿಂತ ತೀರ ಕಡಿಮೆ ಅಂದರೆ ಬಡತನ ರೇಖೆಗಿಂತ ಕಡಿಮೆ ಇರುವ ಬಹಳಷ್ಟು ರಾಜ್ಯಗಳಿವೆ. ಭೂಮಿಯ ಒಡೆತನವಿಲ್ಲದವರ ಬವಣೆಯಂತೂ ಹೇಳತೀರದು.

ಅಸಮಾನತೆ ನಮಗೇನೂ ಹೊಸದಲ್ಲ. ಆದರೆ ಕಳೆದ ೧೫ ವರ್ಷಗಳಿಂದಾಚೆಗೆ ಅಸಮಾನತೆಯನ್ನು ದಾಕ್ಷಿಣ್ಯವಿಲ್ಲದೆ ಹೆಚ್ಚಿಸುತ್ತಿರುವುದು ಮಾತ್ರ ನಮಗೆ ಹೊಸ ಅನುಭವ. ಅಸಮಾನತೆಗೆ ಕಾರಣವಾಗಿರುವ ಸಿನಿಕತನ, ಮತ್ತದರ ವ್ಯಾಪ್ತಿ ಭಯಂಕರ. ಇದು ಎಲ್ಲ ಹಂತಗಳಲ್ಲಿಯೂ ಇದೆ. ಉನ್ನತ ಮಟ್ಟದಲ್ಲೂ ಕೂಡ. ಅಭಿಜಿತ್ ಬ್ಯಾನರ್ಜಿ ಮತ್ತು ಥಾಮಸ್ ಪಿಕೆಟ್ಟಿ "೧೯೫೬-೨೦೦೦ದವರೆಗಿನ ಶ್ರೀಮಂತ ಭಾರತೀಯರ ವರಮಾನ" ಎಂಬ ತಮ್ಮ ಪ್ರಬಂಧದಲ್ಲಿ ಹೀಗೆ ಹೇಳುತ್ತಾರೆ. "ಶ್ರೀಮಂತರು (೧% ಮೇಲ್ಪದರದವರು) ತಮ್ಮ ಒಟ್ಟಾರೆ ಆದಾಯವನ್ನು ಸಾಕಷ್ಟು ಹೆಚ್ಚಿಸಿಕೊಂಡಿದ್ದಾರೆ. (ಸುಧಾರಣೆಯ ವರ್ಷಗಳಲ್ಲಿ). ೧೯೮೦ರ ದಶಕದಲ್ಲಿ ಲಾಭವನ್ನು ಮೇಲ್ಪದರದವರೆಲ್ಲರೂ ಹಂಚಿಕೊಂಡರು. ಆದರೆ ೧೯೯೦ರ ದಶಕದಲ್ಲಿ ೦.೧% ಮೇಲ್ಪದರದವರು ಮಾತ್ರ ಬೃಹತ್ "ಪ್ರಮಾಣದ ಲಾಭಗಳಿಸಿದರು".

"೧೯೫೦ರಲ್ಲಿ ಈ ೦.೧% ಮೇಲ್ವರ್ಗದವರ ಆದಾಯ, ಇಡೀ ದೇಶದ ಆದಾಯಕ್ಕಿಂತ ೧೫೦-೨೦೦ ಪಟ್ಟು ಹೆಚ್ಚಿತ್ತು. ಈ ಪ್ರಮಾಣ ೮೦ರ ದಶಕದಲ್ಲಿ ೫೦ ಪಟ್ಟಿಗಿಂತ ಕಡಿಮೆ ಮಟ್ಟಕ್ಕಿಳಿಯಿತು. ಆದರೆ ೧೯೯೦ರ ದಶಕದಲ್ಲಿ ಇದರ ಪ್ರಮಾಣ ಮತ್ತೆ ೧೫೦-೨೦೦ ಪಟ್ಟು ಹೆಚ್ಚಾಯಿತು" ಈ ಮೇಲಿನ ಅಂಕಿ-ಅಂಶಗಳು ಪರಿಸ್ಥಿತಿ ಬಿಗಡಾಯಿಸಿರುವುದನ್ನು ಸ್ಪಷ್ಟವಾಗಿ ಸೂಚಿಸುತ್ತದೆ.

ಪ್ರಧಾನಮಂತ್ರಿ ಮನಮೋಹನ್ ಸಿಂಗ್ ಸಿಇಓಗಳ ಸಂಬಳಗಳನ್ನು ಕುರಿತು ಇತ್ತೀಚೆಗೆ ಸಮಾರಂಭವೊಂದರಲ್ಲಿ ಮಾತನಾಡಿದಾಗ ಉದ್ಯಮಿಗಳಿಂದ ಬಂದ ಖಾರವಾದ ಪ್ರತಿಕ್ರಿಯೆ, ಸಿರಿವಂತಿಕೆಯ ಉದ್ಧಟತನವನ್ನು ನಮಗೆ ಮನವರಿಕೆ ಮಾಡಿಕೊಡುತ್ತದೆ. ಬಹುತೇಕ ಎಲ್ಲ ಪತ್ರಿಕೆಗಳು ತಮ್ಮ ಸಂಪಾದಕೀಯಗಳಲ್ಲಿ ಪ್ರಧಾನಿಯವರನ್ನು ತೀವ್ರ ತರಾಟೆಗೆ ತೆಗೆದುಕೊಂಡರು. ಆದರೂ, ಸಿರಿವಂತಿಕೆಯ ಕೇಂದ್ರೀಕರಣ ಕುರಿತು ಇತ್ತೀಚಿನ ದಿನಗಳಲ್ಲಿ ಪ್ರಕಟವಾದ ಪ್ರಮುಖ ಬರಹವೊಂದನ್ನು, ಮೋರ್ಗನ್ ಸ್ಟಾನ್ಲಿಯ ನಿರ್ದೇಶಕರು ಬರೆದಿದ್ದಾರೆ ಎಂಬ ಅಂಶವನ್ನು ಇಲ್ಲಿ ನಾವು ಸ್ಮರಿಸಲೇಬೇಕಿದೆ ('ದಿ ಎಕನಾಮಿಕ್ ಟೈಮ್ಸ್', ಜುಲೈ ೯, ೨೦೦೭). ಅಂಕಣದಲ್ಲಿ, ಚೇನ್ ಆಹ್ಯಾ ಈ ರೀತಿ ಬರೆಯುತ್ತಾರೆ: "ಜಾಗತೀಕರಣದ ಒತ್ತಡ ಹಾಗೂ ಬಂಡವಾಳಶಾಹಿ ವ್ಯವಸ್ಥೆಯ ಪ್ರಭಾವದಿಂದಾಗಿ ಸಮಾಜದಲ್ಲಿ ಅಸಮಾನತೆ ದಿನೇ ದಿನೇ ಹೆಚ್ಚುತಿದೆ. ಅಸಮಾನತೆ ಹೆಚ್ಚುತ್ತಿರುವುದರಿಂದ ಉದ್ಭವಿಸುತ್ತಿರುವ ಸಾಮಾಜಿಕ ಸವಾಲುಗಳು ಆತಂಕಕಾರಿ ಬೆಳವಣಿಗೆ" "ಸಿರಿತನದ ನಡುವೆ ಅಸಮಾನತೆ ಇನ್ನೂ ತೀವ್ರವಾಗಿದೆ... ಕಳೆದ ನಾಲ್ಕು ವರ್ಷಗಳಿಂದ ಚೀಗೆ ೧ ಟ್ರಿಲಿಯನ್ ಡಾಲರ್‌ಗಳಿ

ಫ್ಯಾನ್ಸಿ ಸೆಲ್‌ಫೋನ್ ನಂಬರ್ ಹಾಗೂ ಗ್ರಾಮೀಣ ಭಾರತ

ಗಿಂತ ಅಧಿಕ ವರಮಾನದ ಪ್ರಮಾಣ ಹೆಚ್ಚಾಗಿದೆ. ಆದರೆ ಬಹುತೇಕ ಈ ಹಣ ಒಂದು ಸಣ್ಣ ಜನಸಮೂಹದ ಬಳಿಯೇ ಕೇಂದ್ರೀಕೃತ ವಾಗಿದೆ" ಎನ್ನುತ್ತಾರೆ. "ನಾವು ಅನುಸರಿಸುತ್ತಿರುವ ಕೆಲವು ಧೋರಣೆಗಳು ಹಾಗೂ ನೀತಿಗಳ ಪರಿಣಾಮವಾಗಿ, ಸಾಮಾಜಿಕ ಮತ್ತು ರಾಜಕೀಯ ಸ್ಥಿತ್ಯಂತರ ಉದ್ಭವಿಸಿದೆ" ಎಂಬುದು ಆಹ್ಯಾ ಅವರ ನಿಲುವು. ರೈತರು ಮತ್ತು ಎಸ್‌ಇಝಡ್‌ಗಳ ವಿಷಯದಲ್ಲಾಗುತ್ತಿರುವುದು ಇದೇ.

ರಾಚನಿಕ ಅಸಮಾನತೆಗಳು

ಗ್ರಾಮೀಣ ಭಾರತದಲ್ಲಿ ಆಳವಾಗಿ ಬೇರೂರಿರುವ ರಾಚನಿಕ ಅಸಮಾನತೆಗಳ ಜತೆಗೆ ಈ ಹೊಸ ಸಮಸ್ಯೆಗಳೂ ಸೇರಿಕೊಳ್ಳುತ್ತಿವೆ. ಕಳೆದ ಅರವತ್ತು ವರ್ಷಗಳಲ್ಲಿ ನಾವು ಭೂ ಒಡೆತನದ ಸಮಸ್ಯೆಯನ್ನು ಬಗೆಹರಿಸಿಕೊಂಡಿಲ್ಲ. ಅರಣ್ಯ ಮತ್ತು ನೀರಿನ ಹಕ್ಕುಗಳನ್ನು ಗುರುತಿಸಿಕೊಳ್ಳಲಾಗಿಲ್ಲ. ತೀವ್ರವಾದ ಜಾತಿ ಹಾಗೂ ಲಿಂಗ ತಾರತಮ್ಯವನ್ನು ಬಗೆಹರಿಸಿಕೊಳ್ಳಲಾಗಿಲ್ಲ. ನಮ್ಮ ರಾಚನಿಕ ಹಾಗೂ ಇತರ ಅಸಮಾನತೆಗಳನ್ನು ನಾವು ಸರಿಪಡಿಸುವ ಗೋಜಿಗೇ ಹೋಗಿಲ್ಲ. ಆದರೆ ಈಗೇನು ಮಾಡುತ್ತಿದ್ದೇವೆ? ಅಸಮಾನತೆಗಳನ್ನು ಇನ್ನೂ ಉಲ್ಬಣಗೊಳಿಸುತ್ತಿದ್ದೇವೆ.

ಸುಧಾರಣೆಯ ಆರಂಭದ ದಿನಗಳಲ್ಲಿಯೂ, ಒಟ್ಟಾರೆ ಭೂಮಿಯ ಪ್ರಮಾಣದಲ್ಲಿ, ಕೇವಲ ೩.೫% ಭೂಮಿಯ ಒಡೆತನ ಗ್ರಾಮೀಣ ಜನತೆಯ ಬಳಿ ಇತ್ತು. ಇವರಲ್ಲಿ ಶೇ ೧೦ರ ಮೇಲ್ವರ್ಗದವರು ೫೦% ಭೂಮಿಯ ಒಡೆತನ ಸಾಧಿಸಿದ್ದರೂ, ಇದು ಎಲ್ಲ ರೀತಿಯ ಭೂಮಿಯನ್ನು ಕೂಡ ಒಳಗೊಂಡಿದೆ. ನಾವು ಕೇವಲ ನೀರಾವರಿ ಭೂಮಿಯನ್ನು ಮಾತ್ರ ಗಣನೆಗೆ ತೆಗೆದುಕೊಂಡರೆ, ಅಸಮಾನತೆಯ ಪ್ರಮಾಣ ಆತಂಕಕಾರಿಯಾಗಿದೆ. ಇದರ ಜತೆಗೆ, ಇತರ ಆಸ್ತಿಗಳನ್ನು ಸೇರಿಸಿದರೆ ಪರಿಸ್ಥಿತಿ ಇನ್ನೂ ವಿಪರೀತಕ್ಕೆ ಹೋಗುತ್ತದೆ. ಒಂದು ಅಂದಾಜಿನ ಪ್ರಕಾರ ೮೫%ರಷ್ಟು ಗ್ರಾಮೀಣ ಜನ, ಭೂಮಿಯಿಲ್ಲದವರು, ಕೂಲಿ-ಕಾರ್ಮಿಕರು, ಸಣ್ಣ ಪ್ರಮಾಣದ ರೈತರಾಗಿದ್ದಾರೆ. ಈ ರೈತರ ಸ್ಥಿತಿ ಸುಧಾರಿಸುವಂತಹ ಯಾವುದೇ ಬದಲಾವಣೆಗಳು ಕಳೆದ ೧೫ ವರ್ಷಗಳಲ್ಲಿ ನಡೆದಿಲ್ಲ. ಆದರೆ ಪರಿಸ್ಥಿತಿ ಬಿಗಡಾಯಿಸುವಂತಹ ಬಹಳಷ್ಟು ಬದಲಾವಣೆಗಳಂತೂ ಖಚಿತವಾಗಿ ಆಗಿದೆ.

ಗ್ರಾಮೀಣ ಭಾರತಕ್ಕೆ ಸಂಬಂಧಿಸಿದ ಸರ್ಕಾರದ ಯೋಜನೆ, ಧೋರಣೆ ತೀರ ಸರಳವಾದುದು. ಕೃಷಿ ಚಟುವಟಿಕೆಗಳನ್ನು ರೈತರ ಕೈಗಳಿಂದ ಕಸಿದುಕೊಂಡು ದೊಡ್ಡ ಕಾರ್ಪೋರೇಟ್ ಸಂಸ್ಥೆಗಳ ಜೋಳಿಗೆಗೆ ಹಾಕುವುದು ಸರ್ಕಾರದ ಸರಳ ಕ್ರಿಯಾ ಯೋಜನೆ! ಸರ್ಕಾರದ ಪ್ರತಿ ಹೆಜ್ಜೆ, ಪ್ರತಿ ಯೋಜನೆ ಇದೇ ವಿಚಾರಕ್ಕೆ ಇಂಬು ಕೊಡುತ್ತಿವೆ. ಇತಿಹಾಸದಲ್ಲಿ ಹಿಂದೆಂದೂ ಕಾಣದಷ್ಟು ಹೆಚ್ಚಿನ ಪ್ರಮಾಣದಲ್ಲಿ ಜನಸಮೂಹ ನಿರಾಶ್ರಿತರಾಗುತ್ತಿದ್ದಾರೆ. ಇದಕ್ಕೆ ಕಾರಣ, ಯಾವುದೇ ಅಣೆಕಟ್ಟು ಅಥವಾ ಗಣಿ ಯೋಜನೆಯಲ್ಲ, ಬದಲಿಗೆ ಕೃಷಿ ವಲಯದಲ್ಲಿ. ನಾವು ರೈತರ ಭೂಮಿಯನ್ನು ಹಂಚುವುದರಲ್ಲಿ ಎಷ್ಟು ತಲ್ಲೀನರಾಗಿದ್ದೇವೆ ಎಂದರೆ, ಭೂಮಿಯನ್ನು ಕಳೆದುಕೊಂಡ ರೈತರ ಬಗ್ಗೆ ಕಿಂಚಿತ್ತು ಕಾಳಜಿಯನ್ನೂ ಪ್ರದರ್ಶಿಸುತ್ತಿಲ್ಲ. ರೈತರನ್ನು ಗುಳೇ ಎಬ್ಬಿಸುವುದಕ್ಕೆ ನಾವು ಬಳಸುತ್ತಿರುವುದು ಯಾವುದೇ ಟ್ಯಾಂಕರ್‌ಗಳನ್ನು ಅಥವಾ ಜೆಸಿಬಿಗಳನ್ನಲ್ಲ. ನಾವು ಮಾಡುತ್ತಿರುವುದು ಇಷ್ಟೇ. ಸಣ್ಣ ರೈತರಿಗೆ ಕೃಷಿ ಚಟುವಟಿಕೆಗಳು ಕೈಗೆಟುಕದಂತೆ ಮಾಡುವುದು. ಬಹಳ ಸಂತಸದಿಂದ ಸರ್ವನಾಶಗೊಳಿಸುತ್ತಿರುವ ರೈತರ ಜೀವನಕ್ಕಿರಬಹುದಾದ ಪರ್ಯಾಯ ಮಾರ್ಗಗಳನ್ನು ಅಳಿಸಿ ಹಾಕುವುದು.

ಗ್ರಾಮೀಣ ಭಾರತಕ್ಕೆ ಸಂಬಂಧಿಸಿದ ಸರ್ಕಾರದ ಯೋಜನೆ, ಧೋರಣೆ ತೀರ ಸರಳವಾದುದು. ಕೃಷಿ ಚಟುವಟಿಕೆಗಳನ್ನು ರೈತರ ಕೈಗಳಿಂದ ಕಸಿದುಕೊಂಡು ದೊಡ್ಡ ಕಾರ್ಪೋರೇಟ್ ಸಂಸ್ಥೆಗಳ ಜೋಳಿಗೆಗೆ ಹಾಕುವುದು ಸರ್ಕಾರದ ಸರಳ ಕ್ರಿಯಾ ಯೋಜನೆ! ಸರ್ಕಾರದ ಪ್ರತಿ ಹೆಜ್ಜೆ, ಪ್ರತಿ ಯೋಜನೆ ಇದೇ ವಿಚಾರಕ್ಕೆ ಇಂಬು ಕೊಡುತ್ತಿವೆ. ಇತಿಹಾಸದಲ್ಲಿ ಹಿಂದೆಂದೂ ಕಾಣದಷ್ಟು ಹೆಚ್ಚಿನ ಪ್ರಮಾಣದಲ್ಲಿ ಜನಸಮೂಹ ನಿರಾಶ್ರಿತರಾಗುತ್ತಿದ್ದಾರೆ. ಇದಕ್ಕೆ ಕಾರಣ, ಯಾವುದೇ ಅಣೆಕಟ್ಟು ಅಥವಾ ಗಣಿ ಯೋಜನೆಯಲ್ಲ, ಬದಲಿಗೆ ಕೃಷಿವಲಯದಲ್ಲಿ. ನಾವು ರೈತರ ಭೂಮಿಯನ್ನು ಹಂಚುವುದರಲ್ಲಿ ಎಷ್ಟು ತಲ್ಲೀನರಾಗಿದ್ದೇವೆ ಎಂದರೆ, ಭೂಮಿಯನ್ನು ಕಳೆದುಕೊಂಡ ರೈತರ ಬಗ್ಗೆ ಕಿಂಚಿತ್ತು ಕಾಳಜಿಯನ್ನೂ ಪ್ರದರ್ಶಿಸುತ್ತಿಲ್ಲ.

ಆರಂಭಿಕ ದಶಕಗಳು ಕನಿಷ್ಟಪಕ್ಷ ಆಶಾವಾದದ ದಶಕಗಳಾಗಿದ್ದವು. ಉತ್ತಮವಾದ ಕೆಲಸಗಳು ನಡೆಯದಿದ್ದರೂ, ಅಭಿವೃದ್ಧಿ ಕಾರ್ಯಗಳು ಸ್ವಲ್ಪಮಟ್ಟಿಗೆ ನಡೆಯುತ್ತಿದ್ದವು. ಸಾಕ್ಷರತೆ, ಮತ್ತಿತರ ಅಭಿವೃದ್ಧಿ ಸೂಚಕಗಳು ಮೇಲ್ಮುಖ ಕಾಣಲಾರಂಭಿಸಿದ್ದವು. ಆಗ "ನಿಜವಾದ ಭಾರತ ಹಳ್ಳಿಗಳಲ್ಲಿದೆ" ಎಂಬ ಭಾವನೆ ಮೂಡಿತ್ತು. ಯುದ್ಧಕಾಲದಲ್ಲಿಯೂ "ಜೈ ಜವಾನ್, ಜೈ ಕಿಸಾನ್" ಘೋಷಣೆ ಎಲ್ಲರ ಗಮನ ಸೆಳೆದಿತ್ತು. ಭಾರತದ ಭವಿಷ್ಯದ ನೊಗ ರೈತನ ಹೆಗಲ ಮೇಲಿತ್ತು. (ಅದೂ ಕೂಡ ಪುರುಷ ರೈತನ ಮೇಲೆ. ಮಹಿಳೆಯರಿಗೆ ಈಗಲೂ ಆಸ್ತಿ ಹಕ್ಕು ಇಲ್ಲ. ಮಹಿಳೆಯರನ್ನು "ರೈತ"ರು ಎಂದು ಇನ್ನೂ ಪರಿಗಣಿಸಿಲ್ಲ.) ಆಗಿನ ಭಾರತದ ಚಿತ್ರಣ ಈ ರೀತಿ ಇತ್ತು.

ಅರವತ್ತು ವರ್ಷಗಳ ಬಳಿಕ ಗ್ರಾಮೀಣ ಭಾರತ ಈಗಲೂ ಒತ್ತಡದಲ್ಲಿದೆ. ಹಸಿರು ಕ್ರಾಂತಿಯ ನಂತರ ಬಹುದೊಡ್ಡ ಕೃಷಿ ಬಿಕ್ಕಟ್ಟು ಈಗ ನಮ್ಮ ಮುಂದೆ ಉದ್ಭವಿಸಿದೆ. ಆದರೆ ಎಲೀಟ್ ಮಾಧ್ಯಮದ ಕಣ್ಣು ಮಾತ್ರ ಬೇರೆಲ್ಲೋ ಇದೆ. ಕೃಷಿ ಆದಾಯ ಕುಸಿಯುತ್ತಲೇ ಇದೆ. ಹಸಿವು ಹೆಚ್ಚಾಗುತ್ತಲೇ ಇದೆ. ಕೃಷಿ ವಲಯದಲ್ಲಿ ಸರ್ಕಾರ ಸಾರ್ವಜನಿಕ ಬಂಡವಾಳ ಹೂಡಿ ವರ್ಷಗಳೇ ಕಳೆದಿವೆ. ಕೃಷಿ ಸಂಬಂಧಿತ ಉದ್ಯೋಗ ನಿಂತ ನೀರಾಗಿದೆ. ಲಕ್ಷಾಂತರ ಜನ ಹಳ್ಳಿಗಳಿಂದ ನಗರಗಳಿಗೆ ಗುಳೇ ಬರುತ್ತಿದ್ದಾರೆ. ನಗರಗಳಲ್ಲಿಯೂ ಉದ್ಯೋಗಾವಕಾಶಗಳು ದಿನೇ ದಿನೇ ಕಡಿಮೆಯಾಗುತ್ತಿವೆ. ಹೀಗಾಗಿ ಅತ್ತ ರೈತರೂ ಅಲ್ಲದೆ, ಇತ್ತ ಕಾರ್ಮಿಕರೂ ಅಲ್ಲದ ತ್ರಿಶಂಕು ಪರಿಸ್ಥಿತಿಗೆ ನಮ್ಮ ರೈತರು ಸಾಕ್ಷಿಯಾಗಿ ನಿಂತಿದ್ದಾರೆ. ಪರಿಣಾಮವಾಗಿ ಲಕ್ಷಾಂತರ ಜನ ಕೂಲಿ ಕಾರ್ಮಿಕರು ಹಾಗೂ ಮನೆಗೆಲಸದವರು ಹುಟ್ಟಿಕೊಳ್ಳುತ್ತಿದ್ದಾರೆ. (ಒಂದು ಅಂದಾಜಿನ ಪ್ರಕಾರ, ದೆಹಲಿ ನಗರವೊಂದರಲ್ಲಿಯೇ ಇಂತಹ ಎರಡು ಲಕ್ಷ ಮಂದಿ ಕೂಲಿ ಕಾರ್ಮಿಕರು ಇದ್ದಾರೆ.)

ಸಾಲದ ಹೊರೆ ರೈತರನ್ನು ದಿವಾಳಿಯೆಬ್ಬಿಸುತ್ತಿದೆ. ಸಾಕಷ್ಟು ಒತ್ತಡಗಳ ಮಧ್ಯೆ ರೈತರು ವಾಣಿಜ್ಯ ಬೆಳೆಗಳಿಗೆ ತಮ್ಮನ್ನು ತಾವು ತೊಡಗಿಸಿಕೊಂಡ ನಂತರ ಇಂತಹ ಪರಿಸ್ಥಿತಿ ಉದ್ಭವಿಸುತ್ತಿದೆ. ಕೇರಳ ರಾಜ್ಯದಲ್ಲಿ ೨೦೦೩-೦೪ ರಲ್ಲಿ ಒಂದು ಎಕರೆ ವೆನಿಲಾ ಬೆಳೆಯಲು, ಒಂದು ಎಕರೆ ಭತ್ತ ಬೆಳೆಯಲು ತಗುಲುವ ವೆಚ್ಚಕ್ಕಿಂತ ಹದಿನೈದರಿಂದ ಇಪ್ಪತ್ತು ಪಟ್ಟು ಹೆಚ್ಚು ಖರ್ಚು ತಗುಲುತ್ತಿತ್ತು. ಆದರೂ ರೈತರು ವೆನಿಲಾ ಬೆಳೆಗೆ ಜೋತು ಬೀಳಬೇಕಾಯಿತು. ಫಸಲು ಬಂದ ನಂತರ ವೆನಿಲಾ ಬೆಲೆ ಕುಸಿದು ರೈತರು ಸಂಕಷ್ಟಕ್ಕೆ ಸಿಲುಕುವಂತಾಯಿತು. ಈ ಸಂದರ್ಭದಲ್ಲಿ ಬಹಳಷ್ಟು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದನ್ನು ಇಲ್ಲಿ ಸ್ಮರಿಸಬಹುದು.

ವಿಶ್ವ ವಾಣಿಜ್ಯ ಸಂಸ್ಥೆಯಂತಹ ಪಕ್ಷಪಾತೀ ಸಂಸ್ಥೆ ಸೂಚಿಸಿರುವ ಕೆಲವು ನೀತಿಗಳನ್ನು ಅನುಷ್ಠಾನಗೊಳಿಸಲು ಕೂಡ ನಮಗೆ ಸಾಧ್ಯವಾಗಿಲ್ಲ; ಇದರರ್ಥ ಇಷ್ಟೇ, ನಮ್ಮ ರೈತರು ಬೆಳೆಯುವ ಋತುಮಾನ ಕೇಂದ್ರಿತ ಹತ್ತಿಯಂತಹ ಬೆಳೆಗಳ ಬೆಲೆ ಕೂಡ ತೀವ್ರವಾಗಿ ಕುಸಿಯತೊಡಗುತ್ತದೆ. ಅಮೆರಿಕೆಯಿಂದ ಭಾರತಕ್ಕೆ ಬಂದು ಬೀಳುತ್ತಿರುವ ಕಡಿಮೆ ಬೆಲೆಯ ಹತ್ತಿಯನ್ನು ಆಮದು ಮಾಡಿಕೊಳ್ಳದಿರಲೂ ನಮಗೆ ಸಾಧ್ಯವಾಗಿಲ್ಲ. ಕೇವಲ ೩೦,೦೦೦ ಅಮೆರಿಕೆಯ ವೀಸಾಗಳಿಗಾಗಿ ನಮ್ಮ ರೈತರ ಹಿತವನ್ನು ಬಲಿಕೊಡಲು ನಾವು ತುದಿಗಾಲಲ್ಲಿ ನಿಂತಿದ್ದೇವೆ!

೧೯೯೩ರಿಂದೀಚೆಗೆ ೧೧೨,೦೦೦ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಸರ್ಕಾರದ ಅಂಕಿ ಅಂಶಗಳೇ ಹೇಳುತ್ತವೆ. ಈ ಸರ್ಕಾರಿ ಅಂಕಿ-ಅಂಶಗಳೇ ಬೆಚ್ಚಿ ಬೀಳಿಸುವಂತಿವೆ. ಈ ಎಲ್ಲ ಆತ್ಮಹತ್ಯೆಗಳೂ ಸಾಲದ ಹೊರೆ ತಡೆದುಕೊಳ್ಳಲಾಗದೆ ನಡೆದಂತಹವು. ರಾಷ್ಟ್ರೀಯ ಸಮೀಕ್ಷೆಯೊಂದರ ಪ್ರಕಾರ ರೈತರ ಸಾಲದ ಪ್ರಮಾಣ ಕಳೆದ ದಶಕದಲ್ಲಿ ದ್ವಿಗುಣವಾಗಿದೆ.

ಈ ಎಲ್ಲ ಸಮಸ್ಯೆಗಳಿಗೆ ಪ್ರತಿರೋಧವೇ ವ್ಯಕ್ತವಾಗುತ್ತಿಲ್ಲವೆಂದಲ್ಲ. ಪ್ರತಿ ಚುನಾವಣೆಯ ನಂತರ ಜನರು ಸರ್ಕಾರಕ್ಕೆ ತಮ್ಮ ಅಭಿಪ್ರಾಯಗಳನ್ನು ಮುಟ್ಟಿಸಿದ್ದಾರೆ, ತಮ್ಮ ಸಮಸ್ಯೆಗಳ ಬಗ್ಗೆ ಕೂಗಿ ಹೇಳಿದ್ದಾರೆ. ಬಹುತೇಕ ಎಲ್ಲ ಹೋರಾಟಗಳು ಪ್ರತಿರೋಧ ವ್ಯಕ್ತಪಡಿಸಿವೆ. ಸಂಕಷ್ಟದ ನಡುವೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗಳಂತಹ ಕೆಲವು ಉತ್ತಮ ಕೆಲಸಗಳೂ ನಡೆದಿವೆ. ಆದರೆ ಕೃಷಿಯ ಬಿಕ್ಕಟ್ಟು ಮಾತ್ರ ದಿನೇ ದಿನೇ ಉಲ್ಬಣವಾಗುತ್ತಲೇ ಇದೆ. ಈಗಾಗಲೇ ದುರಂತ ಸಂಭವಿಸಿದ್ದು ಸರ್ವನಾಶದೆಡೆಗೆ ಸಾಗುತ್ತಿದ್ದೇವೆ. ರೂ.೧೫ ಲಕ್ಷ ವೆಚ್ಚದ ಸೆಲ್ ಫೋನ್ ನಂಬರ್‌ನ ಬಗ್ಗೆ ಮಾತ್ರ ನಾವು ಹೆಚ್ಚು ತಲೆ ಕೆಡಿಸಿಕೊಳ್ಳುತ್ತೇವೆ. ಆದರೆ 'ಫ್ಯಾನ್ಸಿ' ನಂಬರ್ ಪಡೆದದ್ದು ಕೂಡ ಸಾಲದ ಹಣದಲ್ಲಿಯೇ ಎಂಬ ಅಂಶ ನಮಗೆ ಗೊತ್ತಾಗುವುದೇ ಇಲ್ಲ!

(ಸೌಜನ್ಯ: 'ದಿ ಹಿಂದೂ')

ಗ್ರಾಮೀಣ ಜನರ ಮನೆಗಳಲ್ಲಿ ವಾಸಿಸುತ್ತ ಅವರ ಸ್ಥಿತಿಗತಿಯನ್ನು ಅಧ್ಯಯನ ಮಾಡಿ ಶೋಷಿತರ, ಅಸಹಾಯ ಕರ ನೋವುಗಳನ್ನು ಬರಹದ ಮೂಲಕ ಸುಧಾರಿಸುತ್ತಿರುವ ಸಾಯಿ ನಾಥ್ ಭಾರತೀಯ ಪತ್ರಿಕೋದ್ಯಮ ಕಂಡ ವಿಶಿಷ್ಟ ಪತ್ರಕರ್ತರಲ್ಲೊಬ್ಬರು. ಅವರ ಸಾಮಾಜಿಕ ಬದ್ಧತೆಗೆ ಈ ಬಾರಿಯ ಮ್ಯಾಗ್ಸೆಸೆ ಪ್ರಶಸ್ತಿ ಇನ್ನಷ್ಟು ಗೌರವ ತಂದು ಕೊಟ್ಟಿದೆ. ಕಳೆದ ೧೪ ವರ್ಷಗಳಿಂದ ದಲಿತರಿಗೆ ಬಹಿಷ್ಕಾರ ಅನಕ್ಷರತೆ, ಬಡತನ, ನಿರುದ್ಯೋಗ, ಹಸಿವು, ಆತ್ಮಹತ್ಯೆ ಮಾಡಿಕೊಳ್ಳು ತ್ತಿರುವ ರೈತರು.. ಹೀಗೆ ದೇಶದ ಉದ್ದಗಲದ ಅಸಹಾಯ ಕರ ವಿವಿಧ ನೋವು ಗಳಿಗೆ ತಮ್ಮ ವರದಿಗಳ ಮೂಲಕ ಸ್ಪಂದಿಸುತ್ತಿರುವ ಸಾಯಿ ನಾಥ್ ಭಾರತದ ಗ್ರಾಮೀಣ ಜನರ ಕಣ್ಮಣಿ. ಪತ್ರಿಕೋದ್ಯಮ, ವರದಿ ಗಾರಿಕೆಯೆಂದರೆ ಗ್ಲಾಮ ರಸ್ ಆಗಿರುವ ಇಂದಿನ ದಿನಗಳಲ್ಲಿ ಸಾಯಿನಾಥ್ ಅವರು ವಿಶಿಷ್ಟ ಪತ್ರಕರ್ತ ರಾಗಿ ನಮ್ಮೆದುರು ನಿಲ್ಲುತ್ತಾರೆ.

ಅನುಷಾ ಹೊನ್ನೇಕೂಲು

ಭಾರತೀಯ ಪತ್ರಿಕೋದ್ಯಮ ಕಂಡ ವಿಶಿಷ್ಟ ಪತ್ರಕರ್ತ ಪಿ. ಸಾಯಿನಾಥ್

ಗ್ರಾಮೀಣ ಭಾರತದ ಜೀವಸೆಲೆಗೆ ಆಗಿರುವ ಅನ್ಯಾಯವನ್ನು ವಿವಿಧ ಕಾಲಘಟ್ಟಗಳಲ್ಲಿ ಶೋಧಿಸಿ ವ್ಯಾಖ್ಯಾನಿಸುತ್ತಾ ಬಂದಿರುವ ಹಿರಿಯ ಪತ್ರಕರ್ತ ಪಲಗುಮ್ಮಿ ಸಾಯಿನಾಥ್.

'ದಿ ಹಿಂದೂ' ಪತ್ರಿಕೆಯ ಗ್ರಾಮಾಂತರ ವಿಷಯಗಳ ಸಂಪಾದ ಕರಾಗಿರುವ ಪಿ. ಸಾಯಿನಾಥ್ ದಲಿತರು ಸೇರಿದಂತೆ ದುರ್ಬಲರ ಅಸಹಾಯಕತೆಯನ್ನು ಕರಾರುವಾಕ್ಕಾದ ಅಂಕಿಅಂಶಗಳು ಮತ್ತು ಸೂಕ್ತವಾದ ಉದಾಹರಣೆಗಳ ಸಹಿತ ಮಂಡಿಸುವಲ್ಲಿ ಯಶಸ್ವಿ ಯಾಗಿದ್ದಾರೆ. ಅವರ ಈ ಸಾಧನೆಗೆ ಈ ಸಾಲಿನ ರೇಮನ್ ಮ್ಯಾಗ್ಸೆಸ್ಸೆ ಪ್ರಶಸ್ತಿ ಇತ್ತೀಚೆಗೆ ದೊರಕಿದೆ.

ಜಾತ್ಯತೀತ ಭಾರತದ ಬಹುಮುಖೀ ಸಮಾಜದಲ್ಲಿ ಅಸಮಾ ನತೆಯ ವಿವಿಧ ಮಗ್ಗುಲುಗಳನ್ನು ಸಂಶೋಧನಾತ್ಮಕವಾಗಿ ಚಿತ್ರಿಸಿದ ಪತ್ರರ್ಕರಲ್ಲಿ ಸಾಯಿನಾಥ್ ಅಗ್ರಗಣ್ಯ.

ಗ್ರಾಮೀಣ ಜನರ ಮನೆಗಳಲ್ಲಿ ವಾಸಿಸುತ್ತ ಅವರ ಸ್ಥಿತಿಗತಿ ಯನ್ನು ಅಧ್ಯಯನ ಮಾಡಿ ಶೋಷಿತರ, ಅಸಹಾಯಕರ ನೋವು ಗಳನ್ನು ಬರಹದ ಮೂಲಕ ಸುಧಾರಿಸುತ್ತಿರುವ ಸಾಯಿನಾಥ್ ಭಾರ ತೀಯ ಪತ್ರಿಕೋದ್ಯಮ ಕಂಡ ವಿಶಿಷ್ಟ ಪತ್ರಕರ್ತರಲ್ಲೊಬ್ಬರು. ಅವರ ಸಾಮಾಜಿಕ ಬದ್ಧತೆಗೆ ಈ ಪ್ರಶಸ್ತಿ ಇನ್ನಷ್ಟು ಗೌರವ ತಂದು ಕೊಟ್ಟಿದೆ.

ಕಳೆದ ೧೪ ವರ್ಷಗಳಿಂದ ದಲಿತರಿಗೆ ಬಹಿಷ್ಕಾರ ಅನಕ್ಷರತೆ, ಬಡತನ, ನಿರುದ್ಯೋಗ, ಹಸಿವು, ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ರೈತರು.. ಹೀಗೆ ದೇಶದ ಉದ್ದಗಲದ ಅಸಹಾಯಕರ ವಿವಿಧ ನೋವುಗಳಿಗೆ ತಮ್ಮ ವರದಿಗಳ ಮೂಲಕ ಸ್ಪಂದಿಸುತ್ತಿರುವ ಸಾಯಿ ನಾಥ್ ಭಾರತದ ಗ್ರಾಮೀಣ ಜನರ ಕಣ್ಮಣಿ.

ಸಾಯಿನಾಥ್‌ಗೆ ಈ ಪ್ರಶಸ್ತಿ ದೊರಕಿರುವುದರಿಂದ ದೇಶದ ಮೂಲೆಮೂಲೆಯ ಗ್ರಾಮೀಣ ಜನರಿಗೆ ಸಂತೋಷ ಆಗಿದೆ. ಹೌದು. ಪತ್ರಿಕೋದ್ಯಮ, ವರದಿಗಾರಿಕೆಯೆಂದರೆ ಗ್ಲಾಮರಸ್ ಆಗಿರುವ ಇಂದಿನ ದಿನಗಳಲ್ಲಿ ಸಾಯಿನಾಥ್ ಅವರು ವಿಶಿಷ್ಟ ಪತ್ರಕರ್ತರಾಗಿ ನಮ್ಮೆದುರು ನಿಲ್ಲುತ್ತಾರೆ. ಐಟಿ,ಬಿಟಿ, ಫ್ಯಾಷನ್, ಷೇರು ಮಾರುಕಟ್ಟೆ ಗಳಿಗೆ ತಮ್ಮ ಪತ್ರಿಕೆಯಲ್ಲಿ ಒತ್ತು ನೀಡುವಂಥವರೇ ಹೆಚ್ಚಿರುವಾಗ ಸಾಯಿನಾಥ್ ಅವರು ಗ್ರಾಮೀಣ ಭಾರತ ದಲ್ಲಿ ನೊಂದ ಜನರ ಸಮ ಸ್ಯೆಗಳಿಗೆ ಪತ್ರಿಕೆಗಳಲ್ಲಿ ಆದ್ಯತೆ ನೀಡಿದ್ದಲ್ಲದೆ ಸರ್ಕಾರಗಳು ಗ್ರಾಮೀಣ ಅಭಿವೃದ್ಧಿಗೆ ಒತ್ತು ನೀಡುವಂತೆ ಮಾಡಿದ್ದು ಅವರ ಸಾಧನೆ.



ಮ್ಯಾಗ್ಸೆಸ್ಸೆ ಪ್ರಶಸ್ತಿ ವಿಜೇತ ಪತ್ರಕರ್ತ ಪಿ. ಸಾಯಿನಾಥ್

ಆಂಧ್ರ ಪ್ರದೇಶದ ಶ್ರೀಮಂತ ಕುಟುಂಬ ವೊಂದರಲ್ಲಿ ೧೯೫೭ರಲ್ಲಿ ಹುಟ್ಟಿದ ಸಾಯಿನಾಥ್ ಮಾಜಿ ರಾಷ್ಟ್ರಪತಿ ವಿ.ವಿ.ಗಿರಿ ಅವರ ಮಗಳ ಮಗ ಎಂಬುದು ಬಹುತೇಕರಿಗೆ ಗೊತ್ತಿರಲಿಕ್ಕಿಲ್ಲ. ಶ್ರೀಮಂತಿ ಕೆಯಲ್ಲೇ ಹುಟ್ಟಿ ದರೂ ವರ್ಷದ ೩೦೦ಕ್ಕಿಂತ ಹೆಚ್ಚು ದಿನ ಸಾಯಿ ನಾಥ್ ಬಡ ರೈತರ, ದೀನ-ದಲಿತರ ಮನೆಗಳಲ್ಲಿ ವಾಸಿಸುತ್ತಾರೆ. ನಿಜ ಅರ್ಥದಲ್ಲಿ ಸಾಯಿನಾಥ್ ಕೆಳವರ್ಗದ ಜನರ ಪ್ರತಿನಿಧಿಯೇ ಆಗಿದ್ದಾರೆ.

ಮದ್ರಾಸಿನ ಜೇಸುಯೇಟ್ಸ್ ಕಾಲೇಜಿನಲ್ಲಿ ಶಿಕ್ಷಣ ಮುಗಿಸಿದ ಅವರು ದೆಹಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದಲ್ಲಿ ಇತಿಹಾಸ ವಿಷಯದಲ್ಲಿ ಎಂ.ಎ. ಪದವಿ ಪಡೆದರು. ಪತ್ರಕರ್ತನಾಗ ಬೇಕೆಂಬ ಹಂಬಲದಿಂದಿದ್ದ ಸಾಯಿನಾಥ್ ೧೯೮೦ರಲ್ಲಿ ಯುಎನ್ಐ ಸುದ್ದಿಸಂಸ್ಥೆಯಲ್ಲಿ ವರದಿಗಾರನಾಗಿ ವೃತ್ತಿ ಜೀವನ ಆರಂಭಿಸಿದರು. ಅವರ ಬದ್ಧತೆಗೆ ಒಂದೇ ವರ್ಷದಲ್ಲಿ ಸಂಸ್ಥೆಯ ಅತ್ಯುತ್ತಮ ವರದಿ ಗಾರ ಪ್ರಶಸ್ತಿ ಪಡೆದದ್ದಲ್ಲದೆ ಸಂಸ್ಥೆಯಿಂದ ಅನೇಕ ವೈಯಕ್ತಿಕ ಪ್ರಶಸ್ತಿ ಗಳು ಅವರ ಮುಡಿಗೇರಿದವು.

ಮುಂದೆ ಮುಂಬೈನಿಂದ ಪ್ರಕಟವಾಗುತ್ತಿದ್ದ ೬ ಲಕ್ಷ ಪ್ರಸಾರ ವುಳ್ಳ "ಬ್ಲಿಟ್ಜ್" ಪತ್ರಿಕೆಯಲ್ಲಿ ವಿದೇಶಾಂಗ ವ್ಯವಹಾರಗಳ ಸಂಪಾದಕ ರಾಗಿ ಸೇರಿದ ಅವರು ನಂತರ ಉಪ ಸಂಪಾದಕರಾಗಿ ಹತ್ತು ವರ್ಷ ಗಳ ಕಾಲ ಸೇವೆ ಸಲ್ಲಿಸಿದರು.

ಈ ಅವಧಿಯಲ್ಲಿ ಒರಿಸ್ಸಾ, ಬಿಹಾರ, ಮಧ್ಯಪ್ರದೇಶ, ತಮಿಳು ನಾಡಿನ ಹಿಂದುಳಿದ ಜಿಲ್ಲೆಗಳಲ್ಲಿ ವಾಸ್ತವ ಹೂಡಿ ಅಲ್ಲಿನ ರೈತರು ಅನುಭವಿಸುತ್ತಿರುವ ಕಷ್ಟಗಳ ಸರಮಾಲೆಯನ್ನೇ ವರದಿ ಮಾಡಿದ್ದು ಅಭಿವೃದ್ಧಿ ಪತ್ರಿಕೋದ್ಯಮದತ್ತ ಅವರ ಒಲವು ಗಟ್ಟಿಗೊಳ್ಳಲು ಕಾರಣ ವಾಯಿತು.

ಬರಗಾಲದಿಂದ ತೀವ್ರ ಹದಗೆಟ್ಟ ಆಂಧ್ರಪ್ರದೇಶ, ರಾಜಸ್ತಾನ್, ಒರಿಸ್ಸಾಗಳಿಗೆ ಭೇಟಿ ನೀಡಿ ಅಲ್ಲಿನ ಸ್ಥಿತಿಯನ್ನು ಅಧ್ಯಯನ ಮಾಡಿ ದರು. ಆಂಧ್ರಪ್ರದೇಶದ ಒಂದು ಜಿಲ್ಲೆಯೊಂದರಲ್ಲೇ ೧೯೯೭ರಿಂದ ೨೦೦೦ದ ಅವಧಿಯಲ್ಲಿ ೧೮೦೦ಕ್ಕೂ ಹೆಚ್ಚು ಜನ ರೈತರು ಆತ್ಮ ಹತ್ಯೆಗೆ ಶರಣಾಗಿದ್ದರು. ಆದರೆ ಅಲ್ಲಿನ ವಿಧಾನ ಸಭೆ ಕೇವಲ ೫೪ ಮಂದಿ ಆತ್ಮಹತ್ಯೆ ಶರಣಾಗಿರುವುದಾಗಿ ಅಂಕಿಅಂಶ ನೀಡಿತ್ತು. ಈ ಸಂದರ್ಭದಲ್ಲಿ ಅವರು ಬರೆದ ಲೇಖನಗಳಲ್ಲಿ ನಿಜ ಸಂಗತಿಗಳನ್ನು ತಿಳಿಸಿದ್ದಲ್ಲದೆ ಜಾಹೀರಾತು ಮತ್ತು ಉದ್ಯಮ ಪ್ರಪಂಚ ಪತ್ರಿಕೆಗಳನ್ನು ಆಳುವ ಬಗ್ಗೆ ಪರಿಣಾಮಕಾರಿಯಾಗಿ ವಿಶ್ಲೇಷಿಸಿದ್ದರು.

ಕರ್ನಾಟಕ ಬೀದರ್ ಜಿಲ್ಲೆಯ ದನ್ನೂರಾ ಗ್ರಾಮ ದಲ್ಲಿ ಮೊಟ್ಟ ಮೊದಲ ಬಾರಿಗೆ (೧೯೯೧) ರೈತ ನೊಬ್ಬ ಆತ್ಮಹತ್ಯೆ ಮಾಡಿ ಕೊಂಡ ನಂತರ ರೈತರ ಸರಣಿ ಆತ್ಮಹತ್ಯೆಗಳು ನಡೆ ದವು: ಇದನ್ನು ಅಧ್ಯಯನ ನಡೆಸಲು ಸಾಯಿನಾಥ್ ಬೀದರ್ ಜಿಲ್ಲೆಗೆ ಬಂದಿದ್ದು ವಾಸ್ತವದ ವರದಿ ಮಾಡಿ

ದ್ದರು. ಪುನಃ ನಾಲ್ಕು ವರ್ಷಗಳ ನಂತರ ಅಲ್ಲಿಗೆ ಆಗಮಿಸಿ ಆ ನೊಂದ ಕುಟುಂಬಗಳ ಪರಿಸ್ಥಿತಿ ಹೇಗಿದೆ ಎಂಬ ಬಗ್ಗೆ ಚಿತ್ರಿಸಿದ್ದರು.

ಇದೇ ಅವಧಿಯಲ್ಲಿ (೧೯೯೧) ಭಾರತದ ಸಾಮಾಜಿಕ, ಆರ್ಥಿಕ ರಂಗದಲ್ಲಿ ಪರಿವರ್ತನೆ ಕಾಣುತ್ತಿದ್ದ ದಿನಗಳಲ್ಲಿ ಹಣಕಾಸು ಸಚಿವ ಡಾ. ಮನಮೋಹನ್ ಸಿಂಗ್ ಐಎಂಎಫ್ ಪ್ರಣೀತ ಆರ್ಥಿಕ ಸುಧಾರಣೆಗೆ ಚಿಂತನೆ ನಡೆಸಿದರು. ಇದರ ಪರಿಣಾಮ ಪತ್ರಿಕೆಗಳ ಮೇಲಾಯಿತು. ಸುದ್ದಿಯಿಂದ ಮನರಂಜನೆಯತ್ತ ಪತ್ರಿಕೆಗಳು ಹೊರಳತೊಡಗಿದವು. ಸಾಮಾಜಿಕ ಕಳಕಳಿಯ ವಿಷಯಗಳಿಗೆ ಪತ್ರಿಕೆಗಳಲ್ಲಿ ಸ್ಥಾನ ಸಿಗುವುದು ಅಪರೂಪವಾಯಿತು. "ಭಾರತೀಯ ಪತ್ರಿಕೆಗಳು ಸಮಾಜದ ಮೇಲ್ವರ್ಗದ ಜನರ ವಕ್ತಾರರಂತೆ ಕಾರ್ಯ ನಿರ್ವಹಿಸುತ್ತಿವೆ. ಅದಕ್ಕೇ ನಾನು ಕೆಳವರ್ಗದ ಜನರ ವಕ್ತಾರನಂತೆ ಕೆಲಸ ನಿರ್ವಹಿಸುತ್ತಿದ್ದೇನೆ" ಎನ್ನುತ್ತಾರೆ ಸಾಯಿನಾಥ್.

೧೯೯೩ರಲ್ಲಿ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯ ಫೆಲೋಷಿಪ್ ಪಡೆದ ಅವರು ಐದು ರಾಜ್ಯಗಳ ಹತ್ತು ಹಿಂದುಳಿದ ಜಿಲ್ಲೆಗಳಲ್ಲಿ ೧೮ ತಿಂಗಳುಗಳ ಕಾಲ ಪ್ರವಾಸ ಕೈಗೊಂಡರು. ಸುಮಾರು ಒಂದು ಲಕ್ಷ ಕಿ.ಮೀ. ಸಂಸಚರಿಸಿದ್ದು, ೫ ಸಾವಿರ ಕಿ.ಮೀಳಷ್ಟು ದೂರವನ್ನು ಅವರು ಕಾಲ್ನಡಿಗೆ ಮೂಲಕ ಕ್ರಮಿಸಿ ಪರಿಸ್ಥಿತಿ ಅಧ್ಯಯನ ನಡೆಸಿದರು. ಈ ಅವಧಿಯಲ್ಲಿ ೮೪ ಸರಣಿ ಲೇಖನಗಳನ್ನು ಪ್ರಕಟಿಸಿದರು. ಈ ಲೇಖನಗಳ ಸಂಗ್ರಹವೇ ೧೯೯೭ರಲ್ಲಿ ಪ್ರಕಟಗೊಂಡ "ಎವ್ರಿಬಡಿ ಲವ್ಸ್ ಎ ಗುಡ್ ಡ್ರಾಟ್" (ತೀವ್ರ ಬರಗಾಲವೆಂದರೆ ಎಲ್ಲರಿಗೂ ಪ್ರೀತಿ) ಕೃತಿ. ಈ ಪುಸ್ತಕ ಇದುವರೆಗೆ ೧೮ ಆವೃತ್ತಿಗಳನ್ನು ಕಂಡು ಅತಿ ಹೆಚ್ಚು ಮಾರಾಟವಾಗಿದೆ. ವಾಸ್ತವ ಸ್ಥಿತಿಯನ್ನು ಬಿಂಬಿಸುವ ಇಲ್ಲಿನ ವರದಿಗಳ ನೇರ ಶೈಲಿ ಸಮಾಜದ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಯ ಮೇಲೆ ಪರಿಣಾಮ ಬೀರುವಂತಿದ್ದು ಯುವ ಪತ್ರಕರ್ತರಿಗೆ, ಎನ್‌ಜಿಒಗಳಿಗೆ ಇದು ಉತ್ತಮ ಮಾರ್ಗದರ್ಶಿಯೆನಿಸಿದೆ. ಈ ಕೃತಿಗೆ ಸಂದ ಪ್ರಶಸ್ತಿಗಳು ಅನೇಕ. ಈ ಪುಸ್ತಕದ ಮಾರಾಟದಿಂದ ಬಂದ ಹಣವನ್ನು ಗ್ರಾಮೀಣ ಭಾಗದ ಯುವಪತ್ರಕರ್ತರನ್ನು ಪ್ರೋತ್ಸಾಹಿಸುವ ಉದ್ದೇಶದಿಂದ 'ಗ್ರಾಮೀಣ ಪತ್ರಿಕೋದ್ಯಮ ಪ್ರಶಸ್ತಿ'ಗೆ ಸಾಯಿನಾಥ್ ಮೀಸಲಿಟ್ಟಿದ್ದಾರೆ.

ಭಾರತದ ಹಳ್ಳಿಗಳ ದಾರುಣ ಸ್ಥಿತಿಯನ್ನು ವಾಸ್ತವದ ನೆಲೆಗಟ್ಟಿನಲ್ಲಿ ತಿಳಿಸುವ ಈ ಪುಸ್ತಕ ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟದ ೧೩ ಪ್ರಶಸ್ತಿಗಳನ್ನು ಪಡೆದಿದೆ. ಅಮೆರಿಕಾ, ಕೆನಡಾ, ಯೂರೋಪ್‌ನ ವಿಶ್ವವಿದ್ಯಾಲಯಗಳಲ್ಲಿ ಈ ಕೃತಿ ಪಠ್ಯಪುಸ್ತಕವಾಗಿದೆ.

ಸಾಯಿನಾಥರ ವರದಿಗಳು ಗ್ರಾಮೀಣ ಭಾರತದ ಬಡವರ ಸ್ಥಿತಿಗತಿ ಸುಧಾರಿಸಲು ಸರ್ಕಾರಗಳ ಗಮನ ಸೆಳೆಯುವ ಹಾಗೂ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವಲ್ಲಿ ಯಶಸ್ವಿಯಾಗಿವೆ.

ಗ್ರಾಮೀಣ ಭಾರತದ ದುರ್ಗಮ ಪ್ರದೇಶಗಳಲ್ಲಿ ಸಂಚರಿಸುತ್ತಾ ಪ್ರವಾಸಕೈಗೊಂಡು ವರದಿಗಾರಿಕೆಯ ಸೂಕ್ಷ್ಮತೆಯನ್ನು ಹೇಳಿಕೊಟ್ಟು ನೂರಾರು ಪ್ರತಿಭಾವಂತ ಪತ್ರಕರ್ತರನ್ನು ತಯಾರಿಸಿದ ಕೀರ್ತಿಯೂ ಅವರಿಗೆ ಸಲ್ಲುತ್ತದೆ. ಕೆನಡದ ಸಾಕ್ಷ್ಯ ಚಿತ್ರ ನಿರ್ಮಾಪಕ ಜೋ ಮೌಲಿನ್ಸ್ ಸಾಯಿನಾಥ್ ಬಗ್ಗೆ ಚಿತ್ರಿಸಿರುವ "ಎ ಟ್ರೈಬ್ ಆಫ್ ಹಿಸ್ ಓನ್" ಸಾಕ್ಷ್ಯ ಚಿತ್ರಕ್ಕೆ ಪ್ರಶಸ್ತಿ ದೊರಕಿದೆ.

೧೦೦ ವರದಿ ಪ್ರಕಟ: ಇತ್ತೀಚಿನ ವರ್ಷಗಳಲ್ಲಿ ಗ್ರಾಮೀಣ ಭಾರತದ ರೈತರ ಬಿಕ್ಕಟ್ಟು ಕುರಿತಂತೆ ಸುಮಾರು ೧೦೦ ಸಂಶೋಧನಾತ್ಮಕ ವರದಿಗಳನ್ನು "ದಿ ಹಿಂದೂ' ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ. ಸದ್ಯ ದೇಶಾದ್ಯಂತ ಕೃಷಿಕರು ಎದುರಿಸುತ್ತಿರುವ ಅತ್ಯಂತ ಬಿಕ್ಕಟ್ಟಿನ ಸ್ಥಿತಿ ಬಗ್ಗೆ ಅಧ್ಯಯನ ನಡೆಸುತ್ತಿದ್ದಾರೆ.



ಗ್ರಾಮೀಣ ಭಾರತದ ದುರ್ಗಮ ಪ್ರದೇಶಗಳಲ್ಲಿ ಸಂಚರಿಸುತ್ತಾ ಪ್ರವಾಸಕೈಗೊಂಡು ವರದಿಗಾರಿಕೆಯ ಸೂಕ್ಷ್ಮತೆಯನ್ನು ಹೇಳಿಕೊಟ್ಟು ನೂರಾರು ಪ್ರತಿಭಾವಂತ ಪತ್ರಕರ್ತರನ್ನು ತಯಾರಿಸಿದ ಕೀರ್ತಿಯೂ ಅವರಿಗೆ ಸಲ್ಲುತ್ತದೆ. ಕೆನಡದ ಸಾಕ್ಷ್ಯ ಚಿತ್ರ ನಿರ್ಮಾಪಕ ಜೋ ಮೌಲಿನ್ಸ್ ಸಾಯಿನಾಥ್ ಬಗ್ಗೆ ಚಿತ್ರಿಸಿರುವ "ಎ ಟ್ರೈಬ್ ಆಫ್ ಹಿಸ್ ಓನ್" ಸಾಕ್ಷ್ಯ ಚಿತ್ರಕ್ಕೆ ಪ್ರಶಸ್ತಿ ದೊರಕಿದೆ.

ತಾವು ಭೇಟಿ ನೀಡುವ ಹಳ್ಳಿಗಳಿಗೆ ಸಂಬಂಧಿಸಿದ ವರದಿಗೆ ಬೇಕಾದ ಛಾಯಾಚಿತ್ರಗಳನ್ನು ಅವರೇ ಸ್ವತಃ ತೆಗೆಯುತ್ತಾರೆ.

ಆತ್ಮಹತ್ಯೆಗೆ ಶರಣಾದ ರೈತರ ಕುಟುಂಬದ ಬಗ್ಗೆ ಸಾಕ್ಷ್ಯಚಿತ್ರಗಳನ್ನೂ ಸಾಯಿನಾಥ್ ನಿರ್ಮಿಸಿದ್ದಾರೆ.

ಇತ್ತೀಚೆಗೆ ಮಹಾರಾಷ್ಟ್ರದ ವಿದರ್ಭ ಪ್ರಾಂತ್ಯದಲ್ಲಿ ನಡೆದ ರೈತರ ಸರಣಿ ಆತ್ಮಹತ್ಯೆ ಬಗ್ಗೆ ಸಾಯಿನಾಥ್ ಅವರ ವರದಿ ಸರ್ಕಾರದ ಗಮನ ಸೆಳೆದುದಲ್ಲದೆ ಕೇಂದ್ರ ಸರ್ಕಾರ ರೈತರಿಗೆ ಪ್ಯಾಕೇಜ್ ಪ್ರಕಟಿಸಿತು. ಪ್ರಧಾನಿಯವರು ವಿದರ್ಭಕ್ಕೆ ಭೇಟಿ ನೀಡುವಾಗ ಸಾಯಿನಾಥ್ ಅವರೊಂದಿಗೆ ಸಮಾಲೋಚನೆ ನಡೆಸಿದ್ದರು.

ಸಾಯಿನಾಥ್ ತಮ್ಮ ಬರಹಗಳಿಂದ ಭಾರತದ ಸಾಮಾಜಿಕ ಹಾಗೂ ಆರ್ಥಿಕ ಪರಿಸ್ಥಿತಿಯನ್ನು ಬದಲಿಸಿದ್ದಾರೆ, ಬದಲಿಸಲು ಶ್ರಮಿಸುತ್ತಿದ್ದಾರೆ.

ದೊರೆತ ಇತರ ಪ್ರಶಸ್ತಿಗಳು: ೩೦ ರಾಷ್ಟ್ರೀಯ ಹಾಗೂ ಅಂತಾರಷ್ಟ್ರೀಯ ಪತ್ರಿಕೋದ್ಯಮ ಪ್ರಶಸ್ತಿಗಳು ಮತ್ತು ಕಳೆದ ೨೬ ವರ್ಷಗಳಿಂದ ಫೆಲೋಷಿಪ್‌ಗಳು ಸಾಯಿನಾಥ್ ಅವರನ್ನು ಹುಡುಕಿಕೊಂಡು ಬಂದಿವೆ. ಇತ್ತೀಚೆಗೆ ಬಂದಿರುವ ಮ್ಯಾಗ್ಸೆಸ್ಸೆ ಪ್ರಶಸಿ ಅವರ ಸಾಧನೆಗೆ ಸಂದ ಗೌರವ. ಈ ಸಂದರ್ಭದಲ್ಲಿ 'ಸಂವಾದ' ಸಾಯಿನಾಥ್ ಅವರಿಗೆ ಅಭಿನಂದನೆ ಸಲ್ಲಿಸುತ್ತದೆ. □



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.

ಪ್ರಕಾಶಕರು / ಲೇಖಕರು
ಪ್ರಕಟಿತ ಕೃತಿಯ ೨ ಪ್ರತಿಗಳನ್ನು
ಕಳುಹಿಸಿಕೊಡಬೇಕಾಗಿ
ಕೋರಲಾಗಿದೆ.

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾಗರ,
ವಿಶ್ವನೀಡಂ ಅಂಚೆ, ಬೆಂಗಳೂರು-೫೬೦ ೦೯೦
ದೂರವಾಣಿ : ೩೨೮ ೭೯೪೩/೯೪೪೮೦೪೮೩೦೬

ದೇಶದ ಪ್ರತಿಷ್ಠಿತ ಅಖಿಲ ಭಾರತೀಯ ವೈದ್ಯಕೀಯ ಸಂಸ್ಥೆಯಲ್ಲಿ ಅಧ್ಯಯನ ನಡೆಸಬೇಕೆಂಬುದು ಪ್ರತಿಯೊಬ್ಬ ವೈದ್ಯ ವಿದ್ಯಾರ್ಥಿಯ ಕನಸು. ಇಟಾ ನಗರದ ಪರಿಶಿಷ್ಟ ಜಾತಿಯ ಬಡ ಕುಟುಂಬವೊಂದರಿಂದ ಬಂದ ವಿದ್ಯಾರ್ಥಿಯೊಬ್ಬರು ತನ್ನ ಉಪಾಧ್ಯಾಯರ ಸಹಾಯದಿಂದ ಕಷ್ಟಪಟ್ಟು IIMಗೆ ಪ್ರವೇಶ ಪಡೆದರು. ಸಂಸ್ಥೆಗೆ ಕಾಲಿಡುತ್ತಿದ್ದಂತೆ ಮೇಲ್ಜಾತಿ ವಿದ್ಯಾರ್ಥಿಗಳು ಆತನ ಮೇಲೆ ನಿರಂತರವಾಗಿ ದೌರ್ಜನ್ಯ, ನಡೆಸಿದರು. ಅಸ್ಪೃಶ್ಯತೆ ಆಚರಿಸಿದರು. ಮೀಸಲಾತಿ ವಿರೋಧಿ ಚಳವಳಿ ಸಮಯದಲ್ಲಂತೂ ಈ ದೌರ್ಜನ್ಯ ಮಿತಿ ಮೀರಿತು. ತನ್ನ ಮೇಲೆ ನಡೆದ ದೌರ್ಜನ್ಯ, ಪರೀಕ್ಷೆಯಲ್ಲಿ ನಡೆದ ಅಕ್ರಮಗಳ ವಿರುದ್ಧ ತಾನು ನಡೆಸಿದ ಹೋರಾಟ ಕುರಿತಂತೆ ಇಲ್ಲಿ ಅವರೇ ವಿವರಿಸಿದ್ದಾರೆ.

ಮೂಲ: ಅಜಯ್ ಕುಮಾರ್ ಸಿಂಗ್
ಅನು: ಕೃಷ್ಣಮೂರ್ತಿ ಸೀತಾರಾಂ

ನಾನು ಮೊಟ್ಟ ಮೊದಲು ಅಖಿಲಭಾರತೀಯ ವೈದ್ಯಕೀಯ ಸಂಸ್ಥೆಯ ಹೆಸರನ್ನು ಕೇಳಿದ್ದು ಎಂಟನೆ ತರಗತಿಯಲ್ಲಿ. ಇಟಾದಲ್ಲಿ ನನ್ನ ತಾಯಿ ನರ್ಸ್ ಆಗಿ ಕೆಲಸ ಮಾಡುತ್ತಿದ್ದ ವೈದ್ಯರ ನೆಂಟ, ಭಾರತೀಯ ವೈದ್ಯಕೀಯ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದರು. ಅವರು ಇಟಾಕ್ಕೆ ಬಂದಿದ್ದಾಗ ಆತನನ್ನು ಭೇಟಿಯಾಗಿ ಅವರಿಂದ ನಾನು ಪ್ರೇರಣೆ ಪಡೆಯಬೇಕೆಂಬುದು ನನ್ನ ತಾಯಿಯ ಆಸೆ. "ನೀನೇನಾದರೂ ಭಾರತೀಯ ವೈದ್ಯಕೀಯ ಸಂಸ್ಥೆಗೆ ಸೇರುವ ಆಸೆ ಇದ್ದರೆ ಬಹಳ ಓದಬೇಕಾಗುತ್ತದೆ" ಎಂದು ಅವರು ಸಲಹೆ ಕೊಟ್ಟರು.

ನನ್ನ ತಂದೆ ಒಬ್ಬ ಆಟೋಚಾಲಕ. ಅವರಿಗೆ ನನ್ನನ್ನು ಡೆಲ್ಲಿಯಲ್ಲಿ ತರಬೇತಿಗೆ ಕಳಿಸಲು ಸಾಧ್ಯವಿರಲಿಲ್ಲ. ಭೌತಶಾಸ್ತ್ರ ಉಪಾಧ್ಯಾಯರ ಸಹಾಯದಿಂದ ತರಬೇತಿಗೆ ಸೇರಿ, ಆ ವರ್ಷದ ಪೂರ್ವಭಾವಿ ಪರೀಕ್ಷೆಯಲ್ಲಿ ತೇರ್ಗಡೆಯಾದೆ. ನಿರ್ಪತ್‌ಸಿಂಗ್ ಮತ್ತು ಮುನ್ನೇದೇವಿ ತಮ್ಮ ಮಗನ ಸಾಧನೆಗೆ ಬಹಳ ಖುಷಿ ಪಟ್ಟಿದ್ದರು.

ಸಂಸ್ಥೆಗೆ ಕಾಲಿಡುತ್ತಿದ್ದಂತೆ ಹಿರಿಯ ವಿದ್ಯಾರ್ಥಿಯೊಬ್ಬ ನನ್ನನ್ನು ಬರ ಹೇಳಿದ, ನನ್ನ ಬಗ್ಗೆ ಪೂರ್ಣ ಮಾಹಿತಿ ನಿರೀಕ್ಷಿಸಿದ ಅವನು, ನಾನು ಪರಿಶಿಷ್ಟ ಜಾತಿಗೆ ಸೇರಿದವನು ಎಂದಾಕ್ಷಣ ಕೊಠಡಿಯಿಂದ ಹೊರದಬ್ಬಿದ. ಇದು ನನ್ನ ಮೊದಲ ದಿನದ ಅನುಭವ. ಮೊತ್ತೊಮ್ಮೆ ಅದೇ ರೀತಿ ನನ್ನನ್ನು ಅವಮಾನಗೊಳಿಸಲು ಯತ್ನಿಸಿದಾಗ ದೂರು ನೀಡುವುದಾಗಿ ಹೇಳಿದ್ದೆ. ತದನಂತರ ಅವನ ಗೆಳೆಯರೆಲ್ಲಾ ನನ್ನನ್ನು ಬಹಿಷ್ಕರಿಸುವಂತೆ ನೋಡಿಕೊಂಡ.

ಸಂಸ್ಥೆಯಲ್ಲಿದ್ದಷ್ಟು ದಿನ ಜಾತಿಯ ಕೀಳರಿಮೆ ನನ್ನನ್ನು ಕಾಡುವಂತೆ ನೋಡಿಕೊಳ್ಳಲಾಯಿತು. ನನ್ನ ವಿಂಗ್‌ನಲ್ಲಿ ನಾನೊಬ್ಬನೇ ಕೆಟಗರಿ ವಿದ್ಯಾರ್ಥಿ. ನನ್ನನ್ನು ಅಲ್ಲಿಂದ ಓಡಿಸಲು ಅನೇಕರು ಹಲವಾರು ಬಗೆಯಲ್ಲಿ ಪ್ರಯತ್ನಿಸಿದರು. "ನೀನು ಇಲ್ಲಿರುವುದು ನಮಗಿಷ್ಟವಿಲ್ಲ. F _ _ K O _ F ಎಂದು ಇಂಗ್ಲಿಷ್‌ನಲ್ಲಿ ನನ್ನ ಕೊಠಡಿ ಬಾಗಿಲ ಮೇಲೆ ಬರೆದರು. "ಳಚಿನೇ ಕೊಠಡಿಯವನನ್ನು ಬಿಟ್ಟು ಎಲ್ಲರೂ ಕೇರಂ ಬೋರ್ಡ್ ಬಳಸಬಹುದು" ಎಂದು ಬರೆದರು. ಬೇಕೆಂತಲೆ ಬಾಗಿಲು ಬಡಿದು ಓಡಿ ಹೋಗುವುದು ನನ್ನನ್ನು ಪ್ರಚೋದಿಸಲು ಬಹಳ ಶ್ರಮಪಟ್ಟರು. ಏನಾದರೂ ಆಗಲಿ ನಾನು ಕದಲುವುದಿಲ್ಲವೆಂದು ತೀರ್ಮಾನಿಸಿದೆ. ಕೆಟಗರಿ ಹುಡುಗರನ್ನು ಬಿಟ್ಟು ಬೇರೆಯವರೊಡನೆ ಬೆರೆಯಲು ಸಾಧ್ಯವಿರಲಿಲ್ಲ. ನಾನೇ ಕಾಲ ಕ್ರಮೇಣ ಅದರಿಂದ ದೂರವಾಗಬೇಕಾಯಿತು. ಪ್ರತಿಷ್ಠಿತ ಸರ್ಕಾರಿ ವಿದ್ಯಾಸಂಸ್ಥೆಗಳಲ್ಲಿ ಈ ರೀತಿಯ ತಾರತಮ್ಯ ಅನುಭವಿಸಬೇಕಾಗುತ್ತದೆಯೆಂದು ನಾನು ಅಂದುಕೊಂಡಿರಲಿಲ್ಲ.

ನವೋದಯ ವಿದ್ಯಾಲಯದಲ್ಲಿ ೭ ವರ್ಷ ಓದಿದ್ದ ನನಗೆ ಜಾತೀಯತೆಯ ಪರಿಚಯವಿತ್ತು. ಆದರೆ ಭಾರತೀಯ ವೈದ್ಯಕೀಯ ಸಂಸ್ಥೆಯಲ್ಲಿ ನನ್ನ ಜತೆ ನಡೆದದ್ದು ಹೋಲಿಸಲಾಗದಷ್ಟು ಪಟ್ಟು ಹೆಚ್ಚು.

ಸಾಮಾನ್ಯ ಅರ್ಹತೆಯ ಕೆಳಗೆ ಬರುವ ವಿದ್ಯಾರ್ಥಿಗಳೆಲ್ಲಾ ಜಾತಿವಾದಿಗಳಲ್ಲವೆಂಬುದು ಸತ್ಯ; ಆದರೆ ಭಾರತೀಯ ವೈದ್ಯಕೀಯ ಸಂಸ್ಥೆಯಲ್ಲಿನ ಜಾತೀಯತೆ ಅಸಹ್ಯವೆನಿಸುವಷ್ಟು ಎಲ್ಲಾ ಪದರಗಳಿಗೂ ಪಸರಿಸಿದೆ. ನಮ್ಮನ್ನು ಯಾರೂ ಮಾತನಾಡಿಸುವುದಿಲ್ಲ. ನಮಗೆ ವಿದ್ಯಾರ್ಥಿ ಸಂಘಗಳಲ್ಲಿ ಪ್ರಾತಿನಿಧ್ಯವೇ ಇಲ್ಲ. ನಾವು ಕ್ರೀಡೆಗಳಲ್ಲಿ ಭಾಗವಹಿಸುವುದನ್ನು ಸಹಿಸುವುದಿಲ್ಲ.

ಈ ರೀತಿಯಾಗಿರುವಾಗ ವಾರ್ಷಿಕ ವಿದ್ಯಾರ್ಥಿ ಕೂಟದಲ್ಲಿ ಪರಿಸ್ಥಿತಿ ಪ್ರಕೋಪಕ್ಕೆ ಮುಟ್ಟಿತು. ಕ್ಷುಲಕ ಕಾರಣಕ್ಕಾಗಿ ದಲಿತ ವಿದ್ಯಾರ್ಥಿಯೊಬ್ಬನನ್ನು ಮನಸ್ಸಿಗೆ ಬಂದಂತೆ ಹೊಡೆದರು. ಅವನ ಪ್ರಾಣ ಉಳಿದ್ದದ್ದೇ ಹೆಚ್ಚು. ದೂರು ನೀಡಿದಾಗ ಸಂಸ್ಥೆ ಆಡಳಿತ ಮಂಡಳಿ ದೂರನ್ನೇ ಪರಿಗಣಿಸಲಿಲ್ಲ.

(೧೬ನೇ ಪುಟಕ್ಕೆ)

ನಾನು ಡಾಕ್ಟರ್ ಆಗದಿದ್ದರೆ ಅಷ್ಟೇಹೋಯಿತು, ಈ ಹೋರಾಟ ಮಾತ್ರ ನಿಲ್ಲಿಸಲಾರೆ

ಮದ್ರಾಸ್ ಐಐಟಿ: ಮೀಸಲಾತಿಯಲ್ಲಿ ದಲಿತರಿಗೆ ಪಂಗನಾಮ

ಮದ್ರಾಸ್ ಐಐಟಿಯಂತಹ ಪ್ರತಿಷ್ಠಿತ ವಿದ್ಯಾಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಮೀಸಲಿಟ್ಟ ೨೨.೫% ಸೀಟುಗಳಲ್ಲಿ ಕೇವಲ ಕೆಲವೇ ಕೆಲವು ಸೀಟುಗಳನ್ನು ತುಂಬಲಾಗಿದೆ ಎನ್ನುವ ಅಂಶ ಗಮನಕ್ಕೆ ಬಂದಿದ್ದರೂ, ಇತ್ತೀಚೆಗೆ ನಡೆದ ಇತರೆ ಹಿಂದುಳಿದ ಮೀಸಲಾತಿ ಗದ್ದಲದಲ್ಲಿ ಈ ವಿಷಯ ಸ್ವಲ್ಪ ಅಪ್ರಸ್ತುತವಾಗಿ ಕಾಣಿಸಬಹುದು.

ಮದ್ರಾಸ್ ಐಐಟಿ ಸಂಸ್ಥೆಯ ರಿಜಿಸ್ಟ್ರಾರ್ ಡಾ. ಕೆ. ಸಂಚಲನ್ ತಿಳಿಸಿದಂತೆ ದಲಿತರಿಗೆ ಮೀಸಲಿಟ್ಟ ಒಟ್ಟು ಸೀಟುಗಳಲ್ಲಿ ೧೧.೯% ಮಾತ್ರ ತುಂಬಲ್ಪಟ್ಟಿರುವುದು ಆತಂಕದ ವಿಚಾರ. ಆದರೆ ಮದ್ರಾಸ್ ಐಐಟಿಗೆ ಇದೇನು ಹೊಸದಲ್ಲ. ಇಲ್ಲಿನ ಉನ್ನತ ಕೋರ್ಸ್‌ಗಳಲ್ಲಿ ದಲಿತರ ಸಂಖ್ಯೆ ಮತ್ತೂ ಕಡಿಮೆ. ಪ್ರಸ್ತುತ ಸ್ನಾತಕೋತ್ತರ ಸಂಶೋಧನೆಯಲ್ಲಿ ೨.೩% ಮತ್ತು ಪಿ.ಎಚ್.ಡಿ ಪದವಿಯಲ್ಲಿ ೫.೮% ದಲಿತ ವಿದ್ಯಾರ್ಥಿಗಳು ಮಾತ್ರ ಅಧ್ಯಯನ ನಡೆಸುತ್ತಿದ್ದಾರೆ.

ದಲಿತರ ಸಬಲೀಕರಣಕ್ಕೆ ಹೋರಾಟ ಮಾಡುತ್ತಿರುವ ಕಾರ್ಯಕರ್ತರು ಮದ್ರಾಸ್ ಐಐಟಿಯನ್ನು ಬ್ರಾಹ್ಮಣರ ಅಗ್ರಹಾರವೆಂದು ಬಣ್ಣಿಸುತ್ತಾರೆ. ೨೫೦ ಹೆಕ್ಟೇರ್ ಪ್ರದೇಶದ ಅಚ್ಚ ಹಸಿರಿನ ಕ್ಯಾಂಪಸ್‌ನಲ್ಲಿ ೪೫೦ರಷ್ಟು ಶಿಕ್ಷಕ ವರ್ಗದವರಿದ್ದು, ಹೆಚ್ಚಿನವರು ಬ್ರಾಹ್ಮಣರಾಗಿರುತ್ತಾರೆ. ಗಣಿತ ಸಹಾಯಕ ಪ್ರಾಧ್ಯಾಪಕರಾಗಿರುವ ಡಾ. ಡಬ್ಲ್ಯು. ಬಿ. ವಸಂತ ಕಂದಸಾಮಿ ಅವರ ಪ್ರಕಾರ ೦.೮% (ನಾಲ್ಕು ಜನ) ಮಾತ್ರ ದಲಿತ ಶಿಕ್ಷಕರಿದ್ದಾರೆ. ೫೦ ಜನ ಹಿಂದುಳಿದ ವರ್ಗಗಳಿಗೆ ಸೇರಿದ ಶಿಕ್ಷಕರಾದರೆ, ಉಳಿದಂತೆ ಎಲ್ಲರೂ ಬ್ರಾಹ್ಮಣರೇ.

ಇಲ್ಲಿ ದಲಿತ ಸಂಶೋಧನಾ ವಿದ್ಯಾರ್ಥಿಗಳಿಗೆ ಕಿರುಕುಳ ಕೊಡಲಾಗುತ್ತಿದೆ ಎನ್ನುತ್ತಾರೆ ವಸಂತ ಕಂದಸಾಮಿ. ವಿದ್ಯಾರ್ಥಿಗಳನ್ನು ಕಾರಣವಿಲ್ಲದೆ ಕಾಯಿಸಲಾಗುತ್ತದೆ. ಮತ್ತು ಸಂದರ್ಶನಗಳಲ್ಲಿ ಅಪ್ರಸ್ತುತ ಪ್ರಶ್ನೆಗಳನ್ನು ಕೇಳಿ ನಪಾಸುಗೊಳಿಸಲಾಗುತ್ತದೆ. ಒಟ್ಟಾರೆ ಹೇಳಬೇಕೆಂದರೆ ಸಂಶೋಧನೆಗೆ ಪೂರಕವಲ್ಲದ ವಾತಾವರಣವನ್ನು ನಿರ್ಮಿಸಲಾಗಿದೆ. ತಾವು ಈ ಹಿಂದೆ ದಲಿತ ವಿದ್ಯಾರ್ಥಿಗಳ ಪರ ವಹಿಸುವುದರಿಂದ ಆಡಳಿತ ವರ್ಗದ ಕೆಂಗಣ್ಣಿಗೆ ಗುರಿಯಾಗಬೇಕಾಯಿತು ಎಂದು ಅಸಹಾಯಕತೆಯನ್ನು ತೋಡಿಕೊಳ್ಳುತ್ತಾರೆ ಡಾ. ವಸಂತ ಕಂದಸ್ವಾಮಿ.

ಐಐಟಿ ಆಡಳಿತದ ವಿರುದ್ಧ ಈ ಹಿಂದೆ ದಲಿತರ ಮೀಸಲಾತಿ ವಿಷಯವಾಗಿ ಅನೇಕ ಹೋರಾಟಗಳು ನಡೆದಿವೆ. ಕಾರ್ಯಕರ್ತರ ಪ್ರಕಾರ ಇಲ್ಲಿ, ಕೆಲವೇ ವರ್ಷಗಳ ಹಿಂದೆ ಬಹಳ ಕಡಿಮೆ ಸಂಖ್ಯೆಯ ದಲಿತ ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳಿದ್ದರು. ಪಟ್ಟಾಳಿ ಮಕ್ಕಳ್ ಕಚ್ಚಿ (ಪಿಎಂಕೆ), ದ್ರಾವಿಡ ಕಳಗಂ (ಡಿಕೆ), ವಿಡುದಲೈ ಚಿರುತೈಗಳ್ (ವಿಸಿ), ಮತ್ತು ಪೆರಿಯಾರ್ ದ್ರಾವಿಡರ್ ಕಳಗಂ (ಪಿಡಿಕೆ)ನಂತಹ ರಾಜಕೀಯ ಪಕ್ಷಗಳ ಹೋರಾಟದಿಂದ ಇಂದು ಪರಿಸ್ಥಿತಿ ಕೊಂಚ ಮಟ್ಟಿಗೆ ಸುಧಾರಿಸಿದೆ. ಐಐಟಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಕ್ಷೇಮಾಭಿವೃದ್ಧಿ ಸಂಘದ ಕೆ. ವಿಶ್ವನಾಥ್ ೧೯೯೬ರಲ್ಲಿ ಐಐಟಿ ನಿರ್ದೇಶಕರ ಗಮನಕ್ಕೆ ತಂದಿರುವಂತೆ ತನ್ನ ಇದುವರೆಗಿನ ಅಸ್ತಿತ್ವದಲ್ಲಿ, ಮದ್ರಾಸ್ ಐಐಟಿಯಲ್ಲಿ ಓರ್ವ ದಲಿತ ಪ್ರಾಧ್ಯಾಪಕ ಇಲ್ಲ.

೨೦೦೦ ಸಾಲಿನಲ್ಲಿ ಪಿಡಿಕೆ ಕೈಗೊಂಡ ಅಧ್ಯಯನದಲ್ಲಿ ಸಂಸ್ಥೆಯ ದಲಿತ ವಿರೋಧಿ ನಿಲುವನ್ನು ಬಹಿರಂಗಗೊಳಿಸಲಾಗಿದೆ. ಅಧ್ಯಯನದ ಪ್ರಕಾರ ಐಐಟಿ ಸ್ಥಾಪನೆಯ ೪೧ ವರ್ಷಗಳ ನಂತ



ರವೂ ಹೆಚ್ಚಿನ ವಿಭಾಗಗಳಲ್ಲಿ ಓರ್ವ ದಲಿತ ಪಿಎಚ್‌ಡಿ ಸಂಶೋಧನಾ ವಿದ್ಯಾರ್ಥಿಯೂ ಆಯ್ಕೆಯಾಗಿಲ್ಲ. ಎಂ. ಟೆಕ್ ಮತ್ತು ಎಂ. ಎಸ್ ವಿದ್ಯಾರ್ಥಿಗಳು ಹೆಚ್ಚಾಗಿ ಬ್ರಾಹ್ಮಣರೆಂಬುದು ಅಧ್ಯಯನದ ಇನ್ನೊಂದು ಮಹತ್ವದ ಅಂಶ. ಈ ಸಂಬಂಧವಾಗಿ ಪಿಡಿಕೆ, ಐಐಟಿ ಸಂಸ್ಥೆಯು ಶ್ವೇತಪತ್ರ ಹೊರಡಿಸಬೇಕೆಂದು ಒತ್ತಾಯಿಸುತ್ತಾ ಬಂದಿದೆ. ಮೀಸಲಾತಿ ಅನುಷ್ಠಾನ ಕುರಿತು ಸಂಸ್ಥೆಯ ಕಾರ್ಯವೈಖರಿ ಬಗ್ಗೆ ನಿಗಾ ವಹಿಸಬೇಕೆಂದು ಪಿಡಿಕೆ ಮಹಾಕಾರ್ಯದರ್ಶಿ ವಿಡುದಲೈ ರಾಜೇಂದ್ರನ್ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ರಾಷ್ಟ್ರೀಯ ಆಯೋಗವನ್ನು ಒತ್ತಾಯಿಸಿದ್ದಾರೆ.

ಈ ರೀತಿಯ ಆರೋಪಗಳು ಮದ್ರಾಸ್ ಐಐಟಿಗೆ ಹೊಸದೇನಲ್ಲ. ರಾಷ್ಟ್ರೀಯ ದಲಿತರ ಮಾನವ ಹಕ್ಕುಗಳ ಆಯೋಗದ ರಾಜ್ಯ ಸಂಚಾಲಕರಾದ ನಿವೃತ್ತ ಐಎಎಸ್ ಅಧಿಕಾರಿ ಡಾ. ವಿ. ಕರುಪ್ಪನ್, ಗಮನಕ್ಕೆ ತರುವಂತೆ, ೨೦೦೫ರಲ್ಲಿ ಅರ್ಹತೆ ಇದ್ದ ವಿದ್ಯಾವಂತ ದಲಿತನಿಗೆ ಪಿಎಚ್‌ಡಿ ಸೀಟನ್ನು ನಿರಾಕರಿಸಲಾಯಿತು. ಈತನನ್ನು ಮೊದಲು ಸಂದರ್ಶನಕ್ಕೂ ಕರೆಯದಿದ್ದ ಸಂಸ್ಥೆಯವರು, ಆಯೋಗ ಮಧ್ಯ ಪ್ರವೇಶಿಸಿದ ನಂತರ ಸಂದರ್ಶನಕ್ಕೆ ಕರೆಯಲಾಯಿತು. ಆದರೆ ಸಂದರ್ಶನದಲ್ಲಿ ಅಪ್ರಸ್ತುತ ಪ್ರಶ್ನೆಗಳನ್ನು ಕೇಳಿ ಅನುತ್ತೀರ್ಣಗೊಳಿಸಲಾಯಿತು ಎಂಬ ಗಂಭೀರ ಆರೋಪವಿದೆ.

ದಲಿತ ವಿದ್ಯಾರ್ಥಿಗಳ ಮೇಲೆ ನಡೆದಿರುವ ತಾರತಮ್ಯ ನೀತಿಯ ಬಗ್ಗೆ ಹಲವಾರು ದೂರುಗಳು ಬಂದಿವೆ. ಈ ಕುರಿತು, ಪಿಡಿಕೆ ನಡೆಸಿರುವ ಅಧ್ಯಯನ, ಸುಜೀ ತೆಪ್ಪಲ್ ಎಂಬ ವಿದ್ಯಾರ್ಥಿಯ ವಿಷಯವನ್ನು ಉದಾಹರಿಸುತ್ತದೆ. ಸುಜೀ ತೆಪ್ಪಲ್ ತಮ್ಮ ಹನ್ನೆರಡನೇ ತರಗತಿಯಲ್ಲಿ, ಗಣಿತ, ಭೌತಶಾಸ್ತ್ರ, ರಸಾಯನಶಾಸ್ತ್ರ-ವಿಷಯಗಳಲ್ಲಿ ೯೪% ಅಂಕ ಗಳಿಸಿದ್ದರು. ಸುಜೀ ಅವರಿಗೆ ರಾಂಚಿ ಮತ್ತು ಬಿಟ್ಸ್, ಪಿಲಾನಿಯಲ್ಲಿ ಸೀಟು ದೊರಕಿದ್ದರೂ, ಮದ್ರಾಸ್ ಐಐಟಿಯನ್ನು ಆಯ್ಕೆ ಮಾಡಿಕೊಂಡಿದ್ದರು. ಅರ್ಹತೆ ಇದ್ದರೂ ಈ ವಿದ್ಯಾರ್ಥಿಯನ್ನು ಒಂದು ವರ್ಷದ ಐಐಟಿ ಪೂರ್ವ ಪ್ರಾಥಮಿಕ ಕೋರ್ಸ್‌ಗೆ ದೂಡಲಾಯಿತು. ನಂತರ ಕೋರ್ಸ್ ಕೊನೆಯ ಪರೀಕ್ಷೆಯಲ್ಲಿ ವಿದ್ಯಾರ್ಥಿಯನ್ನು 'ಅನರ್ಹ' ಎಂದು ಘೋಷಿಸಲಾಯಿತು. ಈ ಬಗ್ಗೆ ರಾಷ್ಟ್ರೀಯ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಆಯೋಗ ಮತ್ತು ತಮಿಳುನಾಡಿನ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಸಚಿವ ಸೆಲ್ವರಾಜ್ ಅವರ ಮಧ್ಯ ಪ್ರವೇಶದ ಹೊರತಾಗಿಯೂ ಸಂಸ್ಥೆ ತನ್ನ ನಿರ್ಧಾರ ಬದಲಿಸಲಿಲ್ಲ.

ಮತ್ತೊಂದು ಗಂಭೀರವಾದ ಆರೋಪವೆಂದರೆ, ಸಂಸ್ಥೆಯು ಶಿಕ್ಷಕರನ್ನು ನೇಮಿಸುವಾಗ ನಿಯಮಾವಳಿಗಳನ್ನು ಗಾಳಿಗೆ ತೂರಿದೆ

(೧೬ನೇ ಪುಟಕ್ಕೆ)

ಮದ್ರಾಸ್ ಐಐಟಿ ದೇಶದ ಪ್ರತಿಷ್ಠಿತ ವಿದ್ಯಾಸಂಸ್ಥೆಗಳಲ್ಲೊಂದು. ಇಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಮೀಸಲಿಟ್ಟಿರುವ ೨೨.೫% ಸೀಟುಗಳಲ್ಲಿ ತುಂಬಲ್ಪಟ್ಟಿರುವ ಸೀಟು ೧೧.೯% ಮಾತ್ರ. ೨೫೦ ಹೆಕ್ಟೇರ್ ಪ್ರದೇಶದ ಕ್ಯಾಂಪಸ್‌ನಲ್ಲಿ ೪೫೦ ಜನ ಶಿಕ್ಷಕ ವರ್ಗದವರಿದ್ದು ಇವರಲ್ಲಿ ಹೆಚ್ಚಿನವರು ಬ್ರಾಹ್ಮಣರು. ನಾಲ್ಕು ಜನ ಮಾತ್ರ ದಲಿತ ಶಿಕ್ಷಕರಿದ್ದು, ೫೦ ಜನ ಹಿಂದುಳಿದ ವರ್ಗಗಳಿಗೆ ಸೇರಿದ ಶಿಕ್ಷಕರಿದ್ದಾರೆ. ಮದ್ರಾಸ್ ಐಐಟಿ ಸ್ಥಾಪನೆಯಾಗಿ ೪೧ ವರ್ಷಗಳ ನಂತರವೂ ಹೆಚ್ಚಿನ ವಿಭಾಗಗಳಲ್ಲಿ ಓರ್ವ ದಲಿತ ಪಿಎಚ್‌ಡಿ ಸಂಶೋಧನೆಗೆ ಆಯ್ಕೆಯಾಗಿಲ್ಲ. ಎಂ. ಟೆಕ್ ಮತ್ತು ಎಂ. ಎಸ್. ವಿದ್ಯಾರ್ಥಿಗಳು ಹೆಚ್ಚಾಗಿ ಬ್ರಾಹ್ಮಣರೆಂಬುದು ಇನ್ನೊಂದು ಮಹತ್ವದ ಅಂಶ. ೨೦೦೫ ರಲ್ಲಿ ಅರ್ಹ ದಲಿತನಿಗೆ ಪಿಎಚ್‌ಡಿ ಸೀಟನ್ನು ನಿರಾಕರಿಸಿಲಾಯಿತು. ಐಐಟಿ ನಿರ್ದೇಶಕ ಎಂ.ಎಸ್. ಅನಂತ್ ಜಾತಿವಾದಿಯಾಗಿಯಾಗಿದ್ದಾರೆ ಎಂಬ ಆರೋಪವಿದೆ.

ಮೂಲ: ಪಿ.ಸಿ.ವಿ. ಕುಮಾರ್
ಅನು: ಕೃಷ್ಣಮೂರ್ತಿ ಸೀತಾರಾಂ

'ನಾನು ಡಾಕ್ಟರ್ ಆಗದಿದ್ದರೆ ಅಷ್ಟೇಹೋಯಿತು, ಈ ಹೋರಾಟ ಮಾತ್ರ ನಿಲ್ಲಿಸಲಾರೆ'

(೧೪ನೇ ಪುಟದಿಂದ)

೨೦೦೬ರ ಮೀಸಲಾತಿ ವಿರೋಧಿ ಚಳವಳಿ ಸಮಯಕ್ಕೆ ನಮ್ಮ ಮೇಲಿನ ದೌರ್ಜನ್ಯ ಮಿತಿ ಮೀರಿತು. ಸಾವಿರಕ್ಕೂ ಹೆಚ್ಚು ಹೊರಗಿನ ಜನ ಆ ಸಮದಲ್ಲಿ ಅನೈತಿಕವಾಗಿ ಕ್ಯಾಂಪಸ್‌ನಲ್ಲಿ ಡೇರೆ ಹಾಕಿದ್ದರು. ಅವರಿಗೆ ನಮ್ಮ ವಿದ್ಯಾರ್ಥಿನಿಲಯದಲ್ಲಿ ಊಟ-ವಸತಿ ವ್ಯವಸ್ಥೆ ಮಾಡಲಾಗಿತ್ತು. ಕಾಲು ಕೆರೆದುಕೊಂಡು ಜಗಳವಾಡಲು ಯಾವಾಗಲೂ ಕಾಯುತ್ತಿದ್ದ ಇವರು, "ಈ ಚಮ್ಮಾರರು ಏನು ಮಾಡುತ್ತಾರೆ ನೋಡೋಣ" ಎಂದು ಹೀಗಳೆಯುತ್ತಿದ್ದುದು ಸಾಮಾನ್ಯವಾಗಿತ್ತು. ಮಾಧ್ಯಮಗಳು ಭಾರತೀಯ ವೈದ್ಯಕೀಯ ಸಂಸ್ಥೆ ಎಲ್ಲಾ ವಿದ್ಯಾರ್ಥಿಗಳು (ಅಂದರೆ ಪ.ಜಾ, ಬುಡಕಟ್ಟು ಜನಾಂಗ ಸೇರಿದಂತೆ) ಮೀಸಲಾತಿ ವಿರೋಧಿಗಳೆಂಬಂತೆ ಬಿಂಬಿಸಿದವು. ಕೆಟಗರಿಯ ಕೆಲವು ಕಿರಿಯ ವಿದ್ಯಾರ್ಥಿಗಳನ್ನು ಮೀಸಲಾತಿ ವಿರೋಧಿ ಪ್ರತಿಭಟನೆಯಲ್ಲಿ ಭಾಗವಹಿಸುವಂತೆ ಬಲವಂತವಾಗಿ ಎಳೆದೊಯ್ಯಲಾತು.

ವ್ಯಾಯಾಮ ಶಾಲೆಯ ಕೆಟಗರಿ ವಿದ್ಯಾರ್ಥಿ ಕಾರ್ಯದರ್ಶಿಯನ್ನು ಬೇಕಾದಂತೆ ಹೊಡೆದರು. ಇದೆಲ್ಲದರಿಂದ ಬೇಸತ್ತ ನಾವು ಕೊನೆಗೆ ಸಂಸ್ಥೆಯ ನಿರ್ದೇಶಕ ಡಾ॥ ಪಿ. ವೇಣುಗೋಪಾಲ್‌ರವರಿಗೆ ಕ್ರಮ ತೆಗೆದುಕೊಳ್ಳುವಂತೆ ಮನವಿ ಸಲ್ಲಿಸಿದೆವು. ಒಂದು ದಿನದಲ್ಲಿ ಕ್ರಮ ಕೈಗೊಳ್ಳುವುದಾಗಿ ಭರವಸೆ ಕೊಟ್ಟ ನಿರ್ದೇಶಕರು ಯಾರ ಮೇಲೆ ದೂರು ಕೊಟ್ಟಿದ್ದೆವೋ ಅವರಿಗೆ ವಿಷಯ ತಿಳಿಯುವಂತೆ ಕ್ರಮ ಕೈಗೊಂಡರು! ದೂರು ವಾಪಸ್ಸು ಪಡೆಯುವಂತೆ ಬೆದರಿಸಿದರು. ನಾವು ಹೆದರಲಿಲ್ಲ. ಈ ಸಾರಿ ಸಂಸ್ಥೆಯ ಅಧ್ಯಕ್ಷರಿಗೆ ಪತ್ರ ಬರೆದವು. ಉತ್ತರ ಸಿಗಲಿಲ್ಲ.

ನಂತರ ನಾವು ಮಾಧ್ಯಮಗಳ ಮೊರೆ ಹೋಗಬೇಕಾಯಿತು. 'ಪಲ್ಸ್-೨೦೦೬' ವಿದ್ಯಾರ್ಥಿ ಸಮಾರಂಭಕ್ಕೆ ನಾವು ಅಡ್ಡಿಯುಂಟು ಮಾಡುತ್ತಿದ್ದೇವೆಂದು ಆರೋಪಿಸಿದರು. ವಿದ್ಯಾರ್ಥಿಗಳನ್ನು ನಮ್ಮ ವಿರುದ್ಧ ಪ್ರಚೋದಿಸಲು ಈ ಹುನ್ನಾರ ಮಾಡಿದ್ದರು. ಭಿತ್ತಿ ಪತ್ರ ಹೊರತಂದು ನಾವು ವಿದ್ಯಾರ್ಥಿ ಸಮಾರಂಭವನ್ನು ವಿರೋಧಿಸುತ್ತಿಲ್ಲವೆಂದು ತಿಳಿಸಬೇಕಾಯಿತು. ಇದೇ ಸಮಯದಲ್ಲಿ ಡಾ॥ ಅಂಬೇಡ್ಕರ್ ಪುಸ್ತಕಗಳನ್ನು ಸುಡುವ ಚಿತ್ರಗಳಿದ್ದ ಸಿಡಿಯನ್ನು ಕ್ಯಾಂಪಸ್ ಪೂರ ಹಂಚಲಾಯಿತು. ಹೆಚ್ಚಿನ ಬೆಂಬಲವಿಲ್ಲದಿದ್ದರೂ ನಾನು ಇದನ್ನು ವಿರೋಧಿಸಿ ಒಂದು ಪತ್ರಿಕಾಗೋಷ್ಠಿ ಕರೆದೆ. ಪತ್ರಿಕಾಗೋಷ್ಠಿ ಕರೆದು ಸಂಸ್ಥೆಯ ಘನತೆಗೆ ಮಸಿ ಬಳಿಯುತ್ತಿದ್ದೇನೆಂದು ನಿರ್ಧರಿಸಿದರು. ಮಾಧ್ಯಮಗಳ ಎದುರು ಹೋಗಬೇಕಾಗಿ ಬಂದ ಅನಿವಾರ್ಯತೆಯನ್ನು ನಾನು ವಿವರಿಸಬೇಕಾಯಿತು. ಆ ವರೆಗೆ ಭಾರತೀಯ ವೈದ್ಯಕೀಯ ಸಂಸ್ಥೆಗೆ ಮೀಸಲಾತಿ ಆಧಾರದ ಮೇಲೆ ಬಂದ ವಿದ್ಯಾರ್ಥಿ ಯಾರೊಬ್ಬರೂ ಇಷ್ಟು ಪ್ರತಿರೋಧ ಒಡ್ಡಿರಲಿಕ್ಕಿಲ್ಲ. ನನಗೆ ಬುದ್ಧಿ ಕಲಿಸಿದರೆ ಇತರೆ ಯಾವ ಕೆಟಗರಿ ವಿದ್ಯಾರ್ಥಿಗಳು ದನಿ ಎತ್ತುವುದಿಲ್ಲವೆಂದು ತಿಳಿದಿರಬೇಕು.

ಆ ವರ್ಷದ ಪರೀಕ್ಷೆಯಲ್ಲಿ ನನ್ನನ್ನು ಫೇಲ್ ಮಾಡಲಾಗಿತ್ತು. ೩ ಬಾರಿ ಅನುತ್ತೀರ್ಣಗೊಂಡರೆ ನಾನು ವಿದ್ಯಾಭ್ಯಾಸ ಮುಂದುವರಿಸಲು ಅನರ್ಹನಾಗುತ್ತಿದ್ದೆ. ಮರುಪರೀಕ್ಷೆಯಲ್ಲಿ ಸಂಸ್ಥೆ ಆಡಳಿತ ನನ್ನ ಅರಿವಿಲ್ಲದೆ ವಿಡಿಯೋ ಚಿತ್ರಿಕರಣ ನಡೆಸಿತು. ಈ ಕಾನೂನು ಬಾಹಿರ ಕ್ರಮವನ್ನು ನಾನು ನಿರ್ದೇಶಕರಿಗೆ ತಿಳಿಸಿದೆ. ಫಲಿತಾಂಶದ ಮುನ್ನಾದಿನ ಪತ್ರಿಕಾಗೋಷ್ಠಿ ಕರೆದ ವಿದ್ಯಾರ್ಥಿ ನಪಾಸಾಗಿದ್ದಾನೆ ಎಂದು ಕಾಲೇಜಿನ ತುಂಬಾ ಭಿತ್ತಿ ಪತ್ರಗಳನ್ನು ಅಂಟಿಸಲಾಗಿತ್ತು. ನಾನು ಇದರ ಬಗ್ಗೆ ಪೊಲೀಸರಿಗೆ ದೂರು ಕೊಟ್ಟೆ, ನಾನು, ನನ್ನ ಸ್ನೇಹಿತರು ಅನೇಕ ಪ್ರತಿಭಟನೆ ನಡೆಸಿದೆವು. ತತ್ಫಲವಾಗಿ ಕೇಂದ್ರ ಸರ್ಕಾರ ಸುಖದೇವ್ ಥೋರಲ್ (ವಿಶ್ವವಿದ್ಯಾಲಯ ಧನ ಸಹಾಯ ಆಯೋಗದ ಅಧ್ಯಕ್ಷರು) ಸಮಿತಿ ರಚಿಸಿತು. ಭಾರತೀಯ ವೈದ್ಯಕೀಯ ಸಂಸ್ಥೆ ಆ ಸಮಿತಿ ಕೆಲಸ ಮಾಡಲು ಒಂದು ಕೊಠಡಿ ಸಹ ಬಿಟ್ಟುಕೊಡಲಿಲ್ಲ. ಸಂಸ್ಥೆಯ ಆವರಣದಾಚೆಗೆ ತನಿಖೆ ನಡೆಯಿತು. ನನ್ನ ಮೌಖಿಕ ಪರೀಕ್ಷೆಯಲ್ಲಿ ಕೂಡ ನನ್ನನ್ನು ಕೇಳಿದ ಒಂದೇ ಪ್ರಶ್ನೆ ಎಂದರೆ, "ಥೋರಲ್ ವರದಿಯಲ್ಲಿ ನಿನ್ನ ಪಾತ್ರವೇನು?" ಎಂದು. ಆಂತರಿಕ ಮೌಲ್ಯಮಾಪನದಲ್ಲಿ ನನಗಿಂತ ಕಡಿಮೆ ಅಂಕ ಗಳಿಸಿದ್ದ ಐದಾರು ವಿದ್ಯಾರ್ಥಿಯರು ತೇರ್ಗಡೆಯಾಗಿದ್ದರು. ನಾನು ಫೇಲಾಗಿದ್ದೆ ಒಂದೂವರೆ ಅಂಕಗಳಿಂದ!

ಮೌಖಿಕ ಪರೀಕ್ಷೆಯ ಹಿಂದಿನ ದಿನ ಅಧ್ಯಾಪಕರು ಒಂದು ನಿರ್ಣಯದಲ್ಲಿ ನನಗೆ ಮರು ಪರೀಕ್ಷೆ ಮಾಡಲು ಯಾರೂ ಒಪ್ಪಬಾರದೆಂದು ನಿರ್ಧರಿಸಿದ್ದರು. ಇದು ನನಗೆ ಕಾಲಾನಂತರ ತಿಳಿದು ಬಂದ ವಿಷಯ. ಸಂಸ್ಥೆಯ ಆಡಳಿತ ಮಂಡಳಿಯು ನನ್ನ ಮರುಪರೀಕ್ಷೆ ನಡೆಸುವಂತೆ ನಿರ್ದೇಶಕರಿಗೆ ಆದೇಶಿಸಿದೆ. ಅದನ್ನು ನಿರ್ದೇಶಕರು ಈ ತನಕ ಮಾನ್ಯ ಮಾಡಿಲ್ಲ. ಇತ್ತೀಚಿಗೆ ನನಗೆ ಪೆಸ್ಸಲ್ವೇನಿಯ ವಿಶ್ವವಿದ್ಯಾಲಯದಲ್ಲಿ ತರಬೇತಿಗಾಗಿ ಅವಕಾಶ ಒದಗಿ ಬಂದಿತ್ತು. ಪ್ರಭಾವ ಬಳಸಿ ನನಗೆ ಬುದ್ಧಿ ಕಲಿಸಲು ಅಲ್ಲಿನ ವಿಶ್ವವಿದ್ಯಾಲಯದವರಿಗೆ ಕೇಳಿಕೊಳ್ಳಲಾಯಿತು.

ನಾನು ವೈದ್ಯನಾಗಲು ಬಿಡದಿದ್ದರೆ ಅಷ್ಟೇ ಹೋಯಿತು... ಆದರೆ ಈ ಹೋರಾಟದಿಂದ ಹಿಂದೆ ಸರಿಯುವುದಿಲ್ಲ. ಭಾರತೀಯ ವೈದ್ಯಕೀಯ ಸಂಸ್ಥೆಯಲ್ಲಿ ಹಿಂದೆ ನಾವು ಮಾತನಾಡುವಂತಿರಲಿಲ್ಲ. ನಾನು ದನಿ ಏರಿಸಿ ಅನ್ಯಾಯದ ವಿರುದ್ಧ ಮಾತನಾಡಿದ್ದೇವೆ. ನನ್ನೂರಿನಲ್ಲಿ ನನ್ನ ತಂದೆ ಒಬ್ಬ ಆಟೋ ಚಾಲಕನಾದರೂ ಅಪಾರ ಗೌರವವಿದೆ. ಏನೇ ಬಂದರೂ ಸ್ವಾಭಿಮಾನದಿಂದಿರಲು ನನ್ನ ತಂದೆ ತಾಯಿಯರು ಕಲಿಸಿದ್ದಾರೆ. ಅದೇನು ಸುಲಭ ಸಾಧ್ಯವಲ್ಲದಿದ್ದರೂ ಅಸಾಧ್ಯವೆನ್ನುವಷ್ಟು ಕಠಿಣವೇನಲ್ಲ ಎಂದು ನನ್ನ ಅಭಿಪ್ರಾಯ. (ಸೌಜನ್ಯ: ತೆಹೆಲ್ಕಾ) □

ಮದ್ರಾಸ್ ಐಐಟಿ: ಮೀಸಲಾತಿಯಲ್ಲಿ ದಲಿತರಿಗೆ ಪಂಗನಾಮ

(೧೫ನೇ ಪುಟದಿಂದ)

ಎಂದು. ನೇಮಕಾತಿ ಸಂಬಂಧ ಜಾಹೀರಾತನ್ನು ವೃತ್ತಪತ್ರಿಕೆಗಳಲ್ಲಿ ಪ್ರಕಟಣೆಗೆ ನೀಡಿಲ್ಲದಿರುವುದು ಗಮನಕ್ಕೆ ಬಂದಿದೆ. ಈ ಬಗ್ಗೆ ಕಾಂಗ್ರೆಸ್‌ನ ಮಾಜಿ ಸಂಸದ ಎರಾ ಅನ್ಬರಸು ಅನೇಕ ಸಲ ಕೇಂದ್ರದ ಮಾನವ ಸಂಪನ್ಮೂಲ ಸಚಿವರಾದ ಅರ್ಜುನ್ ಸಿಂಗ್‌ರ ಗಮನಕ್ಕೆ ತಂದಿರುತ್ತಾರೆ. ಮದ್ರಾಸ್ ಐಐಟಿಯಲ್ಲಿ ಮೀಸಲಾತಿ ನೀತಿ ಅನುಷ್ಠಾನದ ವಿಷಯವಾಗಿ ಒಂದು ಉನ್ನತ ಮಟ್ಟದ ಆಯೋಗವನ್ನು ರಚಿಸಬೇಕೆಂದು ಅನ್ಬರಸು ಪತ್ರ ಬರೆದಿರುತ್ತಾರೆ. ಐಐಟಿ ನಿರ್ದೇಶಕ ಎಂ. ಎಸ್. ಅನಂತ್ ಒಬ್ಬ ದೊಡ್ಡ ಜಾತಿವಾದಿಯಾಗಿದ್ದು, ನೇಮಕಾತಿಯಲ್ಲಿ ಎಲ್ಲ ನಿಯಮಗಳನ್ನು ಮರೆಮಾಚಿ ತನ್ನ ಸಮುದಾಯಕ್ಕೆ ಹೆಚ್ಚಿನ ಪ್ರಾಧಾನ್ಯತೆ ನೀಡಿರುತ್ತಾರೆ ಎಂದು ಅನ್ಬರಸು ಆರೋಪಿಸುತ್ತಾರೆ. ಐಐಟಿಯ ಆರು ಜನ ಡೀನ್‌ಗಳಲ್ಲಿ, ನಾಲ್ವರು ಅಯ್ಯಂಗಾರ್ ಬ್ರಾಹ್ಮಣ ಸಮುದಾಯದವರಾಗಿದ್ದಾರೆ. ಸಚಿವ ಅರ್ಜುನ್ ಸಿಂಗ್‌ರ ಗಮನಕ್ಕೆ ವಿಷಯವನ್ನು ತರಲಾಗಿದೆ. ವಿಷಯದ ಬಗ್ಗೆ ತನಿಖೆ ಕೈಗೊಳ್ಳುವುದಾಗಿ ಭರವಸೆ ಕೊಟ್ಟಿದ್ದರೂ ಇದುವರೆಗೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ.

ಡಾ. ಕರುಪ್ಪನ್ ಹೇಳುವಂತೆ ಐಐಟಿಯ ಮೀಸಲಾತಿ ಅನುಷ್ಠಾನದ ಬಗ್ಗೆ ನ್ಯಾಯಾಲಯದಲ್ಲಿ, ವನ್ನಿಯರ್ ಮಹಾ ಸಂಘಂ ಮತ್ತು ಐಐಟಿ ಹಿಂದುಳಿದ ವರ್ಗಗಳ ನೌಕರರ ಸಂಘದ ಮೊಕದ್ದಮೆ ಸೇರಿದಂತೆ ಅನೇಕ ಕೇಸ್‌ಗಳು ಇನ್ನೂ ವಿಚಾರಣೆಗೇ ಬಂದಿಲ್ಲ. ಕಳೆದ ವರ್ಷ ಕರುಪ್ಪನ್ ಅವರ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಚೆನ್ನೈ ಉಚ್ಚ ನ್ಯಾಯಾಲಯ ತಳ್ಳಿಹಾಕಿದೆ. ಇದರಿಂದ ಧೃತಿಗೆಡದೆ ಡಾ॥ ಕರುಪ್ಪನ್ ಮರುಪರಿಶೀಲನಾ ಅರ್ಜಿಯನ್ನು ಹಾಕಿದ್ದಾರೆ.

ಸಿಪಿಐ ಮುಖಂಡರ ಜತೆಗೂಡಿ, ಡಾ. ಕರುಪ್ಪನ್, ಐಐಟಿ ನಿರ್ದೇಶಕರನ್ನು ಭೇಟಿಯಾಗಿ ಮೀಸಲಾತಿ ಅನುಷ್ಠಾನದ ವಿಷಯವನ್ನು ಚರ್ಚಿಸಿದ್ದರೂ ಇದುವರೆಗೆ ಏನೂ ಪ್ರಯೋಜನವಾಗಿಲ್ಲ. ಈ ವಿಷಯವಾಗಿ ದಲಿತ ಪ್ಯಾಂಥರ್ಸ್‌ನ ಮಹಾಕಾರ್ಯದರ್ಶಿ ತೋಳ್ ತಿರುಮಾವಳವನ್, "ಐಐಟಿಯಲ್ಲಿ ದಲಿತರು ಸಫಾಯಿ ಕರ್ಮಚಾರಿಗಳಷ್ಟೆ" ಎಂದು ರೋಷ ವ್ಯಕ್ತಪಡಿಸುತ್ತಾರೆ. ಸಂಸ್ಥೆಯ ನೇಮಕಾತಿ ಮತ್ತು ಪ್ರವೇಶ ನಿಯಮಗಳ ಬಗ್ಗೆ ಕೂಲಂಕಷ ತನಿಖೆ ನಡೆಸಬೇಕು ಹಾಗೂ ಈ ಕುರಿತು ಶ್ವೇತಪತ್ರ ಹೊರಡಿಸಬೇಕೆಂದು ಇವರು ಕೂಡ ಆಗ್ರಹಿಸುತ್ತಾರೆ. ಆದರೆ ತಮಿಳುನಾಡಿನ ಡಿಎಂಕೆ ಸರ್ಕಾರ ಈ ಕುರಿತು ದಿವ್ಯ ನಿರ್ಲಕ್ಷ್ಯ ತಳೆದಿರುವುದು ಮಾತ್ರ ಆಶ್ಚರ್ಯಕರ. ಮೀಸಲಾತಿ ಅನುಷ್ಠಾನ ಹಾಗೂ ಈ ಕುರಿತು ತಮ್ಮ ಮೇಲಿನ ಆರೋಪದ ಸತ್ಯಾಸತ್ಯತೆಯನ್ನು ಐಐಟಿ ನಿರ್ದೇಶಕರಿಂದ ತಿಳಿದುಕೊಳ್ಳುವ ಪ್ರಯತ್ನ ಇದುವರೆಗೆ ವಿಫಲವಾಗಿದೆ. ಅವರ ಕಾರ್ಯದರ್ಶಿ, ಈ ಕುರಿತು ನಿರ್ದೇಶಕರು ಪ್ರತಿಕ್ರಿಯಿಸಲು ತಯಾರಿಲ್ಲ ಎಂದಿದ್ದಾರೆ. ಕಳೆದ ೧೭ ವರ್ಷಗಳಿಂದಲೂ ಸಹಾಯಕ ಪ್ರಾಧ್ಯಾಪಕ ರಾಗೇ ಉಳಿದಿರುವ ಡಾ. ವಸಂತ ಕಂದಸಾಮಿ.

(ಸೌಜನ್ಯ: ತೆಹೆಲ್ಕಾ) □

ಕಾವ್ಯ

ಪಯಣದ ಕೊನೆಯ ಹಾದಿಯೂ ಇಲ್ಲವಾದಾಗ

ಮಾನವೀಯತೆ ಮಾನವ ಪ್ರೇಮ
ಇವುಗಳ ಕುರಿತು ಏನೆಲ್ಲಾ ಮಾತನಾಡುತ್ತದೆ
ಬುದ್ಧಿ ಜೀವಿಗಳ ಜಗತ್ತು
ಹಾಗೆ, ಹೀಗೆ, ಎಂದು ಆಗಲೆ
ಕಂಭಗಳು ಮಾತು ಹಚ್ಚಿದ್ದವು
ಮಧ್ಯ ನೇತಾಡುವ ನೇಣು ಹಗ್ಗ
ಬಲಿಗಾಗಿ ಕಾದು
ಲಾಗವ ಹಾಕುವಾಗ
ಪಯಣದ ಕೊನೆಯ ಹಾದಿಯೂ ಮುಚ್ಚಿ ಹೋಗಿತ್ತು.

ಆಗಲೇ ಏರಿಸಿದ್ದು ನೇಣುಗಂಭಕ್ಕೆ
ಅಲ್ಲಿಯೂ ಕೊಂಕು ನುಡಿಯಿತ್ತು
'ಪಾಪಿ ಹಾಳು ಮಾಡಿದೆ ಇರಾಕನ್ನು'
ಮೆಲುಧನಿಯಲ್ಲಿ
ಇರಾಕನ್ನು ಬೆಳೆಸಿದ್ದು ನಾನೇ ಎಂದು
ನಿರುಮ್ಮಳವಾಗಿ ಉಸಿರು ಬಿಟ್ಟಾಗ
ವಿಧಿ ಇಲ್ಲದೆ,
ಅವರಿಗೆ ಗೊತ್ತಾಗಲೇ ಇಲ್ಲ
ಕೊನೆಯ ಹೆರಿಗೆ ಸತ್ಯವನ್ನು ಹೆರುತ್ತದೆ ಎಂದು
ಆಗಲೇ ಒಂದು ಅವಕಾಶವೂ ಇಲ್ಲವಾಗಿತ್ತು.

ಯೋನಿಯಲ್ಲಿ ಒಂದಿನಿತೂ ಒದ್ದೆಯಿಲ್ಲದಂತೆ
ಹೀರಿ-ಹೀರಿ ಉಸಿರಾಗಿಕೊಂಡು
ಜೋತು ಎದೆಗಳಲ್ಲೂ ಹಾಲು ಹೀರುತ್ತಾ
ರಕ್ತವಾಗಿಸಿಕೊಳ್ಳುವ ಇವರು
'ಪ್ರಾಣದ ಬೆಲೆ'ಯಲ್ಲಿಯೇ
ರಾಜ್ಯವಾಳುವ ಆಸೆ ಕಟ್ಟಿದರು.

ಇದರ ಯಾವ ಹಂಗಿಗೂ ಶರಣಾಗದೇ
ಕಣ್ಣು ಮುಚ್ಚಿದಾಗ
'ಪ್ರೀತಿಯ ಮಗು' ಎಂದು ತಾಯಿ
ಮುದ್ದಾಡಿ 'ಜೀವ' ಹೀರಿದಳು
ಇನ್ನುಳಿದ ಸದ್ದಾ ಹುಸೇನರನ್ನು (ಸರ್ವಾಧಿಕಾರಿಗಳನ್ನು)
ನೆನೆಸಿಕೊಳ್ಳುತ್ತಾ...



○ ನೇತ್ರಾವತಿ ಕೆ.ವಿ. ಕೋಲಾರ

ಬೌದ್ಧ ಧರ್ಮದಲ್ಲಿ ಮಾತ್ರ ಸಮಾನತೆ

ಕರ್ನಾಟಕದಲ್ಲಿ ಇದೇ ಮೊದಲ ಬಾರಿಗೆ ದಲಿತ ಸಂಘರ್ಷ ಸಮಿತಿ ಬೌದ್ಧ ಧರ್ಮ ಸ್ವೀಕಾರ ಕಾರ್ಯಕ್ರಮವನ್ನು ಕಳೆದ ತಿಂಗಳು ಜೂನ್-೯ರ ಶನಿವಾರ ಬೆಂಗಳೂರಿನ ಡಾ॥ ಅಂಬೇಡ್ಕರ್ ಭವನದಲ್ಲಿ ಸಂಘಟಿಸಿತ್ತು. ಹಿಂದೂಧರ್ಮ ತೊರೆದು 'ಬುದ್ಧನೆಡೆಗೆ ಮರಳಿ ಮನೆಗೆ' ಹೋಗುವ ಧ್ಯೇಯ ವಾಕ್ಯದ ಘೋಷಣೆಯೊಂದಿಗೆ ಮೂರು ಸಾವಿರಕ್ಕೂ ಅಧಿಕ ಜನ ಬೌದ್ಧ ಧರ್ಮ ಸ್ವೀಕರಿಸಿದರು. ಕರ್ನಾ ಟಕದ ಮಟ್ಟಿಗಷ್ಟೇ ಅಲ್ಲದೆ ಇಡೀ ರಾಷ್ಟ್ರದಲ್ಲೇ ಒಂದು ಐತಿಹಾಸಿಕ ಘಟನೆ ಇದು. ಕಾರ್ಯಕ್ರಮದಲ್ಲಿ ಭಾಗ ವಹಿಸಿದ್ದ ಗಣ್ಯರು ಮಾಡಿದ ಭಾಷಣಗಳ ಆಯ್ದ ಭಾಗಗಳನ್ನು ಸಂವಾದ ಓದುಗರಿಗಾಗಿ ಇಲ್ಲಿ ನೀಡುತ್ತಿದ್ದೇವೆ. ಅಂಬೇಡ್ಕರ್‌ರವರು ಅಕ್ಟೋಬರ್ ೧೪, ೧೯೫೬ರಂದು ತಮ್ಮ ಲಕ್ಷಾಂತರ ಅನುಯಾಯಿಗಳೊಂದಿಗೆ ಧಮ್ಮದೀಕ್ಷೆ ಸ್ವೀಕರಿಸಿದ ನಂತರ ಇಡೀ ವಿಶ್ವದಾದ್ಯಂತ ಧಮ್ಮ ತತ್ವಗಳಿಂದ ಆಕರ್ಷಿತರಾದ ಜನ ಬೌದ್ಧ ಧರ್ಮಸ್ವೀಕರಿಸುತ್ತಿದ್ದಾರೆ.

ವಿ. ಶ್ರೀನಿವಾಸ್ ಪ್ರಸಾದ್

ಆತ್ಮೀಯ ಬಂಧುಗಳೇ.

ಈಗಾಗಲೇ ಪ್ರಾಸ್ತಾವಿಕ ಭಾಷಣ ಮಾಡಿದ ಇಂದೂಧರ ಹೊನ್ನಾಪುರ ಅವರು ತುಂಬಾ ಚೆನ್ನಾಗಿ ಅರ್ಥಪೂರ್ಣವಾಗಿ ಒಳ್ಳೆ ವಿಷಯಗಳನ್ನು ತಿಳಿಸಿ ಹೇಳಿದ್ದಾರೆ. ನಾವೆಲ್ಲರೂ ಕೂಡ ಬಹಳ ಮಹತ್ತರವಾದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೇವೆ. "ಬುದ್ಧನೆಡೆಗೆ ಮರಳಿ ಮನೆಗೆ" ಇದು ನಾವು ಮೈಸೂರಿನಲ್ಲಿ ಬಾಬಾ ಸಾಹೇಬರು ಬೌದ್ಧಧರ್ಮವನ್ನು ಸ್ವೀಕಾರ ಮಾಡಿದ ೫೦ನೇ ವರ್ಷದ ನೆನಪಿನಲ್ಲಿ ಬಹಳ ಮಹತ್ವದ ದಿನವನ್ನಾಗಿ ಆಚರಿಸಲು ಯೋಜಿಸಿದ ಕಾರ್ಯಕ್ರಮ. ಬಾಬಾ ಸಾಹೇಬರು ೧೯೫೬ರ ಅಕ್ಟೋಬರ್ ೧೪ನೇ ತಾರೀಖು ಲಕ್ಷಾಂತರ ಜನರ ಜತೆಗೂಡಿ ಬೌದ್ಧಧರ್ಮವನ್ನು ಸ್ವೀಕರಿಸಿದ ದಿನ. ಅವರು ನಮ್ಮ ಆಧ್ಯಾತ್ಮಿಕ ನಾಯಕರು. ಬದುಕಿದ್ದು ಕೇವಲ ೬೫ ವರ್ಷ ಮಾತ್ರ, ಅಸ್ಪೃಶ್ಯತೆಯ ಕಳಂಕವನ್ನು ತೊಡೆದುಹಾಕಲು ಶ್ರಮಿಸಿದವರು.

ಒಂದು ವೈಜ್ಞಾನಿಕವಾದ ಯುಗದಲ್ಲಿ, ಸ್ಪರ್ಧಾತ್ಮಕವಾದ ಯುಗದಲ್ಲಿ ಮನುಷ್ಯನೇ ತನ್ನ ಸಂಶೋಧನೆಗಳಿಂದ ಆಶ್ಚರ್ಯ ಪಡುತ್ತಿದ್ದಾನೆ. ತನ್ನ ಬುದ್ಧಿಶಕ್ತಿಯ ಬಗ್ಗೆ! ನಾಗರಿಕತೆ ನಾಗಾಲೋಟದಲ್ಲಿ ಓಡುತ್ತಿರುವ ಇಂತಹ ಸಂದರ್ಭದಲ್ಲಿಯೂ ಕೂಡ ಭಾರತ ದೇಶದಲ್ಲಿ ಜಾತೀಯತೆ ಮೇಲು-ಕೀಳುಗಳನ್ನೆನುವ ಭಾವನೆಗಳು ಯಾವ ರೀತಿಯಲ್ಲಿ ಮನುಷ್ಯನನ್ನು ದೈಹಿಕವಾಗಿ ಮಾನಸಿಕವಾಗಿ ಕೊಲ್ಲುತ್ತಿವೆ ಎಂಬುದನ್ನು ಕುರಿತು, ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಹೋರಾಟದ ಫಲವಾಗಿ ನಾವು ಚಿಂತಿಸುವ ಮಟ್ಟಿಗೆ ಬುದ್ಧಿವಂತರಾಗಿದ್ದೇವೆ. ಆದರೆ ಬಾಬಾ ಸಾಹೇಬರು ಜನಿಸಿದ್ದ ಅಂದಿನ ಕಾಲದಲ್ಲೂ ದಲಿತರ ಸ್ಥಿತಿಗತಿಗಳು ಹೇಗಿದ್ದವು? ಮಾನವೀಯತೆ ಲವಲೇಶವೂ ಇಲ್ಲದ ಕಾಲದಲ್ಲಿ ಹುಟ್ಟಿದವರು ಡಾ॥ ಅಂಬೇಡ್ಕರ್. ಅವರ ಮೇಲೆ ದೈಹಿಕವಾಗಿ ಮಾನಸಿಕವಾಗಿ ಆದಂತಹ ದೌರ್ಜನ್ಯ ದಬ್ಬಾಳಿಗಳು ಬಹುಶಃ ಇಲ್ಲಿ ಯಾರ ಮೇಲೂ ಆಗಿರಲಾರವು. ಇವೆಲ್ಲವನ್ನು ಸಹಿಸಿಕೊಂಡ ಅವರು ಜಗತ್ತಿನಲ್ಲಿಯೇ ಅತ್ಯಂತ ದೊಡ್ಡ ವಿದ್ವಾಂಸರಾದರು; ಸಾಮಾಜಿಕವಾಗಿ ಚಿಂತನೆ ಮಾಡುತ್ತಾ ದೊಡ್ಡ ಸಮಾಜ ಸುಧಾರಕರಾದರು. ಅಸ್ಪೃಶ್ಯತೆಯ ಕಗ್ಗತ್ತಲಿನಲ್ಲಿದ್ದ ನಮಗೆಲ್ಲಾ ಹೋರಾಟದ ಬೆಳಕಿನ ಮೂಲಕ ದಾರಿ ತೋರಿಸಿದವರು ಡಾ॥ ಅಂಬೇಡ್ಕರ್.

ಅಪಾರ ಪಾಂಡಿತ್ಯ, ಬುದ್ಧಿವಂತಿಕೆ ಸಂಪಾದಿಸಿ ನಮ್ಮ ದೇಶದ ಸಂವಿಧಾನವನ್ನು ರಚಿಸಿಕೊಡುವಷ್ಟು ಪ್ರಬುದ್ಧತೆಯನ್ನು ಡಾ॥ ಅಂಬೇಡ್ಕರ್ ಹೊಂದಿದ್ದರೂ ಕೂಡ ಅವರು ತಮ್ಮ ಜೀವನದಲ್ಲಿ ಒಳ್ಳೆಯದನ್ನು ಅನುಭವಿಸಲಿಕ್ಕಾಗಲಿಲ್ಲ. ಜೀವನದ ಕೊನೆಯವರೆಗೂ ಹೋರಾಟ ಮಾಡುತ್ತಾ, ಬರೀ ನೋವನ್ನೇ ಉಂಡು ನಮ್ಮೆಲ್ಲರ ಪಾಲಿಗೆ ಒಳ್ಳೆಯದನ್ನೇ ಬಯಸಿದವರು. ಹಾಗಾಗಿ ಅವರನ್ನು ನಾವು ನಮ್ಮ ಆಧ್ಯಾತ್ಮಿಕ ನಾಯಕರನ್ನಾಗಿ ಒಪ್ಪಿಕೊಂಡಿದ್ದೇವೆ. ಇವೊತ್ತು ನಾವು ಅವರು ನೀಡಿದ ಕಟ್ಟಕಡೆಯ ಸಂದೇಶಗಳ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ. ಈ ಹಿನ್ನೆಲೆಯಲ್ಲಿ ನಾವೊಂ

ವಷ್ಟು ಜನ ಮೈಸೂರಿನಲ್ಲಿ ಡಾ॥ ಅಂಬೇಡ್ಕರ್ ಸಂಶೋಧನಾ ಕೇಂದ್ರದಲ್ಲಿ, ವಿಶೇಷವಾಗಿ ದಲಿತ ಬುದ್ಧಿಜೀವಿಗಳು, ಲೇಖಕರು, ರಾಜಕಾರಣಿಗಳು ಚಿಂತಕರು, ಕಲಾವಿದರು, ಹೋರಾಟಗಾರರ ಜೊತೆಗೂಡಿ ಯಾವ ರೀತಿ ಇದನ್ನೊಂದು ಅರ್ಥಪೂರ್ಣ ಕಾರ್ಯಕ್ರಮವಾಗಿ ರೂಪಿಸಬೇಕೆಂದು ಯೋಚಿಸಿದಾಗ ಹೊರ ಬಂದದ್ದೇ "ಬುದ್ಧನೆಡೆಗೆ ಮರಳಿ ಮನೆಗೆ" ಎಂಬುದು, ದೇವನೂರ ಮಹಾದೇವರ, ಅವರ ಗೆಳೆಯರು ಹಾಗೂ ನಾವೆಲ್ಲರೂ ಸೇರಿ ಇಂತಹ ಒಂದು ಘೋಷಣೆಯನ್ನು ಹುಟ್ಟು ಹಾಕಿದೆವು.

ಅಕ್ಟೋಬರ್ ೧೪, ೧೯೫೬ ರಂದು ಡಾ॥ ಅಂಬೇಡ್ಕರ್ ಅವರು ನೀಡಿದ ತಮ್ಮ ಕೊನೆಯ ಸಂದೇಶವಾದರೂ ಏನು? ಧಮ್ಮಾಂತರದ ನಂತರ ಅವರು ಬದುಕಿದ್ದು ಕೇವಲ ೮೨ ದಿನ ಮಾತ್ರ. ಧಮ್ಮ ದೀಕ್ಷೆಯ ಬಳಿಕ ಅವರ ಕೊನೆಯ ಸಂದೇಶ. "ನಾವು ನಮ್ಮ ಸಮಾಜದಲ್ಲಿ ಕೇವಲ ಆರ್ಥಿಕ ಶೈಕ್ಷಣಿಕ ರಾಜಕೀಯ ಸಮಾನತೆಯಷ್ಟೇ ಅಲ್ಲದೆ ಅದರ ಜತೆಗೆ ನಾವು ಗೌರವಯುತವಾದಂಥ ಸಮಾಜವಾಗಿ, ಜನಾಂಗವಾಗಿ ಬದುಕಬೇಕಾದರೆ ನಮಗೆ ಧಾರ್ಮಿಕ ವಿಮೋಚನೆ ಬಹಳ ಮುಖ್ಯ" ಎಂಬುದಾಗಿತ್ತು. ಆ ಸಂದೇಶವನ್ನು ಅನುಸರಿಸಿ ಈ ಐವತ್ತು ವರ್ಷಗಳಲ್ಲಿ ನಾವು ಹೇಗೆ ಬಂದಿದ್ದೇವೆ?

ಈ ಬಗ್ಗೆ ನಾವು ವಿದ್ಯಾವಂತರೂ ಬುದ್ಧಿವಂತರೂ ಆಗಿರುವ ನಾವು ಆತ್ಮಾವಲೋಕನ ಮಾಡಿಕೊಳ್ಳಬಾರದೇನು? ಈ ದಾರಿಯಲ್ಲಿ ನಾವು ನಡೆದು ಬಂದಿರುವುದಾದರೂ ಹೇಗೆ? ಅಡ್ಡಿ ಅಡಚಣೆಗಳಾದರೂ ಎಂಥವು ಎಂಬುದರ ಬಗ್ಗೆ ನಾವು ಹಿಂದೆ ತಿರುಗಿ ನೋಡಿ ಯೋಚಿಸೋಣ ಅಂಬೇಡ್ಕರ್ ಅವರ ಕನಸು ನನಸು ಮಾಡುವ ದಿಕ್ಕಿನಲ್ಲಿ ನಾವು ಮೈಸೂರಿನಲ್ಲಿ ಸುಮಾರು ಹತ್ತು ಸಾವಿರ ಜನ "ಬುದ್ಧನೆಡೆಗೆ ಮರಳಿಮನೆಗೆ" ಎನ್ನುವ ಹೆಸರಿನಲ್ಲಿ ಒಂದೆಡೆ ಸೇರಿ ಆತ್ಮಾವಲೋಕನ ಮಾಡಿ ಇಂತಹದ್ದೊಂದು ಕಾರ್ಯಕ್ರಮವನ್ನು ರೂಪಿಸಲು ತೊಡಗಿದೆವು. "ಬುದ್ಧನೆಡೆಗೆ ಮರಳಿ ಮನೆಗೆ" ಎಂಬುದನ್ನು ಒಂದು ಸಾಂಸ್ಕೃತಿಕ ಕಾರ್ಯಕ್ರಮವನ್ನಾಗಿಸುವ ಒಂದು ಸಾಂಸ್ಕೃತಿಕ ಆಂದೋಲನವನ್ನಾಗಿಸುವ ದಿಕ್ಕಿನಲ್ಲಿ ನಾವು ಯೋಚಿಸಿದ ಬಳಿಕ ಹಿಂದೂ ಧರ್ಮದ ಅಸಮಾನತೆಯಲ್ಲಿ ತೊಳಲುತ್ತಿರುವ ದಲಿತರಿಗಾಗಿ ರೂಪಿಸಿ ಕೊಟ್ಟ ಕಾರ್ಯಕ್ರಮದ ಹಿನ್ನೆಲೆಯಲ್ಲಿ ದಲಿತ ಸಂಘರ್ಷ ಸಮಿತಿ ಇಂದು ಬಹಳ ವ್ಯವಸ್ಥಿತವಾಗಿ 'ಧಮ್ಮ ದೀಕ್ಷಾ ಸಮಾವೇಶ'ವನ್ನು ಆಯೋಜಿಸಿದೆ.

ತಾವೆಲ್ಲರೂ ಇವೊತ್ತು ಧಮ್ಮ ದೀಕ್ಷಾ ಸ್ವೀಕಾರ ಮಾಡಿದ್ದೀರಿ. ಅಂಬೇಡ್ಕರ್ ಅವರು ನೀಡಿರುವ ಕೊನೆಯ ಸಂದೇಶದ ದಿಕ್ಕಿನಲ್ಲಿ ನಾವು ಸಾಗಬೇಕು ಸಮಾನತೆಯೇ ನಮ್ಮ ಪಾಲಿಗಿಲ್ಲದಿರುವ ಧರ್ಮದಿಂದ ವಿಮೋಚನೆಗೊಳ್ಳಬೇಕು.

ಎಂಟುನೂರು ವರ್ಷಗಳ ಹಿಂದೆ ವೃತ್ತಿಗಳ ಮೇಲೆ ಜಾತಿ.ಗ ಮೇಲೆ ಇದ್ದ ತಾರತಮ್ಯವನ್ನು ತೆಗೆದು ಹಾಕಿ "ಕಾಯಕವೇ ಕೈಲಾಸ" ಎಂದು dignity of lobaur ಎಂಬ ದೊಡ್ಡ ಸಾಮಾಜಿಕ ಕ್ರಾಂತಿಯನ್ನು ಬಸವಣ್ಣನವರು ಮಾಡಿ ತೋರಿಸಿದರು. ಈ ಜಾತಿ ವ್ಯವಸ್ಥೆಯನ್ನು ನಾಶ ಮಾಡಬೇಕೆಂದು ತಮ್ಮ ವಚನಗಳ ಮೂಲಕ ಮಾಡಿದ ಕ್ರಾಂತಿಯ ಫಲವಾದ ವೀರಶೈವ ಚಳವಳಿ ಇಂದು ಜಾತಿ ವ್ಯವಸ್ಥೆಯಾಗಿ ಪರಿವರ್ತನೆ ಹೊಂದಿದೆ. ಹಿಂದುಧರ್ಮದ ನೂರಾರು ಜಾತಿಗಳ ಪೈಕಿ ತನ್ನನ್ನೂ ಒಂದು ಜಾತಿ

ಎಲ್ಲರನ್ನೂ ಪ್ರೀತಿಸುವ, ಗೌರವಿಸುವ, ಮಾನವೀಯ ನೆಲೆಗಟ್ಟಿನ ಮೇಲೆ ವಿಶಾಲವಾದ ಹೃದಯ ಶ್ರೀಮಂತಿಕೆಯ ಮಾರ್ಗದಲ್ಲಿ ಆಲೋಚಿಸುವ ಪಥವೇ ಧರ್ಮ. ಹಿಂದೂ ಧರ್ಮದಲ್ಲಿ ಇಂತಹ ಪರಿಕಲ್ಪನೆಯನ್ನು ಕಾಣಲು ಸಾಧ್ಯವಿಲ್ಲ. ಎಷ್ಟು ಸಹಸ್ರಾರು ವರ್ಷಗಳಿಂದ ನಮ್ಮ ರಕ್ತದಲ್ಲಿ ಧಾರ್ಮಿಕ ವಿಷ ಇಂಜೆಕ್ಟ್ ಆಗಿ ಬರುತ್ತಿದೆಯೆಂಬುದನ್ನು ಬಹಳ ಹಿಂದಿನಿಂದಲೂ ಗುರುತಿಸಬಹುದು "ಹಿಂದೂ ನಾವೆಲ್ಲರೂ ಒಂದು" ಎನ್ನುತ್ತಾರೆ ಈಗ.

ಎಂದು ಗುರುತಿಸಿಕೊಂಡು ಜಾತಿ ಪದ್ಧತಿಯಲ್ಲಿ ವಿಲೀನಗೊಂಡಿರುವ ವೀರಶೈವ ಧರ್ಮ ಇಂದು ಪ್ರತ್ಯೇಕ ಧರ್ಮವಾಗಿ ಉಳಿದಿರುವುದಿಲ್ಲ.

ಯಾರಾದರೂ ಒಬ್ಬ ಲಿಂಗಾಯತ ಅಥವಾ ವೀರಶೈವ ಧರ್ಮೀಯ ಧರ್ಮದ ಕಾಲಮ್‌ನಲ್ಲಿ 'ವೀರಶೈವ ಧರ್ಮ' ಎಂದು ಬರೆಯುತ್ತಾನೇನು? ಬದಲಾಗಿ, ಜಾತಿಯ ಕಾಲಂನಲ್ಲಿ 'ಲಿಂಗಾಯತ' ಎಂದು ಬರೆದು ಧರ್ಮವನ್ನು ಜಾತಿಗೆ ಕುಗ್ಗಿಸುವ ವಿದ್ಯಮಾನ ಇಲ್ಲಿದೆ. ಹಾಗಾಗಿಯೇ ಹಿಂದೂ ಧರ್ಮವೆಂದರೆ ಡಾ॥ ಅಂಬೇಡ್ಕರ್ ಹೇಳಿರುವಂತೆ "A Collection of Castes" ಆದರೆ "Dharma is a way of life" ಎಲ್ಲರನ್ನೂ ಪ್ರೀತಿಸುವ, ಗೌರವಿಸುವ, ಮಾನವೀಯ ನೆಲೆಗಟ್ಟಿನ ಮೇಲೆ ವಿಶಾಲವಾದ ಹೃದಯ ಶ್ರೀಮಂತಿಕೆಯ ಮಾರ್ಗದಲ್ಲಿ ಆಲೋಚಿಸುವ ಪಥವೇ ಧರ್ಮ. ಹಿಂದೂ ಧರ್ಮದಲ್ಲಿ ಇಂತಹ ಪರಿಕಲ್ಪನೆಯನ್ನು ಕಾಣಲು ಸಾಧ್ಯವಿಲ್ಲ. ಎಷ್ಟು ಸಹಸ್ರಾರು ವರ್ಷಗಳಿಂದ ನಮ್ಮ ರಕ್ತದಲ್ಲಿ ಧಾರ್ಮಿಕ ವಿಷ ಇಂಜೆಕ್ಟ್ ಆಗಿ ಬರುತ್ತಿದೆಯೆಂಬುದನ್ನು ಬಹಳ ಹಿಂದಿನಿಂದಲೂ ಗುರುತಿಸಬಹುದು "ಹಿಂದೂ ನಾವೆಲ್ಲರೂ ಒಂದು" ಎನ್ನುತ್ತಾರೆ ಈಗ. ಅದ್ವೈತ ವಿಶಿಷ್ಟಾದ್ವೈತ ಸಿದ್ಧಾಂತ ಎಂದೆಲ್ಲಾ ಪ್ರತಿಪಾದಿಸಿ ಹೇಳುತ್ತಲೇ ಬಂದಿರುವ ಮೇಲ್ಜಾತಿಗಳು ಇಂದು "ಹಿಂದೂ ನಾವೆಲ್ಲ ಒಂದು" ಎನ್ನುತ್ತಾರೆ.

ಪೇಜಾವರ ಮಠದ ಶ್ರೀಗಳ ಜಾತಿಗಳವರೂ ಸಹ ಎಂದೂ ತಮ್ಮನ್ನು 'ಹಿಂದು' ಎಂದು ಹೇಳಿಕೊಂಡು ಪರಿಚಯಿಸಿಕೊಳ್ಳುವುದಿಲ್ಲ. ಬದಲಾಗಿ ಅವರು ಥಟ್ಟನೆ ಹೇಳುವುದು ತಮ್ಮ ಜಾತಿಯನ್ನು! ತಾನು ಮಾಧ್ವನೋ, ಸ್ಮಾರ್ತನೋ ವೀರಶೈವನೋ ಅಥವಾ ಇನ್ನೊಂದು ಬೇರೆ ಜಾತಿಯನೋ ಹೇಳಿಕೊಳ್ಳುತ್ತಾನೆ. ಯಾಕೆಂದರೆ ಇಲ್ಲಿ ನಮಗೊಂದು ಸರಿಯಾದ ಧರ್ಮದ ಕಲ್ಪನೆಯೇ ಇಲ್ಲ. ಮೊಟ್ಟ ಮೊದಲಿಗೆ ಹೇಳುವುದು ಜಾತಿ ಯನ್ನೇ ಹೊರತು ಧರ್ಮವನ್ನಲ್ಲ. ಹಾಗಾಗಿ ಇಲ್ಲಿ ಜಾತೀ ಯತೆ ಎಷ್ಟೊಂದು ಆಳವಾಗಿ ಬೇರೂರಿದೆ ಎಂದರೆ ಹಿಂದೂ ಧರ್ಮದಲ್ಲಿರುವ ಈ ಜಾತಿಪದ್ಧತಿಯ ಕೆಟ್ಟ ವ್ಯವಸ್ಥೆಯಲ್ಲಿ ಮೇಲ್ಜಾತಿಯವನು ಕೆಳಜಾತಿಯವನನ್ನು ತನಗೆ ಸರಿಸಮಾನ ದವನೆಂದು ಎಂದೂ ಕೂಡ ಮಾನಸಿಕವಾಗಿ ಒಪ್ಪಲು ತಯಾರಾಗಲಾರನು. ನಾವೂ ಕೂಡ ಪ್ರಾಯಶಃ ನಮಗಿಂತ ಕೆಳಜಾತಿಯವನನ್ನು ನಮಗೆ ಸರಿಸಮನಾದವನೆಂದು ಮಾಸಿಕವಾಗಿ ಒಪ್ಪಲು ತಯಾರಾಗಿರುವುದಿಲ್ಲ ಅನ್ನಿಸುತ್ತದೆ.

ಅಂತಹ ಕೆಟ್ಟ ಆಲೋಚನೆಗಳು ನಮ್ಮ ಮನಸ್ಸಿಗೆ ಬರುವಂತೆ ಈ ಹಿಂದೂ ಧರ್ಮದ ಜಾತಿ ವ್ಯವಸ್ಥೆ ನಮ್ಮ ಮೇಲೆ ಪ್ರಭಾವ ಬೀರುವುದನ್ನು ನಾವು ಕಾಣುತ್ತಿದೇವೆ. ಹಾಗಾಗಿ ಇಂತಹ ಅಸಮಾನತೆಯ ಧರ್ಮದಿಂದ ನಾವು ಹೊರಗೆ ಬರಬೇಕು.

ಡಾ॥ ಅಂಬೇಡ್ಕರ್ ಬೌದ್ಧಧರ್ಮ ಸ್ವೀಕರಿಸಿದರು. ಚರ್ಚಿಸುತ್ತಾರೆ. "ನಾನು ಹಿಂದೂಧರ್ಮವನ್ನು ಬಿಟ್ಟ ಬಳಿಕ ಯಾವ ಧರ್ಮವನ್ನು ಸ್ವೀಕರಿಸಬೇಕು?" ಎಂಬ ಪ್ರಶ್ನೆ ಕುರಿತು ಜಿಜ್ಞಾಸೆ ಮಾಡಿದರು. ಇಂದೂಧರ ಹೊನ್ನಾಪುರ ಅವರು 'ಮನುಷ್ಯನಿಗೆ ಅಗತ್ಯವಾದ ಸೌಲಭ್ಯಗಳು ಬೇಕು. ಅವನು ಸೌಲಭ್ಯಗಳಿಂದ ತೃಪ್ತಿ ಹೊಂದಬೇಕು" ಎಂದು ಹೇಳಿದ ಕಾರ್ಲ್‌ಮಾರ್ಕ್ಸ್‌ನ ಮಾತುಗಳನ್ನು ಬಹಳ ಚೆನ್ನಾಗಿ ಉಲ್ಲೇಖಿಸಿ ಮಾತನಾಡಿದರು. ಆದರೆ ಅಂಬೇಡ್ಕರ್ ಮಾರ್ಕ್ಸ್‌ನಿಗಿಂತಲೂ ವಿಶಿಷ್ಟವಾಗಿ ಯೋಚಿಸಿರುತ್ತಾರೆ. "Man is not an animal therefore he needs religion" ಎಂಬುದು ಅಂಬೇಡ್ಕರ್‌ರಿಗಿದ್ದ ಸ್ಪಷ್ಟ ತಿಳಿವಳಿಕೆ. ಹಾಗಾಗಿ ಅಂಬೇಡ್ಕರ್ ಬೌದ್ಧಧರ್ಮವನ್ನು ಸ್ವೀಕರಿಸುವ ದಿಕ್ಕಿನಲ್ಲಿ ೧೯೩೫ ರಲ್ಲಿಯೇ ಚಿಂತಿಸುತ್ತಾರೆ.

ಬಸವಣ್ಣನವರು ಜನಿಸಿದ ಬಸವನ ಬಾಗೇವಾಡಿ ತಾಲ್ಲೂಕಿನ ಕಡಕೋಳ ಗ್ರಾಮದಲ್ಲಿ ದಲಿತರಿಗೆ ಕೆರೆ ನೀರು ತೆಗೆದುಕೊಳ್ಳುವ ಸ್ವಾತಂತ್ರ್ಯವೇ ಇಲ್ಲ. Equality ಅಂತಾ ಮಾತಾಡ್ತೀವಿ. ಪ್ರಜಾಪ್ರಭುತ್ವದ ಈ ವ್ಯವಸ್ಥೆಯಲ್ಲಿ ಸವರ್ಣೀಯ ಹಿಂದೂಗಳಿಗೆ ಭ್ರಾತೃತ್ವದ ಪರಿಕಲ್ಪನೆಯಾಗಲೀ, ಮಾನವೀಯವಾದ ಸಾಮಾಜಿಕ ವಾತಾವರಣದಲ್ಲಿ ನಾವೆಲ್ಲ ಒಟ್ಟಾಗಿ ಬದುಕಬೇಕಾದವರು ಎಂಬ ಆಲೋಚನೆಯೇ ಇದ್ದಂತಿಲ್ಲ. ಪರಿಸ್ಥಿತಿ ಹೀಗಿರುವಾಗ 'ಸಮಾನತೆ ಎಂದರೇನು?" ಎಂದು ಕೇಳಿಕೊಳ್ಳಬೇಕಾಗಿದೆ. ಅಂಬೇಡ್ಕರ್ ದೃಷ್ಟಿಯಲ್ಲಿ ಸಮಾನತೆ ಬೌದ್ಧಧರ್ಮದಲ್ಲಿ ಮಾತ್ರ ಸಿಕ್ಕಲಿಕ್ಕೆ ಸಾಧ್ಯ.

ಬೌದ್ಧಧರ್ಮ ಹುಟ್ಟಿದ್ದು ಭಾರತ ದೇಶದಲ್ಲಿ. ಬೌದ್ಧ ಧರ್ಮವನ್ನು ಸ್ಥಾಪಿಸಿದ ಬುದ್ಧ ಹುಟ್ಟಿದ್ದು ಭಾರತ ದೇಶದಲ್ಲಿ. ಆದರೆ ವೈದಿಕ ಚಿಂತಕರು, ಅಂದರೆ ಯಾರು ಜಾತಿಯ ಹೆಸರಿನಲ್ಲಿ ಯಥಾಸ್ಥಿತಿಯನ್ನು ಮುಂದುವರೆಸಬೇಕೆಂದು ಚಿಂತಸುತ್ತಾರೋ ಯಾರ್‍ಯಾರು ಯಾವ್ಯಾವ ವೃತ್ತಿಯಲ್ಲಿದ್ದಾರೋ ಅವರು ಅದೇ ವೃತ್ತಿಗಳಲ್ಲಿ ಅಲ್ಲಿಯೇ ಮುಂದುವರೆಯಬೇಕೆಂದು ಯಾರು ಚಿಂತಿಸುತ್ತಿದ್ದಾರೋ ಅಂತಹ ವೈದಿಕ ಚಿಂತಕರು ಪ್ರಗತಿ ವಿರೋಧಿಗಳಾಗಿದ್ದು ಅಂದಿನ ಕಾಲದಲ್ಲಿಯೇ ಬೌದ್ಧ ಬಿಕ್ಕುಗಳನ್ನು ಸಂಹಾರ

(೨೩ನೇ ಪುಟಕ್ಕೆ)

ಧರ್ಮವಿಲ್ಲದ ದಲಿತರಿಗೆ ಬೌದ್ಧ ಧರ್ಮವೇ ಆಸರೆ

ಇಂದೂಧರ ಹೊನ್ನಾಪುರ

'ನಾವು ಯಾವುದೇ ರೀತಿಯ ದ್ವೇಷದಿಂದ ಈ ಕಾರ್ಯಕ್ರಮ ಮಾಡುತ್ತಾ ಇಲ್ಲ. ಇಡೀ ದೇಶದ ದಲಿತರಿಗೆ ಧರ್ಮವೆಂಬುದಿಲ್ಲ. ನಮ್ಮನ್ನು ನಮ್ಮ ಧರ್ಮದಿಂದ ದೂರ ಇಡಲಾಗಿದೆ. ಬಲವಂತವಾಗಿ ನಮ್ಮನ್ನು ಬಂಧಿಗಳನ್ನಾಗಿ ಬೇರೆ ಧರ್ಮದಲ್ಲಿ ಇರಿಸಿಕೊಳ್ಳಲಾಗಿದೆ. ಅದಕ್ಕಾಗಿ ಮರಳಿ ನಮ್ಮ ಮಾತೃ ಧರ್ಮಕ್ಕೆ ನಾವು ಹೋಗುತ್ತಿದ್ದೇವೆ. ಹಾಗಾಗಿಯೇ ಈ 'ಧಮ್ಮಸ್ವೀಕಾರ' ಮಾಡುತ್ತಿದ್ದೇವೆ. ಶಾಂತಿ ನೆಮ್ಮದಿ ಸ್ವಾಭಿಮಾನ ಪ್ರೀತಿ ವಿಶ್ವಾಸದಿಂದ ನಾವೆಲ್ಲರೂ ಬದುಕಬಹುದಾದ ಒಂದು ಗೌರವಯುತವಾದ ಸಮಾಜವನ್ನು, ಸಮೃದ್ಧ ಭಾರತವನ್ನು, ಬುದ್ಧ ಭಾರತವನ್ನು ಕಟ್ಟುವ ಮಹದಾಸೆ ನಮಗಿದೆ. ಅದಕ್ಕಾಗಿ ಈ ಕೆಲಸವನ್ನು ಮಾಡುತ್ತಿದ್ದೇವೆಯೇ ಹೊರತು ಬೇರೆ ಯಾವುದೇ ರೀತಿಯಿಂದ ಯಾರ ವಿರುದ್ಧವೂ ಈ ಕೆಲಸ ಮಾಡುತ್ತಿಲ್ಲ'

"ನಮೋ ತಸ್ಸ ಭಗವತೋ ಅರಹತೋ ಸಮ್ಮಾ ಸಂಬುದ್ಧಸ್ಸ.

ಇವೊತ್ತಿನ ದಲಿತ ಚಳವಳಿಯ ಮೊಟ್ಟಮೊದಲ ಐತಿಹಾಸಿಕ ಧಮ್ಮದೀಕ್ಷಾ ಕಾರ್ಯಕ್ರಮಕ್ಕೆ ಬಂದು ಧಮ್ಮ ದೀಕ್ಷೆ ನೀಡಲು ವೇದಿಕೆ ಮೇಲೆ ಕುಳಿತಿರುವ ಪೂಜ್ಯಭಂತೆ ವೀರ್ಯಶೀಲರವರು, ಪೂಜ್ಯಭಂತೆ ಮನೋರಖ್ಖಿತರವರು, ಪೂಜ್ಯಭಂತೆ ಸಂಘಾನಂದವರು, ಪೂಜ್ಯಭಂತೆ ಬೋಧಿದತ್ತರವರು ಮತ್ತು ಪೂಜ್ಯ ಭಂತೆ ಪರಮಾನಂದರವರಿಗೆ ವಂದಿಸಿ ನಾನು ನನ್ನ ಮಾತಗಳನ್ನು ಆರಂಭ ಮಾಡುತ್ತಿದ್ದೇನೆ. ವೇದಿಕೆ ಮೇಲಿರುವ ಹಿರಿಯ ಸಾಹಿತಿ, ಸರ್ವೋದಯ ಕರ್ನಾಟಕ ಪಕ್ಷದ ಅಧ್ಯಕ್ಷರೂ, ದಲಿತ ಸಂಘರ್ಷ ಸಮಿತಿಯ ನೇತಾರರೂ ಆದ ದೇವನೂರ ಮಹಾದೇವ ಅವರೇ, ಕೇಂದ್ರ ಸರ್ಕಾರದಲ್ಲಿ ಹಲವಾರು ವರ್ಷಗಳ ಕಾಲ ಮಂತ್ರಿಯಾಗಿ ಕರ್ನಾಟಕದ ಪ್ರಜ್ಞಾವಂತ ರಾಜಕಾರಣಿಗಳಾದ, ಹಿರಿಯರಾದ ವಿ. ಶ್ರೀನಿವಾಸ ಪ್ರಸಾದ್‌ರವರೇ, ಗೆಳೆಯರಾದ, ಶಾಸಕರಾದ ಮತ್ತು ಕವಿಗಳಾದ ಡಾ॥ ಎಲ್. ಹನುಮಂತಯ್ಯನವರೇ, ದಲಿತ ಸಾಕ್ಷಿ ಪ್ರಜ್ಞೆಯ ಪ್ರತೀಕವಾಗಿರುವ ದಕ್ಷ ಪ್ರಾಮಾಣಿಕ ಪೋಲೀಸ್ ಅಧಿಕಾರಿಯಾಗಿದ್ದಂತಹ ಹಾಗೂ ಬುದ್ಧಧರ್ಮದ ಎಲ್ಲಾ ರೀತಿಯ ಏಳಿಗೆಗಾಗಿ ಶ್ರಮಿಸುತ್ತಿರುವ ಎಸ್. ಮರಿಸ್ವಾಮಿಯವರೇ, ಮತ್ತು ವೇದಿಕೆ ಮೇಲಿರುವ ದಲಿತ ಸಂಘರ್ಷ ಸಮಿತಿಯ ಸಂಚಾಲಕರಾದ ಎನ್. ವೆಂಕಟೇಶ್‌ರವರೇ, ಗುರುಪ್ರಸಾದ್ ಕೆರಗೋಡು ಅವರೇ, ಮರಿಯಪ್ಪ ಹಳ್ಳಿಯವರೇ ಗೊಲ್ಲಹಳ್ಳಿ ಶಿವಪ್ರಸಾದ್ ಅವರೇ ಹೆಬ್ಬಾಲೆ ಲಿಂಗರಾಜು ಅವರೇ ಮತ್ತು ಇವೊತ್ತು ಇಲ್ಲಿ ಧಮ್ಮ ಸ್ವೀಕಾರ ಮಾಡಲು ಬಂದಿರುವ ನನ್ನ ಬಂಧುಗಳೇ...

ಈ ಕಾರ್ಯಕ್ರಮದ ಅನಿವಾರ್ಯತೆಯ ಬಗ್ಗೆ ಈಗಾಗಲೇ ನಾವು ಇಡೀ ರಾಜ್ಯದಲ್ಲಿ ಸಂಚಾರ ಮಾಡುತ್ತಾ ಮಾತನಾಡಿದ್ದೇವೆ; ಚರ್ಚೆಗಳನ್ನು ಮಾಡಿದ್ದೇವೆ. ವಿಚಾರ ಸಂಕಿರಣಗಳನ್ನು ನಡೆಸಿದ್ದೇವೆ. ಯಾಕೆ ಈ ಕಾರ್ಯಕ್ರಮ ಅನಿವಾರ್ಯವಾಯಿತು? ದಲಿತರು ಬೌದ್ಧ ಧರ್ಮಕ್ಕೆ ಹೋಗುವಂತಹ ಅನಿವಾರ್ಯ ಪರಿಸ್ಥಿತಿ ಯಾಕೆ ನಿರ್ಮಾಣ ಆಗಿದೆ ಅನ್ನೋದಕ್ಕೆ ಈ ಕಾರ್ಯಕ್ರಮವನ್ನು ನಾವು ಯಾಕೆ ಮಾಡುತ್ತಿದ್ದೇವೆನ್ನುವುದರ ಬಗ್ಗೆ ಮಾತನಾಡಲು ಇಷ್ಟ ಪಡುತ್ತಿದ್ದೇವೆ.

ವಿಶೇಷವಾಗಿ ನಾವೆಲ್ಲ ಹಿಂದೂಗಳು ಅಂತ ಅಂದುಕೊಂಡಿದ್ದೇವೆ. ಆದರೆ ಹಿಂದೂಗಳಿಗಿರುವ ಸಮಾನತೆ, ಸ್ವಾತಂತ್ರ್ಯ ದಲಿತರಿಗೆ ಈ ಸಮಾಜದಲ್ಲಿ ಇಲ್ಲ. ಅಸಮಾನತೆಯೇ ಮೂಲಬೇರಾಗಿರುವ ಈ ಭಾರತೀಯ ಸಮಾಜದಲ್ಲಿ ದಲಿತರು ಅತ್ಯಂತ ಹೀನಾಯವಾದ ಬದುಕು ನಡೆಸುತ್ತಿದ್ದಾರೆ. ಪಶುಸಮಾನವಾದ ಬದುಕನ್ನು ದೂಡುವಂತಹ ಪರಿಸ್ಥಿತಿ ಇಲ್ಲಿ ನಿರ್ಮಾಣವಾಗಿದೆ. ಇದಕ್ಕೆ ಯಾರು ಕಾರಣರು? ಏನು ಮಾಡಬೇಕು ಅನ್ನೋದರ ಬಗ್ಗೆ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್ ಈಗ್ಗೆ ಐವತ್ತು ವರ್ಷಗಳಷ್ಟು ಹಿಂದೆಯೇ ಯೋಚಿಸಿ ತೀರ್ಮಾನಿಸಿದ್ದಾರೆ. ನಾವು ಬಹಳಷ್ಟು ಮಾತನಾಡುತ್ತೇವೆ. ನಮ್ಮ ಎಲ್ಲಾ ಚಳವಳಿಗಳಲ್ಲಿ ಅಸ್ಪೃಶ್ಯತೆ ವಿರುದ್ಧ ಅಜ್ಞಾನದ ವಿರುದ್ಧ, ಭೂಮಾಲೀಕತ್ವದ ಬಗ್ಗೆ ಮಾತನಾಡುತ್ತೇವೆ. ಆದರೆ ಈ ನಿರಂತರ ಹೋರಾಟ ಬುದ್ಧನ ಕಾಲದಿಂದ ಪ್ರಾರಂಭಿಸಿ ಬಸವಣ್ಣನ ಕಾಲ ಅಂಬೇಡ್ಕರ್ ಕಾಲದಿಂದಲೂ ಮುಂದುವರೆದು ನಾವು ನೀವೆಲ್ಲ ಮಾತನಾಡುತ್ತಿರುವ ಈ ಹೊತ್ತಿನವರೆಗೆ ಅಸ್ಪೃಶ್ಯತೆ ಅನ್ನೋದು ಹಿಂದೂ ಧರ್ಮದಿಂದ ಯಾಕೆ ಹೊರಗಡೆ ಹೋಗಲಿಲ್ಲವೆಂಬುದನ್ನು ನಾವು ಆಲೋಚಿಸಬೇಕಾಗಿದೆ. ನಾವು ಇಲ್ಲಿ ಯಾರನ್ನು ನಿಂದನೆ ಮಾಡುವ ಅಗತ್ಯವಿಲ್ಲ. ಹಿಂದೂ ಧರ್ಮವನ್ನು ನಿಂದನೆ ಮಾಡುವ ಅಗತ್ಯವಿಲ್ಲ. ನಿನ್ನಿಂದ ಹೀಗಾಗಿದೆ ಎಂದು ಯಾರನ್ನು ಬೆಟ್ಟು ಮಾಡಿ ತೋರಿಸಿ ಮಾತನಾಡುವ ಅಗತ್ಯವಿಲ್ಲ.

ಆದರೆ ನಮ್ಮ ದೊಡ್ಡ ಸಮಸ್ಯೆ ಅಸ್ಪೃಶ್ಯತೆ, ಜಾತೀಯತೆ.



ಅಸ್ಪೃಶ್ಯತೆ ನಮ್ಮೆದುರಿಗಿರುವ ನಗ್ನ ಸತ್ಯ. ಇದಕ್ಕೆ ಯಾರು ಕಾರಣ? ಇದು ಯಾಕಿದೆ? ಇದು ಹೋಗಬೇಕಾದರೆ ನಾವೇನು ಮಾಡಬೇಕು ಅನ್ನೋದನ್ನು ನಾವು ಯೋಚಿಸಬೇಕು. ನಾವು ದಲಿತ ಸಂಘರ್ಷ ಸಮಿತಿಯವರು ಕಳೆದ ೩೦ ವರ್ಷಗಳಿಂದ ಈ ನಾಡಿನಲ್ಲಿ ಕೋಮುವಾದ ಅಸ್ಪೃಶ್ಯತೆ ಮುಂತಾದ ಸಾಮಾಜಿಕ ಸಮಸ್ಯೆಗಳ ನಿವಾರಣೆಗೆ ನಿರಂತರ ಹೋರಾಟ ನಡೆಸಿದ್ದೇವೆ. ಹಿಂದೂಧರ್ಮವನ್ನು ಸುಧಾರಣೆ ಮಾಡಲು ಈ ನಿಟ್ಟಿನಲ್ಲಿ ಸಾಕಷ್ಟು ಕಾರ್ಯಕ್ರಮಗಳನ್ನು ನಡೆಸಿದ್ದೇವೆ. ನಾವೆಲ್ಲರೂ ಇದ್ದೀವೀಂತಾ ಬಲವಂತವಾಗಿ ಯಾರು ನಮ್ಮನ್ನು ಶತಮಾನಗಳ ಕಾಲ ಹಿಂದೂಧರ್ಮದಲ್ಲಿ ಕೂಡಿ ಹಾಕಿ ಬಂಧನದಲ್ಲಿಟ್ಟಿದ್ದಾರೋ ಅವರಿಗೆ ಹಿಂದು ಧರ್ಮ ಸುಧರಣೆಗೆ ಬೇಕಿಲ್ಲ. ಹಿಂದೂಧರ್ಮವನ್ನು ಸುಧಾರಿಸಲು ನಿರಂತರವಾಗಿ ನಾವೆಲ್ಲರೂ ಪ್ರಯತ್ನಿಸುತ್ತಿದ್ದೇವೆ. ವಿಶೇಷವಾಗಿ ಹಿಂದೂ ಧರ್ಮವನ್ನು ಸುಧಾರಿಸಲು ದಲಿತರು ಪ್ರಯತ್ನ ಮಾಡುತ್ತಿದ್ದಾರೆ.

ನೀವು ಇತಿಹಾಸದ ಉದಕ್ಕೂ ಹುಡುಕುತ್ತಾ ಹೋದರೆ ಹಿಂದೂ ಧರ್ಮವನ್ನು ನಿರಂತರವಾಗಿ ಸುಧಾರಣೆ ಮಾಡಬೇಕು, ಅಲ್ಲಿಯ ಜಾತೀಯತೆ ಹೋಗಬೇಕು, ಅಸಮಾನತೆ ಹೋಗಬೇಕು, ಅಸ್ಪೃಶ್ಯತೆ ಹೋಗಬೇಕು ಅಂತಾ ಹೋರಾಟ ಮಾಡಿಕೊಂಡು ಬರುತ್ತಿರುವವರು ದಲಿತರು ಮಾತ್ರ. ಮೇಲ್ವರ್ಗದವರು ಯಾರು ಹಿಂದು ಧರ್ಮದ ವಕ್ತಾರರಿದ್ದಾರೋ ಅವರು ಯಾವುದೇ ಸ್ವಾಮೀಜಿ ಆಗಿರಲಿ ಯಾವುದೇ ಸಿದ್ಧಾಂತಿ ಆಗಿರಲಿ ಅಥವಾ ಯಾವುದೇ ಚಿಂತಕರಾಗಿರಲಿ ಹಿಂದೂಧರ್ಮದ ಪರ ವಕಾಲತ್ತು ವಹಿಸುವ ಯಾವೊಬ್ಬ ಮಠಾಧಿಪತಿಯಾಗಿರಲೀ ಅಸ್ಪೃಶ್ಯತೆಯನ್ನು ತೊಡೆದು ಹಾಕುವ ಒಂದು ಸಣ್ಣ ಪ್ರಯತ್ನವನ್ನು ಮಾಡಿರುವುದಿಲ್ಲ. ಯಾಕೆ ಮಾಡಿಲ್ಲ? ಈ ಮಾತನ್ನು ನಾನೇಕೆ ಹೇಳಿದೆನೆಂದರೆ ನಮ್ಮ ಸಾವಿರ ಕಷ್ಟಗಳಲ್ಲಿ ಅಸ್ಪೃಶ್ಯತೆ ತೀರಾ ದೊಡ್ಡದಾದು. ಅದು ಹಸಿವಿಗಿಂತಲೂ ಕ್ರೂರವಾದದ್ದು.

ಹಸಿವನ್ನು ನಾವು ಸಹಿಸಿಕೊಳ್ಳಬಹುದು; ಅಸ್ಪೃಶ್ಯತೆಯನ್ನು ಅವಮಾನವನ್ನು ನಾವು ಸಹಿಸಿಕೊಳ್ಳಲಾಗುವುದಿಲ್ಲ. ಯಾಕೆಂದರೆ ಮನುಷ್ಯನಿಗೆ ಸ್ವಾಭಿಮಾನ ಮುಖ್ಯ. ಗೌರವ ಮುಖ್ಯ. ಘನತೆ ಮುಖ್ಯ. ನಾವು ಬುದ್ಧಿ ಇರೋಂಥವ್ರು. ಹಂದಿ ನಾಯಿಗಳನ್ನು ದೇವರ ಅವತಾರವೆಂದು ಪೂಜೆ ಮಾಡುವ ಸನಾತನವಾದಿಗಳು ತಮ್ಮಂತೆಯೇ ರಕ್ತಮಾಂಸವಿರುವ ದಲಿತರನ್ನು ಕೀಳೆಂದು ಹೀನಾಯವಾಗಿ ನಡೆಸಿಕೊಳ್ಳಲಾಗುತ್ತಿರುವ ಪರಿಸ್ಥಿತಿ ಇಲ್ಲಿದೆ. 'ಹಿಂದೂ ಒಂದು; ಎನ್ನುವ ಸನಾತನವಾದಿಗಳು, ಕೋಮುವಾದಿಗಳು ಯಾವ ಕಾರಣಕ್ಕೂ ದಲಿತರನ್ನು ತಮ್ಮೊಳಗಿನವರೆಂದು ಅಂದುಕೊಂಡಿಲ್ಲ. ಪ್ರತೀ ದಿನ ದೇಶದಲ್ಲಿ ದಲಿತರ ಮೇಲೆ ಕ್ರೌರ್ಯ ದೌರ್ಜನ್ಯದ ಘಟನೆಗಳು ನಡೆಯುತ್ತಿವೆ.

ಕಂಬಾಪಲ್ಲಿಯಲ್ಲಿ ದಲಿತರನ್ನು ಜೀವಂತವಾಗಿ ಸುಟ್ಟು ಹಾಕಿದ ಘಟನೆ ನಡೆದು ಹೋಯಿತು. ಸುಟ್ಟು ಹಾಕಿದವರಾದರೂ ಯಾರು? ಎಂಟು ಜನ ದಲಿತರನ್ನು ಹಾಡಹಗಲೇ ಸುಟ್ಟವರು ಅದೇ ಹಿಂದೂ ಧರ್ಮೀಯರು. ಹಿಂದೂ ಧರ್ಮದ ವಕ್ತಾರರೆನ್ನಿಸಿಕೊಳ್ಳುವ ದೊಡ್ಡ ದೊಡ್ಡ ಸ್ವಾಮೀಜಿಗಳು, ದೊಡ್ಡದೊಡ್ಡ ಸಿದ್ಧಾಂತಿಗಳು, ದೊಡ್ಡದೊಡ ಚಿಂತಕರು ಹಿಂದೂಗಳೇ. ಹಿಂದೂಗಳೆಂದು ಕರೆಯುವ ದಲಿತರನ್ನು ಸುಟ್ಟು ಹಾಕಿದಾಗ ಪ್ರತಿಭಟಿಸಲಿಲ್ಲ ಯಾಕೆ? ಅದಷ್ಟೇ ಅಲ್ಲ ಸಾವಿರಾರು ಜನರ ಕಣ್ಣೆದುರಲ್ಲೇ ಸುಟ್ಟ ಜನರನ್ನು ನ್ಯಾಯಾಲಯವು ನಿರಪರಾಧಿಗಳೆಂದು ಹೊರಗೆ ಬಿಟ್ಟಾಗ ಸುಮ್ಮನಿದ್ದರು ಯಾಕೆ?

ಈ ಸಮಾವೇಶದ ಮೂಲಕ ನಾನು ಕೇಳ್ತಾ ಇದ್ದೀನಿ ಮಾನ್ಯ ಪೇಜಾವರ ಸ್ವಾಮೀಜಿಗಳೇ, ನನಗೆ ನೋವಾಗುತ್ತಿದೆ. ನೀವು ಹೇಳುತ್ತೀರಿ 'ನಾವೆಲ್ಲರೂ ಒಂದು' ಎಂದು. ದಲಿತರನ್ನು ಸುಟ್ಟಾಗ ನೀವು ಮಾತಾಡಲಿಲ್ಲ. ದಲಿತರನ್ನು ಸುಟ್ಟ ಜನರನ್ನು ನಿರಪರಾಧಿಗಳೆಂದು ಬಿಟ್ಟಾಗ ನೀವು ಮಾತಾಡಲಿಲ್ಲ. 'ಹಿಂದೂ ಒಂದು' ಅಂತಾ ಆಷಾಢಭೂತಿತನ ಯಾಕ್ ತೋರಿಸ್ತೀರಿ ನೀವು? ಹಿಂದೂ ಒಂದು ಅನ್ನೋದಕ್ಕೆ ಎಲ್ಲಾದರೂ ಒಂದು ಸಣ್ಣ ಕೂದಲೆಳೆಯಷ್ಟಾದರೂ ಪ್ರಾಮಾಣಿಕ ಪ್ರಯತ್ನ ಮಾಡಿದ್ದೀರಾ ನೀವು?

ಹಿಂದೂಧರ್ಮ ಅನ್ನೋದು ಯಾವಾಗ ಬಂತು? ಏನಾಯ್ತು ಅನ್ನೋ ಬಗ್ಗೆ ದೊಡ್ಡ ಚರ್ಚೆಯೇ ನಡೀಬೇಕಾಗಿದೆ. ಹಿಂದೂ ಧರ್ಮ ಅನ್ನೋದು ನಮಗೆ ಗೊತ್ತಾಗಿದ್ದು ೧೮ನೇ ಶತಮಾನದ ಕೊನೆಯ ಭಾಗದಿಂದ. ಅದಕ್ಕೆ ಮುಂಚೆ ಹಿಂದೂ ಧರ್ಮದ ಪ್ರಸ್ತಾಪ ಎಲ್ಲೂ ಬರುವುದಿಲ್ಲ. ನಾನು ಹಿಂದೂ ಧರ್ಮದ ಬಗ್ಗೆ ಟೀಕೆ ಮಾಡುತ್ತಿದ್ದೇನೆಂದುಕೊಳ್ಳಬೇಡಿ. ವಸ್ತುಸ್ಥಿತಿ ಮಾತ್ರ ನಾನು ಹೇಳಿರೋದು. ಯಾಕೆ ನಾವು ದಲಿತರು ಇವೊತ್ತು ಹಿಂದೂ ಧರ್ಮದಲ್ಲಿಯೇ ಇದ್ದೀವಿ ಅಂತ ಹೇಳ್ಕೊಂಡಿದ್ದೋರು ಆ ಧರ್ಮವನ್ನು ತೊರೆದು ಬೌದ್ಧಧರ್ಮವನ್ನು ಒಪ್ಪಿಕೊಳ್ಳಬೇಕಾಗಿ ಬಂತು ಎಂಬುದರ ಕುರಿತು ವಸ್ತುಸ್ಥಿತಿಯನ್ನು ಮನದಟ್ಟು ಮಾಡಿಕೊಳ್ಳಬೇಕಾಗಿದೆ.

ಯಾವುದೇ ಹಿಂದೂಧರ್ಮದ ಗ್ರಂಥಗಳಲ್ಲಿ ರಾಮಾಯಣ, ಮಹಾಭಾರತ, ಭಗವದ್ಗೀತೆ ಇಂತಹ ಯಾವುದೇ ಗ್ರಂಥಗಳಲ್ಲೂ ಹಿಂದೂ ಎಂಬ ಶಬ್ದ ಬಳಕೆಯಲಿಲ್ಲ. 'ಹಿಂದೂ' ಎಂಬ ಪದ ಬಳಕೆಗೆ ಬಂದದ್ದು ಪರ್ಷಿಯನ್ನರು ಭಾರತದ ದೇಶದ ಮೇಲೆ ದಂಡೆತ್ತಿ ಬಂದಾಗ. ಸಿಂಧೂ ನದಿಯ ಕಣಿವೆಯ ಭೂಭಾಗವನ್ನು ದಾಟಿ ಬರುವಾಗ ಅವರಿಗೆ ಸಿಂಧೂ ಎಂಬ ಪದವನ್ನು ಉಚ್ಚರಿಸಲು ಬಾರದೆ ಹಿಂದೂ ಎಂದರು. ಸಿಂಧೂನದಿ ಕಣಿವೆಯ ಪ್ರದೇಶದಲ್ಲಿ ಬದುಕಿದ್ದ ಜನ ಕ್ರಮೇಣ ಹಿಂದೂ ಎಂದು ಕರೆಯಲ್ಪಟ್ಟರು. ಸಿಂದೂ ಕಣಿವೆಯ ಭೂಭಾಗದಲ್ಲಿ ಬದುಕಿದ್ದ ಕೆಲವೇ ಪುರೋಹಿತಶಾಹಿ ಜನ ಹಿಂದೂ ಎನ್ನುವ ಪದವನ್ನು ಹಿಂದೂಧರ್ಮ, ಹಿಂದೂ ಸ್ತಾನವೆಂದು ಕರೆದು ಅದನ್ನೇ ಭೌಗೋಳಿಕವಾಗಿ ಇಡೀ ಭಾರತ ದೇಶದ ಜನರ ಮೇಲೆ ಬಲವಂತವಾಗಿ ಹೇರಿದ್ದಾರೆ. ಯಾವುದೇ ಧರ್ಮ ಯಾವುದೇ ದೇವರು ಮನುಷ್ಯರನ್ನು ಮೇಲು-ಕೀಳು ಎಂದು ಪ್ರತ್ಯೇಕಿಸಿದರೆ, ಅದೊಂದು ಧರ್ಮ/ದೇವರು ಆಗುತ್ತದೆಯೇ ಯೋಚಿಸಿ ನೋಡಿ. ಮನುಷ್ಯರನ್ನು ಹುಟ್ಟಿನಿಂದ ಶ್ರೇಷ್ಠ-ಕನಿಷ್ಠ, ಮೇಲು-ಕೀಳೆಂದು ಪ್ರತ್ಯೇಕಿಸುವ ಧರ್ಮವೊಂದು ಜಗತ್ತಿನಲ್ಲಿ ಯಾವುದಾದರೂ ಇದ್ದರೆ ಅದು ಹಿಂದೂಧರ್ಮ ಮಾತ್ರ.

ಇಡೀ ಜಾತಿಯತೆ, ಅಸಮಾನತೆಯೇ ಮೂಲ ಬಂಡವಾಳವಾಗಿರುವ, ಆಷಾಢಭೂತಿತನವೇ ಮೂಲ ಬಂಡವಾಳವಾಗಿರುವ ಧರ್ಮ ಪ್ರಪಂಚದಲ್ಲಿ ಬೇರೆಯಲ್ಲಿಯೂ ಇಲ್ಲ. ಅದು ಭಾರತದಲ್ಲಿದೆ ಅದು ಹಿಂದೂ ಧರ್ಮ. ಇದನ್ನು ನಾನು ಸಿಟ್ಟಿನಿಂದ ಹೇಳುತ್ತಿಲ್ಲ. ದ್ವೇಷದಿಂದ ಹೇಳತ್ತಿಲ್ಲ. ನೋವಿನಿಂದ ಹೇಳುತ್ತಿದ್ದೇನೆ. ಇವೊತ್ತಿಗೂ ಯಾವುದೇ ಅಪರಾಧ ಮಾಡದಿರುವ ಜನಕ್ಕೆ ಕೆರೆ ನೀರು ಮುಟ್ಟ ಬೇಡಿರೆಂದು ಹೇಳುತ್ತಾರೆ. ಸರ್ಕಾರಿ ಶಾಲೆಯಲ್ಲಿ ಮಧ್ಯಾಹ್ನದ ಬಿಸಿಯೂಟ ಯೋಜನೆಯ ಅಡುಗೆಯನ್ನು ದಲಿತರು ಬೇಯಿಸಿದರೆ ಮೇಲ್ಜಾತಿ ಜನ ಅದನ್ನು ಊಟ ಮಾಡುತ್ತಿಲ್ಲ. ಇಂತಹ ಸ್ಥಿತಿ ಇದೆ.

ಈಗ ನಾವು ಏನು ಮಾಡಬೇಕು? ಅಸ್ಪೃಶ್ಯತೆ ನಮ್ಮ ಬಹು ದೊಡ್ಡ ಶತ್ರುವಾಗಿದೆ. ಸಮಾಜದಲ್ಲಿ ಸಮಾನ ಅವಕಾಶಗಳು ಕೈಗೆಟುಕದಂತೆ ನಮ್ಮನ್ನು ದೂರ ನಿಲ್ಲಿಸಿರುವುದು ಈ ಅಸ್ಪೃಶ್ಯತೆ. ದಲಿತರಾದ ಶ್ರೀನಿವಾಸ ಪ್ರಸಾದ್‌ರವರು ಎಷ್ಟೇ ದೊಡ್ಡವರಿರಬಹುದು. ಬೆಂಗಳೂರಲ್ಲೊಂದು ಹೋಟೆಲ್ ಇಟ್ಟು ಅವರು ಊಟ ಸಪ್ಲೈ ಮಾಡೋಕಾಗಲ್ಲ! ಯಾರೂ ಬರಲ್ಲ. ವಸ್ತುಸ್ಥಿತಿ ಇದು.

ದೇವನೂರ ಮಹಾದೇವ ಎಷ್ಟೇ ದೊಡ್ಡ ಸಾಹಿತಿ ಇರಬಹುದು. ಅವರಿಗೂ ಅಸ್ಪೃಶ್ಯತೆಯ ಕಳಂಕ ಅಂಟಿಕೊಂಡಿದೆ. ಜಗಜೀವನರಾಮ್ ಅವರು ಸಂಪೂರ್ಣಾನಂದರ ಪ್ರತಿಮೆಯನ್ನು ಅನಾವಾರಣ ಮಾಡಿದಾಗ ಈ ದೇಶದ ಉಪಪ್ರಧಾನಿಗಳಾಗಿದ್ದರು. ಒಬ್ಬ ಅಸ್ಪೃಶ್ಯ ಸಂಪೂರ್ಣಾನಂದರ ಪ್ರತಿಮೆ ಅನಾವರಣ ಮಾಡಿದರೆಂದು ಗಂಗಾಜಲದಿಂದ ಪ್ರತಿಮೆಯನ್ನು ತೊಳೆದರು ಈ ದೇಶದ ಹಿಂದು ಪುರೋಹಿತಶಾಹಿ ಜನ! ವಸ್ತು ಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬೇಕೆಂದು ನಾನು ಇದನ್ನು ಹೇಳುತ್ತಿದ್ದೇನೆ. ಬಹಳ ಜನ ಹೇಳ್ತಾರೆ ಅಸ್ಪೃಶ್ಯತೆ ಎಲ್ಲಿದೇರೀ? ಬಸ್ಸಿನಲ್ಲಿ ನಾವು ಒಟ್ಟಿಗೆ ಪ್ರಯಾಣಿಸುತ್ತೇವೆ. ಸಿನಿಮಾ ಥೇಯೇಟರ್‌ನಲ್ಲಿ ಒಟ್ಟಿಗೆ ಕುಳಿತು ಸಿನಿಮಾ ನೋಡುತ್ತೇವೆ ಅಂತಾ. ಆದರೆ ಇದು ಎಷ್ಟು ಆಷಾಢಭೂತಿತನದ ಮಾತು ಎಂಬುದು ನಿಮಗೆ ನಮಗೆ ಎಲ್ಲರಿಗೂ ಅರ್ಥವಾಗಿದೆ. ಹೆಜ್ಜೆ ಹೆಜ್ಜೆಗೂ ಜಾತಿಯ ವಿಷವನ್ನು ನಾವಿಲ್ಲಿ ಎದುರಿಸಬೇಕಾಗಿದೆ. ಹೆಜ್ಜೆ ಹೆಜ್ಜೆಗೂ ಅಸ್ಪೃಶ್ಯರನ್ನು ಹೀಯಾಳಿಸುತ್ತಿದ್ದಾರೆ. ಆದರೆ ಈ ಅಸ್ಪೃಶ್ಯರ‍್ಯಾರೂ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಹೇಳಿಕೊಟ್ಟಂತೆ ಹಿಂದೂಗಳಲ್ಲ.

ಬಾಬಾಸಾಹೇಬ್ ಅಂಬೇಡ್ಕರ್ ಯಾವುದೇ ಅನುಮಾನಕ್ಕೆಡೆ ಮಾಡಿಕೊಡದಂತೆ ಸಾಬೀತುಪಡಿಸಿದ್ದಾರೆ. ಅವರು ಕೃತಿಗಳ ಮೂಲಕ ಶೂದ್ರರು ಮತ್ತು ಅಸ್ಪೃಶ್ಯ ಜಾತಿಗಳ ಹುಟ್ಟಿನ ಮೂಲವನ್ನು ವೈಜ್ಞಾನಿಕವಾಗಿ ಶೋಧಿಸಿದ್ದಾರೆ. ಇವರೆಲ್ಲ ಹಿಂದೆ ಬುದ್ಧನ ಕಾಲದಲ್ಲಿ ಬೌದ್ಧರಾಗಿದ್ದವರು. ಕಾಲಕ್ರಮೇಣ ಸನಾತನ ಹಿಂದೂಧರ್ಮವು ಯಾವಾಗ ಪ್ರಬಲ್ಯವಾಗಿ ಬೆಳೆಯತೊಡಗಿತೋ ಆಗ ಎಲ್ಲಾ ಬೌದ್ಧರ ಮೇಲೆ ತೀವ್ರತರವಾಗಿ ದಾಳಿ ನಡೆಸಿ ಅವರನ್ನು ನಾಶ ಮಾಡಿದ್ದರು. ಆದರೆ ಈ ಸನಾತನಿಗಳೊಂದಿಗೆ ರಾಜಿಯಾಗದೆ ಸಮಾಜದಿಂದ ಬಹಿಷ್ಕೃತಗೊಂಡು ಕಾಡು ಪಾಲಾಗಿ ಜೀವಿಸಿದವರು ಅಸ್ಪೃಶ್ಯರಾದರು. ಅವರೇ ಇಂದು Out caste ಆಗಿರುವ ಇಂದಿನ ದಲಿತರು. ಇದು ಐತಿಹಾಸಿಕವಾಗಿ ಸಾಬೀತಾಗಿರುವ ವಿಚಾರ. ಅದಕ್ಕಾಗಿಯೇ ನಾವು ಹೇಳೋದೇನೆಂದರೆ ನಾವು 'ಮರಳಿ ಮನೆಗೆ' ಹೋಗುತ್ತಿದ್ದೇವೆ.

ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಕಾರ್ಲ್‌ಮಾರ್ಕ್ಸ್‌ನನ್ನು ಉಲ್ಲೇಖಿಸುತ್ತಾ "ಕಾರ್ಲ್ ಮಾರ್ಕ್ಸ್ ಹೇಳುತ್ತಾರೆ ಮನುಷ್ಯನಿಗೆ ಹೊಟ್ಟೆ ತುಂಬಾ ಅನ್ನ, ಮೈ ಮುಚ್ಚಿಕೊಳ್ಳೋಕೆ ಬಟ್ಟೆ, ಮಲಗೋಕೆ ಮಂಚ, ಏರ್ ಕಂಡೀಷನ್ಡ್ ರೂಮು ಇದಿಷ್ಟಿದ್ದರೆ ಸಾಕು ಎಂದು. ಆದರೆ ನನಗೆ ಹಾಗನ್ನಿಸ್ತ ಇಲ್ಲ. ಮನುಷ್ಯರಿಗೆ ಧರ್ಮ ಬೇಕಾಗಿದೆ. ದಲಿತರಿಗೆ ಯಾವೊತ್ತು ಯಾವುದೇ ಧರ್ಮ ಅನ್ನೋದು ಇರಲಿಲ್ಲ. ದಲಿತರಿಗೆ ಇವೊತ್ತಿಗೂ ಒಂದು ಧರ್ಮವಿಲ್ಲ. ಅವರು ಹಿಂದೂಧರ್ಮದ ಬಂಧನದಲ್ಲಿದ್ದಾರೆ. ಅದಕ್ಕಾಗಿ ನಮಗೆ ನಮ್ಮದೇ ಆದಂತಹ ಧರ್ಮವಿದೆ. ನಾವೆಲ್ಲರೂ ಹುಟ್ಟಿದ ಮನೆಗೆ ನಾವು ಹೋಗೋಣ. ನಮ್ಮ ತಾಯ್ನಾಡಿಗೆ ತಾಯಿಯ ಮನೆಗೆ ಮರಳಿ ಹೋಗೋಣ ನಾವೆಲ್ಲರೂ ಬೌದ್ಧಧರ್ಮಕ್ಕೆ ಹೋಗೋಣ ಎಂದು ೧೯೫೬ರ ಅಕ್ಟೋಬರ್ ೧೪ ನೇ ತಾರೀಖು ಬೌದ್ಧಧರ್ಮ ಮರಳಿ ಹೋಗುವ ಒಂದು ಐತಿಹಾಸಿಕ ಕಾರ್ಯಕ್ರಮ ಮಾಡಿದರು.

೫೦ ವರ್ಷಗಳ ತರುವಾಯ ದಲಿತ ಸಂಘರ್ಷ ಸಮಿತಿ ಅಂಬೇಡ್ಕರ್ ಕಂಡ ಕನಸನ್ನು ನನಸುಮಾಡಲು ನಿಂತಿದೆ. ನಾವ್ಯಾರು ಇವೊತ್ತು ಈ ಯೋಚನೆ ಮಾಡುತ್ತಿದ್ದೇವೆ. ನಾವು ನಿಜವಾಗಿ ಸ್ವಾಭಿಮಾನ ಬಯಸುವವರಾದರೆ ಅಸ್ಪೃಶ್ಯತೆಯನ್ನು ಕಳಚಿಕೊಳ್ಳಬೇಕಾಗಿದೆ. ಆ ಕ್ಯಾನ್ಸರ್ ನಮ್ಮ ಮೈಗೆ ಅಂಟಿಕೊಂಡಿದೆ. ಅಸ್ಪೃಶ್ಯತೆ ಅಂಟಿರುವ ಭಾಗವನ್ನು ನಾವು ಕತ್ತರಿಸಿ ಎಸೆಯಬೇಕಾಗಿದೆ. ಅದನ್ನು ಸುಧಾರಣೆ ಮಾಡಲು ಆಗುವುದಿಲ್ಲ. ಅದಕ್ಕೆ ಔಷಧವಿಲ್ಲ. ಅದನ್ನು ಕತ್ತರಿಸಿ ಎಸೆಯಲೇ ಬೇಕಾಗಿದೆ. ಕತ್ತರಿಸಿ ಆಚೆಗೆ ಎಸೆಯಬೇಕಾದರೆ ಬೌದ್ಧಧರ್ಮವನ್ನು ಸ್ವೀಕಾರ ಮಾಡದೆ ನಮಗೆ ಬೇರೆ ಮಾರ್ಗವೇ ಇಲ್ಲ. ಇದನ್ನು ನೀವು ಮನದಟ್ಟು ಮಾಡಿಕೊಳ್ಳಬೇಕಾಗಿದೆ. ಯಾಕೆ ಇವೊತ್ತು ದಲಿತ ಸಂಘರ್ಷ ಸಮಿತಿ ಈ ಕಾರ್ಯಕ್ರಮ ಮಾಡ್ತಾ ಇದೆ ಅಂದ್ರೆ, ನಾವು ಅಂಬೇಡ್ಕರ್‌ವಾದಿಗಳೆಂದು ಹೇಳಿಕೊಳ್ಳುತ್ತೇವೆ. ಅಂಬೇಡ್ಕರ್ ಹೆಸರಿನಲ್ಲಿ ಮೀಸಲಾತಿ ಸೌಲಭ್ಯ ಪಡೆದುಕೊಳ್ಳುತ್ತಿದ್ದೇವೆ. ಏನೇನೋ ಸಾಧಿಸುತ್ತಿದ್ದೇವೆ. ನಮ್ಮಲ್ಲಿ ಯಾವುದೇ ರೀತಿಯ ಪ್ರತಿಭೆಗೆ ಕೊರತೆಯಿಲ್ಲ ಎಲ್ಲವೂ ಅಗಾಧವಾಗಿದೆ. ಆದರೆ ಅವಕಾಶಗಳು ನಮಗೆ ಸಿಗ್ತಾ ಇಲ್ಲ. ಎಲ್ಲರಿಗೂ ಸಮಾನ ಅವಕಾಶಗಳು ಈ ಸಮಾಜದಲ್ಲಿ ಇಲ್ಲವೇ ಇಲ್ಲ. ಅವಕಾಶಗಳನ್ನು ಪಡೆದುಕೊಳ್ಳಬೇಕೆಂದರೆ ನಾವು ನಮ್ಮದೇ ಆದ ಧರ್ಮವನ್ನು ಇವೊತ್ತು ಒಪ್ಪಿಕೊಳ್ಳಬೇಕಾಗಿದೆ. ನಮ್ಮ ಧರ್ಮಕ್ಕೆ ನಾವು ಹೋಗಬೇಕಾಗಿದೆ.

ನಾವು ಧರ್ಮವಿಲ್ಲದಿರುವ ಧರ್ಮರಹಿತ ಜನರಾಗಿದ್ದೇವೆ. ಅಸ್ಪೃಶ್ಯರು ಧರ್ಮ ರಹಿತ ಜನರು, ಯಾಕೆಂದರೆ ಹಿಂದೂ ಧರ್ಮದ ನಾಲ್ಕು ವರ್ಣಗಳಲ್ಲಿ ಪಂಚಮರಿಲ್ಲ. ಅಸ್ಪೃಶ್ಯರಿಲ್ಲ ಅದರಲ್ಲಿ. We are Out Castes. ಆದ್ದರಿಂದ ನಾವು ನಮ್ಮ ಧರ್ಮವನ್ನು ಕಂಡುಕೊಳ್ಳಬೇಕಾಗಿದೆ. ಧರ್ಮವನ್ನು ಕಂಡುಕೊಳ್ಳುವುದರ ಮೂಲಕ ಇಡೀ ಜಗತ್ತಿನಲ್ಲಿ ನಾವೊಬ್ಬರು ಎಂಬುದನ್ನು ತೋರಿಸಬೇಕಾಗಿದೆ. ಇವೊತ್ತು ನಾವು ಕುಬ್ಜರಾಗುತ್ತಿದ್ದೇವೆ; ನಮ್ಮನ್ನು ಸಣ್ಣವರನ್ನಾಗಿ ಮಾಡುತ್ತಿದ್ದಾರೆ. ಇಡೀ ಜಗತ್ತಿನಲ್ಲಿ ನಾವೊಬ್ಬರು. ನಾವು ವಿಶಾಲವಾಗಿದ್ದೇವೆ. ವಿಶಾಲವಾಗಿ ನಾವು ಗುರುತಿಸಿಕೊಳ್ಳಬೇಕಾಗಿದ್ದರೆ ನಾವು ನಮ್ಮದೇ ಆದ ಧರ್ಮವನ್ನು ಒಪ್ಪಿಕೊಳ್ಳಬೇಕಾಗಿದೆ. ನಾವು ನಮ್ಮ ಮಾತೃಧರ್ಮಕ್ಕೆ ಮರಳಿ ಹೋಗಬೇಕಾಗಿದೆ.

ಇವೊತ್ತು ಭಾರತ ದೇಶದಲ್ಲಿ ಅಸ್ಪೃಶ್ಯನಿಗೊಂದು ನಿಜವಾದ ನೆಲೆಯಿಲ್ಲ! ಒಂದು ಹಳ್ಳಿಯನ್ನು ನಮ್ಮದು ಅಂದುಕೊಳ್ಳಲಾಗುವುದಿಲ್ಲ. ಒಂದು ಪಟ್ಟಣವನ್ನು ಒಂದು ನಗರವನ್ನು, ಒಂದು ಜಿಲ್ಲೆಯನ್ನು ಒಂದು ರಾಜ್ಯ ವನ್ನು ನಾವ್ಯಾರೂ ನಮ್ಮದು ಎಂದು ಅಂದುಕೊಳ್ಳಲಾಗುವುದಿಲ್ಲ. ನಾವು ಬೌದ್ಧರಾದರೆ ಇಡೀ ಸಮಾಜದ ಸರ್ವಸ್ವವೂ ನಮಗೆ ಸಿಗುವಂತ ಅವಕಾಶ ಮುಕ್ತವಾಗಿರುತ್ತದೆ. ಅಲ್ಲಿ ಯಾವುದೇ ಮಿತಿಗಳಿರುವುದಿಲ್ಲ ನಮಗೆ. 'ನೀನು ಹೋಟೆಲ್ ಮಾಡ್ಬೇಡ ಅಂತ ನೀನು ಇನ್ನೊಂದು ಮಾಡ್ಬೇಡ' ಅಂತ ಯಾರೂ ಹೇಳೋಕಾಗಲ್ಲ ನಮಗೆ. ನೀನು ಒಬ್ಬ ಧರ್ಮಗುರುವಾಗಬೇಕಾದರೆ ನೀನು ಅಸ್ಪೃಶ್ಯನಾದರೆ ಸಾಧ್ಯವಿಲ್ಲ. ಆದರೆ ನೀನೊಬ್ಬ ಬೌದ್ಧನಾದರೆ ನೀನು ಈ ಪೂಜ್ಯ ಭಂತೇಜಿಗಳ ಥರ ಕುಳಿತುಕೊಳ್ಳಬಹುದು. ಬೌದ್ಧನಾಗಿ ಕೂತರೆ ಯಾವುದೇ ಇತಿ ಮಿತಿಗಳಿಲ್ಲ. ಸಮಾಜದ, ಜಗತ್ತಿನ ಎಲ್ಲ ಅವಕಾಶಗಳೂ ನಮಗೆ ಮುಕ್ತವಾಗಿರುತ್ತವೆ. ಈ ಊರಿನವನು ಈ ಹಳ್ಳಿಯವನು, ಈ ಜಾತಿಯವನು ಎಂದು ಹೇಳಿಕೊಳ್ಳಬೇಕಾಗಿಲ್ಲ. ನಮಗೆ ಜಾತಿಯ ಕಟ್ಟು ಪಾಡುಗಳು ಹೋಗಿ ಬಿಡುತ್ತವೆ.

ದಲಿತರ ಒಳಗಿರುವ ಒಳಜಾತಿ ಪ್ರಭೇದಗಳು ನಾಶವಾಗುತ್ತವೆ. ಒಬ್ಬನ ಮೇಲೆ ಒಬ್ಬರಿಗಿರುವ ದ್ವೇಷ ನಾಶವಾಗುತ್ತದೆ. ಇಡೀ ದೇಶ ಇಂದು ಜಾಗತಿಕ ಮಟ್ಟದಲ್ಲಿ ಎದುರಿಸುತ್ತಿರುವ ಭಯೋತ್ಪಾದನೆ ನಾಶವಾಗುತ್ತದೆ. ಈ ಎಲ್ಲಾ ಕಾರಣಗಳಿಗಾಗಿ, ಇಡೀ ಜಗತ್ತಿನಲ್ಲಿ ನಾವೊಬ್ಬರಾಗುವ ಕಾರಣಕ್ಕಾಗಿ, ಇಂದು ಜಗತ್ತಿನಲ್ಲಿ ಭಾರತ ಒಂದೇ ಅಲ್ಲ. ಹತ್ತಾರು ದೇಶಗಳು ಬೌದ್ಧಧರ್ಮ ವನ್ನು ಅವಲಂಭಿಸಿರುವುದು ಕಾಣುತ್ತದೆ. ನಾವು ಏಕಾಂಗಿಗಳಲ್ಲ. ಆದುದರಿಂದ ಬಾಬಾ ಸಾಹೇಬರು ತೋರಿಸಿಕೊಟ್ಟರೂ ಬೌದ್ಧಧರ್ಮಕ್ಕೆ ಹೋಗುವ ಮೂಲಕ ಅವರ ಕನಸನ್ನು ನಾವು ನನಸು ಮಾಡಬೇಕು. ಜತೆಗೆ ನಮ್ಮ ಸ್ವಾಭಿ ಮಾನವನ್ನು ನಮ್ಮ ಆತ್ಮಗೌರವವನ್ನು, ನಮ್ಮ ಸ್ವಾತಂತ್ರ್ಯ ವನ್ನು ಮರಳಿ ಪಡೆಯುವ ಸಲುವಾಗಿ ನಾವೆಲ್ಲರೂ ಈ ಕೆಲಸಕ್ಕೆ ಮುಂದಾಗಬೇಕಿದೆ.

ಇವೊತ್ತು ನನಗೆ ಬಹಳ ಸಂತೋಷವಾಗುತ್ತಿದೆ. ಕಳೆದ ಏಪ್ರಿಲ್ ೧೪ ರಂದು ದಲಿತ ಸಂಘರ್ಷ ಸಮಿತಿ ಒಂದು ತೀರ್ಮಾನವನ್ನು ಮಾಡಿತು. ನಾವು ಇಂದು ಇಲ್ಲೇನು ಬೌದ್ಧಧರ್ಮ ಸ್ವೀಕಾರ ಮಾಡುತ್ತಿದ್ದೇವೆಯೋ ಇದರ ಬಗ್ಗೆ ನಾಡಿನ ಎಲ್ಲೆಡೆ ಸುತ್ತಾಡಿ ಜನರ ಮನವೊಲಿಸಬೇಕೆಂದು ಸ್ವೀಕರಿಸಿದ ತೀರ್ಮಾನ ಅದು. ಅದರಂತೆ ಇದುವರೆಗೆ ರಾಜ್ಯಾದ್ಯಂತ ಎಲ್ಲ ಜಿಲ್ಲೆಗಳಲ್ಲಿ ಚರ್ಚೆ, ಶಿಬಿರ, ಸಂವಾದಗಳನ್ನು ನಡೆಸುವ ಮೂಲಕ ಅಲ್ಲಿನ ಕಾರ್ಯಕರ್ತರಿಗೆ ಮನದಟ್ಟು ಮಾಡುವ ಮೂಲಕ ಇವೊತ್ತಿನ ಬೌದ್ಧಧಮ್ಮ ದೀಕ್ಷಾ ಸಮಾವೇಶ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಇವೊತ್ತು ಇಲ್ಲಿ ಮೂರು ಸಾವಿರ ಜನ ಧಮ್ಮ ದೀಕ್ಷಾ ತೆಗೆದುಕೊಳ್ಳುತ್ತಿದ್ದಾರೆ. ಇದು ಆರಂಭ ಮಾತ್ರ. ದಲಿತ ಸಂಘರ್ಷ ಸಮಿತಿಯು ಆದ್ಯತೆಯ ಮೇರೆಗೆ ಇನ್ನು ಮುಂದೆ ಇಂತಹ ಧಮ್ಮ ದೀಕ್ಷಾ ಸಮಾವೇಶಗಳನ್ನು ಹಮ್ಮಿಕೊಳ್ಳುತ್ತದೆ.

> **ನಾವು ಧರ್ಮವಿಲ್ಲದಿರುವ ಧರ್ಮರಹಿತ ಜನರಾಗಿದ್ದೇವೆ. ಅಸ್ಪೃಶ್ಯರು ಧರ್ಮ ರಹಿತ ಜನರು. ಯಾಕೆಂದರೆ ಹಿಂದೂ ಧರ್ಮದ ನಾಲ್ಕು ವರ್ಣಗಳಲ್ಲಿ ಪಂಚಮರಿಲ್ಲ. ಅಸ್ಪೃಶ್ಯರಿಲ್ಲ ಅದರಲ್ಲಿ. We are Out Castes. ಆದ್ದರಿಂದ ನಾವು ನಮ್ಮ ಧರ್ಮವನ್ನು ಕಂಡುಕೊಳ್ಳಬೇಕಾಗಿದೆ. ಧರ್ಮವನ್ನು ಕಂಡುಕೊಳ್ಳುವುದರ ಮೂಲಕ ಇಡೀ ಜಗತ್ತಿ ನಲ್ಲಿ ನಾವೊಬ್ಬರು ಎಂಬುದನ್ನು ತೋರಿಸಬೇಕಾಗಿದೆ. ಇವೊತ್ತು ನಾವು ಕುಬ್ಜರಾಗುತ್ತಿದ್ದೇವೆ; ನಮ್ಮನ್ನು ಸಣ್ಣವರನ್ನಾಗಿ ಮಾಡುತ್ತಿದ್ದಾರೆ.**

ಎಲ್ಲಾ ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮತ್ತು ಹೋಬಳಿ ಮಟ್ಟದಲ್ಲಿ ನಾವು ಇಂತಹ ಧಮ್ಮ ದೀಕ್ಷಾ ಸಮಾರಂಭಗಳನ್ನು ಮಾಡಿ, ದಲಿತರಿಗೆ ಧರ್ಮದ ಪ್ರಜ್ಞೆಯನ್ನು ತಂದುಕೊಡುವ ಶಾಂತಿಯ ಪ್ರಜ್ಞೆಯನ್ನು ಮೂಡಿಸುವ ಮೂಲಕ, ಸ್ವಾಭಿಮಾನವನ್ನು ಒದಗಿಸಿಕೊಡುವ ಪ್ರಯತ್ನವನ್ನು ಮಾಡಲಾಗುತ್ತದೆ. ಇವೊತ್ತೂ ಕೂಡ ನಾವೆಲ್ಲರೂ ಇಡೀ ಜಗತ್ತಿನ ಎಲ್ಲರಲ್ಲಿ ಒಂದಾಗುವ ಅವಕಾಶವನ್ನು ನಮಗೆ ದಲಿತ ಸಂಘರ್ಷ ಸಮಿತಿ ಒದಗಿಸಿಕೊಟ್ಟಿದೆ. ಆದುದರಿಂದ ನಾವೆಲ್ಲರೂ ಮೊದಲು ಮನುಷ್ಯರಾಗಬೇಕು. ಸಮಾಜದ ಎಲ್ಲ ಜಾತೀಯತೆಯನ್ನು ಬಿಡಬೇಕು. ಕೀಳರಿಮೆಯನ್ನು ತೊರೆಯಬೇಕು. ಅಸ್ಪೃಶ್ಯತೆಯು ತನ್ನಷ್ಟಕ್ಕೆ ತಾನೇ ಹೋಗುವಂತಹ ವಾತಾವರಣವನ್ನು ನಾವು ಸೃಷ್ಟಿ ಮಾಡಬೇಕಾಗಿದೆ. ಆದುದರಿಂದ ನಾವೆಲ್ಲರೂ ಈಗ "ಬುದ್ಧನೆಡೆಗೆ ಮರಳಿ ಮನೆಗೆ" ಹೋಗುವ ಕಾರ್ಯಕ್ರಮ ಮಾಡುತ್ತಿದ್ದೇವೆ.

ಈ ಸಮಾವೇಶದಲ್ಲಿ ನಾನು ಮತ್ತೆ ಸ್ಪಷ್ಟ ಮಾಡುತ್ತಿರುವುದೇನೆಂದರೆ ನಾವು ಯಾವುದೇ ರೀತಿಯ ದ್ವೇಷದಿಂದ ಈ ಕಾರ್ಯಕ್ರಮ ಮಾಡುತ್ತಾ ಇಲ್ಲ. ಇಡೀ ದೇಶದ ದಲಿತರಿಗೆ ಧರ್ಮವೆಂಬುದಿಲ್ಲ. ನಮ್ಮನ್ನು ನಮ್ಮ ಧರ್ಮದಿಂದ ದೂರ ಇಡಲಾಗಿದೆ. ಬಲವಂತವಾಗಿ ನಮ್ಮನ್ನು ಬಂಧಿಗಳನ್ನಾಗಿ ಬೇರೆ ಧರ್ಮದಲ್ಲಿ ಇರಿಸಿಕೊಳ್ಳಲಾಗಿದೆ. ಅದಕ್ಕಾಗಿ ಮರಳಿ ನಮ್ಮ ಮಾತೃಧರ್ಮಕ್ಕೆ ನಾವು ಹೋಗುತ್ತಿದ್ದೇವೆ. ಹಾಗಾಗಿಯೇ ಈ 'ಧಮ್ಮಸ್ವೀಕಾರ' ಮಾಡುತ್ತಿದ್ದೇವೆ. ಶಾಂತಿ ನೆಮ್ಮದಿ ಸ್ವಾಭಿಮಾನ ಪ್ರೀತಿ ವಿಶ್ವಾಸದಿಂದ ನಾವೆಲ್ಲರೂ ಬದುಕಬಹುದಾದ ಒಂದು ಗೌರವಯುತವಾದ ಸಮಾಜವನ್ನು ಸಮೃದ್ಧ ಭಾರತವನ್ನು ಬುದ್ಧ ಭಾರತವನ್ನು ಕಟ್ಟುವ ಮಹದಾಸೆ ನಮಗಿದೆ. ಅದಕ್ಕಾಗಿ ಈ ಕೆಲಸವನ್ನು ಮಾಡುತ್ತಿದ್ದೇವೆಯೇ ಹೊರತು ಬೇರೆ ಯಾವುದೇ ರೀತಿಯಿಂದ ಯಾರ ವಿರುದ್ಧವೂ ಈ ಕೆಲಸ ಮಾಡುತ್ತಿಲ್ಲವೆಂದು ಹೇಳುತ್ತೇವೆ.

ನೀವೆಲ್ಲರೂ ಬಂದು ಈ ಧಮ್ಮದೀಕ್ಷಾ ಸಮಾವೇಶದಲ್ಲಿ ಪಾಲ್ಗೊಂಡಿರುತ್ತೀರಿ. ನಿಮ್ಮೆಲ್ಲರಿಗೂ ಭಗವಾನ್ ಬುದ್ಧರ ಅನುಗ್ರಹವಿರುತ್ತದೆ. ನೀವೆಲ್ಲರೂ ಬೌದ್ಧರಾಗುವುದರ ಮೂಲಕ ನಿಮ್ಮ ಸಮಾಜವನ್ನು, ನಿಮ್ಮ ಊರನ್ನು ನಿಮ್ಮ ಜಿಲ್ಲೆಯನ್ನು, ರಾಜ್ಯವನ್ನು ದೇಶವನ್ನು ಆ ಮೂಲಕ ಇಡೀ ಜಗತ್ತನ್ನು ಸಮೃದ್ಧ ನಾಡನ್ನಾಗಿ ಮಾಡುವುದರತ್ತ ನೀವೆಲ್ಲರೂ ಪ್ರಯತ್ನಶೀಲರಾಗುತ್ತೀರಿ ಕಾರ್ಯಶೀಲರಾಗುತ್ತೀರಿ ಮತ್ತು ಅದರಲ್ಲಿ ಜಯಶಾಲಿಗಳಾಗುತ್ತೀರಿ ಎಂದು ಹಾರೈಸಿ ನನ್ನ ಮಾತನ್ನು ಮುಗಿಸುತ್ತೇನೆ. ನಮಸ್ಕಾರ. □

ಬೌದ್ಧ ಧರ್ಮದಲ್ಲಿ ಮಾತ್ರ ಸಮಾನತೆ

(೧೯ನೇ ಪುಟದಿಂದ)

ಮಾಡಿ ಬೌದ್ಧಧರ್ಮವನ್ನು ನಾಶಪಡಿಸಿದ್ದನ್ನು ನಾವು ಚರಿತ್ರೆಯ ಪುಟಗಳಲ್ಲಿ ಕಾಣುತ್ತೇವೆ. ಆದರೆ ಬೌದ್ಧಧರ್ಮ ಈ ದೇಶದ ಸಪ್ತ ಸಾಗರಗಳನ್ನು ದಾಟಿ ಜಗತ್ತಿನ ಇತರ ದೇಶಗಳಿಗೆ ಹೋಯಿತು. ಚೈನಾ, ಕೊರಿಯಾ, ಥೈಲ್ಯಾಂಡ್, ಸಿಲೋನ್ ಮುಂತಾದ ಜಗತ್ತಿನ ಬೇರೆ ಬೇರೆ ದೇಶಗಳಲ್ಲಿ ಇಂದು ಬೌದ್ಧಧರ್ಮಾವಲಂಬಿಗಳಿದ್ದಾರೆ. ಬೌದ್ಧಧರ್ಮ ಆ ದೇಶಗಳ ಪ್ರಧಾನ ಧರ್ಮವಾಗಿರುವುದನ್ನು ನಾವು ಕಾಣುತ್ತೇವೆ. ಹಾಗಾಗಿ ಬೌದ್ಧಧರ್ಮ ಇಂದು ಜಗತ್ತಿನ ಅತ್ಯಂತ ಪ್ರಮುಖ ಧರ್ಮಗಳಲ್ಲೊಂದಾಗಿದೆ.

ಬೌದ್ಧ ಧರ್ಮದ ಪುನರುಜ್ಜೀವನದ ದೃಷ್ಟಿಯಿಂದ ನಾವು ಅಂಬೇಡ್ಕರ್ ಅವರನ್ನು ನೆನೆಯಬೇಕಾಗಿದೆ. ಬೌದ್ಧ ಧರ್ಮವನ್ನು ಪುನರುತ್ಥಾನ ಮಾಡಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಈ ದೇಶದಲ್ಲಿ ನಶಿಸಿ ಹೋಗಿದ್ದ ಬೌದ್ಧ ಧರ್ಮವನ್ನು ಕುರಿತು ಲಕ್ಷಾಂತರ ಅನುಯಾಯಿಗಳೊಂದಿಗೆ ಹಾಗೂ ತಮ್ಮ ಚಿಂತನೆಗಳೊಂದಿಗೆ ಜಿಜ್ಞಾಸೆ ನಡೆಸಿ, ಬುದ್ಧತತ್ವಗಳನ್ನು ಸಂವಿಧಾನದ preamble ಅಳವಡಿಸಿ ಸಾಮಾಜಿಕ ಸಾಮರಸ್ಯದ ನೆರಳಿನಲ್ಲಿ ನಾವೆಲ್ಲರೂ ಒಟ್ಟಾಗಿ ಬದುಕುವ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ನಿರ್ಮಿಸಿ ಕೊಟ್ಟಿರುತ್ತಾರೆ.

Buddha is not a saviour but He is a Guide. ಅವನು ಎಂದಿಗೂ ತಾನೊಬ್ಬ ಮೋಕ್ಷಧಾತನೆಂದು ಹೇಳಿಕೊಳ್ಳಲಿಲ್ಲ. ನಿಮ್ಮೆಲ್ಲಾ ತಪ್ಪುಗಳನ್ನು ನಾನು ಕ್ಷಮಿಸುತ್ತೇನೆ ಎಂದು ಹೇಳಲಿಲ್ಲ. ಅವನು ಮೋಕ್ಷಧಾತನಾಗದೆ ಮಾರ್ಗಧಾತನಾದ. ಸಮಾಜದಲ್ಲಿ ಮನುಷ್ಯ ಮತ್ತೊಬ್ಬ ಮನುಷ್ಯನನ್ನು ಹೇಗೆ ಪ್ರೀತಿಸಬೇಕು. ಗೌರವಿಸಬೇಕು. ಮನುಷ್ಯ ಮನುಷ್ಯನನ್ನಾಗಿ ಹೇಗೆ ಕಾಣಬೇಕು ಎಂಬುದನ್ನು ಚಿಂತಿಸಿದವನು ಬುದ್ಧ. ಆ ಕಾರಣಕ್ಕಾಗಿ ಅಂಬೇಡ್ಕರ್ ಅವರಿಗೆ ಬಹಳವಾಗಿ ಹಿಡಿಸಿದ್ದು ಬೌದ್ಧಧರ್ಮ. ಇವೊತ್ತು ನಮ್ಮ ಧಾರ್ಮಿಕ ವಿಮೋಚನೆಗೋಸ್ಕರ ಅಂತಾರಾಷ್ಟ್ರೀಯ ಮಟ್ಟದಲ್ಲಿ ಬುದ್ಧಿಜೀವಿಗಳ ಗಮನವನ್ನು ಸೆಳೆವಂತೆ ಬೌದ್ಧ ಧರ್ಮವನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿದವರು ಅಂಬೇಡ್ಕರ್. ನಾವು ಹುಟ್ಟಿರುವುದೇ ಪೂರ್ವಜನ್ಮದ ಕರ್ಮಫಲದಿಂದ ಎಂದು ತಿಳಿದುಕೊಂಡು ಅಂಧಕಾರದಲ್ಲಿದ್ದ, ಅಜ್ಞಾನದಲ್ಲಿದ್ದ ನಮಗೆ ಬುದ್ಧನ ಬೆಳಕನ್ನು ನೀಡಿದವರು ಅಂಬೇಡ್ಕರ್.

ಒಂದು ಸಲ ಅಂಬೇಡ್ಕರ್ ಅವರು ದಲಿತ ಮಹಿಳೆಯರನ್ನು ಉದ್ದೇಶಿಸಿ ಬೌದ್ಧಧರ್ಮವನ್ನು ಸ್ವೀಕರಿಸುವ ಅನಿವಾರ್ಯತೆಯನ್ನು ಕುರಿತು ಮಾತನಾಡುತ್ತಾ "ಸವರ್ಣೀಯ ಮಹಿಳೆಯರು ಸ್ನಾನ ಮಾಡಿದ ಬಳಿಕ ಇರುವೆ ಗೂಡಿಗೆ ಸಕ್ಕರೆ ಹಾಕುತ್ತಾರೆ ನೋಡಿದ್ದೀರೇನು?" ಎಂದು ಕೇಳುತ್ತಾರೆ. ಅದಕ್ಕೆ ಪ್ರತ್ಯುತ್ತರವಾಗಿ "ಅದೇ ಮಹಿಳೆಯರ ಬಳಿ ಹಿಂದೂಗಳೇ ಆಗಿರುವ ನೀವು ಒಂದು ಲೋಟ ನೀರು ಕೇಳಿರಿ, ಕೊಡುತ್ತಾರೇನೋ ನೋಡಿರಿ. ನಿಮಗೆ ಅವರು ಒಂದು ಲೋಟ ನೀರು ಕೊಡುವುದಿಲ್ಲ. ಇರುವೆ ಗೂಡಿಗೆ ಸಕ್ಕರೆ ಹಾಕುವ ಮಹಿಳೆಯರು, ಅದೇ ಮನುಷ್ಯರಿಗೆ ನೀರು ಕೊಡುವುದಿಲ್ಲವೆಂದರೆ ಈ ಹಿಂದೂ ಜಾತಿ ವ್ಯವಸ್ಥೆ ಎಷ್ಟು ನಿಕೃಷ್ಟವಾಗಿದೆ ಎಂಬುದನ್ನು ಅರ್ಥಮಾಡಿಕೊಳ್ಳಿರಿ" ಎಂದು ಹೇಳಿ ಅಸ್ಪೃಶ್ಯತೆಯ ಭೀಕರತೆಯನ್ನು ಮನದಟ್ಟು ಮಾಡಿ ಕೊಡುತ್ತಾರೆ. ಅವರ "Emancipation of untouchables" ಓದಿದ ಸಂದರ್ಭದಲ್ಲಿ ಬಹಳ ಚೆನ್ನಾಗಿ ಈ ವಿಷಯಗಳು ನಮಗೆ ಮನದಟ್ಟಾಗುತ್ತವೆ.

ನಾನು ಮೊದಲೇ ಹೇಳಿದಂತೆ ವಿಶ್ವಮಟ್ಟದ ಪ್ರತಿಭಾವಂತನಾಗಿದ್ದರೂ ಕೂಡ ಡಾ॥ ಅಂಬೇಡ್ಕರ್ ಅವರನ್ನು ಅವಮಾನ, ಮೂದಲಿಕೆಗಳಿಗೆ ವಿದ್ಯಾರ್ಥಿ ದೆಸೆಯಿಂದಲೂ ಗುರಿಪಡಿಸಿರುತ್ತಾರೆ. ಬರೋಡ ಮಹಾರಾಜ ಅವರು ಶಿಷ್ಯವೇತನ ನೀಡಿ ಅಂಬೇಡ್ಕರ ಅವರನ್ನು ವ್ಯಾಸಂಗಕ್ಕಾಗಿ ವಿದೇಶಕ್ಕೆ ಕಳಿಸಿಕೊಟ್ಟರು. ಅರ್ಥಶಾಸ್ತ್ರದಲ್ಲಿ ಪಿ.ಹೆಚ್‌ಡಿ ಪದವಿ ಪಡೆದು ಭಾರತಕ್ಕೆ ಹಿಂತಿರುಗಿ ಬಂದರು.

ಅಂತಹವರಿಗೆ ಇಲ್ಲಿ ಬಾಡಿಗೆ ಮನೆ ಕೊಡುವುದಿಲ್ಲ. ಜಾತಿಯ ಸುಳ್ಳು ಹೇಳಿ ಫಾರ್ಸಿಗಳ ಛತ್ರದಲ್ಲಿದ್ದಾಗ ಆಚೆಗೆ ದೂಡುತ್ತಾರೆ. ಕೊಲ್ಲಲು ಪ್ರಯತ್ನಿಸುತ್ತಾರೆ. ಅವರಿಗಿದ್ದ ಸಮಯ ಪ್ರಜ್ಞೆಯಿಂದ ಉಳಿದುಕೊಂಡರು. ಬರೋಡದ ಮಹಾರಾಜರೂ ಸಹ ಅಸಹಾಯಕರಾಗುತ್ತಾರೆ. ಬಾಂಬೇ ಕ್ಯಾಂಟೀನ್‌ನೊಳಗಿದ್ದ ನಾಲ್ಕನೇ ದರ್ಜೆ ನೌಕರನೂ ಸಹ ಡಾ॥ ಅಂಬೇಡ್ಕರ್‌ರವರಿಗೆ ಕುಡಿಯುವ ಟೀ ನೀಡದೆ ಅವಮಾನಪಡಿಸುತ್ತಾನೆ.

ವಕೀಲರೂ ಕೂಡ ಅವಮಾನಿಸುತ್ತಾರೆ. ಇಷ್ಟಾದರೂ ಅಂಬೇಡ್ಕರ್ ದೃತಿಗೆಡಲಿಲ್ಲ. ಅಂಬೇಡ್ಕರ್ ಅವರ ಬದುಕಿನ ಕಾರ್ಯಸೂಚಿ ನೋಡಿದಾಗ ಅಸಮಾನತೆ ಮತ್ತು ಅಸ್ಪೃಶ್ಯತೆಗಳ ವಿರುದ್ಧ ಹೋರಾಟ ಮಾಡುವುದೇ ಅವರಿಗಿದ್ದ ಗುರಿಗಳು. ಪ್ರತಿಯೊಂದು ಕ್ಷಣವನ್ನು ಅನರ ಜೀವ ಮಾನವಿಡೀ ದುಂಡು ಮೇಜಿನ ಪರಿಷತ್ ಇರಲಿ, ಧಾರ್ಮಿಕ ಚರ್ಚೆಗಳಿರಲಿ ಪ್ರತಿಯೊಂದು ಸಂದರ್ಭವನ್ನು ಕೂಡ ಅಸಮಾನತೆ ಮತ್ತು ಅಸ್ಪೃಶ್ಯತೆ ವಿರುದ್ಧ ಹೋರಾಟಕ್ಕೆ ಬಳಸುವುದು ಅವರ ಕಾರ್ಯಸೂಚಿಯಾಗಿತ್ತು. If you had sincerely implement the preamble of the constition. India would have been heaven ಎನ್ನುವ ಮಟ್ಟಿಗೆ ಅವರು equality liberty and fraternity ಎಂಬ ತತ್ವಗಳನ್ನು ಸಂವಿಧಾನದಲ್ಲಿ ಅಳವಡಿಸಿರುತ್ತಾರೆ. ಬಾಬಾ ಸಾಹೇಬ್ ಅವರ ಈ ತತ್ವಗಳನ್ನು ನಾವು ಸಂವಿಧಾನದಲ್ಲಿರುವಂತೆ ಬದು ಕಿನಲ್ಲಿ ಅಳವಡಿಸಿಕೊಂಡಿ ದರೆ ನಮಗೆ ಇದುವರೆಗೆ ಸಮಾನತೆ ಸಾಧ್ಯವಾಗುತ್ತಿತ್ತು. ಡಾ॥ ಅಂಬೇಡ್ಕರ್ ಈ ದೇಶದ ಸಮಸ್ಯೆಗಳನ್ನು ಚೆನ್ನಾಗಿ ಅರ್ಥಮಾಡಿಕೊಂಡವರಾಗಿದ್ದರು.

ಈ ದೇಶದಲ್ಲಿ ಸಾಮಾಜಿಕ ಸಮಾನತೆ ಮತ್ತು ಸಾಮರಸ್ಯ ಸಾಧಿಸದ ಹೊರತು ದೇಶ ಪ್ರಗತಿಯಾಗಲಾರದೆಂದು ಅವರು ಮನಗಂಡಿದ್ದರು. ಇಂದು ಇಡೀ ದೇಶ ಜಾಗತೀಕರಣದ ಆಕ್ರಮಣಕ್ಕೆ ಸಿಲುಕಿ ಹತಾಶವಾಗಿದೆ. ಇವೊತ್ತು ಮೂವತ್ತು ಕೋಟಿಗೂ ಅಧಿಕವಿರುವ ದಲಿತರು ಇನ್ನೂ ಕೂಡ ಎರಡು ಹೊತ್ತಿನ ಊಟಕ್ಕಾಗಿ ಪರದಾಡುವ ಸ್ಥಿತಿಯಲ್ಲಿದ್ದಾರೆ. ಇಡೀ ಕುಟುಂಬ ದುಡಿದರೂ ಸಹ ಎರಡು ಹೊತ್ತಿನ ಊಟಕ್ಕೆ ಎಟುಕದೆ ಹೋರಾಡುವ ಪರಿಸ್ಥಿತಿ ಇಲ್ಲಿದೆ. ಮೂವತ್ತು ಕೋಟಿ ದಲಿತರ ಕೈಗೆ ಉತ್ಪಾದನೆ ಮಾಡುವ ಅವಕಾಶವನ್ನು ನೀಡದೆ ನಿಮಗೆ ಯಾವ ಜಾಗತೀಕರಣವನ್ನು ಎದರಿಸುವ ಧೈರ್ಯ ಎಲ್ಲಿಂದ ಬರಲು ಸಾಧ್ಯ? ಸಾಧ್ಯವಿಲ್ಲ. ಚೈನಾ ದೇಶದಲ್ಲಿ ಇರುವ ಪ್ರತಿಯೊಬ್ಬನಿಗೂ ಉತ್ಪಾದನೆ ಮಾಡುವ ಅವಕಾಶವನ್ನು ನೀಡಿ ದೇಶ ನಿರ್ಮಾಣ ಕಾರ್ಯದಲ್ಲಿ ತೊಡಗಿಸಲಾಗುತ್ತಿದೆ.



ಆದುದರಿಂದ ಅವರು ಜಾಗತೀಕರಣವನ್ನು ಧೈರ್ಯವಾಗಿ ಎದುರಿಸಲು ಸಾಧ್ಯವಾಗಿದೆ. ಭಾರತ ದೇಶದಲ್ಲಿ ನಮ್ಮನ್ನು ಇಂದಿಗೂ ಕೂಡ ಖಾಸಗೀಕರಣದ ಹೆಸರಿನಲ್ಲಿ, ಉದಾರೀಕರಣದ ಹೆಸರಿನಲ್ಲಿ foreign direct investment- disinvestment ಮುಂತಾದ ಹೆಸರುಗಳಲ್ಲಿ ನಮ್ಮ ಕೈಗೆ ಉತ್ಪಾದನೆಯ ಅವಕಾಶಗಳನ್ನು ನೀಡದೆ ವಂಚಿಸಲಾಗುತ್ತಿದೆ. ಯಾವ ಧರ್ಮ ಮನುಷ್ಯನನ್ನು ಮನುಷ್ಯನನ್ನಾಗಿ ಇನ್ನೂ ಕೂಡ ನೋಡಲಾಗುತ್ತಿಲ್ಲವೋ ಅಂತಹ ಧರ್ಮದಿಂದ ನಾವು ನಮ್ಮದೇ ಆದ ಸ್ವತಂತ್ರ ಚಿಂತನೆಗಳ ಮಾರ್ಗದಲ್ಲಿ ನಾವು ನಡೆಯಲು ಸಾಧ್ಯವಾಗುತ್ತದೆ. ಅಂತಹ ಸಾಧ್ಯತೆಯ ದಾರಿಯನ್ನು ಡಾ॥ ಅಂಬೇಡ್ಕರ್ ಅವರು ನಮಗಾಗಿ ಹುಡುಕಿಕೊಟ್ಟಿರುತ್ತಾರೆ. ಅದೇ "ಬುದ್ಧ ನೆಡೆಗೆ ಮರಳಿ ಮನೆಗೆ" ಎಂಬುದು. ಇದು ಅಂಬೇಡ್ಕರ್ ಕಂಡ ಕನಸೂ ಆಗಿತ್ತು. ನಾವೆಲ್ಲರೂ ಕೂಡ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಂದೇಶ ಮತ್ತು ಚಿಂತನೆಗಳನ್ನು ಅನುಸರಿಸಿದಾಗ ಮಾತ್ರ ಇದು ಸಾಧ್ಯವಾಗುತ್ತದೆ ಎಂಬುದನ್ನು ಅರಿತಿರುವ ರೀತಿಯಲ್ಲಿ ಇಂದು ದಲಿತ ಸಂಘರ್ಷ ಸಮಿತಿಯ ನನ್ನ ಸಹೋದರರು, ವಿಶೇಷವಾಗಿ ಇಂದೂಧರ ಹೊನ್ನಾಪುರ, ಗುರುಪ್ರಸಾದ್ ಕೆರಗೋಡು, ವೆಂಕಟೇಶ್ ಮುಂತಾದವರೆಲ್ಲರೂ ಸೇರಿ ಧಮ್ಮ ದೀಕ್ಷಾ ಸಮಾವೇಶವನ್ನು ನೀವು ಅಚ್ಚುಕಟ್ಟಾಗಿ ವ್ಯವಸ್ಥೆ ಮಾಡಿದ್ದಾರೆ ತಾವೆಲ್ಲರೂ ಬಂದಿದ್ದೀರಿ.

ಈ ಕಾರ್ಯಕ್ರಮವನ್ನು ನಾವು ಒಂದು ಸಾಂಸ್ಕೃತಿಕ-ಸಾಮಾಜಿಕ ಕ್ರಾಂತಿಯ ಕಾರ್ಯಕ್ರಮವನ್ನಾಗಿ ಮಾಡಿ, ನಾವು ಸಮಾನತೆಯ ದಿಕ್ಕಿನಲ್ಲಿ ಸಂಘಟಿತರಾಗಿ ಹೋಗೋಣವೆಂಬ ಮಾತನ್ನು ಹೇಳಿ ಇಂಥ ಒಳ್ಳೆ ಕಾರ್ಯಕ್ರಮದಲ್ಲಿ ನಾನು ಭಾಗವಹಿಸಲು ಅವಕಾಶ ಮಾಡಿಕೊಟ್ಟ ನಿಮಗೆಲ್ಲರಿಗೂ ನನ್ನ ನಮಸ್ಕಾರಗಳನ್ನು ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ. □

ಮೆರವಣಿಗೆ

ಕಥೆ

ಡಾ|| ಅನಸೂಯ ಕಾಂಬಳೆ

ರಾತ್ರಿ ತನ್ನ ಮನೆ ಮೇಲೆ ಬಿದ್ದ ಕಲ್ಲುಗಳನ್ನು ಆರಿಸಿ ಇಟ್ಟ ಮಲ್ಲಪ್ಪ ಕರ್ನಾಟಕದ ಮೊದಲ ಝಡ್‌ಪಿ (ZP) ಎಲೆಕ್ಷನಲ್ಲಿ ಗೆದ್ದು ಬಂದವರನ್ನು ಮೆರವಣಿಗೆ ಮಾಡಿ ತರುವ ಸಡಗರದಲ್ಲಿದ್ದ. ಎಣ್ಣೆ ಹಚ್ಚಿ ಸ್ನಾನ ಮಾಡಿದ. ಅಣ್ಣ ಬೊಂಬಾಯಿಂದ ತಂದಿದ್ದ ಹೊಸ ಮೊಸರಾಯಿ ದೋತ್ರನ ದೊಡ್ಡ ಸಂದ್ಯುಕದಿಂದ ತೆಗೆದ. ಉಟ್ಟು ಶೃಂಗಾರಾಗಿ ಕನ್ನಡಿಯಲ್ಲೊಮ್ಮೆ ಮುಖ ನೋಡಿ ಹುಬ್ಬು ಹಾರಿಸಿ ನಸುನಕ್ಕ. ಹೆಂಡತಿ ಪಾರಿ ಎದೆಯೊಳಗ ಏನೋ ಹರಿದಂಗಾತು. ನಾಚಿಕಿಯಿಂದ ಮುಖ ಕೆಂಪಗಾಗಿ "ಏನ್ ಇವತ್ತ ಮೆರುಣಗ್ಯಾಗನಿಂದ ಜೋರೇನ್. ಹಂಗಾದ್ರ ಇಂದ ಯ್ಯಾದರಾಗೂ ಹಿಡ್ಯಾಂಗಿಲ್ಲ ಬಿಡು" ಎಂದಳು ಪಾರಿ. "ನೋಡ, ಇಂದ ಮೆರವಣಿಗ್ಯಾಗ ಸಾವಕಾರ ಜೋಡಿ ನಾ ಹೆಂಗ ನಿಂದರತೇನಿ. ಅವರು ಆರಿಸಿ ಬರಬೇಕಾದ್ರ ನಮ್ಮ ಮೈಯಾಗಿನ ಶಕ್ತಿಯೆಲ್ಲ ಉಡಗಿ ಹೋಗೇತಿ. ಇಂದ ನಮ್ಮ ಹೊಲೇರ ತ್ವಾಟಕ ಅವರನ ತಂದ ಆ ಕಡಿ ಮನ್ಯಾವರನ್ನ... ಆ ಗೌಡ್ರ ಸೊಕ್ಕ ಇಳಸದಿದ್ರ ನನ್ನ ಹೆಸರ ಮಲ್ಯಾನ ಅಲ್ಲ"... ಎಂದ ಎಷ್ಟೋ ದಿನಗಳ ಸಿಟ್ಟ ನುಂಗಿ. "ಅಲ್ಲ್ಯ ಏನೇರ ಮಾಡ, ಆದ್ರ ಗೌಡ್ರ ಇರಸೆ ಯಾಕ ಕಟ್ಗೋತಿ. ಎಷ್ಟ ಆದ್ರೂ ಅವರು ನಮ್ಮೂರು ಗೌಡ್ರು, ನಿನ್ನ ಸುಮ್ಮನ ಬಿಡತಾರೇನು?"... ಅಂದಳು.

ಯಾಕೊ ಮಲ್ಲಪ್ಪನಿಗೆ ಹಳೇ ದಿನಗಳು ನೆನಪಾದವು. ಅಂಜಿ... ಅಂಜಿ ಬದುಕಿದ್ರೂ ನಮ್ಮಪ್ಪನ ಗೌಡ್ರ ಸುಮ್ಮಸುಮ್ಮನ ಚಾವಡಿಗೆ ತಂದು ಕಟ್ಟಿ ಬಡಿಸಿದ್ರು, ಮುಂದ ಅವ ಬಾಳ ದಿನ ಬದುಕಲಿಲ್ಲ. ಅಂಜಿ ಎದಿಯೊಡಕೊಂಡ ಸತ್ತ ಹೋದ. ಅವ್ವ ಗೌಡನ ಕಾಟಕ್ಕೆ ಭಾವಿ ಜಿಗದಳು. ಆಗ ನಾ ಸಣ್ಣವ ಇದ್ನಿ; ಎಲ್ಲಾರು " ತಪ್ಪಾತು ಅಂದು ಗೌಡ್ರ ಕಾಲಹಿಡಿ ಅಂದ್ರು, ಹಿಡಿದೆ. ಇಂದ... ನಾ ದೊಡ್ಡವ ಆಗೇನಿ. ಸರಿ ತಪ್ಪಾ ತಿಳಕೊಂಡೇನಿ. ನಮ್ಮ ಮಾಸ್ತರ ಕಾಕಾ ಆಗಿಂದ ಹೇಳ್ತಿದ್ದ, "ಬದಲಾವಣೆ ಬರಬೇಕು. ಎಲೆಕ್ಷನ್‌ನ್ಯಾಗ ನಮ್ಮವರು ನಮ್ಮ ಕಷ್ಟ ಸುಖಾ ನೋಡಕೊಂಡು ಆಡಳಿತ ನಡೆಸವರು ಬರಬೇಕು... ಅಂತ." ಇದ ಮೊದಲ ಸಲಾ ನಮ್ಮೂರಾಗ ಚೇಂಜ್ ಅಗೇತಿ. ಗೌಡ್ರು ಎಲೆಕ್ಷನ್ಯಾಗ ಬಿದ್ದಾರು. ಸಾವಕಾರ ಹಾಲಂಬಿ ಅವರು ಆರಿಸಿ ಬಂದಾರು. ಇದರಿಂದ ನಾವು ಗೌಡ್ರ ಕೈಯಾಗಿಂದ ಪಾರಾಗಾಕ ದಾರಿ ಆತು" ಎಂದು ಮಲ್ಲಪ್ಪ ಮನಸ್ಸಿನ್ಯಾಗ ಅಂದಕೊಂಡ.

ಮಲ್ಲಪ್ಪ ಮ್ಯಾಟ್ರಿಕ್ ಫೇಲ್ ಆಗಿದ್ದ. ಒಂದ ನೌಕರಿ ಕೊಡಸ್ರಿ ಪರದೇಶಿ ಮಗ ನಾನು ಅಂತ ಗೌಡ್ರ ಕಾಲಿಗೆ ಬಿದಿದ್ದ. ಆದ್ರ ಗೌಡ್ರು ಒದ್ದು ಕಳಿಸಿದ್ರು, ದಾರಿ ಕಾಣದ ಕೂಲಿಗೆ ಶರಣಾಗಿದ್ದ. ಮಾಸ್ತರ ಕಾಕಾ ಆಗಾಗ ಸಹಾಯ ಮಾಡ್ತಿದ್ದ. ಅವನ ತಂದೆ ಸಾದೇವ ಅನ್ಯಾಯಕ್ಕೊಳಗಾದದ್ದು, ತಾಯಿ ಸಾಯಲು ಕಾರಣ ಎಲ್ಲ ತಿಳಿಸಿ ಹೇಳಿದ್ದ. "ನಾವೂ ಮನುಷ್ಯರು; ನಮ್ಮ ಕೈಯಾಗ ವೋಟ್ ಹಾಕಾಕ ಪಾವರ್ ಐತಿ. ಅಂದಮ್ಯಾಲ ನಾವ್ಯಾಕರಪಾ ಬಗ್ಗಬೇಕು. ಒಂದು ಸಲ ನೀವು ನಿಮ್ಮ ವೋಟ್‌ನ ಹಾಕಾಕ ನೀವ್ ತೀರ್ಮಾಣ ತೋಗೋರಿ. ಆಗ ನೋಡ್ರಿ ಅದರ ಗಮ್ಮತ್ತು. ನಿಮಗ ಎಷ್ಟ ಬೆಲೆ ಐತಿ ಅಂತ ನಿಮಗ ಆಗ ಗೊತ್ತಾಗತೈತಿ. ನಿಮ್ಮನ್ನ ಹೊಡದು ಬಡದು ನಿಮ್ಮ ಮ್ಯಾಲ ಕೇಸ್ ಹಾಕಿದ್ರ ನಾ ನೋಡೋಕೋತೇನಿ. ನಾವು ಎಲ್ಲಾರೂ ಜೊತೆಗಿದ್ರ ನಮಗ ಯಾರೂ ಏನೂ ಮಾಡಾಕ ಆಗಂಗಿಲ್ಲ. ಎಷ್ಟು ದಿನ ಅಂತ ನಾವು ಕುರಿಗಳಂಗ ಬ್ಯಾ ಅನ್ನೋದು" ಅಂತ ಮಾಸ್ತರ ಕಾಕಾ ಹೇಳಿ ಹೇಳಿ ನಮ್ಮ ನ್ನೆಲ್ಲ ಒಪ್ಪಿಸದಿದ್ರ ಇಂದ ಈ ಸೆಡಗರ ಇರತ್ತಿತ್ತೇನು? ಅಂತ ಅನ್ನಿಸಿ, ಕಾಕಾಗ ನಮಸ್ಕಾರ ಅಂದ ಮನಸ್ಸಿನಾಗ.

ಈ ಎಲೆಕ್ಷನ್ ಬಂದು ನಮ್ಮ ಹೊಲಗೇರಿ ಎರಡಾತು. ಆ ಓಣಿ ಬಸ್ಯಾ, ಶಿವ್ಯಾ ಎಲ್ಲಾರು "ನಾವು ಮೊದಲಿಂದ ಗೌಡ್ರ ನಂಬಿ ಬದುಕ ಸಾಗಿಸಿದವ್ರು... ಈಗ... ತಕ್ಕಡಿ ಹಿಡ್ಕೊಂಡು ಬಂದಿರೋ ಆ ಸಾವಕಾರನ ನಂಬ್ಲಾಕಾಕ್ಕತ್ತೇನು?" ಅಂದರು. ಅಲ್ಲ್ಯದ ಮಾಸ್ತರ ನಮ್ಮ ಒಳ್ಳೆದಕ್ಕ ಹೇಳತಾನು ಖರೆ,... ಅವಂಗ ಗೌಡ್ರ ಮ್ಯಾಲ... ಸಿ... ಸಿಟ್ಟ ಐತಿ; ಅವನ ಸಿಟ್ಟಿನ ಜೋಡಿ ನಾವ್ ಹೋಗಬೇಕೇನು? ಈ ಸಲ ನೀವು ಅ...ವನ್ನ ನಂಬಿ ಹೊಂಟಿರಲ್ಲ ಹೋಗರಿ. ನಿಮಗ ಸುಖಾ ಆದ್ರ ಮುಂದಿನ ಸಲ ನಾವ್ ನೋಡತೇವಿ" ಅಂತ ಕಡ್ಡಿ ಮುರದಂಗ ಜಾರಕೊಂಡರು. ಆದ್ರ ಗೌಡ ಕೊತ ಕೊತ ಕುದ್ದು, "ಈ ಮಾಸ್ತರ ನನ್ಮಗನ್ನ ನಾ ಉಳಿಸಿದ್ದ ಇಂದ ದೊಡ್ಡ ತಪ್ಪಾತು. ಈ ದರಿದ್ರ ಜನಾ ತಿರುಗಿ ಬೀಳಾಂಗ ಮಾಡ್ಯಾನು; ಅವನ ಬಿಡಬ್ಯಾಡ್ರೊ... ಯಾವದರೆ ನೆವದಾಗ ಅವನ ಕಥಿ ಮುಗಿಸಿ ಬಿಡ್ರಿ, ಇಲ್ಲಾ ಕೈಕಾಲು ಮುರಿದು ಬಾಯಿ ಬಿಡಬಾರ ದಂಗ ಮಾಡ್ರಿ... ಅವನ್ನ" ಅಂದರು.

ಆದ್ರ ಮಾಸ್ತರನಿಂದ ಆಟೇಟ ಸಹಾಯ ಪಡೆದಿದ್ದ ಜನ ಏನೂ ಅನ್ನಾಕ ಬರದ್ಹಾಂಗಾಗಿತ್ತು. ಅದಕ್ಕ್ಯ ಮಲ್ಲಪ್ಪನ ಮನಿಮ್ಯಾಲ ರಾತ್ರಿ ಬೆಳತಕಾ ಕಲ್ಲ ಒಗಿತಿದ್ರು, ಮಸ್ತರನ ಮ್ಯಾಲಿನ ಸಿಟ್ಟು ಮಲ್ಯಾನ ತಿನತ್ತಿತ್ತು.

ಮಲ್ಲಪ್ಪದಿನ ದಿಂದ ದಿನಕ್ಕ ಗಟ್ಟಿ ಆಗ್ತಾ ಇದ್ದ. 'ಈ ವ್ಯವಸ್ಥೆಯ ಬೇರು ಗಳನ್ನು ಅಲ್ಲಾಡಿಸ ಬೇಕಾದರೆ ನಮ್ಮ ಕೈಯಲ್ಲೂ ಅಧಿ ಕಾರ ಇರಬೇಕು' ಅನ್ನುವ ಅರಿವು ದಿನದಿಂದ ದಿನಕ್ಕ ಬರ ತೊಡಗಿತ್ತು. ನಾವೇಕೆ ದಿನ ಬೆಳಗಾದರೆ ಅನ್ಯಾಯಕ್ಕೆ ಒಳಗಾಗುತ್ತೇವೆ ಅನ್ನುವುದರ ಹಕೀಕತ್ತು ತಾನು ಎಲ್ಲದರಲ್ಲೂ ಮುಂದಾಗಿ ಓಡಾಡುತ್ತಿರುವು ದರಿಂದ ಸ್ಪಷ್ಟವಾಗ ತೊಡಗಿತು. ತನ್ನೆಲ್ಲ ಶಕ್ತಿ ಮಾಸ್ತರ ಕಾಕಾ ಅಂತ ಮನಸ್ಸು ಹಿಗ್ಗಿತು.

"ಈ ಸಲ ನಾ ಸಾವಾಕಾರ ಸಲುವಾಗಿ ಓಡಾಡೇನಿ... ಮುಂದಿನ ಸಲ... ನ್ಯಾನ... ನಿಂತ್ಯರ!" ಅಂತ ಅಂದುಕೊಂಡು ಮತ್ತೂ ಹಿಗ್ಗಿದ.

ಎಲೆಕ್ಷನ್‌ನ್ಯಾಗ ಆರಿಸಿ ಬಂದ ಮ್ಯಾಲ ಸಾವಕಾರರ ಮನಿಗೋದ. "ಬಾರಪಾ... ಮಲ್ಲಪ್ಪಾ ಬಾ ಬಾ ಒಳಗ. ನೀವ ಹಂಗೆಲ್ಲ ಹೊರಗ ನಿಂದ್ರಬ್ಯಾಡ್ರಿ, ನೀವೆಲ್ಲಾ ಇರದಿದ್ರ ನಾ ಆರಿಸಿ ಬರತ್ತಿದ್ದೇನು?... ನಮ್ಮಂಗ ನೀವೂ ಮನುಷ್ರು, ನಮಗ ಇಂಚಗೇರಿ ಗಿರಿಮಲ್ಲಪ್ಪ (ಗಿರಿಮಲೇಶ್ವರ) ಗುರುಗಳು



ಹೇಳ್ಯಾರು. "ಜಾತಿ ಭೇದ ಮ್ಹಾಡಬ್ಯಾಡ್ರಿ, ಮನುಷ್ಯರಂಗ ಬಾಳ್ವೆ ಮಾಡ್ರಿ ಅಂತ; ನಮ್ಮದು ಇಂಚಗೇರಿ ಸಾಂಪ್ರದಾಯ. ನೀವು ಹಂಗೆಲ್ಲಾ ಹೊರಗ ನಿಂತ್ರ ನಮಗ ಅವಮಾನ... ನಮಗ ನಾವ ಮಾಡಿಕೊಂಡ ಅವಮಾನ" ಅಂದ್ರು, ಹೌದು ಮಾಸ್ತರ ಕಾಕಾ ನಮಗ ಹೇಳ್ಶಿದ್ದ ಮಾತು, ಅವನ ಮಾತು ನಾವ ಎಂದೋ ಕೇಳಿದ್ರ ಅಂತ ಅನ್ನಿಸಿತು ಮಲ್ಲಪ್ಪಗ.

ಮೊದಲ ಸಲ 'ನೀವೂ ಮನುಷ್ಯರು' ಅಂದ ಮಾತು ಕೇಳಿ, ನಾವೂ ಮನುಷ್ಯರು... ಹೌದೌದು... ನಾವೂ... ಮನುಷ್ಯರು ಅಂತ ಹಿರಿಹಿರಿ ಹಿಗ್ಗಿದ.

"ಸಾವಕಾರ್‌ರೆ ನೀವು ನಮ್ಮ ತ್ವಾಟಕ ಬರಬೇಕ್ರಿ, ನಾವೆಲ್ಲಾ ಮಾತಾಡಕೊಂಡೇವಿ. ನಿಮಗ ಮೆರುವಣಿಗೆ ತಗದು ದಿನ್ ಹಾಕಿ ಒಯ್ಯಬೇಕು ಅಂತ. ನಾಳಿ ಐತಾರ ದಿನ ಮಾಸ್ತರ ಕಾಕಾಗೂ ಸಾಲಿ ಸೂಟಿ. ಅವರೂ ಇರತಾರು" ಅಂದ ಮಲ್ಲಪ್ಪ 'ಆ ಗುರುಗೋಳು ಶಕ್ತಿ ಬಾಳ ದೊಡ್ಡದ ಐತಿ. ಬಾಳ ಶಾಣ್ಯಾ ಅದಾರು. ನಮ್ಮ ಮಕ್ಕಳೆಲ್ಲಾ ಅವರ ಕೈಯಾಗ ಕಲ್ಯಾಕ ಹತ್ತಾರು. ನೀವೂ ಎಲ್ಲಾ ಕಲಿತಿದ್ರ ಇಂದ ಅದರ ಬಣ್ಣ್ಯಾ ಬ್ಯಾರೆ ಇರತ್ತಿತ್ತು. ಈಗ ಆದ್ರೂ ಅವರ ಮಾತ ಕೇಳಾಕ ಹತ್ತೇರಿ... ಅಲ್ಲ, ಅಷ್ಟು ಸಾಕು. ನನಗೇನ್ ಮೆರವಣಿಗೆ ತೆಗಿಬ್ಯಾಡ್ರಿ, ಆದ್ರ ನಿಮಗೆಲ್ಲಾ ವೋಟ್ ಹಾಕಿದ್ದಕ್ಕ ನಿಮ್ಮ ಜನರಿಗೆಲ್ಲಾ ಧನ್ಯವಾದ ಹೇಳಾಕ ನಾ ಬರ್‍ತೇನಿ" ಅಂದರು.

ಸಾವಕಾರರು ಎಷ್ಟು ದೊಡ್ಡವರು ಅನ್ನಿಸಿತು ಮಲ್ಲಪ್ಪಗ. ಅವರು ಬರ್‍ತೂನು ಅಂದದ್ದು ಬಾಳ ಖುಷಿಯಾಗಿತ್ತು. ನಮ್ಮ ಮನಿ ಮ್ಯಾಲ ಕಲ್ಲ ಒಗದು ಜಗಳಾ ಮಾಡಿದ್ದ ಆ ಓಣೀ ಜನರ ಮುಂದ ಸಾವ್ಕಾರನ ಕರಕೊಂಡು ಬಂದು ನಿಲ್ಲುಸೋದು, ತನಗ ಅನ್ಯಾಯ ಮಾಡಿದ್ದ ಗೌಡರ ಮುಂದ ಧಿಮಾಕಲೇ ತಿರಗ್ಯಾಡೋದು ಬಾಳಾ ಹುರುಪು ತಂದಿತ್ತು. ಮನಿಮನಿ ತಿರುಗಾಡಿ ತಮ್ಮ ಜನರಿಗೆಲ್ಲಾ ಅಂದು ಮನ್ಯಾಗ ಇರಬೇಕು ಅಂತ ತಾಕೀತು ಮಡಿದ. "ಒಂದು ದಿನ ಕೂಲಿ ಹೋದರ ಏನ್ ಆತು. ಮುಂದಿನ ದಾರಿ ನೋಡಕೋಬೇಕು. ಮೊದಲ ಆ ಗೌಡ್ರನ ಎದುರು ಹಾಕೊಂಡು ಬಿಟ್ಟೇವಿ. ಅವರ ಸಿಟ್ಟ ಕುದ್ಯಾಕ ಹತ್ತೇತಿ. ಅವರ ಏನ್ ಮಾಡಾಕೂ ಹೇಸವರಲ್ಲ. ನೀವ ನಮ್ಮನಮ್ಮ ತಲಿ ಮಾರಿನಾಗ ಏನೇನಾಗಿ, ಯಾರ್‍ಯಾರ ಸತ್ತರು ಅಂತ ನೆಪ್ಪ ಮಾಡಿಕೊಳ್ಳಿ ಅಂದ. ನಮ್ಮ ಹೆಣ್ಮಕ್ಕಳೆಲ್ಲಾ ಆರತಿ ತಯಾರ ಮಾಡಿಕೊಳ್ಳಿ" ಅಂದ.

"ಕಾಕಾ ನಾಳಿ ಐತಾರು ನಿಮ್ಮ ಸಾಲಿ ಸೂಟಿ. ನಿಮ್ಮ ದೋಸ್ತ ಸಾವಕಾರ ಹಾಲಂಬಿ ಅವರ ಮೆರವಣಿಗಿ ಮಾಡಿ ನಮ್ಮ ತ್ವಾಟಕ ತರಬೇಕು ಅಂತ ಮಾಡೇವಿ" ಅಂದ "ಅಲ್ಲೋ ಮಲ್ಲಾ, ಮಾಡ್ರಿ ಬ್ಯಾಡಾ ಅನ್ನುದಿಲ್ಲ. ಆದ್ರ ಆ ದಿನ ಯಾರೂ ಕುಡಿ ಬ್ಯಾಡಿ. ಗಲಾಟೆ-ಗಿಲಾಟೆ ಮಾಡಬ್ಯಾಡ್ರಿ, ಆ ಓಣಿ ಬಸಪ್ಪಣ್ಣಾ, ಶಿವ್ಯಾ ಎಲ್ಲಾರೂ ನಮ್ಮವರ ಅದಾರ. ಅವರನ್ನ ವೈರಿಗಳಂಗ ನೋಡೋದು... ಸರಿ ಅಲ್ಲ. ನಮ್ಮವರನ್ನ ನಾವು ನಾಶ ಮಾಡೋದು ಏನ್ ಭೋಲೊ ಹೇಳು... ಇದ ನಮ್ಮ ಜನಕ್ಕ ತಿಳಿವಾತು. ಎಲ್ಲರೂ ಶಾಂತ ಆಗಿ ಇರರ್ರಿ, ಅವರಿಗೆ ಒಂದ ಮಾತ ಹೇಳ್ರಿ; ಬಂದ್ರ ಬರ್‍ಲಿ" ಅಂದರು.

ಮಾಸ್ತರ ಕಾಕಾನ ಮಾತು ಮಲ್ಲಪ್ಪನ ಮನಸ್ಸಿನಾಗ ನಟ್ಟಿತು. ಅವಸರ-ಅವಸರವಾಗಿ ಹೋಗಿ ಅವರಿಗೂ ಹೇಳಿ ಬಂದ. ಯಾರೂ ಸರಿಯಾಗಿ ಮಾತಾಡಲಿಲ್ಲ. "ಆ ಮಗನ ಧಿಮಾಕ ಎಷ್ಟ ನೋಡ್ರಿ, ಆ ಸಾವಾಕಾರನ್ನ ಮೆರುಣಿಗಿ ಮಾಡಿ ತರತಾನಂತ ಎಂದು ತಮ್ಮ ಅಸಮಾಧಾನ ತೋಡಿಕೊಂಡರು. ಗೌಡ್ರ ಕಿವಿಗೂ ಈ ಸುದ್ದಿ ಗಾಳಿಗಿಂತ ಮೊದಲ ಹೋತು. ಅವರ ಸಿಟ್ಟು ಈ ಜನರನ್ನು ಬದಲಾಯಿಸಿದ್ದ ಮಾಸ್ತರ ಮ್ಯಾಲಕುಂತು.

ಅಂದು, ರವಿವಾರ ಹೊಲೇರ ತ್ವಾಟಕ ಸಂತೋಷ ಅನ್ನುವುದು ಬಂದಿತ್ತು. ಎಂದೂ ಇಲ್ಲದ ಸಂಭ್ರಮ ಆನಂದ. ಹೆಂಗಸರೆಲ್ಲ ಹಳೇ ಟ್ರಂಕಿನಲ್ಲಿ ಮುಚ್ಚಿಟ್ಟ ಸೀರೆಗಳನ್ನು ಹೊರತೆಗಿದಿದ್ದರು. ಮಕ್ಕಳು ಕೇಕೆ ಹಾಕಿ ನಗುತ್ತಿದ್ದವು. ಹುಡುಗರಿಗೆ ಮಂಗ್ಯಾನಾಟ ಮಾಸ್ತರರ ಮಗಳು ಮಾಧವಿ ಸದಾ ಅಪ್ಪನ ಒಡನಾಟದಲ್ಲಿದ್ದರಿಂದ ಎಲ್ಲವೂ ತಿಳಿದಿತ್ತು. "ಅಪ್ಪಾ! ನಾ... ನಾವೂ ಸಾವಕಾರರಿಗೆ ಆರತಿ ಮಾಡಬೇಕೇನು?" ಎಂದಳು. ಅಪ್ಪ ನಿನ್ನಿಷ್ಟ ಅಂದರು. ಈ ಮೆರವಣೀಗೆ ಯಾಕೆ?, ಅದೂ ನಮ್ಮ ತೊಟದಲ್ಯಾಕೆ ಎಂಬ ಪ್ರಶ್ನೆ ಅವಳನ್ನು ಸುಡುತ್ತಿತ್ತು.

ಮಲ್ಲಪ್ಪ ಬಿಳಿ ಮಸರಾಯಿ ಧೋತರದಲ್ಲಿ ಮಿಂಚುತ್ತ, ಧೋತರದ ಚುಂಗ ಕೈಯಲ್ಲಿ ಹಿಡಿದು ಗಂಡಸರು ಮಕ್ಕಳನ್ನು ಕರೆದುಕೊಂಡು ನಡೆದಿದ್ದ. ಮಾಧವಿ ಸುಮ್ಮನೆ ಎಲ್ಲವನ್ನು ನೋಡುತ್ತಿದ್ದಳು. ಎಲೆಕ್ಷನ್‌ಗಾಗಿ ತಮ್ಮ ಹಳೆ ತೋಟದ ಹೊಲವನ್ನು ಮಾರಿದ್ದ ಗೌಡರು ಸೋತು ಸುಣ್ಣವಾಗಿ ನಸುಕಿನಲ್ಲೇ ತಮ್ಮ ಹಳೆ ಮಾರುತಿ ಕಾರಿನಲ್ಲಿ ಸಾಂಗ್ಲಿಗೆ ಹೋದರು ಎಂದು ಕೆಂಚಪ್ಪ ಸುದ್ದಿ ತಂದಿದ್ದ. ಗೌಡರು ತಮ್ಮ ಮಕ್ಕಳ ಓದಿಗಾಗಿ ಸಾಂಗ್ಲಿಯಲ್ಲಿ ಮನೆ ಮಾಡಿದ್ದರು. ಅವರ ಮಗಳು ಕಳೆದ ವರ್ಷ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಡುಮ್ಕಿ ಹೊಡೆದಿದ್ದಳು. ಮಾಸ್ತರರ ಮಗಳು ಮಾಧವಿ ಈ ವರ್ಷ ಫಸ್ಟ್ ಕ್ಲಾಸಿನಲ್ಲಿ ಪಾಸಾಗಿದ್ದಳು. ಊರೆಲ್ಲಾ ಸುದ್ದಿ ಆಗಿತ್ತು. ಗೌಡರ ಕಿವಿಯನ್ನು ತಲುಪಿತ್ತು. ಗೌಡರು ಕರಕರನೇ ಹಲ್ಲು ತಿಂದಿದ್ದರು.

ಮಧ್ಯಾಹ್ನ ಒಂದು ಗಂಟೆ ಸುಮಾರಿಗೆ ಮೆರವಣಿಗೆ ಬಂದಿತು. ಎಲ್ಲ ಹೆಂಗಸರು ಮಕ್ಕಳು ಮಲ್ಲಪ್ಪನ ಮನೆ ಮುಂದೆ ಜಮಾಯಿಸಿದ್ದರು. ಏನೋ ಒಂದು ತೆರನಾದ ಜಾತ್ರೆಯ ಸಡಗರ, ಹೊಸತನ ಅಲ್ಲಿತ್ತು. ಸಾವಕಾರರನ್ನು ಕರೆತಂದು ಕಟ್ಟೆ ಮೇಲೆ ಹಾಸಿ ಕೂಡ್ರಿಸಿದರು. ಆ ಓಣಿಯ ಯಾವ ಬಾಗಿಲುಗಳೂ ತೆರೆಯಲಿಲ್ಲ. ಶಿವಪ್ಪನ ಮಗ ಕಲ್ಲ್ಯಾ ಎಲೆಕ್ಷನ್ ಟೈಮಲ್ಲಿ ಬಿಟ್ಟಿ ಕಂಟ್ರಿ ಸರಾಯಿ ಖಾಲಿ ಹೊಟ್ಟೇಲಿ ಕುಡಿದು ಕುಡಿದು ಹಾಸಿಗೆ ಹಿಡಿದಿದ್ದ. ಹೊಟ್ಟೆಯಲ್ಲಿ ಕರುಳಿಗೆ ಬಾವು ಬಂದಿತ್ತು. ಔಷಧಿಗೆ ದುಡ್ಡಿರಲಿಲ್ಲ. ಯಾವುದೋ ಗಾವಟಿ ಔಷಧ ಕುಡಿಸಿ ಮಲಗಿಸಿದ್ದರು.

ಸುದ್ದಿ ಸಂಗ್ರಾಹಕರ ಕಣ್ಣುಗಳು ಮಾತ್ರ ಇಣುಕುತ್ತಿದ್ದವು. ಮುದುಕ-ಮುದಿಕಿಯರಾರೂ ಮುಂದೆ ಬರಲಿಲ್ಲ. 'ನೀವು ಏನ್ ಮಾಡ್ತಿರೋ ಮಾಡ್ರಿ' ಅಂತ ದೂರ ಕುಂತು ಹಣೆಗೆ ಕೈ ಹಚ್ಚಿ ನೋಡುತ್ತಿದ್ದವು. ಹೆಂಗಸರು ಒಬ್ಬೊಬ್ಬರಾಗಿ ಆರತಿ ಬೆಳಗುತ್ತಿದ್ದು; ನಮಸ್ಕಾರ ಮಾಡುತ್ತಿದ್ದರು. ಸಾವುಕಾರರು ಅವರ ಕೈಗೆ ಬಂದಷ್ಟು ಐದು, ಹತ್ತು, ಇಪ್ಪತ್ತು... ಹೀಗೆ ರೊಕ್ಕ ಇಡುತ್ತಿದ್ದರು. ರೊಕ್ಕ ನೋಡಿ ಆರತಿ ಮಾಡುವ ಕೈಗಳು ಹೆಚ್ಚಿದವು. ಮಾಧವಿಯ ತಾಯಿ ಆರತಿ ಮಾಡಿ ಪಾದ ಮುಟ್ಟಿ ನಮಸ್ಕಾರ ಮಾಡಿದಳು. ಅವಳ ತಟ್ಟೆಗೂ ಇಪ್ಪತ್ತರ ಎರಡು ಕೆಂಪು ನೋಟುಗಳು ಬಿದ್ದವು. ಮಾಧವಿಗೆ ಆರತಿ ತಟ್ಟೆ, ಹಣ ಕಣ್ಮುಂದೆ ಸುಳಿಯಿತು. "ಮಾಧವಿ ನೀನೂ ಬಾ. ಆರತಿ ಮಾಡ ಬಾ" ಅಂತ ತಾಯಿ ಕೂಗಿದ್ದು... ತಾನೇ ಆರಿಸಿ ಬಂದಂತೆ ಕನಸು ಕಾಣುತ್ತ ನಿಂತಿದ್ದವಳಿಗೆ ಕೇಳಿಸಿ, ಬೆಚ್ಚಿ!! ಏನೋ ಕಸಿವಿಸಿ ಆದಂತಾಗಿ ಆರತಿ ಮಾಡದೆ ಅಲ್ಲಿಂದ ಪರಾರಿ ಆದಳು.

ಸಾವಕಾರರಿಗೆ ತುಂಬ ಸಂತೋಷವಾಗಿತ್ತು. ತುಂಬಾ ಹೊತ್ತಿನ ಬಳಿಕ ಅವರನ್ನು ಬಿಟ್ಟು ಬಂದರು. ಆ ಕಡೆ ಓಣಿಯ ಬಾಗಿಲುಗಳ ಸಪ್ಪಳವಾಯಿತು. ಮಲ್ಲಪ್ಪ ಮುಂದೆ ಬರುವ ಎಲೆಕ್ಷನ್‌ನಲ್ಲಿ ತಾನೇ ನಿಲ್ಲುವ ಹವಣಿಕೆಯಲ್ಲಿ ತನ್ನಷ್ಟಕ್ಕೆ ತಾನೇ ನಗುತ್ತಿದ್ದ... ಗುನುಗುತ್ತಿದ್ದ... ಹಾಡು ಹಾಡುತ್ತ ಓಡಾಡುತ್ತಿದ್ದ. ಅವನ ಕಾಲುಗಳು ನೆಲಕ್ಕೆ ತಾಗದೆ ಹಾರುತ್ತಿವೆ ಅನ್ನುವಂತಿತ್ತು ಅವನ ನಡಿಗೆ.

ಝಡ್.ಪಿ ಎಲೆಕ್ಷನ್ ಮುಗಿದು ಮೂರ್‍ನಾಲ್ಕು ತಿಂಗಳಾಗಿತ್ತು. ಅದರ ಕಾವೂ ಕಡಿಮೆಯಾಗಿತ್ತು. ಮಾಸ್ತರರು ತಮ್ಮ ಹೊಲದಲ್ಲಿ ಗಳೆ ಹಾಕಿಸುತ್ತಿದ್ದರು. ಮಾಸ್ತರರ ಹೊಲ ಆ ಓಣಿ ಶಿವಪ್ಪನ ಹೊಲದ ಹತ್ತಿರವಿತ್ತು. ಗಳೆ ಹೊಡೆಯುವಾಗ ಸ್ವಲ್ಪ ಸೀಮೆ ಕಲ್ಲಿನವರೆಗೆ ಎತ್ತುಗಳು ಜಗ್ಗಿದ್ದವು. ಅಷ್ಟೇ ಸಾಕಿತ್ತು ನೋಡಿ! ಹಳೇ ಹಗೆ ತೀರಲು. ಶಿವಪ್ಪ ತನ್ನ ಅಣ್ಣ-ತಮ್ಮರ ಜತೆ ದೊಣ್ಣೆ, ಕೊಡ್ಲಿ, ಬರ್ಚಿ ಸಮೇತ ಬಂದ. ಮಾಸ್ತರರು ತಿಳಿಸಿ ಹೇಳಿದರು. ಆಗ ಅವರು ಮರಳಿ ಹೋದರು. ಗೌಡರ ಕಿವಿಗೆ ಸುದ್ದಿ ಬಿತ್ತು. ಶಿವಪ್ಪನನ್ನು ಕರೆಸಿದರು. ಏನು ಹೇಳಿದರೋ ಗೊತ್ತಿಲ್ಲ. ಬೆಳಗಾಗುವುದರೊಳಗೆ ಮಾಸ್ತರರ ಮೇಲಿನ ಹೊಲದ ಸೀಮೆ ಪಕ್ಕದ ಒಂದು ಸಾಲು ಕಬ್ಬು ಕಡಿದರು. ಮಾಸ್ತರರು ಕುಡಚಿ ಪೊಲೀಸ್ ಸ್ಟೇಷನ್‌ಗೆ ಕಂಪ್ಲೇಂಟ್ ಕೊಡಲು ಹೋದರು. ಗೌಡರು ಕರಾಮತ್ತಿನಿಂದಾಗಿ ಮಾಸ್ತರರೇ ಕೈಗೆ ಕೋಳ ಹಾಕಿಸಿಕೊಂಡಿದ್ದರು. ಅವರ ಹೆಂಡತಿ ಮಕ್ಕಳು ಅಳುತ್ತಿದ್ದರು. ಅವರ ಸಂಕಟ-ತೊಳಲಾಟ ಹೇಳತೀರದು. ಅವರಿಗೆ ಏನೂ ಮಾಡಲು ತೋಚಲಿಲ್ಲ. ಮಾಧವಿಗೆ ಬೇರೆ ಬೇರೆ ಊರುಗಳಿಗೆ ಹೋಗಿ ಬಂದು ಗೊತ್ತಿರಲಿಲ್ಲ. ಪೊಲೀಸ್ ಸ್ಟೇಷನ್‌ಗೆ ಹೋಗಿ ಏನು ಮಾಡುವುದು, ಹೇಗೆ... ಏನೇನೂ ಗೊತ್ತಿರಲಿಲ್ಲ.

ಮೂರು ದಿನವಾದರೂ ಯಾರೂ ಮಾಸ್ತರರನ್ನು ಬಿಡಿಸಿಕೊಂಡು ಬರಲು ಹೋಗಲಿಲ್ಲ. ಎಲ್ಲರೂ ಪೊಲೀಸ್ ಸ್ಟೇಷನ್ ಅಂದರೆ ಹೆದರುತ್ತಿದ್ದರು. ಏಕೆಂದರೆ, ತಮ್ಮೂರಿನ ಗೌಡ ಪೊಲೀಸರನ್ನೇ ಹೊಡೆದುದನ್ನು ಜನ ನೋಡಿದ್ದರು. ಮಲ್ಲಪ್ಪ ಓಡಾಡಿದರೂ ಏನೂ ಪ್ರಯೋಜನವಾಗಿರಲಿಲ್ಲ. ಸಾವಕಾರರೂ ಏನೂ ಮಾಡಲಿಲ್ಲ.

ಮಗಳು ಮಾಧವಿಯ ಮೈ ಕುದಿಯುತ್ತಿತ್ತು. ಅಪ್ಪನ ಕೈ ಹಿಡಿದುಕೊಂಡೇ ಓಡಾಡುತ್ತಿದ್ದ ಮಾಧವಿಗೆ ಬಾಲ್ಯದ ದಿನಗಳ ನೆನಪು ಉಕ್ಕಿ ಉಕ್ಕಿ ಬಂದು ದುಃಖ ಒತ್ತರಿಸಿ ಬರುತ್ತಿತ್ತು. ಬಿಕ್ಕುತ್ತಿದ್ದಳು. ಲಂಗದಿಂದ ಕಣ್ಣೀರೊರೆಸಿಕೊಳ್ಳುತ್ತಿದ್ದಳು. ಅಜ್ಜಿ ಹೇಳುತ್ತಿದ್ದ ಕಥೆಗಳಲ್ಲಿ ಮನುಷ್ಯರು ದೇವರ ವರದಿಂದ ಹಾಗೂ ಮಂತ್ರ-ತಂತ್ರಗಳಿಂದ ಬದಲಾಗುವುದನ್ನು ಕಲ್ಪಿಸಿಕೊಳ್ಳುತ್ತಿದ್ದಳು. ತಾನು ದೆವ್ವವಾಗಿ ಇಲ್ಲವೆ ಹಾವಾಗಿ ಸರಸರನೆ ಹೋಗಿ ಗೌಡ್ರನ್ನು ಕಚ್ಚಬೇಕು. ಅವರು ಬಿದ್ದು ಒದ್ದಾಡುವಾಗ "ನಾನು ...ನಾ.... ನಾನು ಭೀಮಪ್ಪ ಮಾಸ್ತರರ ಮಗಳು ಹ...ಹಹ...ಹಹ... ಹ... ಹ ಎಂದು ನಗಬೇಕು. ಅವರು ಹೆದರಿ ಹೆದರಿ ನಿಮ್ಮಪ್ಪನಿಗೆ ಇನ್ಮುಂದೆ ಏನೂ ಮಾಡಲ್ಲ. ನ.. ನನ ಉಳಿಸು... ಬದುಕಿಸು ಅನಬೇಕು. ಅಪ್ಪ ಹೇಳಿರಲಿಲ್ಲವೆ, "ನಾವು ಯಾರನ್ನೂ ನಾಶ ಮಾಡಬಾರದು, ಯಾರಿಗೂ ಹಿಂಸೆ ಮಾಡಬಾರದು" ಅಂತ. ಅದಕ್ಕಾಗಿ ನಾನು ಅವರನ್ನು ಮತ್ತೆ ಬದುಕಿಸಬೇಕು-ಎಂದೆಲ್ಲ ಕಲ್ಪಿಸಿ ಊಹಿಸಿ ಅಸಾಯಕಳಾಗಿ ಕಣ್ಣೀರು ಹಾಕುತ್ತಿದ್ದಳು.

(೩೭ನೇ ಪುಟಕ್ಕೆ)

ಜೀವಂತ ಶಿಶು ಸಮಾಧಿ

ಹೈದ್ರಾಬಾದ್, ಜು. ೮– ಹೆಣ್ಣು ಶಿಶುಗಳು ಕುಟುಂಬಕ್ಕೆ ಶಾಪ ಎಂಬ ಕೆಟ್ಟ ನಂಬಿಕೆ ಆಂಧ್ರದಲ್ಲಿ ಇನ್ನೂ ಜೀವಂತವಾಗಿದೆ. ರಾಜ್ಯದಲ್ಲಿ ಹೆಣ್ಣು ಶಿಶು ಹತ್ಯೆ ಪ್ರಕರಣಗಳು ಹೆಚ್ಚುತ್ತಿರುವುದು ಇದನ್ನು ಸಾಬೀತು ಮಾಡಿದೆ.

ಗುರುವಾರ ಮೆಹಬೂಬ್ ನಗರ ಜಿಲ್ಲೆಯ ಉಟ್ಕೂರ್ ಗ್ರಾಮದಲ್ಲಿ ಎರಡು ದಿನದ ಹೆಣ್ಣು ಶಿಶುವನ್ನು ಅಜ್ಜನೇ ಹೂತು ಹಾಕಿದ ಹೃದಯ ವಿದ್ರಾವಕ ಘಟನೆ ನಡೆದಿದೆ. ಆದರೆ ಅದೃಷ್ಟವಶಾತ್ ಮಗು ಬದುಕಿದೆ.

ಮಗುವನ್ನು ಹೂತು ಹಾಕಿದ್ದ ಗುಂಡಿ ಚಿಕ್ಕದಾಗಿತ್ತು. ಬೀದಿ ನಾಯಿಗಳು ಮಾಂಸದ ಆಸೆಗೆ ಗುಂಡಿಯನ್ನು ಅಲ್ಪಸ್ವಲ್ಪ ಕೆರೆದಿದ್ದವು. ಹೀಗಾಗಿ ಶಿಶುವಿನ ಒಂದು ಕೈ ಮೇಲಕ್ಕೆ ಬಂದಿತ್ತು. ಹಾದಿ ಹೋಕರು ಇದನ್ನು ಗಮನಿಸಿದಾಗ ಮಗು ಇರುವುದು ಪತ್ತೆಯಾಯಿತು. ಮಗು ಉಸಿರಾಡುತ್ತಿತ್ತು. ಕೂಡಲೇ ಸ್ಥಳೀಯ ಆರೋಗ್ಯ ಕೇಂದ್ರಕ್ಕೆ ಮಗುವನ್ನು ಕರೆದುಕೊಂಡು ಹೋದರು. ವೈದ್ಯರು ಮಗುವಿನ ಆರೋಗ್ಯವನ್ನು ಯಥಾಸ್ಥಿತಿಗೆ ತರಲು ಹಲವು ಗಂಟೆ ಪ್ರಯತ್ನಪಟ್ಟರು.

ಈ ಮಧ್ಯೆ ಮಗುವಿನ ಅಜ್ಜ ಅಬ್ದುಲ್ ರೆಹಮಾನ್ ಹಾಗೂ ಅದರ ತಾಯಿ ಮೆಹರೂನ್‌ಬೀಯನ್ನು ಪೊಲೀಸರು ವಶಕ್ಕೆ ತೆಗೆದುಕೊಂಡಿದ್ದಾರೆ. ಅವರನ್ನು ೧೫ ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಆದರೆ ಇವರಿಬ್ಬರೂ ಈ ಮಗು ತಮಗೆ ಸೇರಿದ್ದಲ್ಲ ಎಂದು ಹೇಳಿದ್ದಾರೆ.

(ಪ್ರಜಾವಾಣಿ)

ಕಡಕೋಳದಲ್ಲಿ ಬಹಿಷ್ಕಾರ

ಬಿಜಾಪುರ ಮೇ. ೧೭ ಬಸವನ ಬಾಗೇವಾಡಿ ತಾಲೂಕಿನ ಕಡಕೋಳದಲ್ಲಿ ಕಳೆದ ಹಲವು ತಿಂಗಳುಗಳಿಂದ ದಲಿತರ ಮೇಲೆ ಸವರ್ಣೀಯರ ಅಘೋಷಿತ ಸಾಮಾಜಿಕ ಬಹಿಷ್ಕಾರ ಮುಂದುವರೆದಿದ್ದು, ದಲಿತರ ಬದುಕು ಅಸಹನೀಯವಾಗಿದೆ.

ಕಳೆದ ಎಂಟು ತಿಂಗಳುಗಳ ಹಿಂದೆ ಕಡಕೋಳ ಗ್ರಾಮದ ಕೆಲ ದಲಿತ ಯುವಕರು ಅಸ್ಪೃಶ್ಯತೆ ವಿರುದ್ಧ ಸಿಡಿದೆದ್ದು ಕೆರೆಯ ನೀರನ್ನು ಮುಟ್ಟಿದ್ದರು. ಆಗ ಸವರ್ಣೀಯರು ದಲಿತರಿಗೆ ಸಾಮಾಜಿಕ ಬಹಿಷ್ಕಾರ ಹಾಕಿದ್ದರು. ಸರ್ಕಾರ ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಸಮರೋಪಾದಿಯಲ್ಲಿ ದಲಿತರಿಗೆ ಪ್ರತ್ಯೇಕವಾಗಿ ಕಿರಾಣಿ ಅಂಗಡಿ, ಹಿಟ್ಟಿನ ಗಿರಣಿ, ಕಾಯಿನ್ ಬಾಕ್ಸ್ ಇವೇ ಮುಂತಾದ ಸೌಲಭ್ಯಗಳನ್ನು ಕಲ್ಪಿಸಿತ್ತು. ಇದರಿಂದ ಸಮಸ್ಯೆ ತಾತ್ಕಾಲಿಕವಾಗಿ ಶಮನವಾಗಿದೆ. ಆದರೆ ದಲಿತರು ಹಾಗೂ ಸವರ್ಣೀಯರ ಮನಸ್ಸು ಇನ್ನೂ ಒಗ್ಗೂಡಿಲ್ಲ. ಹೀಗಾಗಿ ಸಾಮಾಜಿಕ ಬಹಿಷ್ಕಾರಕ್ಕೆ ಒಳಗಾಗಿದ್ದ ದಲಿತರು ಸಮಾಜದ ಮುಖ್ಯವಾಹಿನಿಗೆ ಸೇರುವುದು ಇನ್ನೂ ಕನಸಿನ ಮಾತಾಗಿದೆ.

(ಕನ್ನಡಪ್ರಭ)

ದೇವಸ್ಥಾನ ಪ್ರವೇಶಕ್ಕೆ ದಲಿತ ಯುವಕರ ಪಟ್ಟು; ಜಾತ್ರೆ ಸ್ಥಗಿತ

ಚಿಕ್ಕಮಗಳೂರು: ಏ. ೧೦ ದೇವಸ್ಥಾನ ಪ್ರವೇಶಕ್ಕೆ ಅವಕಾಶ ಕೊಡಲೇಬೇಕೆಂದು ದಲಿತ ಯುವಕರು ಪಟ್ಟು ಹಿಡಿದ ಹಿನ್ನೆಲೆಯಲ್ಲಿ ಅವರ ಮೇಲೆ ಹಲ್ಲೆ ನಡೆದು, ಊರಿನ ಜಾತ್ರೆ ಅರ್ಧಕ್ಕೇ ಸ್ಥಗಿತಗೊಂಡ ಪ್ರಕರಣ ಸಮೀಪದ ಕುರುವಂಗಿಯಲ್ಲಿ ಘಟಿಸಿದೆ.

ಇಲ್ಲಿಗೆ ೫ ಕಿ.ಮೀ. ದೂರದ ಈ ಗ್ರಾಮದಲ್ಲಿ ವಿವಿಧ ಜಾತಿಗಳ ಜನ ವಾಸಿಸುತ್ತಿದ್ದು ಅದರಲ್ಲಿ ಸುಮಾರು ೭೦ ದಲಿತ ಕುಟುಂಬಗಳೂ ಸೇರಿವೆ. ಪ್ರತಿ ವರ್ಷದಂತೆ ಈ ಬಾರಿಯೂ ಇಲ್ಲಿ ಕಳೆದ ಸೋಮವಾರ (ಏ. ೯) ರಂಗನಾಥಸ್ವಾಮಿ ಜಾತ್ರೆ ಆರಂಭವಾಯಿತು. ಅಂದು ತೇರು ಎಳೆವ ಕಾರ್ಯ ಸುಗಮವಾಗಿಯೇ ನಡೆಯಿತು. ಆದರೆ ಮುಂದುವರಿದ ಕಾರ್ಯಕ್ರಮದಲ್ಲಿ ದಲಿತ ಯುವಕರು ವಾದ್ಯ ಬಾರಿಸಿ ನೃತ್ಯ ಮಾಡುವ ಸಂದರ್ಭದಲ್ಲಿ ತಾವೂ ದೇವಾಲಯ ಪ್ರವೇಶಿಸವುದಾಗಿ ಪಟ್ಟು ಹಿಡಿದಿದ್ದು ಪರಿಸ್ಥಿತಿ ಹತೋಟಿ ತಪ್ಪಲು ಕಾರಣವಾಯಿತು.

ದಲಿತ ಹುಡುಗರು ಈ ರೀತಿ ಹಕ್ಕು ಚಲಾಯಿಸುವುದನ್ನು 'ಮೇಲ್ವರ್ಗದ ಜನರೆನಿಸಿಕೊಂಡವರು' ಸಹಿಸಲಿಲ್ಲ. ಆ ಇನ್ನೇನೂ ದಾರಿ ಇಲ್ಲವೆಂದು ಭಾವಿಸಿದ ಅವರು ಅಲ್ಲಿನ ಜಿಲ್ಲಾ ಪಂಚಾಯ್ತಿ ಸದಸ್ಯ ವೆಂಕಟೇಶ್ ಸೇರಿದಂತೆ ಪಟ್ಟುಹಿಡಿದು ಕುಳಿತ ಸುಮಾರು ೧೫ ಹುಡುಗರ ಮೇಲೆ ಹಲ್ಲೆ ನಡೆಸಿದ್ದಾರೆ. ಈ ಪೈಕಿ ಒಬ್ಬ ಇಲ್ಲಿನ ಸರ್ಕಾರಿ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯಬೇಕಾಯಿತು ಎನ್ನಲಾಗಿದೆ.

ಮೊದಲ ದಿನ ಈ ಅಹಿತಕರ ಘಟನೆ ನಡೆದಿದ್ದರಿಂದ ಜಾತ್ರೆಯ ಎರಡನೇ ದಿನ ನಡೆಯಬೇಕಾಗಿದ್ದ 'ಗಳಿಗೆ ತೇರು' ಮತ್ತು ಸಿಡಿ ಮಹೋತ್ಸವ' ನಡೆದೇ ಇಲ್ಲ. ಈ ಮಧ್ಯೆ ಬಿಜೆಪಿಯಿಂದ ಆಯ್ಕೆಯಾಗಿರುವ ಜಿಲ್ಲಾ ಪಂಚಾಯ್ತಿ ಸದಸ್ಯ ವೆಂಕಟೇಶ್, ಗ್ರಾಪಂ ಮಾಜಿ ಉಪಾಧ್ಯಕ್ಷ ಪುಟ್ಟಸ್ವಾಮಿಶೆಟ್ಟಿ, ದೊಡ್ಡರಂಗಶೆಟ್ಟಿ ಅವರ ಸಮ್ಮುಖದಲ್ಲಿ ಮಂಗಳವಾರ ಬೆಳಿಗ್ಗೆ ರಾಜೀ ಮಾಡುವ ಸಂಬಂಧ ಮಾತುಕತೆಯೂ ನಡೆಯಿತು.

ಆದರೆ ದಲಿತ ಯುವಕರು, 'ಹೊಡೆದವರು ಕ್ಷಮೆ ಕೇಳಬೇಕು ಹಾಗೂ ಘಟನೆ ಕುರಿತು ಪೊಲೀಸ್ ಸ್ಟೇಷನ್‌ನಲ್ಲಿ ಮೊಕದ್ದಮೆ ದಾಖಲಾಗಲೇಬೇಕು' ಎಂದು ಒತ್ತಾಯಿಸಿದ್ದರಿಂದ ಸಂಧಾನ ಯತ್ನ ಮುರಿದುಬಿದ್ದಿದೆ.

'ಗ್ರಾಮದಲ್ಲಿ ಮೇಲ್ವರ್ಗದವರೆಲ್ಲಾ ಒಂದೇ ತರಹ ಎನ್ನುವುದಿಲ್ಲ. ಈ ಘಟನೆ ಆಗಬಾರದಿತ್ತು ಎಂದು ಅವರಲ್ಲಿ ಕೆಲವರಿಗೆ ವಿಷಾದವಿದ್ದರೆ ಇನ್ನು ಕೆಲವರು **ಹೀಗೆ ಆಗಿದ್ದೇ ಸರಿ:** ಆ ಯುವಕರಿಗೆ ಹೊಡೆತ ಹಾಕಿದ್ದೇ ಒಳ್ಳೆಯದಾಯ್ತೆಂಬುದು ದಲಿತ ಯುವಕನೊಬ್ಬನ ಹೇಳಿಕೆ.

(ಪ್ರಜಾವಾಣಿ)

ಬಿಸಿಯೂಟಕ್ಕೂ ಬಿಡದ ಅಸ್ಪೃಶ್ಯತೆ

ಗಜೇಂದ್ರಗಡ, ಜೂ ೧೬ 'ಬಿಸಿ ಊಟ ಮಾಡಾಕ ಸಾಲ್ಯಾಗಿನ ಎಲ್ಲಾ ವಿದ್ಯಾರ್ಥಿಗಳಿಗೆ ಪ್ಲೇಟ್ ಕೊಟ್ರ, ನಮ್ಮಿಬ್ಬರಿಗೂ ಮನ್ಯಾಗಿಂದ ತಾಟು ತಂಬಿಗೆ ತೊಗೊಂಡು ಬಂದು ಸಾಲಿನ ಕೊನ್ಯಾಗ ಕೂತು ಊಟ ಮಾಡಲಿಕ್ಕೆ ಹೇಳ್ತಾರ್ರಿ...'

ಪಟ್ಟಣಕ್ಕೆ ಸಮೀಪದ ಮ್ಯಾಕಲ್ ಝರಿ ಗ್ರಾಮದ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಈ 'ವ್ಯವಸ್ಥೆ' ನಡೆದು ಬಂದಿದೆ. ಸುವರ್ಣ ಕರ್ನಾಟಕ ಸಂಭ್ರಮದಲ್ಲಿರುವ ನಮ್ಮ ನಾಡಲ್ಲಿ ಅಳಿಯದೇ ಉಳಿದಿರುವ ಅಸ್ಪೃಶ್ಯತೆಗೆ ರೋಸಿಹೋದ ಮುಗ್ಧ ಬಾಲಕಿಯರ ನೊಂದ ನುಡಿಗಳಿವು...! ಸರಕಾರದ ಪ್ರತಿಷ್ಠಿತ ಯೋಜನೆ 'ಅಕ್ಷರ ದಾಸೋಹ'ದಲ್ಲಿ ಆಚರಿಸಲಾದ ಅಸ್ಪೃಶ್ಯತೆಯ ಪರಿ ಇದು!

ಎರಡನೇ ತರಗತಿ ಓದುತ್ತಿರುವ ಶ್ರೀದೇವಿ ಯಮನಪ್ಪ ಹರಿಜನ ಮತ್ತು ಅವಳ ಸಹೋದರಿ ಭೀಮವ್ವ ಮನೆಯಿಂದ ತಾಟು, ಲೋಟ ತರದಿದ್ದರೆ ಶಾಲಾ ಸಿಬ್ಬಂದಿ ಹಿಂದಕ್ಕೆ ಕಳುಹಿಸುತ್ತಾರೆ. ತಂದರೂ ಸಾಲಿನ ಕೊನೆಯಲ್ಲಿ ಕುಳಿತು ಊಟ ಮಾಡಬೇಕು.

ಅಸ್ಪೃಶ್ಯತೆ ದೇಶಕ್ಕೆ ಅಂಟಿದ ದೊಡ್ಡ ಶಾಪ. ಇದನ್ನು ಬೇರು ಸಹಿತ ಕಿತ್ತೆಸೆಯಬೇಕೆಂದು ಬೋಧಿಸುವ ಶಿಕ್ಷಕರೇ 'ಅಸ್ಪೃಶ್ಯತೆ ಬೀಜ'ವನ್ನು ಬಾಲ್ಯಾವಸ್ಥೆಯಲ್ಲಿಯೇ ಬಿತ್ತಲು ಹೊರಟಿರುವುದು ನಾಗರಿಕ ಸಮಾಜವೇ ತಲೆ ತಗ್ಗಿಸುವಂಥದ್ದು ಎಂದು ಗ್ರಾಮಸ್ಥರು ದೂರಿದ್ದಾರೆ.

ಶಾಲೆಯಲ್ಲಿ ಗ್ರಾಮಸ್ಥರು ಕೊಡಿಸಿದ ೭೦ ತಾಟುಗಳಲ್ಲಿ ಎಲ್ಲ ವಿದ್ಯಾರ್ಥಿಗಳು ಊಟ ಮಾಡುತ್ತಾರೆ. 'ಆದರೆ ಗ್ರಾಮದಲ್ಲಿ ನಮ್ಮದೊಂದೇ ದಲಿತ ಸಮುದಾಯಕ್ಕೆ ಸೇರಿದ ಕುಟುಂಬ. ಶ್ರೀದೇವಿ ಮತ್ತು ಭೀಮವ್ವ ಅವರಿಗೆ ಮನೆಯಿಂದಲೇ ತಾಟು ತೆಗೆದುಕೊಂಡು ಬರಲು ಹೇಳಿದ್ದರಿಂದ ಎಲ್ಲ ಮಕ್ಕಳ ಜತೆ ಕುಳಿತು ಊಟ ಮಾಡುವ ಸೌಭಾಗ್ಯ ಪಡೆದಿಲ್ಲ' ಎಂಬುದು ಬಾಲಕಿಯರ ಪೋಷಕರ ಮನದಾಳದ ಮಾತು.

(ವಿಜಯ ಕರ್ನಾಟಕ)



ಕರ್ನಾಟಕದಲ್ಲಿ ಸಾರಾಯಿ ನಿಷೇಧ

ಸಾರ್ವಜನಿಕರಲ್ಲಿ ಮನವಿ

ನಾಗರಿಕ ಬಂಧುಗಳೇ

ತಮಗೆಲ್ಲ ತಿಳಿದಿರುವಂತೆ ಸಾರಾಯಿ ಬಡವರ, ಬಡಮಧ್ಯಮ ವರ್ಗದವರ ಬದುಕನ್ನು ಬೀದಿಪಾಲು ಮಾಡುವ ಹಾನಿಕರ ಪೇಯ. ಇದರ ಕುಡಿತದ ಅಮಲಿನಲ್ಲಿ ಬದುಕಿನ ಜಂಜಾಟ ಮತ್ತು ಒತ್ತಡಗಳು ಇಲ್ಲವಾಗುತ್ತವೆ ಎಂಬುದು ತಪ್ಪು ಕಲ್ಪನೆ. ವಾಸ್ತವವಾಗಿ ಸಾರಾಯಿ ಬಡ ಜನರ ಇಡೀ ದುಡಿಮೆಯ ಸಂಪಾದನೆಯನ್ನು ಬಲಿ ತೆಗೆದುಕೊಳ್ಳುವುದಲ್ಲದೆ ಕುಡಿತದ ಚಟಕ್ಕೆ ಬಲಿಯಾದವರ ಆರೋಗ್ಯವನ್ನು ಸಹ ಹಾಳು ಮಾಡುತ್ತದೆ. ಸಾರಾಯಿ ಪಿಡುಗು ಇಡೀ ಕುಟುಂಬದ ಬದುಕನ್ನೇ ನರಕ ಸದೃಶ ಮಾಡುತ್ತಿರುವುದು ಅಮಾನವೀಯ ಮತ್ತು ಅಸಹನೀಯ ದುರಂತ.

ಬಡವರ ಜೀವನವನ್ನು ಹಾಳುಗೆಡುವುತ್ತಿರುವ ಸಾರಾಯಿ ಪಿಡಗಿಗೆ ಇತಿಶ್ರೀ ಹೇಳಲೇಬೇಕೆಂಬ ದೃಢ ಸಂಕಲ್ಪದೊಂದಿಗೆ ನಮ್ಮ ಸರ್ಕಾರ ಜುಲೈ ೧, ೨೦೦೭ರಿಂದ ರಾಜ್ಯಾದ್ಯಂತ ಶಾಸನಬದ್ಧವಾಗಿ ಸಾರಾಯಿ ನಿಷೇಧವನ್ನು ಜಾರಿಗೊಳಿಸುತ್ತಿದೆ.

ಜನಸಾಮಾನ್ಯರ ಕಲ್ಯಾಣ ಮತ್ತು ಅಭಿವೃದ್ಧಿಯನ್ನೇ ಧ್ಯೇಯವಾಗಿಸಿಕೊಂಡಿರುವ ನಮ್ಮ ಸರ್ಕಾರ ರೈತರ ಸಾಲಮನ್ನಾ, ಲಾಟರಿ ನಿಷೇಧದ ನಂತರ ಸಾರಾಯಿ ನಿಷೇಧದಂತಹ ಕಠಿಣ ಆದರೆ ಚಾರಿತ್ರಿಕ ನಿರ್ಣಯವನ್ನು ತೆಗೆದುಕೊಂಡಿದೆ. ಈ ಮೂರು ಕ್ರಮಗಳಿಂದ ಸರ್ಕಾರದ ಬೊಕ್ಕಸಕ್ಕೆ ಹಲವು ಸಾವಿರ ಕೋಟಿ ರೂಪಾಯಿಗಳ ಆದಾಯ ತಪ್ಪಿ ಹೋಗುತ್ತಿದೆ. ಆದರೆ 'ಆದಾಯಕ್ಕಿಂತ ಆತ್ಮತೃಪ್ತಿ ಮೇಲು', ನಮಗೆ ಜನಸಮುದಾಯದ ಆರೋಗ್ಯ ಮತ್ತು ಅವರ ಬದುಕು ಮುಖ್ಯ. ದುಶ್ಚಟಕ್ಕೆ ಈಡಾದ ಜನಸಮುದಾಯವು ಅದರಿಂದ ಹೊರಬಂದು ಜೀವನಮಟ್ಟವನ್ನು ಸುಧಾರಿಸಿಕೊಂಡಾಗ ಸಹಜವಾಗಿ ಸಮೃದ್ಧಿ ತಾನೇ ತಾನಾಗಿ ಮೈದಾಳಲಿದೆ.

ಸರ್ಕಾರದ ಈ ಕ್ರಮ ರಾಜ್ಯದ ಸಾರ್ವಜನಿಕರಿಗೆ ಅದರಲ್ಲೂ ಕುಡಿತಕ್ಕೆ ಬಲಿಯಾದ ಕುಟುಂಬಗಳಿಗೆ ನೆಮ್ಮದಿ ತರುವುದೆಂದು ನಮ್ಮ ಆಶಯ ಅಲ್ಲದೇ ಈವರೆಗೂ ಸಾರಾಯಿ ಉದ್ಯೋಗದಲ್ಲಿ ತೊಡಗಿಸಿಕೊಂಡವರ ಭವಿಷ್ಯವನ್ನು ನಮ್ಮ ಸರ್ಕಾರ ಗಮನದಲ್ಲಿಟ್ಟುಕೊಂಡಿದೆ.

ಸಾರಾಯಿ ನಿಷೇಧದಿಂದ ಕಳ್ಳಭಟ್ಟಿ ಅಥವಾ ನಕಲಿ ಸಾರಾಯಿ/ ನಕಲಿ ಮದ್ಯ/ ವಿಷಪೂರಿತ (ಮೆಥನಾಲ್ ಇತ್ಯಾದಿ) ಮದ್ಯ ತಯಾರಿಕೆ ಮತ್ತು ಮಾರಾಟದಂತಹ ಅಕ್ರಮ ಮಾರ್ಗಗಳನ್ನು ಯಾರೂ ಅನುಸರಿಸಬಾರದೆಂದು ನಮ್ಮ ವಿನಮ್ರ ಕೋರಿಕೆ. ಅಂತಹ ಪ್ರಕರಣಗಳೂ ಕಂಡು ಬಂದಲ್ಲಿ ಸಂಬಂಧಪಟ್ಟವರು ತೀವ್ರ ದಂಡನೆಗೆ ಗುರಿಯಾಗುವರೆಂಬ ಸೂಚ್ಯ ಎಚ್ಚರಿಕೆಯನ್ನು ನೀಡುವುದು ನಮ್ಮ ಕರ್ತವ್ಯ ಎಂದು ಭಾವಿಸುತ್ತೇವೆ. ಕಳ್ಳ ಭಟ್ಟಿ ದಂಧೆಯಲ್ಲಿ ತೊಡಗಿಸಿಕೊಂಡವರ ಬಗ್ಗೆ ನಾಗರಿಕ ಬಂಧುಗಳ ಗಮನಕ್ಕೆ ಬಂದಲ್ಲಿ, ದಯಮಾಡಿ ಆ ಕುರಿತು ಹತ್ತಿರದ ಅಬಕಾರಿ ಅಧಿಕಾರಿಗಳು ಅಥವಾ ಪೊಲೀಸರಿಗೆ ಮಾಹಿತಿ ನೀಡಬೇಕಾಗಿ ಬಿನ್ನಹ. ಇದು ನಮ್ಮೆಲ್ಲರ ಜವಾಬ್ದಾರಿಯೂ ಸಹ.

ಸರ್ಕಾರ, ಜಾಗೃತ ಸಮುದಾಯ ಮತ್ತು ಸಮಾಜ ಒಟ್ಟಾಗಿ ಶ್ರಮಿಸಿದಲ್ಲಿ ನಮ್ಮ ಕನಸಿನ ಸುರಾಜ್ಯವನ್ನು ನನಸು ಮಾಡಲು ಸಾಧ್ಯ. ದಯಮಾಡಿ ನಮ್ಮೀ ಪ್ರಯತ್ನಕ್ಕೆ ತಮ್ಮ ಸಹಕಾರ ಬೆಂಬಲವಿರಲೆಂದು ಭಿನ್ನವಿಸುತ್ತವೆ.

ಹೆಚ್.ಡಿ. ಕುಮಾರಸ್ವಾಮಿ
ಮುಖ್ಯಮಂತ್ರಿಗಳು

ಬಿ.ಎಸ್. ಯಡಿಯೂರಪ್ಪ
ಉಪಮುಖ್ಯಮಂತ್ರಿಗಳು

ಕರ್ನಾಟಕ ವಾರ್ತೆ
Karnataka Information

ಮನಸ್ಸು ಕದಡಿದ ಒಂದು ವಾಚಕರವಾಣಿ

ಮಾತಿನ ಹಂಗು



ರಹಮತ್ ತರೀಕೆರೆ

ಪತ್ರಿಕೆಗಳಲ್ಲಿ ನಾನು ತಪ್ಪದೇ ಓದುವ ಭಾಗವೆಂದರೆ, ವಾಚಕರವಾಣಿ. ಕಾರಣ, ಅದರಲ್ಲಿ ನಮ್ಮ ಸಮಾಜದ ಬೇರೆಬೇರೆ ಸ್ತರದ ಜನರ ಕಷ್ಟಸುಖಗಳೂ ಅಭಿಪ್ರಾಯಗಳೂ ಪ್ರಕಟವಾಗುತ್ತವೆ. ತಮ್ಮ ಅನುಭವಕ್ಕೆ ಬಂದಿದ್ದನ್ನು ಸುತ್ತುಬಳಸಿಲ್ಲದೆ ವಾಗಾಡಂಬರವಿಲ್ಲದೆ ನೇರವಾಗಿ ಮತ್ತು ತಕ್ಷಣವೇ ಹಂಚಿಕೊಳ್ಳುವುದು ಇಲ್ಲಿನ ವಿಧಾನ. ತಾತ್ಕ್ಷಣಿಕತೆ ಮತ್ತು ಸರಳತೆಗಳೇ ಇದರ ಶಕ್ತಿಯಾಗಿವೆ. ಇದುವೇ ಕೆಲವೊಮ್ಮೆ ಈ ಪತ್ರಗಳಿಗೆ ವಾಗ್ವಾದ ಹುಟ್ಟಿಸಬಲ್ಲ ಮತ್ತು ಜನಾಭಿಪ್ರಾಯ ರೂಪಿಸುವ ಗುಣಕ್ಕೂ ಕಾರಣವಾಗಿದೆ. ಬಹಳ ಮುಖ್ಯವೆಂದರೆ, ತಾರಾಮೌಲ್ಯ ಇಲ್ಲದವರೂ ಸುದ್ದಿ ಮಾಡಬಹುದಾಗ ಇದು ನಮ್ಮ ಸಾರ್ವಜನಿಕ ಬರೆಹದ ಪ್ರಕಾರವಾಗಿರುವುದು. ಲೇಖಕರಲ್ಲದ ಲೇಖಕರು ಬರೆಯುವ ಈ ಪತ್ರಗಳಲ್ಲಿ ಎಷ್ಟೋ ಕತೆ-ಕವಿತೆಗಳಲ್ಲಿ ಕಾಣದ ಸೃಜನಶೀಲತೆ ಕಾಣುತ್ತದೆ; ಕೆಲವು ದೊಡ್ಡ ವಿದ್ವಾಂಸರು ಶ್ರಮಪಟ್ಟು ಬರೆಯುವ ಸಂಶೋಧನೆಯಲ್ಲಿ ಇಲ್ಲದ ಚಿಂತನಶೀಲತೆ, ರಾಜಕೀಯ ಪ್ರಜ್ಞೆ ಮತ್ತು ಉಪಯುಕ್ತತೆ ಕಾಣುತ್ತದೆ.

ಪತ್ರ ಬರೆಯುವವರು ತಮ್ಮ ವೈಯಕ್ತಿಕ ಕಷ್ಟಸುಖಕ್ಕೆ ಮಾತ್ರವಲ್ಲದೆ, ಪರಿಸರದ ಜನರ ನೋವಿಗೆ ಮಿಡಿಯುವಂತೆ ರೂಪಾಂತರಗೊಳ್ಳುವ ಕಾರಣ, ಈ ಬರೆಹಕ್ಕೆ ಸಮಾಜವಾದಿ ಆಯಾಮವೂ ಇದೆ. ಇದು ಕಷ್ಟ ಬಂದವರು ಬಂದು ಬಾರಿಸಲು ಅರಮನೆ ಮುಂದೆ ಕಟ್ಟಿದ ಗಂಟೆಯಂತೆ ಕಾಣುತ್ತದೆ. ಬುಶ್ ಭಾರತಕ್ಕೆ ಬಂದಾಗ ಬೆಳಗಿನ ಉಪಾಹಾರಕ್ಕೆ ಏನು ತೆಗೆದುಕೊಳ್ಳುತ್ತಾನೆ, ಅಮಿತಾಭನು ತನ್ನ ಸೊಸೆಗೆ ಯಾವ ಊರಲ್ಲಿ ಸೀರೆ ಖರೀದಿ ಮಾಡಿದನು ಎಂಬುದನ್ನೆಲ್ಲ ಮುಖಪುಟದ ಸುದ್ದಿಯಾಗಿ ಪ್ರಕಟಿಸುವ ಪತ್ರಿಕೆಗಳೇ, ಇರುವೆಗಳು ತಮ್ಮ ಗೂಡಿಗೆ ನೀರು ನುಗ್ಗಿದೆಯೆಂದು ಕೂಗಿ ಹೇಳುವ ವಾಚಕರವಾಣಿಯನ್ನೂ ಪ್ರಕಟಿಸುತ್ತವೆ. ಕನ್ನಡ ಪತ್ರಿಕೆಗಳು ಪ್ರಾದೇಶಿಕ ಆವೃತ್ತಿಗಳಾಗಿ ಅಲ್ಲಿನ ಸುದ್ದಿ ಇಲ್ಲಿಗೆ ತಲುಪದ ಗೋಡೆಗಳು ಎದ್ದಿರುವ ಸಂದರ್ಭದಲ್ಲಿ, ರಾಜ್ಯದ ಎಲ್ಲರಿಗೂ ಮುಟ್ಟಲು ಸಾಧ್ಯವಿರುವುದು ವಾಚಕರವಾಣಿಯಲ್ಲಿ.

ಇದನ್ನೆಲ್ಲ ಹೇಳುವಾಗ, ನಮ್ಮ ಪತ್ರಿಕೆಗಳು ಅಷ್ಟೊಂದು ಮುಕ್ತವಲ್ಲ. ಅವು ಅನೇಕ ಬಗೆಯ ಸೈದ್ಧಾಂತಿಕ ಸಾಮಾಜಿಕ ರಾಜಕೀಯ ನಿಯಂತ್ರಣಗಳ ಒಳಗೆ ಪ್ರಕಟವಾಗುತ್ತವೆ ಎನ್ನುವ ವಾಸ್ತವವನ್ನು ಮರೆಯುವಂತಿಲ್ಲ. ಅವು ತಮ್ಮ ಅಥವಾ ತಮ್ಮ ಒಡೆಯರ ದೃಷ್ಟಿಕೋನಕ್ಕೆ ತಕ್ಕನಾದ ಪತ್ರ ಹಾಕುವುದು, ವಿರುದ್ಧವಾದುದನ್ನ ಹಾಕದಿರುವುದು, ತಾವೇ ಖೊಟ್ಟಿ ಪತ್ರಗಳನ್ನು ಸೃಷ್ಟಿಸುವುದು ಇವೆಲ್ಲ ಇವೆ; ಅದರಲ್ಲೂ ಮತೀಯ ಸಿದ್ಧಾಂತಕ್ಕೆ ತೆತ್ತುಕೊಂಡ ಪತ್ರಿಕೆಗಳಲ್ಲಿ ಈ ಸಾರ್ವಜನಿಕರಿಗೆ ಇರುವ ಈ ಡೆಮಕ್ರಟಿಕ್ ಸ್ಪೇಸ್ ಮತ್ತಷ್ಟು ಸಂಕುಚಿತಗೊಳ್ಳುತ್ತದೆ; 'ಆವರಣ' ಕಾದಂಬರಿಯ ಚರ್ಚೆಯ ಸಂದರ್ಭದಲ್ಲಿ ಅನಂತಮೂರ್ತಿ ಅವರ ಮೇಲೆ ಹಲ್ಲೆ ಮಾಡಲು ಕೆಲವು ಪತ್ರಿಕೆಗಳು ವಾಚಕರವಾಣಿಯಲ್ಲಿ ಸಾರ್ವಜನಿಕ ಅಭಿಪ್ರಾಯವನ್ನು ತಾವೇ ಉತ್ಪಾದನೆ ಮಾಡಿದವು. ಆದರೆ ಇದ್ದುದರಲ್ಲಿ 'ಪ್ರಜಾವಾಣಿ'ಯ ವಾಚಕರವಾಣಿಗೆ ಉದಾರವಾದಿ ಸ್ವರೂಪವಿದೆ. ನಮ್ಮ ಸಾರ್ವಜನಿಕ ಬದುಕಿನ ಅನೇಕ ಮುಖ್ಯ ಸಮಸ್ಯೆಗಳ ಚರ್ಚೆಗೆ ಅದು ಮೊದಲಿಂದಲೂ ವೇದಿಕೆಯಾಗಿದೆ. ಸಮಸ್ಯೆಯೆಂದರೆ, ಪತ್ರಿಕೆಯ ಆಹ್ವಾನವಿಲ್ಲದೆ ಸ್ವಯಂ ಪ್ರೇರಿತರಾಗಿ ಈ ಪತ್ರಗಳನ್ನು ಬರೆಯಬೇಕು. ಗಣ್ಯತೆಯಿಂದಲೊ ಸಂಕೋಚದಿಂದಲೊ ನಿರ್ಲಿಪ್ತತೆಯಿಂದಲೊ, ಅಥವಾ ತಮ್ಮ ಸಂಕೀರ್ಣವಾದ ಅಭಿಪ್ರಾಯವನ್ನು ಅಲ್ಲಿ ಮಂಡಿಸುವುದು ಕಷ್ಟವೆಂತಲೊ, ಅನೇಕರು ಈ ಜಾಗವನ್ನು ಬಳಸುವುದಿಲ್ಲ.

ಆದರೆ ಎಂ. ಚಿದಾನಂದಮೂರ್ತಿ, ಜಿ. ರಾಮಕೃಷ್ಣ, ಮರುಳುಸಿದ್ಧಪ್ಪ, ಜಿ.ಕೆ. ಗೋವಿಂದರಾವ್, ಬರಗೂರು, ಅನಂತಮೂರ್ತಿ, ಜಿ.ಎಚ್.ನಾಯಕ, ದೇವನೂರ ಮಹಾದೇವ-ಹೀಗೆ ಹೆಸರಾಂತ ಚಿಂತಕರು ಲೇಖಕರು ಪತ್ರಿಕೆಗಳಿಗೆ ಪತ್ರ ಬರೆಯುತ್ತಾರೆ. ಕೆ.ವಿ. ಸುಬ್ಬಣ್ಣ ತುಂಬ ಬರೆಯುತ್ತಿದ್ದರು. ವಾಚಕರವಾಣಿಯ ಸ್ಪೇಸಿನ ಮಹತ್ವವನ್ನು ಚೆನ್ನಾಗಿ ತಿಳಿದವರಲ್ಲಿ ಚಿದಾನಂದಮೂರ್ತಿ ಅವರೂ ಒಬ್ಬರು. ಆದರೆ ಅವರು ರೂಢಿಸ ಬಯಸುವ ಜನಾಭಿಪ್ರಾಯವು ನಮ್ಮ ಜನರ ದೈನಿಕ ಬದುಕಿನ ಹೋರಾಟ ನೋವು-ನಲಿವುಗಳಿಗೆ ಸಂಬಂಧಪಟ್ಟಿರುವುದಿಲ್ಲ. ಇದೊಂದು ವ್ಯಂಗ್ಯ.

ಈ ಹಿನ್ನೆಲೆಯಲ್ಲಿ ಅಷ್ಟೊಂದು ಗಣ್ಯವ್ಯಕ್ತಿ ಅನಿಸಿಕೊಂಡಿರದ ಶ್ರೀಮತಿ ಭಾಗ್ಯ ಹಾಗಲಗಂಚಿ ಎಂಬ ಗೃಹಿಣಿಯು, ಶೃಂಗೇರಿ ಭಾಗದ ಯಾವುದೊ ಕಾಡಿನ ಮೂಲೆಯಲ್ಲಿ ಕುಳಿತು, ಕಳೆದ ಎರಡು ಮೂರು ವರ್ಷಗಳಿಂದ ಬರೆಯುತ್ತಿರುವ ಪತ್ರಗಳು ಮುಖ್ಯವಾಗಿವೆ; ಇವು ಮಲೆನಾಡಿನ ಕಾಡನ್ನು ರಾಷ್ಟ್ರೀಯ ಉದ್ಯಾನವಾಗಿ ಘೋಷಿಸಿ, ಅಲ್ಲಿ ನಕ್ಸಲ್ ಚಳವಳಿ ನೆಲೆಯೂರಿದ ಬಳಿಕ, ನಡೆಯುತ್ತಿರುವ ವಿದ್ಯಮಾನಗಳನ್ನು ನಾಡಿನ ಗಮನಕ್ಕೆ ತರುತ್ತಿವೆ. ಈ ಪತ್ರಗಳು ನಾನಾ ಕಷ್ಟಗಳಿಗೆ ಗುರಿಯಾಗಿರುವ ಅಲ್ಲಿನ ಜನರ ದನಿಗಳಾಗಿವೆ. ಆದಿವಾಸಿಗಳ ಹಕ್ಕಿನ ಪರವಾಗಿ ನಿಂತಿರುವ ನಕ್ಸಲ್ ಚಳವಳಿಯೂ ಅದನ್ನು ದಮನಿಸಲು ಸರ್ಕಾರ ನಿಯೋಜಿಸಿರುವ ನಕ್ಸಲ್ ನಿಗ್ರಹದಳವೂ ಸೃಷ್ಟಿಸಿರುವ ಸಂಘರ್ಷವು, ಅಲ್ಲಿನ ಆದಿವಾಸಿಗಳ ಬದುಕಿನಲ್ಲಿ ಆಸರೆ ಮತ್ತು ದಾರುಣತೆ ಎರಡನ್ನೂ ಸೃಷ್ಟಿಸಿದಂತಿದೆ. ಅಲ್ಲಿನ ವಿದ್ಯಮಾನಗಳ ಬಗ್ಗೆ ಪತ್ರಿಕೆಗಳು, ರಾಜಕಾರಣಿಗಳು, ಪೋಲಿಸರು, ನಕ್ಸಲರು, ಸಂಘಪರಿವಾರದವರು ತಂತಮ್ಮ ದೃಷ್ಟಿಕೋನದ 'ಸತ್ಯ'ಗಳನ್ನು ಪ್ರಕಟಿಸುತ್ತ ಬಂದಿದ್ದಾರೆ. ಅವುಗಳ ನಡುವೆ, ಭಾಗ್ಯ ತರಹದ ಸಾಮಾನ್ಯರು ತಮ್ಮ ಪತ್ರಗಳ ಮೂಲಕ ಕೊಡುವ ಸತ್ಯಗಳು ವಿಶಿಷ್ಟವಾಗಿವೆ. ಇವು ಒಕ್ಕಲೇಳುವ ಕಷ್ಟಕ್ಕೆ ಒಳಗಾಗಿರುವ ಆದಿವಾಸಿಗಳ ಭಾವನೆಗಳನ್ನು ಒಳಗೊಂಡಿವೆ. ಮಾತ್ರವಲ್ಲ, ಅವರ ಸಮಸ್ಯೆಯನ್ನು ಬಗೆಹರಿಸುವ ಹೊಳಹುಗಳನ್ನೂ ಒಳಗೊಂಡಿವೆ.

ಆದರೆ ಭಾಗ್ಯ ಅವರು ಈಚೆಗೆ ಪತ್ರಿಕೆಗೆ ಬರೆದ ಒಂದು ಪತ್ರವು ಮನಕದಡುವಂತಿದೆ. ಕಾರಣ, ಅದು ಜನರ ಕಷ್ಟವನ್ನು ಕುರಿತಾಗಿಲ್ಲ. ಜನರ ಕಷ್ಟವನ್ನು ಕುರಿತು ಅವರು ಪತ್ರಿ

ಈ ಪತ್ರವು ಕರ್ನಾಟಕದ ಸಾರ್ವಜನಿಕ ಬದುಕಿನ ದುಃಸ್ಥಿತಿಯನ್ನು ಸೂಚಿಸುತ್ತಿದೆ. ಪ್ರಭುತ್ವಕ್ಕೆ ನಾಗರಿಕ ಸಮಾಜದ ಟೀಕೆಟಿಪ್ಪಣಿ ಮತ್ತು ಪ್ರತಿರೋಧಗಳ ಅಂಕುಶವಿಲ್ಲದೆ ಹೋದರೆ, ಅದು ಅಮಾನುಷವಾದ ರೂಪಾಂತರ ಪಡೆಯುತ್ತದೆ. ಎಲ್ಲಪಕ್ಷಗಳ ಸರ್ಕಾರಗಳು ದೇಶದಾದ್ಯಂತ ಜನರ ಮೇಲೆ ಬಲಾತ್ಕಾರವಾಗಿ ಹೇರುತ್ತಿರುವ ದೊಡ್ಡ ಉದ್ಯಮಪರವಾದ ಯೋಜನೆಗಳು, ಹೊಸ ಬಗೆಯ ಸಂಕಟಗಳನ್ನು ಸೃಷ್ಟಿಸಿವೆ. ಇದಕ್ಕೆ ಪ್ರತಿಯಾಗಿ ಜನ ಮಾಡುವ ಪ್ರತಿರೋಧವನ್ನು ಕ್ರೂರವಾಗಿ ಹತ್ತಿಕ್ಕುತ್ತಿವೆ. (ಈ ಕಾರ್ಯದಲ್ಲಿ ಕಮ್ಯುನಿಸ್ಟ್ ಸರ್ಕಾರಗಳೂ ಹಿಂದೆ ಬಿದ್ದಿಲ್ಲ ಎಂಬುದನ್ನು ಬಂಗಾಳದ ನಂದಿಗ್ರಾಮದ ಘಟನೆ ತೋರಿಸಿಕೊಟ್ಟಿದೆ.) ಇಂತಹ ಸನ್ನಿವೇಶದಲ್ಲಿ ಜನ ತಮ್ಮ ಕಷ್ಟಗಳನ್ನು ನಾಗರಿಕ ಜಗತ್ತಿನ ಜತೆ ತೋಡಿಕೊಳ್ಳುವ ಅವಕಾಶವನ್ನೂ ನಿರಾಕರಿಸಲಾಗುತ್ತಿದೆ. ಮೇಧಾಪಾಟ್ಕರ್ ಅವರಂತಹ ಅಂತರಾಷ್ಟ್ರೀಯ ಕೀರ್ತಿಯುಳ್ಳ ಮಹಿಳೆಯ ವಿಷಯದಲ್ಲಿ ನಮ್ಮ ಸರ್ಕಾರಗಳು ನಡೆಸಿಕೊಂಡಿರುವ ರೀತಿ ನೋಡುವಾಗ, ಭಾಗ್ಯ ಅವರ ಜಪ್ತಿಪ್ರಕರಣ ಸೋಜಿಗವಲ್ಲ.

ಕೆಗಳಿಗೆ ಪತ್ರ ಬರೆದುದರ ಪರಿಣಾಮವನ್ನು ಒಳಗೊಂಡಿದೆ. ಅದರ ಪ್ರಕಾರ, ಪೋಲಿಸರು ನಕ್ಸಲ್ ಬೆಂಬಲಿಗರು ಎಂದು ಅವರ ಮನೆಯನ್ನು ಜಪ್ತಿ ಮಾಡಿದ್ದಾರೆ. ಒರಟಾಗಿ ಮಾತಾಡಿದ್ದಾರೆ. ಬೆದರಿಸಿದ್ದಾರೆ. ಇದರಿಂದ ನೊಂದಿರುವ ಅವರು ತಮ್ಮ ವೇದನೆಯನ್ನು ಇದರಲ್ಲಿ ತೋಡಿಕೊಂಡಿದ್ದಾರೆ. ಇದರಿಂದ ಕಾಡಿನಲ್ಲಿ ನಾಲ್ಕು ಕಿ.ಮೀ. ದೂರ ನಡೆದು ಹೋಗುವ ತಮ್ಮ ಪುಟ್ಟಮಗುವಿಗೆ ಶಾಲೆಗೆ ಕಳಿಸಲು ಸಾಧ್ಯವಾಗುತ್ತಿಲ್ಲ ಎಂದು ಬರೆದಿದ್ದಾರೆ. ಅವರ ಪತ್ರದ ಪ್ರಕಾರ ಪೋಲಿಸರು ಜಪ್ತಿ ಮಾಡಿರುವ ವಸ್ತುಗಳು ಇವು:

"ಪತ್ರಿಕೆಗಳಿಗೆಂದು ಬರೆದಿಟ್ಟುಕೊಂಡ ಕವನ, ಕಥೆ, ಪತ್ರ, ಲೇಖನಗಳು, ಪತ್ರಿಕೆಗಳಲ್ಲಿ ಪ್ರಕಟವಾದ ನನ್ನ ಬರಹಗಳು, ಅದಕ್ಕೆ ಬಂದ ಅಭಿಮಾನಿಗಳ ಪತ್ರ, ಪಿಯುಸಿಎಲ್, ಸಕಾಲ, ಮುಂತಾದ ವಾರ್ತಾಪತ್ರ, ಮ್ಯಾಗಸಿನ್‌ಗಳು, ಭಾವಗೀತೆ ಸಿಡಿಗಳು, ಅಲ್ಲದೆ ನಮ್ಮವರು ಬರೆದಿಟ್ಟುಕೊಂಡ ಕೃಷಿ ಲೇಖನಗಳು, ಅಲ್ಲದೆ ಕೆಲವು ಫೋಟೊಗಳು"

ಈ ಪತ್ರವು ಕರ್ನಾಟಕದ ಸಾರ್ವಜನಿಕ ಬದುಕಿನ ದುಃಸ್ಥಿತಿಯನ್ನು ಸೂಚಿಸುತ್ತಿದೆ. ಪ್ರಭುತ್ವಕ್ಕೆ ನಾಗರಿಕ ಸಮಾಜದ ಟೀಕೆಟಿಪ್ಪಣಿ ಮತ್ತು ಪ್ರತಿರೋಧಗಳ ಅಂಕುಶವಿಲ್ಲದೆ ಹೋದರೆ, ಅದು ಅಮಾನುಷವಾದ ರೂಪಾಂತರ ಪಡೆಯುತ್ತದೆ. ಎಲ್ಲಪಕ್ಷಗಳ ಸರ್ಕಾರಗಳು ದೇಶದಾದ್ಯಂತ ಜನರ ಮೇಲೆ ಬಲಾತ್ಕಾರವಾಗಿ ಹೇರುತ್ತಿರುವ ದೊಡ್ಡ ಉದ್ಯಮಪರವಾದ ಯೋಜನೆಗಳು, ಹೊಸ ಬಗೆಯ ಸಂಕಟಗಳನ್ನು ಸೃಷ್ಟಿಸಿವೆ. ಇದಕ್ಕೆ ಪ್ರತಿಯಾಗಿ ಜನ ಮಾಡುವ ಪ್ರತಿರೋಧವನ್ನು ಕ್ರೂರವಾಗಿ ಹತ್ತಿಕ್ಕುತ್ತಿವೆ. (ಈ ಕಾರ್ಯದಲ್ಲಿ ಕಮ್ಯುನಿಸ್ಟ್ ಸರ್ಕಾರಗಳೂ ಹಿಂದೆ ಬಿದ್ದಿಲ್ಲ ಎಂಬುದನ್ನು ಬಂಗಾಳದ ನಂದಿಗ್ರಾಮದ ಘಟನೆ ತೋರಿಸಿಕೊಟ್ಟಿದೆ.) ಇಂತಹ ಸನ್ನಿವೇಶದಲ್ಲಿ ಜನ ತಮ್ಮ ಕಷ್ಟಗಳನ್ನು ನಾಗರಿಕ ಜಗತ್ತಿನ ಜತೆ ತೋಡಿಕೊಳ್ಳುವ ಅವಕಾಶವನ್ನೂ ನಿರಾಕರಿಸಲಾಗುತ್ತಿದೆ. ಮೇಧಾಪಾಟ್ಕರ್ ಅವರಂತಹ ಅಂತಾರಾಷ್ಟ್ರೀಯ ಕೀರ್ತಿಯುಳ್ಳ ಮಹಿಳೆಯ ವಿಷಯದಲ್ಲಿ ನಮ್ಮ ಸರ್ಕಾರಗಳು ನಡೆಸಿಕೊಂಡಿರುವ ರೀತಿ ನೋಡುವಾಗ, ಭಾಗ್ಯ ಅವರ ಜಪ್ತಿಪ್ರಕರಣ ಸೋಜಿಗವಲ್ಲ.

ಸಮಸ್ಯೆಯೆಂದರೆ, ಜನರನ್ನು ಅವರ ಇಚ್ಛೆಗೆ ವಿರುದ್ಧವಾಗಿ ಒತ್ತುವರಿ ಮಾಡುವ ಅಥವಾ ಎತ್ತಂಗಡಿ ಮಾಡಿಸುವ ಪ್ರಕರಣಗಳು ಜನ ಮತ್ತು ಪ್ರಭುತ್ವದ ನಡುವಣ ನೇರ ಕದನಕ್ಕೆ ಮಾತ್ರ ಕಾರಣವಾಗಿಲ್ಲ. ಇದರ ಒಳಗೆ ಬೇರೆಬೇರೆ ಶಕ್ತಿಗಳು ಸೇರಿಕೊಂಡು ಪರಿಸ್ಥಿತಿ ಸಂಕೀರ್ಣವಾಗಿದೆ. ಬಂಗಾಳದ ನಂದಿಗ್ರಾಮದಲ್ಲಿ ಭೂಮಿ ಕಳೆದುಕೊಂಡವರು, ಸರ್ಕಾರ, ಚಳವಳಿಗಾರರು, ವಿರೋಧಪಕ್ಷದವರು ಮತ್ತು ಟಾಟಾ ಕಂಪನಿ, ಅದರ ಎದುರಾಳಿ ಕಂಪನಿ ಎಲ್ಲವೂ ಸೇರಿ ಪರಿಸ್ಥಿತಿ ಜಟಿಲವಾಗಿದೆ; ಮಲೆನಾಡಿನಲ್ಲಿ ಆದಿವಾಸಿಗಳು, ಅವರ ಪರವಾಗಿರುವ ಉದ್ಯಾನ ವಿರೋಧಿ ಒಕ್ಕೂಟ, ನಕ್ಸಲ್ ಚಳವಳಿ, ರಾಷ್ಟ್ರೀಯ ಉದ್ಯಾನ ಯೋಜನೆಗೆ ಕಾರಣವಾಗಿರುವ ಅಗೋಚರ ಹಿತಾಸಕ್ತಿಗಳು, ಅದನ್ನು ಜಾರಿಗೊಳಿಸುತ್ತಿರುವ ಪ್ರಭುತ್ವ, ಅಲ್ಲಿನ ಭೂಸ್ವಾಮಿಗಳು ಹಾಗೂ ಸಂಘಪರಿವಾರ ಎಲ್ಲ ಸೇರಿ ಸನ್ನಿವೇಶ ಜಟಿಲವಾಗಿದೆ. ಈ ಸಂಕೀರ್ಣ ಸನ್ನಿವೇಶದಲ್ಲಿ ಜನರನ್ನು ವಿಚಾರಣೆಗೆ ಮೊದಲೇ ಅಪರಾಧಿಗಳೆಂದು ನಿರ್ಧರಿಸಿ ಶಿಕ್ಷಿಸಲಾಗುತ್ತಿದೆ.

ಎಲ್ಲ ರಾಜಕೀಯ ಪ್ರಭುತ್ವಗಳಲ್ಲಿ, ಅದರ ಆಯುಧವಾದ ಸೈನಿಕ ಮತ್ತು ಪೋಲಿಸು ವ್ಯವಸ್ಥೆಯಲ್ಲಿ ಬಲಾತ್ಕಾರ ಮತ್ತು ಕ್ರೌರ್ಯದ ಅಂಶವಿದ್ದೇ ಇರುತ್ತದೆ. ಅದರಲ್ಲೂ ರಾಜಕೀಯ ಅಧಿಕಾರ ಫ್ಯಾಸಿಸ್ಟರ ಕೈಗೆಬಿದ್ದರೆ, ಈ ಕ್ರೌರ್ಯ ಮತ್ತಷ್ಟೂ ಅಮಾನುಷವಾಗುತ್ತದೆ. ಮಲೆನಾಡಿನಲ್ಲಿ ಪೋಲಿಸರು ಜನರೊಂದಿಗೆ ಒರಟಾಗಿ ವರ್ತಿಸುವ ಮನೋಭಾವ ಬೆಳೆಸಿಕೊಳ್ಳಲು ಅವರ ಜತೆ ಸಂಘಪರಿವಾರವು ಕೈಜೋಡಿಸಿರುವುದೂ ಒಂದು ಕಾರಣ. ಗುಜರಾತಲ್ಲಿ ಇಡೀ ಪ್ರಭುತ್ವವನ್ನು ಸಂಘಪರಿವಾರವು ಮತೀಕರಣಗೊಳಿಸಿತ್ತು. ಆಗ ಠಾಣೆಯಲ್ಲಿ ಮುಸ್ಲಿಮರು ಕೊಡುವ ದೂರನ್ನೂ ಸ್ವೀಕರಿಸದ ಸನ್ನಿವೇಶ ಒದಗಿತ್ತು; ಅಲ್ಲಿನ ಮುಸ್ಲಿಮರು ಭಾಗ್ಯ ಅವರ ಹಾಗೆಯೇ ಅಸಹಾಯಕತೆ ಮತ್ತು ಆರ್ತತೆಯನ್ನು ಪ್ರಕಟಿಸಿದ್ದರು. ಆದ್ದರಿಂದ ಭಾಗ್ಯ ಅವರ ಪ್ರಕರಣದಲ್ಲಿ ನಕ್ಸಲ್ ಚಳವಳಿ, ಆದಿವಾಸಿಗಳ ಸಮಸ್ಯೆಯ ಪ್ರಶ್ನೆಗಳು ಮಾತ್ರವಿಲ್ಲ. ಕೋಮುವಾದವೂ ಸೇರಿಕೊಂಡಿದೆ.

ಮೆಣಸಿನಹಾಡ್ಯದಲ್ಲಿ ನಡೆದ ನಾಲ್ಕು ಆದಿವಾಸಿಗಳ ಬರ್ಬರ ಹತ್ಯೆಯು ಇದರ ಭಾಗವಾಗಿದೆ. ಅಪರಾಧ ಸಾಬೀತಾಗುವ ಮೊದಲೇ ಅಪರಾಧಿಯೆಂದು ನಿರ್ಧರಿಸಿ ಶಿಕ್ಷಿಸುವ ಈ ಮನೋಭಾವ, ಮುಸ್ಲಿಮರನ್ನು ಕುರಿತು ಅಂತಾರಾಷ್ಟ್ರೀಯ ಮಟ್ಟದಲ್ಲೂ ಏರ್ಪಟ್ಟಿದೆ. ಆಸ್ಟ್ರೇಲಿಯಾದಲ್ಲಿ ಹನೀಫ್ ಮಾಡಿದ್ದು ತಪ್ಪೊ ಸರಿಯೊ ಎಂದು ಅಲ್ಲಿನ ಕೋರ್ಟು ನಿರ್ಧರಿಸುವ ಮೊದಲೇ, ನಮ್ಮ ಪೋಲಿಸರು ಹನೀಫನಿಗೆ ಸಂಬಂಧಿಸಿದ ಮಾಹಿತಿ ಸಂಗ್ರಹಿಸಿ ಕಳಿಸಲು ಪಟ್ಟ ಅವಸರವನ್ನು ಗಮನಿಸಬೇಕು. ಗುಜರಾತಿನ ಹಿಂಸೆಯಲ್ಲಿ ಕೆಲಸ ಮಾಡಿದ್ದು ಪ್ರಭುತ್ವದ ಈ ಪೂರ್ವಗ್ರಹವೇ. ನಮ್ಮ ಕರಾವಳಿ ಜಿಲ್ಲೆಯಲ್ಲಿ ಈ ಪೂರ್ವಗ್ರಹವು ಪ್ರಾಯೋಗಿಕವಾಗಿ ಜಾರಿಯಲ್ಲಿದೆ. ಸ್ವತಃ ಗೃಹಮಂತ್ರಿಯವರು ತಮ್ಮ ಮಾತನ್ನು ಕರಾವಳಿಯ ಪೋಲಿಸರು ಕೇಳುತ್ತಿಲ್ಲ ಎಂದು ಬಹಿರಂಗವಾಗಿ ಹೇಳುವಷ್ಟು ಪರಿಸ್ಥಿತಿ ಅಲ್ಲಿ ಬಿಗಡಾಯಿಸಿದೆ. ಇಂತಹುದೇ ಮನೋಭಾವವನ್ನು ನಕ್ಸಲ್ ಬೆಂಬಲಿಗರ ಪಟ್ಟಿ ಬಿಡುಗಡೆ ಮಾಡುವ, ಮನೆಜಪ್ತಿ ಮಾಡುವ ಗದರಿಸುವ ಒರಟುತನವನ್ನು ಕರ್ನಾಟಕದಲ್ಲಿ ಅಧಿಕಾರಸ್ಥರು ರೂಢಿಸಿಕೊಳ್ಳುತ್ತಿದ್ದಾರೆ.

ಎಲ್ಲ ರಾಜಕೀಯ ಪ್ರಭುತ್ವಗಳಲ್ಲಿ, ಅದರ ಆಯುಧವಾದ ಸೈನಿಕ ಮತ್ತು ಪೋಲಿಸು ವ್ಯವಸ್ಥೆಯಲ್ಲಿ ಬಲಾತ್ಕಾರ ಮತ್ತು ಕ್ರೌರ್ಯದ ಅಂಶವಿದ್ದೇ ಇರುತ್ತದೆ. ಅದರಲ್ಲೂ ರಾಜಕೀಯ ಅಧಿಕಾರ ಫ್ಯಾಸಿಸ್ಟರ ಕೈಗೆಬಿದ್ದರೆ, ಈ ಕ್ರೌರ್ಯ ಮತ್ತಷ್ಟೂ ಅಮಾನುಷವಾಗುತ್ತದೆ. ಮಲೆನಾಡಿನಲ್ಲಿ ಪೋಲಿಸರು ಜನರೊಂದಿಗೆ ಒರಟಾಗಿ ವರ್ತಿಸುವ ಮನೋಭಾವ ಬೆಳೆಸಿಕೊಳ್ಳಲು ಅವರ ಜತೆ ಸಂಘಪರಿವಾರವು ಕೈಜೋಡಿಸಿರುವುದೂ ಒಂದು ಕಾರಣ. ಗುಜರಾತಲ್ಲಿ ಇಡೀ ಪ್ರಭುತ್ವವನ್ನು ಸಂಘಪರಿವಾರವು ಮತೀಕರಣಗೊಳಿಸಿತ್ತು. ಆಗ ಠಾಣೆಯಲ್ಲಿ ಮುಸ್ಲಿಮರು ಕೊಡುವ ದೂರನ್ನೂ ಸ್ವೀಕರಿಸದ ಸನ್ನಿವೇಶ ಒದಗಿತ್ತು; ಅಲ್ಲಿನ ಮುಸ್ಲಿಮರು ಭಾಗ್ಯ ಅವರ ಹಾಗೆಯೇ ಅಸಹಾಯಕತೆ ಮತ್ತು ಆರ್ತತೆಯನ್ನು ಪ್ರಕಟಿಸಿದ್ದರು. ಆದ್ದರಿಂದ ಭಾಗ್ಯ ಅವರ ಪ್ರಕರಣದಲ್ಲಿ ನಕ್ಸಲ್ ಚಳವಳಿ, ಆದಿವಾಸಿಗಳ ಸಮಸ್ಯೆಯ ಪ್ರಶ್ನೆಗಳು ಮಾತ್ರವಿಲ್ಲ. ಕೋಮುವಾದವೂ ಸೇರಿಕೊಂಡಿದೆ.

"ನಾವು ಬಹುಶಃ ರವಿ, ನನ್ನ ಪತಿ ಎಲ್ಲರೂ ಹಣೆಗೆ ಕುಂಕುಮ ಇಟ್ಟುಕೊಂಡು ದಿನದಿನವೂ ಧರ್ಮದ ಹೆಸರಲ್ಲಿ ಕೋಮುವಾದಿಗಳಾಗಿ ಅನ್ಯಧರ್ಮೀಯರ ದಲಿತರ ಮೇಲೆ ದೌರ್ಜನ್ಯ ಎಸಗಿದ್ದರೆ, ನಾನು 'ಆವರಣ'ದಂತಹ ಸಮಾಜದ ಸಹಬಾಳ್ವೆಯ ಮನಸ್ಸನ್ನು ಒಡೆಯುವಂತಹ ಕೃತಿಯನ್ನು ಬರೆದಿದ್ರೆ, ದಿನದಿನವೂ ಸುತ್ತಲಿನವರನ್ನು ಜಾತಿಭೇದ ಮಾಡಿ ಅವರನ್ನು ದೂರ ಇಟ್ಟಿದ್ರೆ, ನಮ್ಮ ಸ್ಥಿತಿ ಹೀಗಿರ್ತಿರಲಿಲ್ಲ. ಆದ್ರೆ ನಮಗೆ ಮಾನವೀಯ ಅಂತಃಕರಣವಿರೋ ಕಾರಣ, ಕನ್ನಡ ನಾಡಿನ ಗೌರವಯುತ ಪ್ರಜೆಯಾದ ಕಾರಣ ನಮಗದು ಸಾಧ್ಯವಾಗಿಲ್ಲ." ಎಂದು ಅವರು ಬರೆದಿದ್ದಾರೆ.

ಅಂದರೆ ಮಲೆನಾಡಿನಲ್ಲಿ ಮತಧರ್ಮದ ಹೆಸರಲ್ಲಿ ಜನರನ್ನು ವಿಭಜಿಸುವವರು, ಆಸ್ತಿಯ ಬಲದಿಂದ ದಲಿತರನ್ನು ದಮನಿಸುವವರು ಪ್ರಭುತ್ವದ ಕಿರುಕುಳವಿಲ್ಲದೆ ಆರಾಮಾಗಿ ಇದ್ದಾರೆ ಎಂದರ್ಥ ತಾನೇ? ಆ ಭಾಗದ ಶಾಸಕರು ಬಿಜೆಪಿ ಪಕ್ಷದವರು. ಈ ಭಾಗದಲ್ಲಿ ಬಜರಂಗದಳವೂ ಸೇರಿದಂತೆ ಸಂಘಪರಿವಾರದ ಸಂಘಟನೆಗಳು ಬಲವಾಗಿ ಬೆಳೆದಿವೆ. ಅವು ಅಲ್ಲಿ ಕುರಿಯ ಮಾಂಸ ತೆಗೆದುಕೊಂಡು ಹೋಗುತ್ತಿದ್ದರೂ, ಅದು ದನದ್ದೇ ಎಂದು ವಾದಿಸುತ್ತ ಥಳಿಸುವ, ಯಾರಾದರೂ ಬೇರೆ ಧರ್ಮದ ಇಬ್ಬರು ಪ್ರೇಮ ಮಾಡಿದರೆ ಅವರನ್ನು ಹಿಡಿದು ಹೊಡೆಯುವ, ಮುಸ್ಲಿಮರಿಗೆ ಕೆಲವು ಕಡೆ ವ್ಯಾಪಾರ ಮಾಡಬಾರದು ಎಂದು ನಿಷೇಧಿಸುವ ಪರ್ಯಾಯ ಪೋಲಿಸು ಕೆಲಸವನ್ನು ಅವು ಕೈಗೆತ್ತಿಕೊಂಡಿವೆ; ಇದೆಲ್ಲ ಹಲವಾರು ವರ್ಷಗಳಿಂದ ಪತ್ರಿಕೆಗಳಲ್ಲಿ ವರದಿಯಾಗಿದೆ. ಕರಾವಳಿಯಲ್ಲಿ ಮುಸ್ಲಿಮರ ಮೇಲೆ ಹಲ್ಲೆಗೈದವರ ಮೇಲಿನ ಕೇಸುಗಳನ್ನು ಹಿಂತೆಗೆದಿದ್ದು ಮಾತ್ರವಲ್ಲ, ಹಲ್ಲೆಕೋರರಿಗೆ ಉತ್ತೇಜನ ರೂಪದಲ್ಲಿ ಕೆಲವು ಹುದ್ದೆಗಳನ್ನು ಕೊಟ್ಟು ಸತ್ಕರಿಸಲಾಯಿತು.

ಇದನ್ನು ಆದಿ ಉಡುಪಿ ಘಟನೆಯಲ್ಲಿ ನೋಡಬಹುದು. ಆದ್ದರಿಂದ ಮಲೆನಾಡಿನಲ್ಲಿ ಜಮೀನುದಾರರು, ಕೋಮುವಾದವೂ ಪ್ರಭುತ್ವವೂ ಏಕೀಭವಿಸಿರುವ ವಿಚಿತ್ರ ಸನ್ನಿವೇಶ ನಿರ್ಮಾಣವಾದಂತಿದೆ. ಅಸಹಾಯಕ ಸನ್ನಿವೇಶವು ಸಂಸ್ಕೃತಿ ಚಿಂತನೆ ಮಾಡುವ, ಸಾಹಿತ್ಯದ ಒಡನಾಟ ಇರುವ, ಸಂಡೂರು ಭೂಹೋರಾಟದಲ್ಲಿ ಭಾಗವಹಿಸಿದ ಅನುಭವವುಳ್ಳವರು ಗೃಹಮಂತ್ರಿಯಾಗಿರುವ ಹೊತ್ತಲ್ಲಿ ಸೃಷ್ಟಿಯಾಗಿದೆ; ಇನ್ನು ಸರ್ಕಾರ ಬದಲಾವಣೆಯಾಗಿ ಗೃಹಖಾತೆಯು ಸಂಘಪರಿವಾರದವರ ವಶಕ್ಕೆ ಹೋದರೆ, ಭಾಗ್ಯ ಅವರ ಕವನ ಲೇಖನಗಳಲ್ಲ, ಅವರನ್ನು

[illegible]ಯುವ ಭಾಗ್ಯ ಕೂಡ [illegible]ವಾಗಬಹುದು.

ಕರ್ನಾಟಕದಲ್ಲಿ ನಕಲ್ ಚಳವಳಿಯು ರಾಜಕೀಯ ಮತ್ತು ಸಾಮಾಜಿಕವಾದ ಕಲಕಾಟವನ್ನು ಒಳಗಿಂದಲೇ ಹುಟ್ಟಿಸಿದೆ. ನಕಲ್‌ವಾದವು ಒಂದು ಪರ್ಯಾಯವೇ? ಅದನ್ನು ಪರ್ಯಾಯವೆಂದು ಜನ ಅನಿವಾರ್ಯವಾಗಿ ಭಾವಿಸುವ ಪರಿಸ್ಥಿತಿಯನ್ನು ವ್ಯವಸ್ಥೆಯೇ ನಿರ್ಮಾಣ ಮಾಗಿದೆ? ನಕ್ಸಲ್ ಚಳವಳಿಯು ನಾಡಿನ ಎಲ್ಲ ಸಮಸ್ಯೆಗಳ ಪರಿಹಾರಕ್ಕೆ ಪರ್ಯಾಯ ಒದಗಿಸುತ್ತದೆಯೇ? ಇದು ಪರ್ಯಾಯವಾದರೆ, ಬೇರಬಗೆಯ ವಿಶಾಲ ಸಮೂಹ ಚಳವಳಿಗಳನ್ನು ಕಟ್ಟುವ ಅವಕಾಶವು ಏನಾಗುತ್ತದೆ? ಈ ಮುಂತಾದ ಪ್ರಶ್ನೆಗಳ ಮೇಲೆ ಬುದ್ಧಿಜೀವಿಗಳಲ್ಲಿ ಮಾತ್ರ ವಲ್ಲ, ಬೇರೆಬೇರೆ ರಾಜಕೀಯ ವಲಯಗಳಲ್ಲಿ, ಚಳವಳಿಗಳಲ್ಲಿ ನಡೆಯಬೇಕಾದಷ್ಟು ಸೈದ್ಧಾಂತಿಕವಾದ ಚರ್ಚೆ ನಡೆದಿಲ್ಲ. ಸದ್ಯಕ್ಕೆ ಇದನ್ನು ಕೊನೆಯ ಪರ್ಯಾಯವೆಂಬ; ಜನ ಅನಿವಾರ್ಯವಾದ ಹಾದಿ ಎಂದು ಸ್ವೀಕಾರ ಮಾಡುವಂತೆ ವ್ಯವಸ್ಥೆಯೇ ಮಾಡಿದೆಯೆಂಬ; ಹಿಂಸೆಯನ್ನು ಪ್ರತಿಪಾದಿಸುವ ಇದು ಯಾವ ಕಾರಣಕ್ಕೂ ಒಪ್ಪಲಾಗದು ಎಂಬ; ನಕ್ಸಲರ ಆಶಯದ ಬಗ್ಗೆ ಸಹಮತವಿದ್ದು ವಿಧಾನದ ಭಿನ್ನಮತವಿದೆ ಎಂಬ– ನಾಲ್ಕು ಗ್ರಹಿಕೆಗಳು ಕರ್ನಾಟಕದಲ್ಲಿವೆ.

ಸಮಸ್ಯೆಯೆಂದರೆ, ಸಾಮಾಜಿಕ ಬದಲಾವಣೆ ದುರ್ಬಲರ ಪರವಾಗಿ ಆಗಬೇಕು ಎಂದು ನಂಬಿರುವವರು, ಇಂತಹ ಬದಲಾವಣೆಗೆ ತಮ್ಮದೇ ರೀಯಲ್ಲಿ ತೊಡಗಿರುವ ನಕ್ಸಲರನ್ನು ಹಿಂಸೆಯ ಕಾರಣದಿಂದ ವಿರೋಧಿಸುತ್ತಲೆ, ಕಾನೂನು ಪಾಲನೆಯ ಹೆಸರಲ್ಲಿ ಅದು ಅತ್ಯಂತ ಬಲಿಷ್ಠವಾದ ಪ್ರಭುತ್ವವು ಹುಟ್ಟಿಸಿರುವ ಹಿಂಸೆಯ ಬಗ್ಗೆ ತಾಳಿರುವ ನಿರ್ಲಿಪ್ತಿ. ಕೆಲವೊಮ್ಮೆ ತಾನು ಎಲ್ಲ ಹಿಂಸೆಯ ವಿರೋಧಿ ಎಂದು ಸಾಬೀತು ಪಡಿಸುವ ಪ್ರಜ್ಞಾಪೂರ್ವಕ ಎಚ್ಚರವೇ ಹೆಚ್ಚಾಗಿರುವ ಈ ಪ್ರತಿಕ್ರಿಯೆಗಳಲ್ಲಿ, ದೇಶದ ಕಾನೂನುಭಂಗ ಮಾಡುವವರ ಮೇಲೆ ಸೂಕ್ತ ಕ್ರಮಕೈಗೊಳ್ಳಲು ಪ್ರಭುತ್ವ ಅನುಮತಿಯನ್ನೂ ಕೊಡುವ ದನಿ ಇರುವುದುಂಟು. ನಕ್ಸಲ್‌ವಾದದ ಬಗ್ಗೆ ಇರುವ ಈ ತಾತ್ವಿಕ ಭಿನ್ನಮತ ಮತ್ತು ವಿರೋಧಗಳನ್ನು ಪ್ರಭುತ್ವವು ತನ್ನ ದುಂಡಾವರ್ತಿಗೆ ಬಳಸಿಕೊಳ್ಳುತ್ತಿರುವುದು ದುರಂತವಾಗಿದೆ.

ಈ ಸಂಕೀರ್ಣ ಮತ್ತು ಇಕ್ಕಟ್ಟಿನ ಸನ್ನಿವೇಶದ ಪ್ರಯೋಜನ ಪಡೆದು ಸಂಘಪರಿವಾರವೂ ಅಲ್ಲಿನ ಭೂಮಾಲೀಕ ವರ್ಗವೂ ತಮ್ಮ ಎದುರಾಳಿಗಳನ್ನು ಮುಗಿಸುತ್ತಿವೆ. ಅಮೆರಿಕ ಸಾರಿರುವ ಯುದ್ಧಗಳ ನೆಪಸಾಧಿಸಿ ಇಸ್ರೇಲು ಹಾಗೂ ಭಾರತದ ಕೋಮುವಾದಿಗಳು ತಮ್ಮ ಮುಸ್ಲಿಂ ದ್ವೇಷವನ್ನು ಸಾಧಿಸಲು ಯತ್ನಿಸುತ್ತಿರುವುದು ಹೀಗೇ. ೯೫ರಿಂದ ಈಚೆಗೆ ಕೋಮುವಾದದ ವಿರುದ್ಧ ಕೆಲಸ ಮಾಡಿಕೊಂಡು ಬಂದಿರುವವರನ್ನು ನಕ್ಸಲ್ ಬೆಂಬಲಿಗರೆಂದು ಪಟ್ಟಿಮಾಡಿ ಪೋಲಿಸರಿಗೂ ಒಂದು ವರ್ಷ ಮುಂಚೆ ಸಂಘಪರಿವಾರವು ಬಿಡುಗಡೆ ಮಾಡಿದ್ದು ಇದೇ ಯುದ್ಧತಂತ್ರದ ಭಾಗವಾಗಿ. ಹೀಗೆ ಭೂಮಾಲೀಕವರ್ಗವೂ ಕೋಮುವಾದವೂ ಪ್ರಭುತ್ವದ ಜತೆ ಒಂದುಗೂಡಿರುವ ಈ ಸಂಕೀರ್ಣ ಸನ್ನಿವೇಶದಲ್ಲಿ, ಭಾಗ್ಯ ಅವರಂತಹ ಮಹಿಳೆಯರು ಸಾರ್ವಜನಿಕವಾಗಿ ತಮ್ಮ ಕಷ್ಟಸುಖವನ್ನು ಹೇಳಿಕೊಳ್ಳುವುದೂ ಅಸಾಧ್ಯ ಎಂಬಂತಹ ಬಿಕ್ಕಟ್ಟು ನಿರ್ಮಾಣವಾಗಿದೆ. ಅದಕ್ಕಾಗಿ ಅವರು ನಾಡಿನ ಪ್ರಜ್ಞಾವಂತರ ಮುಂದೆ ಒಂದು ಪ್ರಶ್ನೆಯನ್ನು ಇಟ್ಟಿದ್ದಾರೆ.

"ನಾಡಿನ ಪ್ರಜ್ಞಾವಂತ ಜನರ ಮುಂದೆ ನಾನು ಕೇಳಿಕೊಳ್ಳುವುದಿಷ್ಟೆ. ನಾವು ನಮ್ಮ ಪರವಾಗಿ ನೋವುಳ್ಳವರ ಪರವಾಗಿ ಧ್ವನಿ ಎತ್ತಿದ್ದು, ಬರೆದ್ದು ತಪ್ಪಾ? ಅದು ತಪ್ಪಲ್ಲ ಅಂತ ಆದ್ರೆ ದಯವಿಟ್ಟು ನಮ್ಮ ಈ ನೋವಿಗೆ ನೀವು ಸ್ಪಂದಿಸಿ ನಮ್ಮ ಪರವಾಗಿ ಧ್ವನಿ ಎತ್ತಿ, ನಮಗೆ ಬೆಂಬಲ ನೀಡಿ. ನಿಮ್ಮೆಲ್ಲರ ಸಹಕಾರ ನಮಗಿರೋದಾದ್ರೆ ಅರ್ಥಾತ್ ಸಮಸ್ಯೆ ತೀವ್ರವಾಗಿದ್ದರೂ ಎಷ್ಟೇ ಕಿರುಕುಳ ಬಂದ್ರೂ ನಾವು ಎದುರಿಸುತ್ತೇವೆ. ಜನರ ನೋವಿಗೆ ಧ್ವನಿಯಾಗ್ತೀವಿ."

ನಕ್ಸಲ್ ಬೆಂಬಲಿಗರೂ ಎಂದು ಆದಿವಾಸಿ ಜನರನ್ನು ವಿಚಾರಣೆಯಿಲ್ಲದೆ ಕೊಲ್ಲುವ ಮೂಲಕ ವ್ಯವಸ್ಥೆ ಸೃಷ್ಟಿಸಿರುವ ರಕ್ತಪಾತ ಹಾಗೂ ಪೋಲಿಸ್ ಮಾಹಿತಿದಾರರು ಎಂದು ನಕ್ಸಲರು ಮಾಡುವ ರಕ್ತಪಾತ ಎರಡನ್ನೂ ಒಪ್ಪದ ಎಲ್ಲರೂ ಮಲೆನಾಡಿನಲ್ಲಿ ಕಷ್ಟಕ್ಕೆ ಸಿಲುಕಿರುವ ಜನರ ನೋವನ್ನು ನಿವಾರಿಸುವುದು ಹೇಗೆ ಎಂದು ಚಿಂತಿಸಬೇಕಿದೆ. ಹಾಗಾದಾಗ ಭಾಗ್ಯ ಅವರಂತಹ ಸಾಮಾನ್ಯರು ತಮಗೆ ಅನಿಸಿದ್ದನ್ನು ಹೇಳಿಕೊಳ್ಳುವ ಸಣ್ಣ ಡೆಮಾಕ್ರಟಿಕ್ ಹಕ್ಕು ಉಳಿಯುತ್ತದೆ. ಜನರ ನೋವಿಗೆ ಮಿಡಿಯುವುದೊಂದೆ ಬರೆಹ ಉದ್ದೇಶವಾದರೆ, ಭಾಗ್ಯ ಅವರು

> **ಭಾಗ್ಯ ಅವರಂತಹ ಮಹಿಳೆಯರು ಸಾರ್ವಜನಿಕವಾಗಿ ತಮ್ಮ ಕಷ್ಟಸುಖವನ್ನು ಹೇಳಿಕೊಳ್ಳುವುದೂ ಅಸಾಧ್ಯ ಎಂಬಂತಹ ಬಿಕ್ಕಟ್ಟು ನಿರ್ಮಾಣವಾಗಿದೆ. ಅದಕ್ಕಾಗಿ ಅವರು ನಾಡಿನ ಪ್ರಜ್ಞಾವಂತರ ಮುಂದೆ ಒಂದು ಪ್ರಶ್ನೆಯನ್ನು ಇಟ್ಟಿದ್ದಾರೆ. "ನಾಡಿನ ಪ್ರಜ್ಞಾವಂತ ಜನರ ಮುಂದೆ ನಾನು ಕೇಳಿಕೊಳ್ಳುವುದಿಷ್ಟೆ. ನಾವು ನಮ್ಮ ಪರವಾಗಿ ನೋವುಳ್ಳವರ ಪರವಾಗಿ ಧ್ವನಿ ಎತ್ತಿದ್ದು, ಬರೆದ್ದು ತಪ್ಪಾ? ಅದು ತಪ್ಪಲ್ಲ ಅಂತ ಆದ್ರೆ ದಯವಿಟ್ಟು ನಮ್ಮ ಈ ನೋವಿಗೆ ನೀವು ಸ್ಪಂದಿಸಿ ನಮ್ಮ ಪರಿವಾಗಿ ಧ್ವನಿ ಎತ್ತಿ, ನಮಗೆ ಬೆಂಬಲ ನೀಡಿ. ನಿಮ್ಮೆಲ್ಲರ ಸಹಕಾರ ನಮಗಿರೋದಾದ್ರೆ ಅರ್ಥಾತ್ ಸಮಸ್ಯೆ ತೀವ್ರವಾಗಿದ್ದರೂ ಎಷ್ಟೇ ಕಿರು ಕುಳ ಬಂದ್ರೂ ನಾವು ಎದುರಿಸುತ್ತೇವೆ. ಜನರ ನೋವಿಗೆ ಧ್ವನಿಯಾಗ್ತೀವಿ." ನಕ್ಸಲ್ ಬೆಂಬಲಿಗರೂ ಎಂದು ಆದಿವಾಸಿ ಜನರನ್ನು ವಿಚಾರಣೆಯಿಲ್ಲದೆ ಕೊಲ್ಲುವ ಮೂಲಕ ವ್ಯವಸ್ಥೆ ಸೃಷ್ಟಿಸಿರುವ ರಕ್ತಪಾತ ಹಾಗೂ ಪೋಲಿಸ್ ಮಾಹಿತಿದಾರರು ಎಂದು ನಕ್ಸಲರು ಮಾಡುವ ರಕ್ತಪಾತ ಎರಡನ್ನೂ ಒಪ್ಪದ ಎಲ್ಲರೂ ಮಲೆನಾಡಿ ನಲ್ಲಿ ಕಷ್ಟಕ್ಕೆ ಸಿಲುಕಿರುವ ಜನರ ನೋವನ್ನು ನಿವಾರಿಸುವುದು ಹೇಗೆ ಎಂದು ಚಿಂತಿಸಬೇಕಿದೆ.**

ಕಳೆದ ಕೆಲವು ವರ್ಷಗಳಿಂದ ಬರೆದಿರುವುದು ಸಾಹಿತ್ಯವೇ. ಬುದ್ಧಿಜೀವಿಗಳು ಅನಿಸಿಕೊಂಡ ನಮ್ಮಂತಹವರಿಗೆ ದೂರದ ಸಲ್ಮಾನ್ ರಶ್ದಿ ಅಥವಾ ತಸ್ಲೀಮಾ, ಖ್ಯಾತರಾಗಿರುವ ಬಂಜಗೆರೆಯವರ ಅಭಿವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ಮಾತಾಡುವುದು ಸುಲಭ. ವಾಚಕರ ವಾಣಿಯಲ್ಲಿ ಪತ್ರ ಬರೆಯುವ ಒಬ್ಬ ಗೃಹಿಣಿಯ ಪಕ್ಷನ್ನು ಕುರಿತು ಮಾತಾಡುವುದು ಕಷ್ಟ ಎಂಬಂತೆ ಆಗಿದೆ. ನಿಮ್ಮ ಬರೆಹ, ಭಾಷಣ ಯಾಕಾಗಿ ಎಂಬ ಪ್ರಶ್ನೆಯನ್ನು ಲೇಖಿಕಿಯಲ್ಲದ ಲೇಖಕಿ ಭಾಗ್ಯ ಕನ್ನಡದ ಲೇಖಕರ ಮುಂದೆ ಪರೋಕ್ಷವಾಗಿ ಇಟ್ಟು ಮಾನಸಿಕ ತಲ್ಲಣವನ್ನು ಸೃಷ್ಟಿಸಿದ್ದಾರೆ.

ಯಾವುದೇ ರಾಜಕೀಯ ಚಿಂತನೆ ಅಥವಾ ಚಳವಳಿ ಕುರಿತು ಯಾರಿಗಾದರೂ ರಾಜಕೀಯ ಅಥವಾ ಸೈದ್ಧಾಂತಿಕವಾದ ಭಿನ್ನಮತವಿದ್ದರೆ ಅದು ಸಹಜ. ಆದರೆ ಈ ಭಿನ್ನಮತವು ಪ್ರಭುತ್ವ ಸೃಷ್ಟಿಸುವ ಕ್ರೌರ್ಯದ ವಿರುದ್ಧ ದನಿ ಎತ್ತಲಾಗದಂತಹ ಭೀರುತನ ಮತ್ತು ಮಧ್ಯಮ ವರ್ಗದ ಸ್ವಕ್ಷೇಮ ಕಾತರವನ್ನು ನಿರ್ಮಿಸಿದೆ ಎಂಬುದೇ ಶೋಚನೀಯ ಸಂಗತಿ. ಇಲ್ಲದಿದ್ದರೆ ಅಮಾಯಕ ಗಿರಿಜನರನ್ನು ಕೊಂದು ನಿರಾಳವಾಗಿ ಇರುವುದು ಪ್ರಭುತ್ವಕ್ಕೆ ಸಾಧ್ಯವಾಗುತ್ತಿರಲಿಲ್ಲ. ಭಾಗ್ಯ ಅವರು ಏಕಾಕಿತನ ಫೀಲ್ ಮಾಡುವಂತಹ ಸ್ಥಿತಿ ಬರುತ್ತಿರಲಿಲ್ಲ.

ತೇಜಸ್ವಿಯವರ 'ಕರ್ವಾಲೊ' ಕಾದಂಬರಿಯಲ್ಲಿ, ಒಂದು ಪ್ರಸಂಗ ಬರುತ್ತದೆ. ಮಂದಣ್ಣ ಅಪರಾಧಿಯಲ್ಲದೆ ಇದ್ದರೂ, ಕರ್ವಾಲೊವನ್ನು ಸಿಕ್ಕಿಸಲು ಪೋಲಿಸರು ಅವನ ಮೇಲೆ ಕೇಸು ಹಾಕಿರುತ್ತಾರೆ. ಆಗ ಲಾಯರು ಗಣ್ಯವ್ಯಕ್ತಿಗಳಾದ ನಿರೂಪಕ ಅಥವಾ ಕರ್ವಾಲೊ ಅವರು ಕೋರ್ಟಿಗೆ ಬಂದು ಒಂದು ಹೇಳಿಕೆ ನೀಡಿದರೆ ಖುಲಾಸೆ ಆಗುತ್ತದೆ. ಆದರೆ ಇಷ್ಟು ಸಣ್ಣ ಕೇಸಿಗೆ ಅವರನ್ನು ಕೋರ್ಟಿಗೆ ಕರೆಸುವುದು ಹೇಗೆ ಎಂದು ಚಿಂತಿಸುತ್ತ ಇರುತ್ತಾರೆ. ನಿರೂಪಕನೂ ಸಹ ಕಾಫಿ ಪ್ಲಾಂಟರಾದ ತಾನು ಯಾರೋ ಸಾಮಾನ್ಯ ಮನುಷ್ಯನ ಕೇಸಿನಲ್ಲಿ ಸಾಕ್ಷಿಯಾಗಿ ನಿಲ್ಲಬೇಕೇ ಎಂದು ಒಳಗೇ ಒದ್ದಾಟ ಮಾಡುತ್ತಿರುತ್ತಾನೆ. ಆಗ ಅವನ ಹೆಂಡತಿ "ಮಂದಣ್ಣ ನಿರಪರಾಧಿಯಾಗಿದ್ದರೆ, ನೀವಾಗಲೀ ಕರ್ವಾಲೊ ಅವರಾಗಲಿ ಯಾಕೆ ಕೋರ್ಟಿಗೆ ಹೋಗಿ ಸಾಕ್ಷ್ಯ ಹೇಳಬಾರದು. ಅದರಲ್ಲೇನು ಅವಮಾನ?" ಎಂದು ಪ್ರಶ್ನಿಸುತ್ತಾಳೆ.

ಆಗ ನಿರೂಪಕ ತನ್ನೊಳಗೆ ಹೀಗಂದುಕೊಳ್ಳುತ್ತಾನೆ: "ಕ್ವಚಿತ್ತಾಗಿ ಕೇಳಿದ ಅವಳ ಪ್ರಶ್ನೆ ತಕ್ಷಣವೇ ನನ್ನ ಮನಸ್ಸಿನ ನೂರೆಂಟು ವ್ಯಾಧಿಗಳನ್ನು ಎತ್ತಿ ತೋರಿಸಿತು. ಎಂಥ ತಪ್ಪಾದ ಆಲೋಚನಾ ಲಹರಿಯಲ್ಲಿ, ತರ್ಕಸರಣಿಯಲ್ಲಿ ಸಿಕ್ಕಿಕೊಂಡಿದ್ದೇವೆ ಎಂದೆನಿಸಿತು. ಆ ಕೂಡಲೇ ನನ್ನ ಮನಸ್ಸು ಹೊಸತರ್ಕಕ್ಕೆ ಹೊಸ ಸರಳತೆ ಹೊಸ ವಿಸ್ತಾರಕ್ಕೆ ಪರಿವರ್ತನೆಗೊಂಡಿತು. ನನಗೆ ಸಮಸ್ಯೆಗಳು ಸ್ಪಷ್ಟವಾಗಿ ಸರಳವಾಗಿ ಕಾಣತೊಡಗಿದವು."

ಕರ್ನಾಟಕದ ಸಮಸ್ಯೆಗಳು ಸ್ಪಷ್ಟವಾಗಿ ಸರಳವಾಗಿ ಇಲ್ಲದಂತೆ ಜಟಿಲಗೊಂಡಿವೆಯೋ? ಅಥವಾ ಅವನ್ನು ಸ್ಪಷ್ಟವಾಗಿ ಸರಳವಾಗಿ ನೋಡಲು ಬೇಕಾದ ದೃಷ್ಟಿಕೋನವನ್ನು ನಾಡಿನ ಪ್ರಜ್ಞಾವಂತರು ಪಡೆದುಕೊಳ್ಳಲು ಆಗುತ್ತಿಲ್ಲವೋ? ಯಾವುದೋ ಬಗೆಯ ತುರ್ತು ಪರಿಸ್ಥಿತಿಯೊಂದು ಬಂದು ಎರಗಿದೆಯೊ ಅಥವಾ ನಾವೆಲ್ಲ ಸೇರಿ ಅಂತಹ ಸ್ಥಿತಿ ನಿರ್ಮಾಣಗೊಳ್ಳಲು ಅನುವು ಮಾಡಿಕೊಟ್ಟಿದ್ದೇವೆಯೊ? ಈ ಪ್ರಶ್ನೆಯನ್ನು ಸಹ ಭಾಗ್ಯ ಅವರ ಪತ್ರವು ತನಗೇ ಅರಿಯದೆ ಮುಂದಿಟ್ಟಿದೆ. □

ಕೊನೆಗೂ 'ಚೆಸ್' ಆಟದಲ್ಲಿ ಸೋತ ಎರ್ನಸ್ಟ್ ಇಂಗ್ಮರ್ ಬರ್ಗ್‌ಮನ್

ಸಾವಿನೊಂದಿಗೆ ಚೆಸ್ ಆಡುತ್ತಾ ಕುಳಿತ ಸರದಾರ ಸೋಲುವುದಿಲ್ಲ. ಅವನು ಸೋಲದೆ ಅವನನ್ನು ಸಾವು ಕರೆದೊಯ್ಯುವಂತಿಲ್ಲ. ದಿನ ದಿನವೂ ಆಟ ಮುಂದುವರೆಯುತ್ತದೆ. ಯುದ್ಧದಿಂದ ಸ್ವದೇಶಕ್ಕೆ ಹೋಗುವ ಮಾರ್ಗ ಮಧ್ಯೆ ಪ್ಲೇಗ್‌ನಿಂದ ಜನ ಸಾಯುವುದು ಆ ಊರಿನ ಜನ ಜೀವನ ಮತ್ತು ಪ್ರಯಾಣದಲ್ಲಿ ಸಿಗುವ ಆಟ-ದೊಂಬರಾಟದ ದಂಪತಿ, ಹೀಗೆ ಪ್ರಯಾಣದಲ್ಲಿ ಜತೆ ಜತೆಗೆ ಬೆನ್ನಿಗೆ ಬಿದ್ದಿರುವ ಸಾವು. ಇದು 'ಸೆವೆಂತ್ ಸೀಲ್' ಎಂಬ ೧೯೫೭ ರಲ್ಲಿ ತಯಾರಾದ ಸ್ವೀಡನ್ ಸಿನಿಮಾದ ಕೆಲವು ದೃಶ್ಯಗಳು. ಈ ಸಾವು, ಸಾವಿನ ಪಾತ್ರ ಮಾಡಿದವನ ನೋಟ, ಸಮುದ್ರದ ಹಿನ್ನಲೆಯಿಂದ ಕಾಣಿಸಿಕೊಳ್ಳುವ ಕಪ್ಪುಬಟ್ಟೆ ಧರಿಸಿ ನಿಂತ ಅವನ ನೋಟ ಮತ್ತು ಸಾವು ನಾಯಕನೊಂದಿಗೆ ಚೆಸ್ ಆಡುತ್ತಾ ಕೂರುವುದು ಮುಂತಾಗಿ ಸಿನಿಮಾ ನೋಡಿದವರ ಮನದಲ್ಲಿ ಸದಾ ಕಾಡುವ ದೃಶ್ಯಗಳು. ಈ ಸಿನಿಮಾ ತಯಾರಿಸಿದವನೂ ಸಹ ಸಾವಿನಿಂದ ಮತ್ತು ವಯಸ್ಸಾಗುವುದರಿಂದ ದೂರ ಇರಲು ಬಯಸುತ್ತಿದ್ದ. ವಯಸ್ಸಾಗುತ್ತಿದ್ದಂತೆ ತಾನೆಲ್ಲಿ ರಿಲಿಜಿಯಸ್ ಆಗಿ ಬಿಡುತ್ತೇನೋ ಎಂಬ ಆತಂಕದಲ್ಲಿ ಬೇಯುತ್ತಿದ್ದ. ಕೊನೆಗೆ ಎಲ್ಲಾ ಗೋಜಲುಗಳಿಂದ ಹೊರಬಂದು ಶಾಂತಿಯಿಂದ ಚೆಸ್‌ನಲ್ಲಿ ಸೋತು ಸಾವಿನ ಹಿಂದೆ ತನ್ನ ೮೯ ವರ್ಷದ ತುಂಬು ಜೀವನ ಮುಗಿಸಿ ೩೦-೭-೨೦೦೭ ರಲ್ಲಿ ಲೆಕ್ಕವಿಲ್ಲದಷ್ಟು ತನ್ನ ಸಿನಿಮಾಗಳಲ್ಲಿ ನರಗಳನ್ನೂ ನಡುಗಿಸುವ ಮಂಜು ಮುಸುಕಿದ ದೃಶ್ಯಗಳನ್ನು ತೋರಿಸಿದ ಫಾರೊ ಎಂಬ ದ್ವೀಪದಲ್ಲಿ ನಿಧನ ಹೊಂದಿದ.

ಸಿನಿಮಾಕ್ಕೊಂದು ಹೊಸ ಭಾಷ್ಯ ಬರೆದ ಎರ್ನಸ್ಟ್ ಇಂಗ್ಮಾರ್ ಬರ್ಗ್‌ಮನ್ ಎಂಬ ಜಗದ್ವಿಖ್ಯಾತ ಸಿನಿಮಾ ತಯಾರಕನನ್ನು ಕುರಿತದ್ದು ಇದು. ೧೪-೭-೧೯೧೮ ರಲ್ಲಿ ಕರ್ಮಠ ಪಾದ್ರಿಗೆ ಉಪ್ಸಾಲ ಎಂಬ ಸ್ವೀಡನ್ ನಗರದಲ್ಲಿ ಹುಟ್ಟಿದ ಅವನ ಬಾಲ್ಯದಲ್ಲಿಯೇ ಈ ಧಾರ್ಮಿಕ ಆಚರಣೆಗಳಿಂದ ಜಿಗುಪ್ಸೆ ಹೊಂದುತ್ತಾನೆ. ಮನಷ್ಯನ ಒಳ ತೋಟಿಗಳು, ತಲ್ಲಣಗಳು, ಸಂಬಂಧ, ಒಂಟಿತನ ಮುಂತಾಗಿ ಉಂಟಾಗುವ ನೋವುಗಳು ಅವನ ಸಿನಿಮಾಗಳ ಪ್ರಧಾನ ವಸ್ತುವಾಗಲು ಅವನ ಬಾಲ್ಯ ಕ್ರೂರವಾಗಿತ್ತೆಂದು ಅವನೇ ಬರೆದುಕೊಂಡ ಆತ್ಮಕತೆ 'ಮ್ಯಾಜಿಕ್ ಲ್ಯಾಂಟ್ರೀನ್' ನಲ್ಲಿ ಹೇಳಿಕೊಂಡಿದ್ದಾನೆ. ಎಲ್ಲಾ ಕಾಲಕ್ಕೂ ನಿಲ್ಲಬಲ್ಲ ಕೆಲವೇ ಸಿನಿಮಾ ನಿರ್ದೇಶಕರಲ್ಲಿ ಬರ್ಗಮನ್ ಒಬ್ಬ ಎಂಬುದು ಅವನು ಜಗತ್ತಿಗೆ ಕೊಟ್ಟ 'ವೈಲ್ಡ್ ಸ್ಟ್ರಾಬೆರ್ರೀಸ್', 'ಪೆರಸೋನ', 'ವಿಂಟರ್ ಲೈಟ್', 'ಸೈಲೆನ್ಸ್', 'ಆಟೋಮ್ ಸೋನೊಟಾ', 'ವರ್ಜಿನ್ ಸ್ಪ್ರಿಂಗ್ಸ್' ಹೀಗೆ ಹೇಳುತ್ತಲೇ ಹೋದರೆ ಅವನು ತಯಾರಿಸಿದ ಹೆಚ್ಚುಕಡಿಮೆ ೬೦ ಸಿನಿಮಾಗಳ ಹೆಸರು ಹೇಳಬೇಕಾಗಿ ಬಂದು ಬಿಡಬಹುದು.

ನನ್ನ ಜೀವನದಲ್ಲಿ ನಾನು ರೂಢಿಸಿಕೊಂಡ ಬದುಕಿನ ಕ್ರಮಗಳಲ್ಲಿ ಸಿಗುವ ಜನಗಳು ನನಗೆ ಹತ್ತಿರವಿರುತ್ತಾರೆ. ಈ ತರಹದವರು ಹೆಂಡತಿ-ಮಕ್ಕಳು, ಬೆಳೆದು ಬಂದ ಪರಿಸರದಲ್ಲಿ ಮುಂತಾಗಿ ಸಿಗುತ್ತಲೇ ಇರುತ್ತಾರೆ. ನನ್ನ ಸಾಮಾಜಿಕ ಕಳಕಳಿ, ಆಶಯ ಹೊಯ್ದಾಟಗಳು, ಚಳವಳಿಗಳು ಇವುಗಳನ್ನು ಧ್ವನಿಸುವವರು ನನಗೆ ಪದೇ ಪದೇ ಸಿಗದಿದ್ದರೂ ಹತ್ತಿರವಿರುತ್ತಾರೆ. ನಾನು ಕನಸುವ ಸುಂದರಿಯರು, ಜಾಗಗಳು ಒಳಗೇ ಹುಟ್ಟುವ ಭಾವನೆಗಳ ಲಹರಿಯಲ್ಲಿ ಹತ್ತಿರವಾಗು

ಐದು ಬಾರಿ ಮದುವೆಯಾಗಿ ಲೆಕ್ಕವಿಲ್ಲದಷ್ಟು ಪ್ರೇಯಸಿಯರನ್ನು ಹೊಂದಿ ಒಂಭತ್ತು ಮಕ್ಕಳನ್ನು ಪಡೆದ ಬರ್ಗ್‌ಮನ್ ತುಂಬು ಜೀವನ ನಡೆಸಿದ್ದಾನೆ. ನಾನು ಸದಾ ಕಾಲ ಇಷ್ಟಪಡುವ ನಟಿಯರಲ್ಲಿ ಒಬ್ಬಳಾದ ಲಿವ್ ಉಲ್‌ಮನ್‌ಳಿಂದ ಮದುವೆ ಹೊರತಾಗಿ ಮಗಳನ್ನು ಪಡೆದಿದ್ದಾನೆ. ಅಪ್ಪನ ಜತೆ ಬೆಳೆದರೂ ತನ್ನ ತಾಯಿಯ ಹೆಸರನ್ನು ಹೊಂದಿದ ಲಿನ್ ಉಲ್‌ಮನ್ ಕಾದಂಬರಿಗಾರ್ತಿ. ಸ್ವೀಡನ್‌ನ ಇಬ್ಬರು ಬರ್ಗ್‌ಮನ್‌ರೆಂಬ ಖ್ಯಾತನಾಮರನ್ನು ಹೆಸರಿಸದೆ ಸಿನಿಮಾ ಇತಿಹಾಸವನ್ನು ಹೇಳಲು ಆಗುವುದಿಲ್ಲ. ಆರಂಭಿಕ ಸಿನಿಮಾಗಳ ಹಾಲಿವುಡ್‌ನ ಅತ್ಯಂತ ಸುಂದರ-ಶ್ರೇಷ್ಠ ನಟಿ ಇಂಗ್ರಿಡ್ ಬರ್ಗ್‌ಮನ್ ಸಹ ಸ್ವೀಡನ್‌ನವಳು. ಇಟಲಿಯ ರೋಸೋಲಿನಿಯನ್ನು ಮದುವೆಯಾಗಿದ್ದ 'ಕ್ಯಾಸಾಬ್ಲಾಂಕ'ದಂತಹ ಎಲ್ಲಾ ಕಾಲದ ಶ್ರೇಷ್ಠ ಚಿತ್ರದಲ್ಲಿ ನಟಿಸಿದ್ದ ಅವಳಿಗೆ ಕ್ಯಾನ್ಸರ್ ಬಂದು ಸಾಯುವ ಸಮಯದಲ್ಲಿ ಬರ್ಗ್‌ಮನ್ ಜತೆ ನಟಿಸಲು ಒಪ್ಪಿಕೊಳ್ಳುತ್ತಾಳೆ.

ಕೃಷ್ಣ ಮಾಸಡಿ

ವವರು ನಾನು ಓದುವ ಸಾಹಿತ್ಯ ಮತ್ತು ನೋಡುವ ಸಿನಿಮಾಗಳಲ್ಲಿ ಸಿಗುತ್ತಿರುತ್ತಾರೆ. ಸಹಜವಾಗಿಯೇ ಇವುಗಳನ್ನು ಸೃಷ್ಟಿಸಿದವರು ಭಾವನಾತ್ಮಕವಾಗಿ ಹತ್ತಿರವಿರುತ್ತಾರೆ. ಈಚೆಗೆ ತೇಜಸ್ವಿ ತೀರಿಕೊಂಡಾಗ ಆದ ದುಃಖ ನಾನು ನಂಬಿದ ನನ್ನ ಸಂವೇದನೆಯಲ್ಲಿ ಪ್ರಶ್ನಿಸಿಕೊಳ್ಳುವ ಒಬ್ಬರು ಇಲ್ಲವಾದಂತಾದರಲ್ಲ ಎಂಬ ಸಂಕಟವುಂಟಾಯಿತು. ಆದರೆ ತೇಜಸ್ವಿಯವರು ನನಗೆ ಗೊತ್ತಿದ್ದರಿಂದ ದುಃಖ ಸಹಜವೆಂದುಕೊಂಡಿದ್ದೇನೆ. ಆದರೆ ಈ ಬರ್ಗಮನ್ ತೀರಿಕೊಂಡರೆ ನನಗಾದ ಸಂಕಟ ನನ್ನೊಳಗೆ ಬೆಳಸಿಕೊಂಡ ಮತ್ತು ಅವನು ನಿರ್ಮಿಸಿದ ಲೋಕದ ಭಾವನಾತ್ಮಕ ನಂಟು ಎಂದುಕೊಂಡಿದ್ದೇನೆ.

೭೦ ರ ದಶಕದ ಮಧ್ಯಭಾಗ. ಲಂಕೇಶರು ಬಾಲ ಭವನದಲ್ಲಿ ನಡೆಯುತ್ತಿದ್ದ ಸುಚಿತ್ರ ಫಿಲ್ಮ್ ಸೊಸೈಟಿಯ ಚಿತ್ರೋತ್ಸವದ ಚಿತ್ರಗಳಿಗೆ ದಿನವೂ ಕರೆದುಕೊಂಡು ಹೋಗುತ್ತಿದ್ದರು. ಅದಾಗ ತಾನೆ ನಾನು ೨೦ರ ಆಸು ಪಾಸಿಗೆ ಬರುವ ವಯಸ್ಸಿನವಾಗಿದ್ದೆ. 'ಸೈಲೆನ್ಸ್' ಎಂಬ ಚಿತ್ರ ಕತ್ತಲಲ್ಲಿ ತೆರೆದುಕೊಂಡಿತು. ಗೊತ್ತು ಪರಿಚಯವಿಲ್ಲದ ಊರಿನಲ್ಲಿ ರೈಲು ನಿಂತು ಅಕ್ಕ-ತಂಗಿ ಹೋಟಲಲ್ಲಿ ಇಳಿದುಕೊಳ್ಳುವುದು, ಅವರಿಬ್ಬರ ಸಂಬಂಧಗಳ ಸ್ಫೋಟ, ಭಾಷಾಂತರಕಾರಳಾಗಿದ್ದರೂ ಊರಿನ ಭಾಷೆ ತಿಳಿಯದ ಅಕ್ಕ, ಅವಳಿಗೆ ವಿರುದ್ಧವಾಗಿರುವ ತಂಗಿ ಹೀಗೆ ಕತೆ ನಡೆಯುತ್ತೆ. ತಂಗಿ ಹೋಟಲ್‌ನ ಸರ್ವರ್‌ನೊಬ್ಬನನ್ನು ಕರೆದುಕೊಂಡು ಲೈಂಗಿಕ ಕ್ರಿಯೆಯಲ್ಲಿ ತೊಡಗುತ್ತಾಳೆ. ಇದು ನಾನು ನೋಡಿದ ಪ್ರಪ್ರಥಮ ಲೈಂಗಿಕ ದೃಶ್ಯವಾಗಿದ್ದರಿಂದ ಲಂಕೇಶರ ಪಕ್ಕದಲ್ಲಿ ಕುಳಿತಿದ್ದ ನನ್ನ ಉಸಿರೇ ನಿಂತ ಅನುಭವ. ಸಾಹಿತ್ಯ-ಸಿನಿಮಾಗಳ ಹಿಂದೆ ಹೊರಟಿದ್ದ ನನಗೆ ಬರ್ಗ್‌ಮನ್ ಕಾಮನೆಗಳ ಜತೆ-ಜತೆಗೆ ವಿಚಾರಗಳಿಗೂ ಹಚ್ಚುತ್ತಾ ನಡೆದು, ಒಂದು ಸಿನಿಮಾದ ನಂತರ ಇನ್ನೊಂದು ಅವನ ಸಿನಿಮಾಗಳು ನನ್ನೊಳಗೆ ಇಳಿದು ಬಿಟ್ಟವು. ಸಾವನ್ನು ನೆನೆದ ತಕ್ಷಣ ಬರುವ 'ಸೆವೆಂತ್ ಸೀಲ್'ನ ನಟ ಸೆಕ್ಸ್‌ಗೆ ಸಂಬಂಧಿಸಿದಂತೆ 'ಸೈಲೆನ್ಸ್' ನ ಸೀನ್‌ಗಳು ನನ್ನ ಒಳಗಿನ ಅವಿಭಾಜ್ಯ ಅಂಗಗಳಾದವು. ಕೆಲವು ಪುಸ್ತಕಗಳು, ಕೆಲವು ಚಳವಳಿಗಳು, ಕೆಲವು ಸಿನಿಮಾಗಳು, ಕೆಲವು ಇಷ್ಟದವರು ನಾನು ಬೆಳೆದಂತೆಲ್ಲಾ ಬದಲಾಗುತ್ತಾ ಬಂದರು. ಆದರೆ ಬರ್ಗ್‌ಮನ್‌ನ ಏಳೆಂಟು ಸಿನಿಮಾಗಳು ಈಗಲೂ ನನ್ನನ್ನೂ ಕಾಡುತ್ತಲೇ ಇರುವುದರಿಂದ ಅವನ ಸಾವು ನನಗೆ ದುಃಖ ತಂದಿದೆ ಅಂದುಕೊಂಡಿದ್ದೇನೆ.

ಐದು ಬಾರಿ ಮದುವೆಯಾಗಿ ಲೆಕ್ಕವಿಲ್ಲದಷ್ಟು ಪ್ರೇಯಸಿಯರನ್ನು ಹೊಂದಿ ಒಂಭತ್ತು ಮಕ್ಕಳನ್ನು ಪಡೆದ ಬರ್ಗ್‌ಮನ್ ತುಂಬು ಜೀವನ ನಡೆಸಿದ್ದಾನೆ. ನಾನು ಸದಾಕಾಲ ಇಷ್ಟಪಡುವ ನಟಿಯರಲ್ಲಿ ಒಬ್ಬಳಾದ ಲಿವ್ ಉಲ್‌ಮನ್‌ಳಿಂದ ಮದುವೆ ಹೊರತಾಗಿ ಮಗಳನ್ನು ಪಡೆದಿದ್ದಾನೆ. ಅಪ್ಪನ ಜತೆ ಬೆಳೆದರೂ ತನ್ನ ತಾಯಿಯ ಹೆಸರನ್ನು ಹೊಂದಿದ ಲಿನ್ ಉಲ್‌ಮನ್ ಕಾದಂಬರಿಗಾರ್ತಿ. ಸ್ವೀಡನ್‌ನ ಇಬ್ಬರು ಬರ್ಗ್‌ಮನ್‌ರೆಂಬ ಖ್ಯಾತನಾಮರನ್ನು ಹೆಸರಿಸದೆ ಸಿನಿಮಾ ಇತಿಹಾಸವನ್ನು ಹೇಳಲು ಆಗುವುದಿಲ್ಲ. ಆರಂಭಿಕ ಸಿನಿಮಾಗಳ ಹಾಲಿವುಡ್‌ನ ಅತ್ಯಂತ ಸುಂದರ-ಶ್ರೇಷ್ಠ ನಟಿ ಇಂಗ್ರಿಡ್ ಬರ್ಗ್‌ಮನ್ ಸಹ ಸ್ವೀಡನ್‌ನವಳು. ಇಟಲಿಯ ರೋಸೋಲಿನಿಯನ್ನು ಮದುವೆಯಾಗಿದ್ದ 'ಕ್ಯಾಸಾಬ್ಲಾಂಕ' ದಂತಹ ಎಲ್ಲಾ ಕಾಲದ ಶ್ರೇಷ್ಠ ಚಿತ್ರದಲ್ಲಿ ನಟಿಸಿದ್ದ ಅವಳಿಗೆ ಕ್ಯಾನ್ಸರ್

ಅನೇಕ ಸಿನಿಮಾಗಳಲ್ಲಿ ಸ್ವೀಡನ್‌ನ ಸೆಪ್ಟೆಂಬರ್ ತಿಂಗಳು ಬಂದಂತೆಯೇ ಮಂಜು ಮುಸುಕಿದ ಆ ದೃಶ್ಯಾವಳಿಗಳು ಅದೇ ರೀತಿ ಬರುವ 'ಇನ್ನೊಬ್ಬ ಹೆಂಗಸಿ'ನ ಪಾತ್ರ ಬರ್ಗ್‌ಮನ್‌ನ ಛಾಪನ್ನು ತೋರಿಸುತ್ತವೆ. ಅದೇ ರೀತಿ ಅವನ ನಟ-ನಟಿಯರು ಸಹ. ಮ್ಯಾಕ್ಸ್‌ವ್ಯಾನ್ ಶ್ಯಾಡೋ, ಬೀಬಿ ಅಂಡರ್‌ಸನ್, ಲಿವ್ ಉಲ್‌ಮನ್, ಹ್ಯಾರಿಯಟ್ ಅಂಡರ್‌ಸನ್, ಎರ್‌ಲ್ಯಾಂಡ್ ಜೋಸೆಫ್ ಸನ್, ಗುನ್ನರ್ ಬೋರ್‌ಸ್ಯಾಂಡ್ ಇವರುಗಳು ಬಹುತೇಕ ಇವನ ಕಾಯಂ ನಟ-ನಟಿಯರು. ಅದೇ ರೀತಿ ಸ್ವೆನ್ ನಿಕ್ವೆಸ್ಟ್ ಎಂಬ ಛಾಯಾಗ್ರಾಹಕ ಅವನ ಇನ್ನೊಬ್ಬ ಕಾಯಂ ಸದಸ್ಯ. ಎಲ್ಲರಿಗಿಂತಲೂ ಬರ್ಗ್‌ಮನ್ ಸಿನಿಮಾ ಎಂದ ಕೂಡಲೇ ನೆನಪಾಗುವ ಆ ದೃಶ್ಯಾವಳಿಗಳನ್ನು ಸೆರೆ ಹಿಡಿದವನೇ ಈ ನಿಕ್ವೆಸ್ಟ್. ಇವರಿಬ್ಬರ ಜೋಡಿ ನಮ್ಮಲ್ಲಿಯ ಸತ್ಯಜಿತ್‌ರಾಯ್-ಸುಭ್ರತೋ ಮಿತ್ರ, ಗುರುದತ್-ವಿ.ಕೆ. ಮೂರ್ತಿಯ ತರಹ ಎಂದು ನೆನಸಿಕೊಳ್ಳಬಹುದು.

ಬಂದು ಸಾಯುವ ಸಮಯ ದಲ್ಲಿ ಬರ್ಗ್‌ಮನ್ ಜತೆ ನಟಿಸಲು ಒಪ್ಪಿಕೊಳ್ಳುತ್ತಾಳೆ. ಆ ಸಿನಿಮಾದ ಹೆಸರು 'ಆಟೋಮ್ ಸನೋಟಾ' ಎಂದು. ಇಂಗ್ರಿಡ್ ಮಗಳಾಗಿ ಲಿವ್ ಉಲ್‌ಮನ್, ನಟಿಸಿದ್ದಾಳೆ. ಸ್ವೆನ್ ನಿಕ್ವೆಸ್ಟ್ ಎಂಬ ಶ್ರೇಷ್ಠ ಛಾಯಾಗ್ರಾಹಕ ಇವರೆಲ್ಲರ ಪ್ರತಿಭೆ ಈ ಚಿತ್ರದಲ್ಲಿ ಎದ್ದು ಕಾಣುತ್ತೆ. ಹಾಲಿವುಡ್‌ನ ಥಳಕು ಬಳಕಿನ ಚಿತ್ರೀಕರಣದ ಶೂಟಿಂಗ್‌ಗೂ ಇಲ್ಲಿಯ ಚಿತ್ರೀಕರಣದ ವಾತಾವರಣಕ್ಕೂ ಇಂಗ್ರಿಡ್‌ಗೆ ಹೊಂದಿ ಕೊಳ್ಳಲು ಆಗುವುದಿಲ್ಲ. ಗಲ್ಲಾ ಪೆಟ್ಟಿಗೆಯ ನಟಿಯರು ಹೇಳಿದಂತೆ ನಡುಬಗ್ಗಿಸುವ ನಿರ್ದೇಶಕರೊಂದಿಗೆ ಹೆಚ್ಚು ನಟಿಸಿದ್ದ ಅವಳಿಗೆ ಬರ್ಗ್‌ಮನ್ ತನಗೆ ಅವಾಜ್ ಹಾಕಿ ನಟಿಸಲು ಹೇಳುತ್ತಿದ್ದುದು ಕಿರಿಕಿರಿ ಮಾಡುತ್ತಿತ್ತು. ಒಂದು ದಿನ 'ನನ್ನ ಮುಂದೆ ನೀನು ವಯಸ್ಸಿನಲ್ಲೂ, ಅನುಭವದಲ್ಲೂ ಬಚ್ಚಾ....' ಎಂದು ಸಿಟ್ಟಿಗೆದ್ದು ಬರ್ಗ್‌ಮನ್ ಕೆನ್ನೆಗೆ ಪಟಾರೆಂದು ಬಾರಿಸುತ್ತಾಳೆ. ಎಲ್ಲರೆದರು ಇಂಗ್ರಿಡ್ ಹೊಡೆದದ್ದರಿಂದ ಅಪ್ರಭಿತನಾದ ಬರ್ಗ್‌ಮನ್‌ಗೆ ಏನೂ ತೋಚುವುದಿಲ್ಲ. ನಂತರ ಇನ್ನೇನು ಯಾವಾಗಲಾದರೂ ಸಾಯಬಹುದಾದ ತನಗಿಂತ ಹಿರಿಯಳಾದ ಅವಳ ಮೇಲೆ ಇನ್ನಷ್ಟು ಪ್ರೀತಿ ಬರುತ್ತದೆ. ಈ ಘಟನೆಯನ್ನು ತನ್ನ ಆತ್ಮಕತೆ 'ಮ್ಯಾಜಿಕ್ ಲ್ಯಾಂಟ್ರನ್' ನಲ್ಲಿ ಹೇಳಿಕೊಂಡಿದ್ದಾನೆ. ಈ ಸಿನಿ ಮಾವೇ ಅವಳ ಕಡೆಯ ಚಿತ್ರ.

ನಾನು ಲಂಕೇಶರು ಮತ್ತು ಅನಂತಮೂರ್ತಿಯವರ ಬಳಿ ಅವರ ನೆರಳಲ್ಲಿ, ಅವರ ಸಹಕಾರದಿಂದ ಬೆಳೆದು ಬಂದವನು. ಲಂಕೇಶರಿಗೆ 'ವೈಲ್ಡ್ ಸ್ಟ್ರಾಬೆರೀಸ್' ಭಾರೀ ಇಷ್ಟದ ಸದಾ ಮೆಚ್ಚಿನ ಸಿನಿಮಾವಾಗಿತ್ತು. ನನಗೆ ಇಷ್ಟವಾದ ಅವನ ಸಿನಿಮಾಗಳ ದೊಡ್ಡ ಪಟ್ಟಿಯೇ ಇರುವುದರಿಂದ ಮುಂದೆ ಅವುಗಳ ಬಗ್ಗೆ ಚರ್ಚಿಸುತ್ತೇನೆ. ಕುರೋಸೋವಾ, ಫೆಲಿನಿ ಅವರಂತೆಯೇ ಹೆಸರಾಗಿದ್ದ ಸಿನಿಮಾಕ್ಕೆ ಹೊಸ ದಿಕ್ಕನ್ನು ತೋರಿಸಿದ ಇನ್ನೊಬ್ಬ ಗ್ರೇಟ್ ಮೈಕೆಲೇಂಜಲೋ ಅಂಟನಿಯೋನಿ ಬರ್ಗ್‌ಮನ್ ನಿಧನವಾದ ಕೆಲವೇ ಗಂಟೆಗಳಲ್ಲಿ ಇಟಲಿಯಲ್ಲಿ ತನ್ನ ೯೪ನೇ ವಯಸ್ಸಿನಲ್ಲಿ ತೀರಿಕೊಂಡ. 'ಬ್ಲೋಅಪ್','ಲಾವೆಂಚೂರ' ಮುಂತಾಗಿ ಅವನ ಚಿತ್ರಗಳು. ಇವನೂ ಸಹ ಜಾಗತಿಕ ಮಟ್ಟದಲ್ಲಿ ಹೆಚ್ಚು ಚರ್ಚಿತನಾದವನು.

ಬರ್ಗ್‌ಮನ್, ಮಾರ್ಕ್ವೆಜ್‌ರನ್ನು ನನ್ನೊಳಗೆ ತೂರಿಸಿದವರು ಲಂಕೇಶ್. ಲೆಕ್ಕವಿಲ್ಲದಷ್ಟು ಬಾರಿ ಮೇಷ್ಟ್ರು 'ಸೆವೆಂತ್ ಸೀಲ್' ನಲ್ಲಿ ಬರುವ ಸಾವು ಹಾಗೇ ಇರುತ್ತದೆ ಎಂದು ಹೇಳುತ್ತಿದ್ದರು. ಮೊದಲೆಲ್ಲಾ ಸಾವಿಗೆ ದುಗುಡ ಪಡುತ್ತಿದ್ದ ಬರ್ಗ್‌ಮನ್ ಈಚೆಗೆ ತೃಪ್ತಿಯಿಂದ ತಾನೇ ಸೃಷ್ಟಿಸಿದ ಕಲ್ಪನೆಯ ನಿಲುವಂಗಿಯ ಆ ಸಾವಿನ ಹಿಂದೆ ಹೊರಟ ಈ ಕ್ಷಣದಲ್ಲಿ ತೀರಾ ಅಸಹನೆಯಿಂದ ಹೋಗಬಾರದ ವಯಸ್ಸಿನಲ್ಲಿ ಆ ನಿಲುವಂಗಿಯವನ ಹಿಂದೆ ಹೋದ ಲಂಕೇಶರು ಇಲ್ಲಿ ನನಗೆ ನೆನಪಾಗುತ್ತಾ ಕಾಡುತ್ತಿದ್ದಾರೆ.

-೨-

ಮೂಲತಃ ನಾಟಕ ನಿರ್ದೇಶಕನಾಗಿ ಬರ್ಗ್‌ಮನ್ ಹಲವು ಕಂಪನಿಗಳಿಗೆ ನಿರ್ದೇಶನ ಮಾಡುತ್ತಾ ತನ್ನ ಕೆಲಸ ಆರಂಭಿಸುತ್ತಾನೆ. ಅನೇಕ ಖ್ಯಾತನಾಮರ ನಾಟಕಗಳಿಗೆ ಮತ್ತು ಅವುಗಳ ಪ್ರದರ್ಶನಕ್ಕೆ ಸ್ವೀಡನ್‌ನ ಸ್ಟಾಕ್‌ಹೋಂ ನಗರ ಹೆಸರುವಾಸಿಯಾಗಿತ್ತು. ನಾಟಕಗಳನ್ನು ಆಡಿಸುತ್ತಲೇ ಸಿನಿಮಾಗಳಿಗೆ ಚಿತ್ರಕತೆ ಬರೆಯುತ್ತಾ, ಸಹ ನಿರ್ದೇಶಕನಾಗಿ ನಂತರ ಸ್ವಂತ ಚಿತ್ರಗಳ ತಯಾರಿಕೆಗೆ ತೊಡಗುತ್ತಾನೆ. ಸ್ವೆನ್ಸ್ಕ್ ಫಿಲ್ಮಿಂಡಸ್ಟ್ರಿ ಎಂಬ ಚಿತ್ರ ತಯಾರಿಕಾ ಸಂಸ್ಥೆಗೆ ೧೯೫೫ ರಲ್ಲಿ ನಿರ್ಮಿಸಿದ 'ಸ್ಮೈಲ್ಸ್ ಆಫ್ ಎ ಸಮ್ಮರ್ ನೈಟ್' ಎಂಬ ಇವರ ಚಿತ್ರ ಭಾರಿ ಪ್ರಮಾಣದಲ್ಲಿ ಯಶಸ್ಸನ್ನು ಕಂಡಿತು. ಈ ಕಂಪನಿಯೇ ಅಂದಿನಿಂದ ಬಹುತೇಕ ಬರ್ಗ್‌ಮನ್ ಚಿತ್ರಗಳ ನಿರ್ಮಾಪಕರಾಗಿದ್ದು ಅಲ್ಲದೆ ಬರ್ಗ್‌ಮನ್ ಏನೇ ಹೊಸ ಪ್ರಯೋಗಗಳನ್ನು ಮಾಡಿದರೂ ಏನೊಂದು ತಕರಾರು ತೆಗೆಯದೆ ಒಪ್ಪಿಕೊಳ್ಳಲು ಸಾಧ್ಯವಾಯಿತು. ಈ ಮಾತನ್ನು ಸ್ವತಹ ಬರ್ಗಮನ್‌ನೇ ಹೇಳಿದ್ದಾನೆ. ೧೯೫೭ ರ ಇಸವಿಯಲ್ಲಿ ಬರ್ಗ್‌ಮನ್‌ನ ಎರಡು ಮಹಾನ್ ಚಿತ್ರಗಳು ತಯಾರಿಸಲ್ಪಟ್ಟವು. ಒಂದು 'ಸೆವೆಂತ್ ಸೀಲ್' ಎರಡನೆಯದು 'ವೈಲ್ಡ್ ಸ್ಟ್ರಾಬೆರೀಸ್'. ಈಗಲೂ ಇವು ಚರ್ಚೆಯ ವಿಷಯಗಳಾಗಿ ಜೀವಂತವಾಗಿವೆ.

ಇದಕ್ಕೂ ಮೊದಲು ಹಲವಾರು ಜನರು ಸಾಹಿತ್ಯ ತೆಗೆದುಕೊಂಡು ಮರೆಯದ ಸಿನಿಮಾಗಳ ಕೊಡುಗೆ ಕೊಟ್ಟವರು ಅನೇಕ. ಆದರೆ ಬರ್ಗ್‌ಮನ್ ಸಿನಿಮಾವನ್ನೆ ಸಾಹಿತ್ಯವಾಗಿ ಮಾರ್ಪಾಡು ಮಾಡಿದ್ದರಿಂದ ಅವನು ಪ್ರಪಂಚದ ಗಮನ ಸೆಳೆಯಲು ಸಾಧ್ಯವಾಯಿತು ಅಂದುಕೊಂಡಿದ್ದೇನೆ. ಮೇಲೆ ತಿಳಿಸಿದ ಎರಡೂ ಚಿತ್ರಗಳ ಕತೆ ಮತ್ತು ನಿರೂಪಣೆ ತೀರಾ ಭಿನ್ನವೆಂದು ಕಂಡರೂ ಮನುಷ್ಯನೊಳಗಿನ ಹುಡುಕಾಟ ಮತ್ತು ದೇವರ ಇರುವಿಕೆಯ ಪ್ರಶ್ನೆ ಒಂದೇ ಆಗಿರುವುದನ್ನು ನಾವು ನೋಡಬಹುದಾಗಿದೆ. ಮುಪ್ಪಿನಲ್ಲಿ ಹರೆಯವನ್ನು ನೆನೆಯುವ, ತನ್ನೆಲ್ಲಾ ಕ್ರಿಯೆಗಳ ಶೂನ್ಯವನ್ನು

ಕಾಣುತ್ತಾ ಹೋಗುವ ಫ್ಲ್ಯಾಶ್ ಬ್ಯಾಕ್‌ನಲ್ಲಿ ಹೇಳುವ ಕತೆಯ 'ವೈಲ್ಡ್ ಸ್ಟ್ರಾಬೆರೀಸ್' ಬಗ್ಗೆ ಎಷ್ಟು ಹೇಳಿದರೂ ಕಡಿಮೆಯಾಗದಿರುವಷ್ಟು ಹೊಸದನ್ನು ಧ್ವನಿಸುತ್ತಾ ಹೋಗುವ ಗುಣವನ್ನು ಈ ಸಿನಿಮಾ ಹೊಂದಿದೆ. ಅದೇ ರೀತಿಯ ಇನ್ನೊಂದು ಸಿನಿಮಾ ಸಾಹಿತ್ಯ ಕೃತಿ 'ಸೆವೆಂತ್ ಸೀಲ್'.

ಮನುಷ್ಯನ ಒಳಗಿರುವ ಅವನ ರೂಪಗಳನ್ನು ಹೊರಗಿಡುವ, ಅವನ ಹೊಯ್ದಾಟ ಅವನ ಸಣ್ಣತನ–ಒಳ್ಳೆಯತನಗಳನ್ನು ತೋರಿಸುತ್ತಲೇ ಪ್ರೀತಿ, ಸಾವು, ಕಾಮ, ಒಂಟಿತನದ ಭಾವುಕತೆ ಮತ್ತು ಕ್ರೌರ್ಯಗಳ ಸುತ್ತಾ ಇವನ ಸಿನಿಮಾಗಳು ಹೇಳುತ್ತವೆ. ಹೆಚ್ಚಾಗಿ ಈ ವಿಷಯಗಳು ಮತ್ತೆ–ಮತ್ತೆ ಅವನ ಸಿನಿಮಾಗಳಲ್ಲಿ ಬರುತ್ತವೆ. ಮತ್ತು ಅವನಷ್ಟು ಆಳವಾಗಿ ಇವುಗಳನ್ನೆಲ್ಲಾ ದೃಶ್ಯಗಳಲ್ಲಿ ಸೆರೆ ಹಿಡಿದ ಇನ್ನೊಬ್ಬ ಚಿತ್ರ ತಯಾರಕ ಇಲ್ಲವೆಂದೇ ನನ್ನ ಭಾವನೆ.

ಅನೇಕ ಸಿನಿಮಾಗಳಲ್ಲಿ ಸ್ವೀಡನ್‌ನ ಸೆಪ್ಟೆಂಬರ್ ತಿಂಗಳು ಬಂದಂತೆಯೇ ಮಂಜು ಮುಸುಕಿದ ಆ ದೃಶ್ಯಾವಳಿಗಳು ಅದೇ ರೀತಿ ಬರುವ 'ಇನ್ನೊಬ್ಬ ಹೆಂಗಸಿ'ನ ಪಾತ್ರ ಬರ್ಗ್‌ಮನ್‌ನ ಛಾಪನ್ನು ತೋರಿಸುತ್ತವೆ. ಅದೇ ರೀತಿ ಅವನ ನಟ–ನಟಿಯರು ಸಹ. ಮ್ಯಾಕ್ಸ್‌ವ್ಯಾನ್ ಸ್ಯಾಡೋ, ಬೀಬಿ ಅಂಡರ್‌ಸನ್, ಲಿವ್ ಉಲ್‌ಮನ್, ಹ್ಯಾರಿಯಟ್ ಅಂಡರ್‌ಸನ್, ಎರ್‌ಲ್ಯಾಂಡ್ ಜೋಸೆಫ್‌ಸನ್, ಗುನ್ನರ್ ಬೋರ್‌ಸ್ಟ್ಯಾಂಡ್ ಇವರುಗಳು ಬಹುತೇಕ ಇವನ ಕಾಯಂ ನಟ–ನಟಿಯರು. ಅದೇ ರೀತಿ ಸ್ವೆನ್ ನಿಕ್ವೆಸ್ಟ್ ಎಂಬ ಛಾಯಾಗ್ರಾಹಕ ಅವನ ಇನ್ನೊಬ್ಬ ಕಾಯಂ ಸದಸ್ಯ. ಎಲ್ಲರಿಗಿಂತಲೂ ಬರ್ಗ್‌ಮನ್ ಸಿನಿಮಾ ಎಂದ ಕೂಡಲೇ ನೆನಪಾಗುವ ಆ ದೃಶ್ಯಾವಳಿಗಳನ್ನು ಸೆರೆ ಹಿಡಿದವನೇ ಈ ನಿಕ್ವೆಸ್ಟ್. ಇವರಿಬ್ಬರ ಜೋಡಿ ನಮ್ಮಲ್ಲಿಯ ಸತ್ಯಜಿತ್‌ರಾಯ್–ಸುಬ್ರತೋ ಮಿತ್ರ, ಗುರುದತ್–ವಿ.ಕೆ. ಮೂರ್ತಿಯ ತರಹ ಎಂದು ನೆನಸಿಕೊಳ್ಳಬಹುದು.

ಈ ಸ್ವೆನ್ ನಿಕ್ವೆಸ್ಟ್ ಬಗ್ಗೆ ತಿಳಿಯದ ಛಾಯಾಗ್ರಾಹಕ ಇರಲಾರ. ಏಕೆಂದರೆ ಭಾರತದಂತಹ ದೇಶಗಳನ್ನು ಹಿಡಿದು ದೊಡ್ಡ ದೊಡ್ಡ ದೇಶಗಳಲ್ಲಿ ಅವನ ಬಗ್ಗೆ ಪಾಠದ ರೂಪದಲ್ಲಿ ಇನ್ಸ್‌ಟ್ಯೂಟ್‌ಗಳಲ್ಲಿ ಈಗಲೂ ಹೇಳಿಕೊಡುತ್ತಾರೆ. ಏಕೆಂದರೆ ಅವನು ನೆರಳು, ಬೆಳಕಿನೊಂದಿಗೆ ಮತ್ತು ಕ್ಲೋಸ್–ಅಪ್‌ಗಳಲ್ಲಿ ಚಿತ್ರೀಕರಿಸಿದಂತೆ ಇನ್ನೊಬ್ಬ ಕ್ಯಾಮರಾಮನ್ ಸಿಗುವುದಿಲ್ಲ. ಇವನ ಪ್ರತಿಭೆಯೆಲ್ಲಾ ಮೂಡಿಬಂದಿರುವುದೆಲ್ಲಾ ಬರ್ಗ್‌ಮನ್‌ನ ಸಿನಿಮಾಗಳೇ ಆಗಿರುವುದು ವಿಶೇಷ.

'ಸೈಲೆನ್ಸ್' ಚಿತ್ರದ ಸೆಕೆ, ಆ ಟ್ರೈನು, ಅಪರಿಚಿತ ಊರು ಮತ್ತು ಹೋಟೆಲ್. ಹುಡುಗನ ಮುಖಾಂತರ ಕಾಣುವ ಹೋಟಲಿನ ಕಾರಿಡಾರ್‌ಗಳು, ಅಲ್ಲಿ ಬರುವ ಸರ್ಕಸ್‌ನ ಕುಳ್ಳರು ಮತ್ತು ವೈಟರ್, ಅದರಲ್ಲೂ ವೈಟರ್‌ನ ಪೈಂಟಿಂಗ್ ತರಹ ಕುಳಿತರುವ ದೃಶ್ಯಗಳು ಸದಾ ನೆನಪಲ್ಲಿ ಉಳಿಯುವಂತಹವುಗಳು. ಅಕ್ಕ–ತಂಗಿಯರ ಸಂಬಂಧಗಳ ತಾಕಲಾಟ ಅಂದರೆ ಹೆಣ್ಣು–ಹೆಣ್ಣುಗಳ ನಡುವಿನ ಸಂಬಂಧಗಳ ಸುಖ–ದುಃಖ, ಪ್ರೀತಿ, ದ್ವೇಷಗಳ, ಅಸೂಯೆಗಳ ಪರಕಾಷ್ಠೆಯನ್ನು ಬರ್ಗ್‌ಮನ್ ಹೆಚ್ಚಾಗಿ ಹೇಳಿರುವುದು ಕಾಣುತ್ತದೆ. ನಾನು ನೋಡಿದಂತೆ ಒಂದೇ ಕತೆಯ ಮುಂದುವರಿಕೆಯೆನೋ ಎಂಬಂತೆ ಹೆಣ್ಣು ಮುಖಾಮುಖಿ ಆಗುವುದು ಬರ್ಗ್‌ಮನ್‌ನ ಮೂರು ಸಿನಿಮಾಗಳಲ್ಲಿ ಕಂಡುಬರುತದೆ. 'ಸೈಲೆನ್ಸ್' ನ ನಂತರ 'ಪೆರಸೋನಾ' ದಲ್ಲಿ

ಮನುಷ್ಯನ ಒಳಗಿರುವ ಅವನ ರೂಪಗಳನ್ನು ಹೊರಗಿಡುವ, ಅವನ ಹೊಯ್ದಾಟ ಅವನ ಸಣ್ಣತನ–ಒಳ್ಳೆಯತನಗಳನ್ನು ತೋರಿಸುತ್ತಲೇ ಪ್ರೀತಿ, ಸಾವು, ಕಾಮ, ಒಂಟಿತನದ ಭಾವುಕತೆ ಮತ್ತು ಕ್ರೌರ್ಯಗಳ ಸುತ್ತಾ ಇವನ ಸಿನಿಮಾಗಳು ಹೇಳುತ್ತವೆ.

ಹೆಣ್ಣು ಮುಖಾಮುಖಿ ಆಗುತ್ತಾರೆ. ಖ್ಯಾತ ನಟಿಯೊಬ್ಬಳು ಉತ್ತುಂಗದಲ್ಲಿರುವಾಗ ಮಾತುಗಳನ್ನು ಕಳೆದುಕೊಂಡು ಆಸ್ಪತ್ರೆ ಸೇರುತ್ತಾಳೆ. ಅವಳನ್ನು ನೋಡಿಕೊಳ್ಳಲು ನರ್ಸ್ ಒಬ್ಬಳನ್ನು ನೇಮಿಸುತ್ತಾರೆ. ಆ ನರ್ಸ್ ಭಾರೀ ಮಾತುಗಾರ್ತಿ. ಈ ಸಿನಿಮಾದಲ್ಲಿ ಬರುವ ದ್ವೀಪದ ದೃಶ್ಯಗಳು ಮತ್ತು ನಟಿಯಾಗಿ ನಟಿಸಿದ ಲಿವ್ ಉಲ್‌ಮನ್ ಮತ್ತು ನರ್ಸ್ ಆಗಿ ಬೀಬಿ ಅಂಡರ್‌ಸನ್‌ರ ಅಭಿನಯವಂತೂ ಅತ್ಯಂತ ಮೇಲ್ಮಟ್ಟದ್ದು. ಅದರಲ್ಲೂ ಅವರಿಬ್ಬರ ಕ್ಲೋಸ್–ಅಪ್‌ಗಳು ಇಲ್ಲಿ ಮೊದಲ ಬಾರಿಗೆ ಬರ್ಗ್‌ಮನ್ ಇಬ್ಬರ ಅರ್ಧ–ಅರ್ಧ ಮುಖಗಳನ್ನೂ ಒಂದೇ ಕಡೆಗೆ ಸೇರಿಸಿ ಒಬ್ಬಳೇ ಅನ್ನುವ ತರಹ ತೋರಿಸಿದ್ದು ಸಿನಿಮಾ ಇತಿಹಾಸದಲ್ಲಿ ಹೊಸ ದಾಖಲೆಯಾಗಿ ಉಳಿದಿದೆ. ಅಲ್ಲದೇ ಹಠಕ್ಕೆ ಬಿದ್ದವರಂತೆ ತಮ್ಮೆಲ್ಲಾ ಪ್ರತಿಭೆಯನ್ನು ಈ ಇಬ್ಬರು ನಟಿಯರು ಹೊರಹಾಕಿರುವುದು ಈ ಸಿನಿಮಾದ ವಿಶೇಷ.

ಹೆಣ್ಣಿನ ಕೊನೆಯ ಕಂತು 'ಅಟೋಮ್ ಸನೋಟಾ'. ಈ ಮೊದಲೇ ಹೇಳಿರುವಂತೆ ಇದು ಇಂಗ್ರಿಡ್ ಬರ್ಗ್‌ಮನ್‌ಳ ಕೊನೆಯ ಚಿತ್ರ. ಖ್ಯಾತ ಸಂಗೀತಗಾರ್ತಿ ತನ್ನ ಇಬ್ಬರು ಹೆಣ್ಣು ಮಕ್ಕಳ ಭೇಟಿಗೆ ಬರುವುದರಿಂದ ಕತೆ ಆರಂಭಗೊಂಡು ಒಬ್ಬರಿಗೊಬ್ಬರು ಸರಿಯಿಲ್ಲದ ತಮ್ಮ ಸಂಬಂಧಗಳನ್ನು ನೂಕಿ ಸ್ಫೋಟಿಸುವುದರೊಂದಿಗೆ ಚಿತ್ರ ತಿರುವು ಪಡೆದುಕೊಳ್ಳುತ್ತದೆ. ಒಬ್ಬ ಮಗಳು ಅಂಗವಿಕಲೆ, ಇನ್ನೊಬ್ಬಳು ತೀರಾ ಸಂಕೋಚದವಳು. ಇದರಲ್ಲೂ ಸಹ ಮಗಳಾಗಿ ಲಿವ್ ಉಲ್‌ಮನ್‌ಳ ಅಭಿನಯ ಉತ್ಕೃಷ್ಟವಾಗಿ ಉಳಿಯುತ್ತದೆ.

ನಾನು ಬರ್ಗ್‌ಮನ್ ಸಿನಿಮಾಗಳನ್ನು ನೋಡುತ್ತಿರುವಾಗ ನನ್ನೊಳಗೆ ಲೋಹಿಯಾ, ಗಾಂಧಿಯವರೂ ಜತೆಗಿದ್ದರು. ವರ್ಗ ಸಂಘರ್ಷ, ಇತ್ಯಾದಿ ಅವನ ಸಿನಿಮಾಗಳಲ್ಲಿ ಇರಲಿಲ್ಲವಲ್ಲಾ ಅಂತ ಸ್ವೀಡನ್ ದೇಶದ ಬಗ್ಗೆ ಗಮನ ಹರಿಸಿದೆ. ಅದು ಎಂದೋ ಎಲ್ಲಾ ಜಂಜಡಗಳಿಂದ ಹೊರಬಂದು ಮುಂದುವರಿದ ದೇಶವಾಗಿತ್ತು. ಅಲ್ಲದೆ ಯುರೋಪ್‌ನಲ್ಲಿ ಪ್ರಪ್ರಥಮ ಬಾರಿಗೆ ಪರಿಸರದ ಬಗ್ಗೆ ಸರ್ಕಾರಿ ಆಜ್ಞೆ ಬಂದ ಮತ್ತು ಸಮಾಜವಾದದ ಆಚರಣೆ ಸಹ ಅಲ್ಲಿರುವುದನ್ನು ಕಾಣಬಹುದು. ಇದಕ್ಕೊಂದು ಉದಾಹರಣೆ– ಆ ದೇಶದ ಪ್ರಧಾನ ಮಂತ್ರಿ ಉಲ್ಫ್ ಪಾಮೆ ಸಾಮಾನ್ಯನಂತೆ ಹೆಂಡತಿಯೊಂದಿಗೆ ಸಿನಿಮಾ ನೋಡಿಕೊಂಡು ನಡೆದುಕೊಂಡು ಬರುವಾಗ ಹಂತಕರ ಗುಂಡಿಗೆ ಬಲಿಯಾಗಿದ್ದು. ಸಹಜವಾಗಿ ಈ ದೇಶದಿಂದ ಬಂದ ಬರ್ಗ್‌ಮನ್‌ಗೆ ಮನುಷ್ಯನ ಒಳ–ಹೊರಗುಗಳನ್ನು, ದೇವರು–ದೆವ್ವಗಳ ಅಸ್ತಿತ್ವಗಳನ್ನು, ಗಂಡು–ಹೆಣ್ಣುಗಳ ಸಂಕೀರ್ಣತೆಗಳನ್ನು ಮಾತ್ರ ಚಿತ್ರೀಕರಿಸಲು ಸಾಧ್ಯವಾಯಿತು ಅಂದುಕೊಂಡಿದ್ದೇನೆ.

ಇಂಗ್ಮಾರ್ ಬರ್ಗ್‌ಮನ್, ಸಿನಿಮಾಗಳು ಇರುವವರೆಗೆ ಇರುವ ಒಂದು ಹೆಸರು ಅಂತ ಸದ್ಯಕ್ಕೆ ಹೇಳಬಹುದು. □

ಬಹಳವಿದೆ

ಬಹಳ ಬಹಳ
ಬರೆಯುವುದಿದೆ
ಇಂಕು ಮುಗಿದ ಪೆನ್ನಿಗೆ
ನನ್ನದೇ ರಕ್ತ
ತುಂಬುವುದಿದೆ.

ಇತಿಹಾಸ ಪುಸ್ತಕಗಳ
ಸುಟ್ಟು
ಹೊಸದಾಗಿ
ಬರೆಯ ಬೇಕಿದೆ.

ಕತ್ತಲ ಹಾಳೆಯಲಿ
ಬೆಳಕ ಗೆರೆ
ಎಳೆಯಲು
ನಮ್ಮದೇ ಆದ
ನಾಳೆಯೊಂದ
ಸೃಷ್ಟಿಸ ಬೇಕಿದೆ.

ಅದಕೂ ಮುಂಚೆ
ಕವಿತೆಗಳ ಬರೆದು
ಮುಗಿಸ ಬೇಕಿದೆ.

○ ಕು.ಸ. ಮಧುಸೂದನ್

ದಲಿತ ಸಂಸ್ಕೃತಿ ಸಾಮಾಜಿಕ ಪರಿಭಾಷೆಗಳು

ಲಕ್ಕೂರು ಸಿ. ಆನಂದ

> ಸಾಮಾಜಿಕವಾಗಿ ತಿರಸ್ಕೃತಗೊಂಡರೂ ಸಾಂಸ್ಕೃತಿಕವಾಗಿ 'ಫೀನಿಕ್ಸ್'ನಂತೆ ಎದ್ದು ಬಂದ ಈ ಸಮುದಾಯದ ಪ್ರತಿಭಟನೆಯು ಪೂರ್ಣವಾಗಿ ಅವರ ಪ್ರಜ್ಞಾ ವಲಯಕ್ಕೆ ಸಂಬಂಧ ಪಟ್ಟಂತಹದು. ಏಕೆಂದರೆ ಒಂದು ಸಮುದಾಯ ಎಷ್ಟು ಪ್ರಜ್ಞಾವಂತಿಕೆಯನ್ನು ಮೈಗೂಡಿಸಿಕೊಳ್ಳುತ್ತಾ ಮುನ್ನಡೆಯುತ್ತದೆಯೋ ಅಷ್ಟರ ಮಟ್ಟಿಗೆ ತನ್ನ ಮೇಲಾಗುವ ಶೋಷಣೆಗಳ (ಸಾಮಾಜಿಕ) ವಿರುದ್ಧ ಬಂಡೇಳುತ್ತದೆ. ಈ ತೆರನಾದ ಬಂಡೇಳುವಿಕೆ ಸಂಘರ್ಷದ ಮುಖಾಮುಖಿಯು ಪ್ರಥಮವಾಗಿ ಆದದ್ದು ೧೨ನೆಯ ಶತಮಾನದ ವಚನ ಚಳುವಳಿಯಲ್ಲಿಯೇ ಎನ್ನಬಹುದು. ದಲಿತ ಸಂವೇದನೆಯು ಒಂದು ಅಖಂಡ ಪರಿಕಲ್ಪನೆಯಾಗಿ, ಹೋರಾಟವಾಗಿ ಅಸ್ತಿತ್ವವನ್ನು ಪಡೆದುಕೊಂಡದ್ದು ವಚನ ಚಳವಳಿಯ ಕಾಲದಲ್ಲೇ. ತೀವ್ರವಾದ ಶೋಷಣೆಗೆ ಒಳಗಾದ ಜಾತಿ, ವರ್ಗ ಹಾಗೂ ಸ್ತ್ರೀ ಸಂವೇದನೆ ಅಭಿವ್ಯಕ್ತಿಯ ನೆಲೆಯನ್ನು ದಕ್ಕಿಸಿಕೊಂಡಿದ್ದು ಈ ಕಾಲದಲ್ಲೇ.

(ಕಳೆದ ಸಂಚಿಕೆಯಿಂದ)

ಹೀಗೆ ಅಸ್ಪೃಶ್ಯ ಲೋಕದ ಅನುಭವವು ಹೆಚ್ಚಾಗಿ 'ಸಾಮಾಜಿಕ'ವಾಗಿಯೇ ದಲಿತನಿಗೆ ಆಗಿದೆ. ಏಕೆಂದರೆ ಅಲ್ಲಿದ್ದ 'ಕನಿಷ್ಠ' ಜಾತಿ ಪದ್ಧತಿ. ಅದರ ಹೊರತಾಗಿ 'ಸಾಂಸ್ಕೃತಿಕ'ವಾಗಿ ಈ ನಿರ್ಲಕ್ಷ್ಯತೆಯಿಂದ ದಲಿತರು ಸ್ವಲ್ಪಮಟ್ಟಿಗಾದರೂ 'ಮಾಫಿ'ಯಾದರು ಅಂತ ಹೇಳಬಹುದು. ಏಕೆಂದರೆ ದಲಿತ ಸಂಸ್ಕೃತಿ 'ಆದಿಮ ಸಂಸ್ಕೃತಿ' (Arche culture)ಯ ಲಕ್ಷಣಗಳನ್ನು ಹೊಂದಿದ್ದು, ಅದು ಇಂದಿಗೂ ತನ್ನ ಮೂಲ ಸ್ವರೂಪದ ಗುಣಲಕ್ಷಣಗಳನ್ನು ಉಳಿಸಿ ಕೊಂಡಿರುವುದಕ್ಕೆ ತನ್ನ ಮೌಖಿಕ ಪರಂಪರೆಯೇ ಬುನಾದಿ. ಇದು ಲಿಖಿತ ಪರಂಪರೆಯಲ್ಲಿ ಸಾಮಾಜಿಕ ಕಾರಣದಿಂದ ದಾಖಲುಗೊಂಡಿಲ್ಲ ಅಷ್ಟೇ. ಅದರ ಮೌಖಿಕ ಪರಂಪರೆಯಲ್ಲಿ ದಲಿತರ ಅಭಿವ್ಯಕ್ತಿ ಸಿಂಹಪಾಲು. ವೇದಗಳನ್ನು ಕಲಿಯಬಾರದು ಎಂದು ನಿರ್ಬಂಧಿಸಿದಾಗ ಅವರು ಮೌಖಿಕ ಪರಂಪರೆಯನ್ನು ಆಯ್ದುಕೊಂಡರು. ಮಲೆ ಮಾದೇಶ್ವರ, ಮಂಟೇಸ್ವಾಮಿಯಂತಹ ಬೃಹತ್ ಕಥೆಗಳು ದಲಿತ ವರ್ಗದ ಅಭಿವ್ಯಕ್ತಿಯಾಗಿ ದಲಿತರ ಸಾಂಸ್ಕೃತಿಕ ಲೋಕದ ಬಳುವಳಿಯಾಗಿ ಇಂದಿನವರೆಗೂ ಉಳಿದುಕೊಂಡು ಬಂದಿದೆ.

ಹೀಗೆ ಸಾಮಾಜಿಕವಾಗಿ ತಿರಸ್ಕೃತಗೊಂಡರು ಸಾಂಸ್ಕೃತಿಕವಾಗಿ 'ಫೀನಿಕ್ಸ್'ನಂತೆ ಎದ್ದು ಬಂದ ಈ ಸಮುದಾಯದ ಪ್ರತಿಭಟನೆಯು ಪೂರ್ಣವಾಗಿ ಅವರ ಪ್ರಜ್ಞಾವಲಯಕ್ಕೆ ಸಂಬಂಧಪಟ್ಟಂತ ಹದು. ಏಕೆಂದರೆ ಒಂದು ಸಮು ದಾಯ ಎಷ್ಟು ಪ್ರಜ್ಞಾವಂತಿಕೆಯನ್ನು ಮೈಗೂಡಿಸಿಕೊಳ್ಳುತ್ತಾ ಮುನ್ನಡೆಯು ತ್ತದೆಯೋ ಅಷ್ಟರ ಮಟ್ಟಿಗೆ ತನ್ನ ಮೇಲಾಗುವ ಶೋಷಣೆಗಳ (ಸಾಮಾಜಿಕ) ವಿರುದ್ಧ ಬಂಡೇಳುತ್ತದೆ. ಈ ತೆರ ನಾದ ಬಂಡೇಳುವಿಕೆ ಸಂಘರ್ಷದ ಮುಖಾಮು ಖಿಯು ಪ್ರಥಮವಾಗಿ ಆದದ್ದು ೧೨ನೆಯ ಶತಮಾನದ ವಚನ ಚಳವಳಿಯಲ್ಲಿಯೇ ಎನ್ನಬಹುದು. ದಲಿತ ಸಂವೇದನೆಯು ಒಂದು ಅಖಂಡ ಪರಿಕಲ್ಪನೆಯಾಗಿ, ಹೋರಾಟವಾಗಿ ಅಸ್ತಿತ್ವವನ್ನು ಪಡೆದುಕೊಂಡದ್ದು ವಚನ ಚಳವಳಿಯ ಕಾಲದಲ್ಲೇ: ತೀವ್ರ ವಾದ ಶೋಷಣೆಗೆ ಒಳಗಾದ ಜಾತಿ, ವರ್ಗ ಹಾಗೂ ಸ್ತ್ರೀ ಸಂವೇದನೆ ಅಭಿವ್ಯಕ್ತಿಯ ನೆಲೆಯನ್ನು ದಕ್ಕಿಸಿ ಕೊಂಡಿದ್ದು ಈ ಕಾಲದಲ್ಲೇ. ಇಂತಹ ಸಾಮಾಜಿಕ ಕ್ರಾಂತಿಯಿಂದ ಸಾಮಾಜಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ಬದುಕು ಸ್ಥಿತ್ಯಂತರಗಳಿಗೆ ಗುರಿಯಾ ಯಿತು. ವೈದಿಕ ಧರ್ಮ, ವರ್ಣ ವ್ಯವಸ್ಥೆ, ರಾಜಪ್ರಭುತ್ವದ ನೆಲೆಗಳ ಬಗೆಗೆ ಅತಿ ಕೆಳಸ್ತರದಿಂದ ಉಗ್ರ ಪ್ರತಿಭಟನೆ ಎದ್ದಾಗ ಅಲ್ಲೊಂದು ಹೊಸ ಆವಿಷ್ಕಾರ ಏರ್ಪಟ್ಟಿತ್ತು. 'ತಾವು ವಿರೋಧಿಸಿದ ವ್ಯವಸ್ಥೆಗೆ ಸವಾಲುಗಳನ್ನು ಒಡ್ಡುತ್ತಾ ಹೊಸ ಆಚರಣೆ ಸಿದ್ಧಾಂತಗಳನ್ನು ನಿರ್ಮಿಸಿಕೊಂಡು ಮಾನವೀಯ ಬದುಕಿನ ಶೋಧನೆಗೆ ತೊಡಗಿದರು' ಅನೇಕ ಕಾಯಕ ಜಾತಿಗಳಿಂದ ಬಂದ ಜನ ತಮ್ಮದೇ ಆದ ರೀತಿಯಲ್ಲಿ ತಮ್ಮ ಸಂವೇದನೆಯನ್ನು ದಾಖಲಿ ಸಿದರು. ವೈದಿಕ ಧರ್ಮದ ಬಹುದೇವತಾರಾಧನೆ, ಸಾಂಸಾರಿಕ ಬದು ಕಿನ ವ್ಯಾಮೋಹ, ಮೇಲು/ಕೀಳುಗಳ ನಂಬಿಕೆ, ಬಡತನ, ಸಿರಿತನಗಳ ಅಂತರಗಳನ್ನು ಶುದ್ಧಿ ಹಾಗೂ ಅಶುದ್ಧತೆಯ ಕಲ್ಪನೆಗಳನ್ನು, ಮಾನ ವೀಯ ನೆಲೆಯಲ್ಲಿ ಶೋಧಿಸಿಕೊಂಡಿದ್ದು ಈ ಕಾಲದ ಸಂವೇದನೆಯ ಮುಖ್ಯ ನೆಲೆ.

ಬಸವಣ್ಣನಂತಹ ಮಾನವೀಯ ಹೋರಾಟಗಾರ ತನ್ನ ಬ್ರಾಹ್ಮಣ್ಯದ (ಈಗ ಬಂಜಗೆರೆಯವರು ಮಂಡಿಸಿದ ಬಸವಣ್ಣನ ಜಾತಿ ಕುರಿತಾದ ತಗಾದೆಯಿದೆ)ನ್ನು ಅಪವರ್ಗೀಕರಿಸಿಕೊಂಡು ಹೊಲೆತನವನ್ನು ಆರೋಪಿಸಿಕೊಂಡದ್ದು: ಅಕ್ಕನಂತಹ ಸ್ತ್ರೀ ಅನುಭಾವಿ ರಾಜಪ್ರಭುತ್ವವನ್ನು ಧಿಕ್ಕರಿಸಿ ಹೊರಟಿದ್ದು ಸಾಮಾನ್ಯ ಘಟನೆಗಳಲ್ಲ. ಸೂಳೆ ಸಂಕವ್ವ, ರೆಮ್ಮವ್ವರಂತಹ ಅನಕ್ಷರಸ್ಥ ದಲಿತರು ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದುಕಲ್ಲಿ ತಮ್ಮನ್ನು ಗುರುತಿಸಿಕೊಂ ಡದ್ದು ಆ ಕಾಲದ ಅನೇಕ ಸ್ಥಿತ್ಯಂತರಗಳಿಗೆ ದಾರಿಯಾ ಯಿತು. ಹೀಗೆ ಪ್ರತಿಸೃಷ್ಟಿಯಾದ ಸಮು ದಾಯಗಳು ಸಾಂಸ್ಕೃತಿಕವಾಗಿ ಫಲಪ್ರದವಾಗುವಂತಹ ದಾರಿಯನ್ನು ತುಳಿ ಯಲು ಅಣಿಯಾದವು. ಏಕೆಂದರೆ ಯಾವುದೇ ಸಮುದಾಯದ ಸಂಸ್ಕೃತಿ ವಿಕಾಸವಾಗುತ್ತ ಅನೇಕ ಕಾಲಘಟ್ಟಗಳ ಜತೆ ಮುಖಾಮುಖಿಯಾಗುತ್ತ ತನ್ನ ಅಸ್ತಿತ್ವವನ್ನು ರೂಪಿಸಿಕೊಳ್ಳುತ್ತದೆ. ಸಾಂಸ್ಕೃತಿ ಪ್ರತಿರೋಧ



ಶಕ್ತಿಯ ಬಹುರೂಪಗಳು ಯಾವ ಸಂಸ್ಕೃತಿಯಲ್ಲಿ ಜೀವಂತಿಕೆಯನ್ನು ವಿಸ್ತರಿಸುತ್ತ ವೆಯೋ ಅಂತಹ ಸಮುದಾಯಗಳು ಮುಳುಗಿ ಹೋಗುವುದಿಲ್ಲ ವೈಚಾರಿಕ ಅನ್ವೇಷಣೆಗಳು ಅಂತಹ ಸಂಸ್ಕೃತಿ ಗಳಲ್ಲಿ ನಿರಂತರವಾದ ಬದಲಾವಣೆಗಳನ್ನು ಅಪೇಕ್ಷಿಸುತ್ತಾ ನಾಗರೀಕತೆಯ ಕಡೆಗೆ ಬಹುರೂಪಿ ವೇಗ ಲಯಗಳಲ್ಲಿ ಪಯಣಿಸುತ್ತಿರುತ್ತವೆ. ಕೆಳಜಾತಿಗಳ ಬೌದ್ಧಿಕ ದಾಹ ಈ ಬಗೆಯ ಸಾಂಸ್ಕೃತಿಕ ಗರ್ಭದಿಂದಲೇ ತನ್ನ ರೂಪಾಂತರ ಗಳನ್ನು ಆಧುನಿಕತೆಯ ಜೊತೆ ಬೆಸೆಯಲು ತೀವ್ರವಾಗಿ ತವಕಿಸುತ್ತದೆ. ಇಂತಹ ಈ ಸಂಸ್ಕೃತಿಯ ಮುಖ್ಯ ಗುಣ 'ಮಾನವೀಕರಣ' ಏಕೆಂದರೆ ಆಕ್ರಮಣಶೀಲ ಸಂಸ್ಕೃತಿಗಳ ಪೊಳ್ಳು ದಯಾಪರತೆಯನ್ನೂ ಮೀರಿ ಇಡೀ ಸೃಷ್ಟಿಯ ಜತೆಗೆ ಮಾನವೀಯ ಸಂಬಂಧಗಳನ್ನು ವಿಸ್ತರಿಸಿಕೊಳ್ಳುವ ಪ್ರವೃತ್ತಿ ದಲಿತ ಸಂವೇದನೆಯದ್ದು.

ಈ ತೆರನಾದ ಸಂಸ್ಕೃತಿಯನ್ನು ಇಲ್ಲಿಯವರೆಗೂ ವಿಸ್ತರಿಸಿಕೊಂಡು ಬಂದ ದಲಿತತ್ವವು ಶತಮಾನಗಳುದ್ದಕ್ಕೂ ಅನುಭವಿಸಿದ ನೋವು, ಅಪಮಾನಗಳು ವಿಶಿಷ್ಟವಾದವುಗಳು ನಿಜ. ಆದರೆ ಈ ಅನುಭವ ತುಸು ಏರುಪೇರಿನೊಂದಿಗೆ ಗುರುತಿಸಲ್ಪಡುವ ಲಿಂಗಾಯತ, ಒಕ್ಕಲಿಗರಂಥ ಜಾತಿಗಳಿಗೂ ಬ್ರಾಹ್ಮಣರ ದೃಷ್ಟಿಯಲ್ಲಿ 'ಶೂದ್ರ' ಜಾತಿಗಳೇ. ಇಂಥ ಜಾತಿಗಳು ತಮಗಿಂತ ಮೇಲುಜಾತಿಗಳೊಂದಿಗೆ 'ಗುಲಾಮಗಿರಿ'ಯನ್ನು ಒಪ್ಪಿಕೊಂಡು ತನ್ನ ಕೆಳಗಿನ ಜಾತಿಗಳ ಜತೆ ಮೇಲಾಧಿಕಾರ ಸ್ಥಾಪಿಸಿಕೊಂಡಿವೆ. ಜಾತಿವಾದದ ಸಂಕೀರ್ಣತೆಯೆಂದರೆ ಇದು ಹಿಂದುಳಿದ ವರ್ಗಗಳೆಂದು ಗುರುತಿಸಲಾಗಿರುವ ಕುರುಬರಾದಿಯಾಗಿ ಇತರ ಜಾತಿಗಳಿಗೆ 'ಸ್ಪೃಶ್ಯ' (Touchables) ಜಾತಿಗಳೆಂದು ಸಮಾಜದಲ್ಲಿ ಸ್ಥಾನವೇನೋ ಇದೆ. ಆದರೆ ಮೇಲು ಜಾತಿಗಳ ಊಟೋಪಚಾರ ಕೊಡುವುದು, ಪಡೆಯುವ ವೈವಾಹಿಕ ಸಂಬಂಧಗಳಿಂದ ಸಂಪೂರ್ಣ ನಿಷೇಧಿತ ಸ್ಥಾನಗಳಲ್ಲಿವೆ. ಮಡಿ, ಮೈಲಿಗೆ ಕಲ್ಪನೆ ಅಸ್ಪೃಶ್ಯ ಜಾತಿಗಳಿಗೆ ವಿಧಿಸಲ್ಪಟ್ಟಂತೆ ಈ ಜಾತಿಗಳಿಗೂ ಅನ್ವಯಗೊಳಿಸಲಾಗಿದೆ. ದುರಂತವೆಂದರೆ 'ಗುಲಾಮತನ'ವೆನ್ನುವುದು ಈ ಎಲ್ಲ ಜಾತಿಗಳಿಗೂ ಸಮಾನವಾಗಿದ್ದರೂ ಈ ಜಾತಿಗಳ ನಡುವೆಯೇ 'ತರಮತ' ಭಾವವನ್ನು ಸೃಷ್ಟಿಸಲಾಗಿದೆ. ಈ ಕಾರಣದಿಂದ ಅಂಬೇಡ್ಕರ್ ಸರಿಯಾಗಿಯೇ ಗುರುತಿಸಿದಂತೆ:

ಜಾತಿಪದ್ಧತಿ ಸ್ಪೃಶ್ಯ, ಅಸ್ಪೃಶ್ಯ ಜಾತಿಗಳನ್ನಷ್ಟೇ
ನಿರ್ಮಿಸಿಲ್ಲ. ಅದು ಎಲ್ಲಾ
ಜಾತಿಗಳಲ್ಲಿ ಉಪಜಾತಿಗಳನ್ನು ಸೃಷ್ಟಿಸಿದೆ.
ಇದರಿಂದ ಹೊಲೆ
ಮಾದಿಗರಷ್ಟೇ ಗುಲಾಮರಾಗಿಲ್ಲ.
ಭಾರತೀಯರೆಲ್ಲರನ್ನು ಗುಲಾಮವಾಗಿಸಿದೆ.'

ಎನ್ನುವುದು ಈ ಎಲ್ಲಾ ಕಾರಣಗಳಿಂದ 'ದಲಿತ ಸಮಸ್ಯೆ' ಎನ್ನುವುದು ಸಾಮಾಜಿಕ ಸಮಸ್ಯೆಯಷ್ಟೇ ಅಲ್ಲ, ಅದು ಮಾನವ ಸಮಸ್ಯೆಯೂ ಹೌದು,

ಇಂತಹ ಸಾಮಾಜಿಕ ಸಮಸ್ಯೆಯನ್ನು ಎದುರಿಸುತ್ತಿರುವ ಕೆಳಜಾತಿ ಹಾಗೂ ಆದಿವಾಸಿ ಸಂಸ್ಕೃತಿಗಳಿಗೆ ವಿಚಿತ್ರವಾದ ನಿಗೂಢವಾದ ಅಂತರ ವಾಹಿನಿಯಾದ ಗ್ರಹಿಕೆ ಹಾಗೂ ತಾಳ್ಮೆ, ತಾಳಿಕೆಯ ಗುಣವಿದೆ. ಕಳೆದುಕೊಳ್ಳುವ ಪ್ರಕ್ರಿಯೆಯಲ್ಲೇ ತನಗೆ ಬೇಕಾದ್ದನ್ನು ಮತ್ತೊಂದು ರೂಪದಲ್ಲಿ ಪಡೆದುಕೊಳ್ಳುವ ಸಾಮರ್ಥ್ಯ. ಅವರಿಗೆ ಇರುವುದರಿಂದಲೇ ಅವುಗಳ ಅನನ್ಯತೆ ತೀರ್ಮಾನವಾಗಿದೆ. ಎಷ್ಟೆ ಮತಾಂತರಗಳಾದರೂ ಎಂತದೇ ಭಕ್ತಿಪಂಥ ಚಳವಳಿ

ಇಂದಿನ ಆಧುನಿಕ ಯುಗದ ಮುಂದೆ ಸಂಸ್ಕೃತಿಯು ತನ್ನದೆ ಆದ ರೂಪವನ್ನು ಪಡೆದುಕೊಂಡು ವೈಚಾರಿಕತೆಯನ್ನು ಮೈಗೂಡಿಸಿಕೊಂಡು ವಿಭಿನ್ನ ತೆರನಾದ ಆಕ್ರೋಶ, ಆತಂಕಗಳಿಂದ ಮುನ್ನಡೆಯುತ್ತಿದೆ. ಆದರೆ ಇಲ್ಲಿ ಸಂಸ್ಕೃತಿಗೆ ಮೂಲ ಶತ್ರುವಾಗಿ ಮೊದಲಿಗೆ ಕಾಣವುದೆಂದರೆ 'ಜಾಗತೀಕರಣ', ಇಂದರಿಂದ ಜಾತಿ ಪದ್ಧತಿಯೆಂಬ ಸಾಮಾಜಿಕತೆ ಸ್ವಲ್ಪ ಮಟ್ಟಿಗೆ ಕಾಣದೆ ಹೋದರು ಸಂಸ್ಕೃತಿಯು ಮೂಲೆಗುಂಪಾಗುವುದು ಕಾಣುತ್ತದೆ. ಏಕೆಂದರೆ ಯಾವುದೇ ಸಮುದಾಯದ ಸಂಸ್ಕೃತಿ ವಿಕಾಸವಾಗುತ್ತ ಅನೇಕ ಕಾಲಘಟ್ಟಗಳ ಜತೆ ಮುಖಾಮುಖಿಯಾಗುತ್ತ ತನ್ನ ಅಸ್ತಿತ್ವವನ್ನು ರೂಪಿಸಿಕೊಳ್ಳುತ್ತದೆ.

ಗಳು ಉಂಟಾದರೂ ವಚನಕಾರರ ಸಾಂಸ್ಕೃತಿಕ ಚಳವಳಿಯಾದರೂ ದಲಿತ ಸಮುದಾಯಗಳು ಅವುಗಳೆಲ್ಲದರಲ್ಲೂ ಭಾಗಿಯಾಗಿಯೇ ತಮ್ಮತನವನ್ನು ಕಾಪಾಡಿಕೊಂಡು ಬಂದು ಮತ್ತೆ ಮತ್ತೆ ಜಗತ್ತಿನ ಬೇರೆ ಸಂಪರ್ಕಗಳಿಗೆ ಮುಖಾಮುಖಿಯಾಗುತ್ತ ಉಳಿದಿರುವುದನ್ನು ಕೆಳಜಾತಿಗಳ 'ಮೊಂಡುತನ'ವೆಂತಲೋ ನಿರ್ದಿಷ್ಟ ಗುರಿಯಿಲ್ಲದ ಪರಿಎಂತಲೋ ಯಾರು ಹೇಳಬೇಕಾಗಿಲ್ಲ. ನಿಜವಾದ ಸಂಸ್ಕೃತಿಗಳು ಕಾಲಾಂತರಗಳನ್ನು ಅಂತರಂಗೀಕರಣಗೊಳಿಸಿಕೊಳ್ಳುವ ರೀತಿ ಇದು.

ಇಂದಿನ ಆಧುನಿಕ ಯುಗದ ಮುಂದೆ ಸಂಸ್ಕೃತಿಯು ತನ್ನದೆ ಆದ ರೂಪವನ್ನು ಪಡೆದುಕೊಂಡು ವೈಚಾರಿಕತೆಯನ್ನು ಮೈಗೂಡಿಸಿಕೊಂಡು ವಿಭಿನ್ನ ತೆರನಾದ ಆಕ್ರೋಶ, ಆತಂಕಗಳಿಂದ ಮುನ್ನಡೆಯುತ್ತಿದೆ. ಆದರೆ ಇಲ್ಲಿ ಸಂಸ್ಕೃತಿಗೆ ಮೂಲ ಶತ್ರುವಾಗಿ ಮೊದಲಿಗೆ ಕಾಣವುದೆಂದರೆ 'ಜಾಗತೀಕರಣ', ಇಂದರಿಂದ ಜಾತಿ ಪದ್ಧತಿಯೆಂಬ ಸಾಮಾಜಿಕತೆ ಸ್ವಲ್ಪ ಮಟ್ಟಿಗೆ ಕಾಣದೆ ಹೋದರು ಸಂಸ್ಕೃತಿಯು ಮೂಲೆಗುಂಪಾಗುವುದು ಕಾಣುತ್ತದೆ. ಏಕೆಂದರೆ ಯಾವುದೇ ಸಮುದಾಯದ ಸಂಸ್ಕೃತಿ ವಿಕಾಸವಾಗುತ್ತ ಅನೇಕ ಕಾಲಘಟ್ಟಗಳ ಜತೆ ಮುಖಾಮುಖಿಯಾಗುತ್ತ ತನ್ನ ಅಸ್ತಿತ್ವವನ್ನು ರೂಪಿಸಿಕೊಳ್ಳುತ್ತದೆ. ಸಾಂಸ್ಕೃತಿಕ ಪ್ರತಿರೋಧ ಶಕ್ತಿಯ ಬಹುರೂಪಗಳು ಯಾವ ಸಂಸ್ಕೃತಿಯಲ್ಲಿ ಜೀವಂತಿಕೆಯನ್ನು ವಿಸ್ತರಿಸುತ್ತವೆಯೋ ಅಂತಹ ಯಾವ ಸಮುದಾಯಗಳೂ ಮುಳುಗಿ ಹೋಗುವುದಿಲ್ಲ. ಬದಲಾಗಿ ಚಿಗುರುತ್ತವೆ. ದಲಿತ ಸಂಸ್ಕೃತಿಗೆ ಈ 'ಜೀವಂತಿಕೆ' ಉಗಮದಿಂದ ಬಂದಂತಹದು. ಅದು ಬದಲಾವಣೆಗಳನ್ನು ಕಂಡರು, ಎದುರಿಸಿದರೂ ಮೊದಲಿಗೆ ಬಂದು ನಿಲ್ಲುತ್ತದೆ. ಆದರೆ ಇಲ್ಲಿ ಸಮಸ್ಯೆ ಇರುವುದು ಸಾಮಾಜಿಕ ಬದಲಾವಣೆಗಳಲ್ಲಿ ಅಲ್ಲ: ಬದಲಾಗಿ ಸಾಂಸ್ಕೃತಿಕ ಬದಲಾವಣೆಗಳಲ್ಲಿ. ಏಕೆಂದರೆ ಈ ಸಾಂಸ್ಕೃತಿಕತೆ ಎಂಬುದನ್ನು ಈಗಾಗಲೇ ತಮ್ಮ ಆಚರಣೆಯಲ್ಲಿ ವೈದಿಕ ಶಾಹಿ ಪರಂಪರೆಯು ಸ್ವಲ್ಪ-ಸ್ವಲ್ಪವೇ ಮೈಗೂಡಿಸಿಕೊಂಡು ಅದು ತಮ್ಮದೇ ಎಂದು ವಾದಿಸುತ್ತಿದ್ದಾರೆ. ಉದಾ: ಝುಂಝುವಾರದ ಪ್ರಕರಣ.

೧. ಈಗಲೂ ಕರ್ನಾಟಕದ ಕೋಲಾರದ ಮಾಲೂರು ತಾಲ್ಲೂಕಿನ ಮಾದಿಗಿಪುರ ಅಥವಾ ಮಾತಂಗಿ ಪುರದಲ್ಲಿ 'ಝುಂಝುವಾರ'ದ ಪರಿಕಲ್ಪನೆ ದಲಿತರಲ್ಲಿ ಜೀವಂತವಾಗಿದೆ. ಹುಟ್ಟು-ಸಾವುಗಳೆಂಬ ಆಚರಣೆಯಲ್ಲಿ ಝುಂಝುವಾರವನ್ನು ತಮ್ಮ ಸಂಸ್ಕೃತಿಗೆ ಬಂದವರವೆಂದು ಈಗಲೂ ಪಾಲಿಸುತ್ತಾರೆ.

೨. ಇದೇ ಮಾಲೂರು ತಾಲ್ಲೂಕಿನ ಚೂಡಗೊಂಡನಹಳ್ಳಿಯ ರಾಮಲಿಂಗಪ್ಪ ಸ್ವಾಮಿದೇವಾಲಯದ ಪೂಜೆ ಮತ್ತು ಕೆಲವೊಂದು ಸಾಮಾಜಿಕ ಆಚರಣೆಗಳಲ್ಲಿ ವೈದಿಕರನ್ನು ದಲಿತರು ದೇವಾಲಯದ ಹೊರಗೆ ನಿಲ್ಲಿಸಿ ಮಂಗಳಾರತಿ ಮತ್ತು ಪ್ರಸಾದವನ್ನು ಈಗಲೂ ನೀಡುತ್ತಾರೆ (ಈಗ ಸ್ವಲ್ಪ ಬದಲಾಗಿದೆ) ಇಲ್ಲಿ ಈಗಲೂ ದಲಿತರೆ ದೇವಾಲಯದ ಪೂರ್ಣ ಜವಾಬ್ದಾರಿಯನ್ನು ಹೊಂದಿದ್ದು: ಅವರೆ ಅರ್ಚಕರಾಗಿದ್ದಾರೆ.

ಈ ಎರಡು ವೈಚಾರಿಕ ನಿಲುವುಗಳನ್ನು ಗಮನಿಸಿದರೆ ಒಂದು ಮಾತು ಅರ್ಥವಾಗುತ್ತದೆ. ಅದು ಯಾರ ಸಾಂಸ್ಕೃತಿಕ ಯಜಮಾನ್ಯ ಆಕ್ರಮಣಶೀಲವಾಗಿರುತ್ತದೋ ಅದರದೇ ಪ್ರಭುತ್ವ ಮತ್ತು ಚಿಂತನೆಗಳು ವ್ಯವಸ್ಥೆಯನ್ನು ರೂಪಿಸುತ್ತದೆ. ಅದಕ್ಕೆ ಮೊದಲು ದಲಿತರು ಸಾಂಸ್ಕೃತಿಕವಾಗಿ ತಮ್ಮದೇ ಆದಂತಹ ಪ್ರಭುತ್ವವನ್ನು ಸಾಧಿಸಬೇಕು. ಕೆಳಜಾತಿಗಳ ಬೌದ್ಧಿಕ ದಾಹ ಈ ಬಗೆಯ ಸಾಂಸ್ಕೃತಿಕ ಗರ್ಭದಿಂದಲೇ ತನ್ನ ರೂಪಾಂತರಗಳನ್ನು ಆಧುನಿಕತೆಯ ಜತೆ ಬೆಸೆಯಲು ತೀವ್ರವಾಗಿ ತವಕಿಸುತ್ತದೆ. ತನ್ನ ರೂಪಾಂತರಗಳನ್ನು ಆಧುನಿಕತೆಯ ಜತೆ ಬೆಸೆಯಲು ತೀವ್ರವಾಗಿ ತವಕಿಸುವಲ್ಲಿ ದಲಿತ ಸಂಸ್ಕೃತಿ ವನನ್ನು 'ಪಡೆಯಿತು' ಮತ್ತು ವನನ್ನು 'ಕಳೆದುಕೊಂಡಿತು' ಎಂಬುದರ ಕುರಿತು ಚಿಂತಿಸಬೇಕಾದಂತಹ ಅನಿವಾರ್ಯ ಸ್ಥಿತಿಯೊಂದು ಎದುರಾಗಿದೆ.

ಇಂತಹ ಈ ಹೊತ್ತಿನಲ್ಲಿ ಸಂಸ್ಕೃತಿಯ ಎದುರು ಕೆಲವೊಂದು ಧೋರಣೆಗಳಿರುವುದನ್ನು ಕಾಣಬಹುದು. ಈ ಧೋರಣೆಗಳು 'ದಲಿತ ಪ್ರಜ್ಞೆ' ಮತ್ತು 'ಸಾಂಸ್ಕೃತಿಕ ಯಜಮಾನ್ಯತೆ'ಯನ್ನು ಮುಂದಿರಿಸಿಕೊಂಡಿದೆ. ಅವುಗಳೆಂದರೆ-

೧. ವರ್ಗಾಧಾರಿತ ಮತ್ತು ಜಾತಿ ಆಧಾರಿತ ಸಮಾಜದಲ್ಲಿನ ಅಸಮಾನತೆಯನ್ನು ಪ್ರತಿಭಟಿಸುವುದು ಮತ್ತು ಅತಂತ್ರ ಸ್ಥಿತಿಯನ್ನು ಹೋಗಲಾಡಿಸಿಕೊಂಡು ತಮ್ಮ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳುವುದು ದಲಿತರಿಗೆ ಅಗತ್ಯವಾಗಿದೆ.

೨. ದಲಿತ ಸಂಸ್ಕೃತಿಯಲ್ಲಿ ಸಾಮಾಜಿಕ ವಾಸ್ತವ (Social Realism) ಮತ್ತು ತಾತ್ವಿಕ ವಾಸ್ತವ (Ideal Realism) ಗಳ ಸಂಘರ್ಷವಿರುವುದನ್ನು ವಿವೇಚಿಸುವುದು.

ಪ್ರಸ್ತುತ ಸಂದರ್ಭದಲ್ಲಿ ಮೇಲಿನ ಈ ಎರಡು ಧೋರಣೆಗಳ ಕುರಿತಾದ ಚಿಂತನೆ ತುಂಬ ಅಗತ್ಯವಾಗಿದೆ. ಏಕೆಂದರೆ ಭಾರತದ ವೈಚಾರಿಕ ಚರಿತ್ರೆ ಎಂದರೆ ವಿಶಾಲಾರ್ಥದಲ್ಲಿ ದಲಿತ ಚಿಂತನೆಯೇ ಧರ್ಮದ ವಿಕೃತಿಯನ್ನು

ಮುರಿಯುವ ದಾರಿಯಲ್ಲಿ ದಲಿತ ಚಿಂತನೆ ಅಂತರ್ಯದಲ್ಲಿ ನಿರಂತರವಾಗಿ ಬಹು ಸಾಧ್ಯತೆಗಳ ಸಂವೇದನೆಯಲ್ಲಿ ಕ್ರಿಯಾಶೀಲವಾಗಿದೆ.

ದಲಿತ ಚಳವಳಿಗಳು ಗರ್ಭ ಕಟ್ಟಲಿಲ್ಲ ಏಕೆ?

ಯೂರೋಪಿನ ಒಬ್ಬ ಹೆಣ್ಣು ಮಗಳು ೩೦ನೇ ಶತಮಾನದಲ್ಲಿ ತನ್ನ ಆತ್ಮಚರಿತ್ರೆಯನ್ನು ಬರೆದಿದ್ದಾಳೆ. ಆಕೆ ೧೯ನೇ ಶತಮಾನದ ಕೊನೆಯ ಭಾಗದಲ್ಲಿ ಯೂರೋಪಿನ ದೇಶದಲ್ಲಿಯೇ ಅತ್ಯಂತ ಶ್ರೇಷ್ಠ ನೃತ್ಯಗಾತಿ ಆಕೆಯನ್ನು ನೋಡಲಿಕ್ಕೆ ಯೂರೋಪಿನ ಮಹಾನ್ ಕಲಾವಿದರು, ಲೇಖಕರು ಸಾಲುಗಟ್ಟಿ ನಿಂತಿದ್ದರು. ಆಕೆ ತನ್ನ ಆತ್ಮ ಚರಿತ್ರೆಯಲ್ಲಿ ಒಂದು ಮಾತು ಬರೆದಿದ್ದಾಳೆ.

"Arts are not all necessary, what is necssary for a man is to love mankind Like Buddha and charist"

(ಒಬ್ಬ ಮನುಷ್ಯ ಮನುಕುಲವನ್ನು ಬುದ್ಧನಂತೆ, ಕ್ರಿಸ್ತನಂತೆ ಪ್ರೀತಿಸುವುದಾದರೆ ಬದುಕಿಗೆ ಕಲೆಗಳ ಅವಶ್ಯಕತೆ ಇಲ್ಲ. ಎಲ್ಲಿ ಬುದ್ಧನಂತೆ ಕ್ರಿಸ್ತನಂತೆ ಮನುಕುಲವನ್ನು ಪ್ರೀತಿಸಲು ಸಾಧ್ಯವಿಲ್ಲವೋ ಅಲ್ಲಿ ಮನುಷ್ಯನನ್ನು ಮನುಷ್ಯತ್ವದ ಕಡೆ ಬೆಸೆಯಲ್ಲಿಕ್ಕಾಗಿ ಸಾಹಿತ್ಯ ಮತ್ತು ಕಲೆಗಳ ಅವಶ್ಯಕತೆ ಇದೆ)

ಆಧುನಿಕತೆಯ ಗಾಳಿ ಬೀಸಿದಂತೆ ಸಮುದಾಯಗಳೆಲ್ಲಾ ಸಣ್ಣ ಸಣ್ಣ ಹಿಡುವಳಿಗಳಾಗಿ ಮಾರ್ಪಾಡಾಗುತ್ತ ಬರುತ್ತಿವೆ. 'ಸಂಸ್ಕೃತಿ'ಯು ಆಳುವ ಯಜಮಾನ್ಯ ಸಮುದಾಯದ ಸ್ವತ್ತಾಗುತ್ತಿರುವ ಈ ಹೊತ್ತಿನಲ್ಲಿ ದಲಿತ ಚಳವಳಿಗಳು ಸಾಂಸ್ಕೃತಿಕ ಹೋರಾಟವನ್ನು ಮಾಡಬೇಕಾದಂತಹ ಸಂದಿಗ್ಧ ಸ್ಥಿತಿಯಲ್ಲಿದೆ. ಆದರೆ ಇಂದು ಏನಾಗುತ್ತಿದೆ? ಸಂಸ್ಕೃತಿಯನ್ನು ರಕ್ಷಿಸುವ ಬದಲಾಗಿ ಸೀಮಿತ ದೃಷ್ಟಿಕೋನದಲ್ಲಿ ಸಂಸ್ಕೃತಿಯನ್ನು ಬಂಧಿಸಿಡಲಾಗುತ್ತಿದೆ. ಇದರ ಫಲಿತಾಂಶ 'ಸಂಸ್ಕೃತಿಯ ವಾರಸುದಾರಿಕೆ' ಮಾಯವಾಗುತ್ತ ಬರುತ್ತಿರುವುದನ್ನು ನಾವಿಂದು ಕಾಣಬಹುದು.

ಪ್ರಸ್ತುತ ಸಂದರ್ಭದಲ್ಲಿ ಒಂದು ತಾರ್ಕಿಕವಾದಂತಹ ವಿಷಯವನ್ನು ಗಮನಿಸಬೇಕು. ಅದು ಏನೆಂದರೆ ಸಂಸ್ಕೃತಿಯ ವಿವೇಚನೆಯು ಬಹುಶಿಸ್ತಿನ ಬೌದ್ಧಿಕ ಪಾತಳಿಯಿಂದ ನಡೆಯಬೇಕು ಯಾಕೆ ನಾನು ಇಲ್ಲಿ 'ಬಹುಶಿಸ್ತಿನ' ಪದ ಬಳಕೆ ಮಾಡಿದೆ ಎಂದರೆ ದಲಿತ ಸಮುದಾಯಗಳ ವರ್ತಮಾನದ ಹಲವು ನೆಲೆಗಳನ್ನು ಚಿಂತಿಸಲು ನಮಗೆ ಒಂದೇ ಬಗೆಯ ಶಿಸ್ತಿನ ಅನುಭವ ಸಾಲುವುದಿಲ್ಲ. ಬಹುಶಿಸ್ತೀಯವಾದ ಆದರೆ ಆ ಬಹುಶಿಸ್ತಿನ ಬೌದ್ಧಿಕ ಪಾತಳಿಗಳು ಒಂದರೊಳಗೊಂದು ಅಂತರ್ಗತಗೊಳ್ಳುವಂತೆ ರೂಪಿಸುವುದರಿಂದ ನಮ್ಮ ಸಂಸ್ಕೃತಿ ಹಾಗೂ ಅದರಿಂದ ವ್ಯಕ್ತವಾಗುವ ವೈಚಾರಿಕ ಅವಕಾಶವು ವಿಶೇಷವಾದುದು. ಭಾರತೀಯ ಸಂಸ್ಕೃತಿ ಚರಿತ್ರೆಯಲ್ಲಿ ದಲಿತ ಸಂಸ್ಕೃತಿಗೆ ತನ್ನದೆ ಆದಂತಹ ವೈಚಾರಿಕ ಪ್ರಜ್ಞೆಯಿದೆ. ಈ ಪ್ರಜ್ಞೆಯು ತನ್ನನ್ನು ತಾನು ನೋಡಿಕೊಳ್ಳಬೇಕಾದ್ದಲ್ಲ. ಪ್ರತಿಯೊಂದು ಭಾಷೆ, ಜನಸಮುದಾಯಕ್ಕೂ ಆಯಾ ಕಾಲಕ್ಕೂ ಅದರದೇ ಆದ ತಾತ್ವಿಕ ದರ್ಶನ ಇದ್ದೆ ಇರುತ್ತದೆ. ಅದರ ಮೂಲಕವೆ ತಮ್ಮ ಅಸ್ತಿತ್ವವನ್ನು ಪರಂಪರೆಯನ್ನು ಅದು ರೂಪಿಸಿಕೊಳ್ಳುತ್ತ ಸಾಗುತ್ತದೆ. ಇದರಲ್ಲಿ ದಲಿತ ಸಂಸ್ಕೃತಿಯ ಈ ರೂಪಿಕೆಯ ಗುಣವನ್ನು ಪ್ರಾಚೀನ ಪರಿಭಾಷೆಯಿಂದ ಪಡೆದುಕೊಂಡು ದೇಸಿಯ ಚಿಂತನಾ ಕ್ರಮಗಳನ್ನು ರೂಢಿಸಿಕೊಂಡು ಸಾಗಿ ಬಂದಂತಹದ್ದು. ಇಂತಹ ಯತ್ನದಲ್ಲಿ ಒಂದು ಸಂಸ್ಕೃತಿಯು ತನ್ನ ಅಂತರಂಗದಲ್ಲಿ ಇರುವ ವೈಚಾರಿಕ ಆಕೃತಿಗಳನ್ನು ಆಚರಣೆಗಳಿಂದ, ಸಮಾಜದಿಂದ ಪರಿಭಾವಿಸುವುದರಿಂದ ಬೌದ್ಧಿಕವಾದ ವಿಸ್ತರಣೆಯು ಆಗುವುದರ ಜತೆಗೆ ನೆನ್ನೆಯು ಇಂದಿನದರ ಜೊತೆ ಬೆರೆತು ನಾಳೆಯು ತನ್ನ ಸ್ವರೂಪವನ್ನು ನಿರ್ಧರಿಸಿಕೊಳ್ಳುತ್ತದೆ. ಇಂತಹ ಸ್ವರೂಪವನ್ನು ವಿಸ್ತರಿಸಿಕೊಳ್ಳುವ ಹಂತದಲ್ಲಿ 'ಚಳವಳಿಗಳು' ಒಂದು ಭಾಗವಾಗಿದೆಯೆ ಹೊರತು ಇಡೀ ಸಂಸ್ಕೃತಿಯನ್ನೆ ಚಳವಳಿಯೆಂದು ಬಿಂಬಿಸಲು ಬರುವುದಿಲ್ಲ. ಅಂತಹ ಚಳವಳಿಗಳಿಗೆ ಮದುವೆ ಆಗಿದೆ, ಮೊದಲ ರಾತ್ರಿಯ ಸುಖವನ್ನು ಯಾವ ಒತ್ತಾಸೆಯು ಇಲ್ಲದೆ ಅನುಭವಿಸಿಯೂ ಆಗಿದೆ, ಆದರೆ ಇಂತಹ ಚಳವಳಿಗಳು ಯಾಕೆ ಗರ್ಭಕಟ್ಟಿ ಇನ್ನೊಂದು ಮಗುವಿನ ಹುಟ್ಟಿನ ಸಂಭ್ರಮ ಆಚರಿಸಿಕೊಳ್ಳಲಿಲ್ಲ? ಗರ್ಭ ಕಟ್ಟುವಂತಹ ಸಂದರ್ಭದಲ್ಲಿ ಯಾಕೆ ಸೂತಕದ ವಾತಾವರಣವನ್ನು ಆಚರಿಸಿಕೊಳ್ಳುತ್ತಿದೆ. ಎಂಬುದರ ಕುರಿತು ಚಿಂತಿಸಬೇಕಾದಂತಹ ಒಂದು ತೆರನಾದಂತಹ ವ್ಯಥೆಯು ಇಂದು ದಲಿತ ಸಂಸ್ಕೃತಿಯನ್ನು ಕಾಡುತ್ತಿದೆ.

ಇಂದು ಚಳವಳಿಗಳೆಲ್ಲಾ ಪ್ರಭುತ್ವ (ಸರ್ಕಾರಗಳಿಗೆ) ಅಧೀನವಾಗುತ್ತಿವೆ. ಆದರೆ, ಪ್ರಭುತ್ವ ಎಂದರೆ ಪ್ರಭುತ್ವ ಅಷ್ಟೇ. ಅದು ಯಾವ ಕಾಲದಲ್ಲೂ ಮನುಷ್ಯತ್ವವನ್ನು ತೊಟ್ಟಿಲಲ್ಲಿಟ್ಟು ಹಾಲೂಡಿಸಿ ಹಾಡುವುದಿಲ್ಲ. ಪ್ರಭುತ್ವಕ್ಕೆ ಯಾವತ್ತೂ ಪಲ್ಲಂಗಗಳೇ ಬೇಕು. ಗದ್ದುಗೆ ಪೀಠ ಸಿಂಹಾಸನ ಕುರ್ಚಿಗಳಿಲ್ಲದಿದ್ದರೆ ಪ್ರಭುತ್ವಕ್ಕೆ ಜೀವವೇ ನಿದ್ದೆಯೇ ಭಾಷೆಯೇ ಇರುವುದಿಲ್ಲ. ಇಂತಹ ಪ್ರಭುತ್ವದ ಅಡಿಯಲ್ಲಿ ಇಂದು ಚಳವಳಿಗಳು ಬಿದ್ದುಕೊಂಡು ಸಂಪೂರ್ಣವಾಗಿ ನಿದ್ದೆಗೆ ಜಾರಿಕೊಂಡಿದೆ. ಸರ್ಕಾರಗಳು, ನಾಯಕರು ಚಳವಳಿಗಳನ್ನು ತೊಟ್ಟಿಲಲ್ಲಿಟ್ಟು ಪದವಿ, ಅಧಿಕಾರಗಳೆಂಬ ಹಾಲನ್ನು ಉಣಿಸಿ ದಲಿತ ನಾಯಕರನ್ನು ತೂಗಿ ತೂಗಿ ನಿದ್ರೆಗೆ ಜಾರಿಸುತ್ತಿದ್ದಾರೆ. ಈ ಪ್ರಕ್ರಿಯೆ ದಲಿತ ಸಮುದಾಯಗಳಿಗೆ ಆ ಕ್ಷಣದ ಸಮಾಧಾನವನ್ನು ಮಾತ್ರ ಕೊಡಬಹುದು. ಆ ಕ್ಷಣದ ಕತ್ತಲಿಗೆ ಸ್ವಲ್ಪ ಬೆಳಕನ್ನು ಸುರಿಯಬಹುದು ಆ ಬೆಳಕು ದಲಿತರ ಪಾಲಿಗೆ ಮುಂದೆ ಬರಬರುತ್ತ ಬೆಂಕಿಯಾಗುತ್ತದೆ ಅಂತ ಮಾತ್ರ ಗೊತ್ತಿಲ್ಲ. ಇದು ದಲಿತ ಚಳುವಳಿಗೆ ಬಿದ್ದ ಮೊದಲ ಅಘಾತಕಾರಿಯಾದಂತ ಏಟು. ಈ ಏಟಿನ ತೀವ್ರತೆ ಎಷ್ಟಿತ್ತೆಂದರೆ ದಶಕಗಳ ಚರಿತ್ರೆಯಿರುವ ದಲಿತ ಚಳವಳಿಗಳು ಕೆಲವು ರಾತ್ರಿಗಳಲ್ಲಿ ತಣ್ಣಗೆ ಒಂದೆಡೆ ಕುಳಿತುಬಿಟ್ಟವು. ಪ್ರಸ್ತುತ ಈ ಚಳುವಳಿಗಳು ನಿಸ್ತೇಜವಾಗಿ ಒಂದೆಡೆ ಕೂತಿವೆ, ಕುಳಿತುಕೊಳ್ಳಲು ಸ್ವಲ್ಪ ಜಾಗವಾದರೂ ಈಗ ಇದೆ, ಮುಂದೆ ಮುಂದೆ ಆ ಜಾಗ ಸಹ ಇಲ್ಲದಂತಹ ಸ್ಥಿತಿ ಎದುರಾಗುತ್ತದೆ.

ಆಧುನಿಕತೆಯ ಗಾಳಿ ಬೀಸಿದಂತೆ ಸಮುದಾಯಗಳೆಲ್ಲಾ ಸಣ್ಣ ಸಣ್ಣ ಹಿಡುವಳಿಗಳಾಗಿ ಮಾರ್ಪಾಡಾಗುತ್ತ ಬರುತ್ತಿವೆ. 'ಸಂಸ್ಕೃತಿ'ಯು ಆಳುವ ಯಜಮಾನ್ಯ ಸಮುದಾಯದ ಸ್ವತ್ತಾಗುತ್ತಿರುವ ಈ ಹೊತ್ತಿನಲ್ಲಿ ದಲಿತ ಚಳುವಳಿಗಳು ಸಾಂಸ್ಕೃತಿಕ ಹೋರಾಟವನ್ನು ಮಾಡಬೇಕಾದಂತಹ ಸಂದಿಗ್ಧ ಸ್ಥಿತಿಯಲ್ಲಿದೆ. ಆದರೆ ಇಂದು ಏನಾಗುತ್ತಿದೆ? ಸಂಸ್ಕೃತಿಯನ್ನು ರಕ್ಷಿಸುವ ಬದಲಾಗಿ ಸೀಮಿತ ದೃಷ್ಟಿಕೋನದಲ್ಲಿ ಸಂಸ್ಕೃತಿಯನ್ನು ಬಂಧಿಸಿಡಲಾಗುತ್ತಿದೆ. ಇದರ ಫಲಿತಾಂಶ 'ಸಂಸ್ಕೃತಿಯ ವಾರಸುದಾರಿಕೆ' ಮಾಯವಾಗುತ್ತ ಬರುತ್ತಿರುವುದನ್ನು ನಾವಿಂದು ಕಾಣಬಹುದು.

ತದನಂತರ ಬಿದ್ದಂತಹ ಪೆಟ್ಟು ಎಂದರೆ ಗಾಯದ ಮೇಲೆ ಬರೆ ಎಳೆದಂತಹದ್ದು: ಸಾಮಾಜಿಕ ನ್ಯಾಯದ ಪರಿಕಲ್ಪನೆ. ದಲಿತರ ಸಮಸ್ಯೆಗಳಿಗೆ, ದುರಂತಗಳಿಗೆ ಸರ್ಕಾರ ಕೊಡುವಂತಹ ತಾತ್ಕಾಲಿಕ ಪರಿಹಾರಗಳು. ಈ ಪರಿಹಾರಗಳು 'ಆಧುನಿಕ ಜಗತ್ತು ಹೆಚ್ಚು ಹೆಚ್ಚು ವಿಸ್ತರಿಸಿದಂತೆಲ್ಲ ವೈಚಾರಿಕ ಪ್ರಜ್ಞೆ ಕುಗ್ಗಿ ಹೋಗುತ್ತಿರುವುದನ್ನು' ಸೂಚಿಸುತ್ತದೆ. ಇಂದಿನ ದಲಿತ ಸಮಸ್ಯೆಗಳಿಗೆ ತಾತ್ಕಾಲಿಕ ಪರಿಹಾರಗಳ ಸಂತೆಯಲ್ಲಿ ನಮ್ಮ ಹಕ್ಕೊತ್ತಾಯಗಳು ಮೌನ ತಾಳುತ್ತಿವೆ. ಇಷ್ಟೊಂದು ದೀರ್ಘ ಕಾಲದ ಶೋಷಣೆಯಲ್ಲೂ ನಮಗೆ ಗಾಢವಾದ ವೈಚಾರಿಕ ಕ್ರಾಂತಿಯೇ ಸಾಧ್ಯವಾಗುತ್ತಿಲ್ಲ. ಅದಕ್ಕೆ ಮೂಲ ಕಾರಣವಾಗಿ ಈ 'ತಾತ್ಕಾಲಿಕ ಪರಿಹಾರ'ಗಳು ಎದ್ದುಕಾಣುತ್ತವೆ. ಅಲ್ಲಲ್ಲಿ ನಡೆಯುವ ಕೆಲವೊಂದು ದಲಿತ, ಬಂಡಾಯದ ಒಂದಷ್ಟು ಅಬ್ಬರವು ನಮ್ಮೆಲ್ಲ ಎಚ್ಚರವೂ ಗದ್ದಲದಂತೆ ಕೆಲವರಿಗೆ ಕೇಳಿಸುತ್ತದೆಯೆ ಹೊರತು ಚಳವಳಿಯ ಕಾವು ಕಾಣುವುದಿಲ್ಲ. ಇಲ್ಲಿನ ದುರಂತವೆಂದರೆ; ಸಾವಿರಾರು ವರ್ಷಗಳ ನೋವಿನ ಕೂಗನ್ನು ಸರ್ಕಾರಗಳು ಒಂದೇ ಒಂದು ತಾಸಿನಲ್ಲಿ ಈ ವ್ಯವಸ್ಥೆ ನಿಬಾಯಿಸಬಲ್ಲದು.

ಈ ಎಲ್ಲದರ ನಡುವೆ ಚಳುವಳಿಗಳಿಗೆ ಭಂಗ ತಂದಂತಹದು ವಿದ್ಯಾವಂತ ಮತ್ತು ನೌಕರಿಯಲ್ಲಿರುವ ದಲಿತರ 'ಒಳ ಬ್ರಾಹ್ಮಣತ್ವ' ಇದು ಒಂದು ತೆರನಾಗಿ ಮಗುವನ್ನು ತೊಟ್ಟಿಲಲ್ಲಿ ಮಲಗಿಸಿ ತೊಟ್ಟಿಲು ತೂಗುತ್ತದೆ ನಂತರ ಮಗು ಮಲಗಿದ ಮೇಲೆ ಆ ಮಗುವನ್ನು ಚಿವುಟುವ ಕೆಲಸ ಮಾಡುತ್ತದೆ. ತನ್ನೊಳಗೆಯೆ ಸಮುದಾಯ ಮೇಲು/ಕೀಳು ಆಚರಿಸಿಕೊಂಡು ತಾನು ಶ್ರೇಷ್ಠ, ತಾನು ಶ್ರೇಷ್ಠವೆಂಬ 'ಶ್ರೇಷ್ಠತೆಯನ್ನು ನಿರೂಪಿಸಿಕೊಳ್ಳುವ ಪ್ರಯತ್ನದಲ್ಲಿ ಚಳುವಳಿಗಳನ್ನು, ಅದರ ಕಾವನ್ನು ದಲಿತರೆ ತಣ್ಣಗಾಗಿಸುತ್ತಿದ್ದಾರೆ' ಇದು ಅವರೆ ಅಗೆದಂತಹ ಹಳ್ಳಕ್ಕೆ ಅವರೆ ಬೀಳುವಂತಹ ಸ್ಥಿತಿಯನ್ನು ಅನಾವರಣ ಮಾಡುತ್ತದೆ.

ನಂತರದ ಇನ್ನೊಂದು ಮಗ್ಗುಲಿನ ಕಡೆ ಹೊರಳಿದಾಗ ನಮಗೆ ಕಾಣುವುದು 'ಖೆಡ್ಡಾ' ಈ 'ಖೆಡ್ಡಾ' ಎಂಬುದು ಆನೆಯನ್ನು ಹಿಡಿಯುವಂತಹ ಪ್ರಯತ್ನ. ಆ ಖೆಡ್ಡಾ ಎಂದರೆ ಮೀಸಲಾತಿಯೆಂಬ ದೃಷ್ಟಾಂತ ಕಥೆ. ಇಂದು ಭಾರತದಲ್ಲಿ ಮಲ ಹೊರುವ ಪದ್ಧತಿಯ ನಿರ್ಮೂಲನೆಗೆ ಸರ್ಕಾರ ಘೋಷಿಸಿದ/ಮೀಸಲಿಟ್ಟ ಹಣ ಖರ್ಚಾಗಲೆ ಇಲ್ಲ ಎಂದು ಮೊನ್ನೆ ಪತ್ರಿಕೆಯಲ್ಲಿ ಗಮನಿಸಿದೆ. ಖಂಡಿತ ಮಲ ಹೊರುವ ಪದ್ಧತಿ ಈಗಲೂ ಜೀವಂತವಾಗಿದೆ. ಈ ನುಡುವೆ ಅಲ್ಲಲ್ಲಿ ಕೇಳಿ ಬರುತ್ತಿರುವ ಮಾತು ಬಂದಿದೆ. ಅದು 'ದಲಿತರು ಬಹಳ ಮುಂದುವರಿದು ಬಿಟ್ಟರು' ಎಂದು ನಾಚಿಕೆಯಿಲ್ಲದೆ ಮಾತನಾಡುವ ಅನೇಕರು ಈಗ ಎಲ್ಲೆಡೆ ಇದ್ದಾರೆ. ಅಂತವರು ತಿಳಿದುಕೊಳ್ಳಬೇಕು ಇವತ್ತಿಗೂ ಎಲ್ಲಾ ಮುನಿಸಿಪಾಲಿಟಿಗಳಲ್ಲೂ ಮಲ ಹೊರುವಂತಹ ಅನಿಷ್ಟ ಕೆಲಸಗಳಿಗೆ ದಲಿತರನ್ನೆ

ನೇಮಿಸುತ್ತಾರೆ. ದೇಶದ ಎಲ್ಲ ಕಚೇರಿಗಳಲ್ಲೂ ಇವತ್ತಿಗೂ ಕಕ್ಕಸು ತೊಳೆಯುವಂತಹ ಕೆಲಸವನ್ನು ದಲಿತರೇ ಮಾಡುತ್ತಾರೆ. ಯಾಕೆ ಇಂತಹ 'ಹೀನಾಯಿ' ಕೆಲಸಗಳಿಗೆ ಮೇಲು ಸ್ತರದ ಜನಾಂಗದವರನ್ನು ಸರ್ಕಾರ ನೇಮಿಸುತ್ತಿಲ್ಲ? ಇಂತಹ ಹೊತ್ತಲ್ಲಿ 'ಮೀಸಲಾತಿ' ಹೇಗೆ ಸಮಾನವಾಗಿ ಹಂಚಿಕೆಯಾಗಿದೆ? ಒಂದು ಕಣ್ಣಿಗೆ ಬೆಣ್ಣೆ ಮತ್ತೊಂದು ಕಣ್ಣಿಗೆ ಸುಣ್ಣವೆಂಬ ನ್ಯಾಯವನ್ನು ಅಚ್ಚುಕಟ್ಟಾಗಿ ಅಮಲು ಮಾಡುತ್ತಿದೆ. ಸರ್ಕಾರಗಳು ಇಂತಹ ಸಾಮಾಜಿಕ ಅನ್ಯಾಯದ ವಿರುದ್ಧ ದಲಿತರು ದನಿ ಎತ್ತಿ ಮಾತಾಡಿದರೆ ಅವರನ್ನು 'ಭಯೋತ್ಪಾದಕರಂತೆ, ದೇಶ ದ್ರೋಹಿಗಳಂತೆ' ಸಮಾಜ ದಲಿತರನ್ನು ಚಿತ್ರೀಕರಿಸುತ್ತಿದೆ.

ಕೊನೆಯದಾಗಿ ನಾಯಕತ್ವದ ಕೊರತೆ ದಲಿತ ಚಳವಳಿಯ ಮೂಲ ಪ್ರಶ್ನೆ. ಒಂದು ಕಡೆ ನಮ್ಮ ನಡುವಿನ ಹೆಸರಾಂತ ಕವಿ, ಚಿಂತಕ ಲಕ್ಷ್ಮೀಪತಿ ಕೋಲಾರ ದಲಿತ ಚಳವಳಿಗಳ ಕುರಿತು ಈ ತೆರನಾಗಿ ಅಭಿಪ್ರಾಯ ಪಡುತ್ತಾರೆ–

"ಮೊಟ್ಟೆಯೊಡೆದು ಹೊರಬರುವ ಬಾತುಮರಿಗೆ
ತಾಯಿ ಬಾತುಕೋಳಿಯ ಬದಲಿಗೆ ಮೊದಲು
ಯಾರದಾದರೂ ಕಾಲು ಕಂಡರೂ ಸಾಕು.
ಅದನ್ನೇ ತನ್ನ ತಾಯಿಯೆಂದು ಭಾವಿಸಿ
ಬಿಡುತ್ತದೆಯಂತೆ. ನಂತರ ಆ ಕಾಲನ್ನೇ
ಅಥವಾ ಮೊದಲು ಕಂಡದ್ದನ್ನೇ
ತಾಯಿಯೆಂದು ಭಾವಿಸಿ ಹಿಂಬಾಲಿಸುತ್ತ ಸ್ವಂತ
ತಾಯಿಯನ್ನು ಗುರುತಿಸದೆಯೇ
ಹೋಗುತ್ತದಂತೆ!"

ಇಂದು ನಾವೆಲ್ಲರೂ ಕಾಣುತ್ತಿರುವುದು ಇಂತಹ ಕಾಲುಗಳನ್ನೇ. ಇಂತಹ ಕಾಲುಗಳಿರುವಂತಹ ನಾಯಕರು ಬದಲಾಗಬೇಕು. ನಾಯಕತ್ವದ ಹೊಣೆಗಾರಿಕೆ ಭಾರವಾಗ ಬಾರದು. ಆದರೆ ಇಂದು ನಾಯಕನಾಗುವುದು ಎಂದರೆ ಹಣ, ಅಂತಸ್ತು, ಪದವಿ, ಕುರ್ಚಿ ಪಡೆಯಲು ಇರುವಂತಹ ಒಂದು 'ಪಾಸ್‌ಪೋರ್ಟ್' ಆಗಿಬಿಟ್ಟಿದೆ. ಅದು ಬದಲಾಗಬೇಕು. ಅಂಬೇಡ್ಕರ್ ಒಬ್ಬರೆ ಅಂದು ಇಡೀ ದಲಿತ ಜಗತ್ತಿನ ಸಮಷ್ಟಿ ಪ್ರಜ್ಞೆಯನ್ನು ಹೊಂದಿರುವ ಬಹಳಷ್ಟು ಜನ ಯಾಕೆ ಈ ಪ್ರಜ್ಞೆಯ ಕುರಿತು ಚಿಂತಿಸುತ್ತಿಲ್ಲ ಅಂದು ಅಂಬೇಡ್ಕರ್‌ಗೆ ಸಾಥ್ ಕೊಡಲು ಯಾರು ಇಲ್ಲದೆ ಆ ಸಂದರ್ಭದಲ್ಲಿ ದಲಿತ ಹೋರಾಟಗಳು ಎಷ್ಟೊಂದು ಬಲಿಷ್ಟವಾಗಿತ್ತು. ಆದರೆ ಇಂದು ಅನೇಕ ನಾಯಕರಿದ್ದು, ಯಾಕೆ ದಲಿತ ಚಳುವಳಿಗಳು ಸೋಲುತ್ತಿವೆ? ತನ್ನ ಪ್ರಜ್ಞೆಯನ್ನು ಕಳೆದುಕೊಳ್ಳುತ್ತಿವೆ? ಇದು ಪ್ರಶ್ನೆಯಾಗಿಯೇ ಉಳಿದುಬಿಟ್ಟಿದೆ. ಇದಕ್ಕೆ ಮುಖ್ಯವಾಗಿ 'ಸಾಮಾಜಿಕ ನಾಯಕತ್ವ ಮತ್ತು ಸಾಂಸ್ಕೃತಿಕ ನಾಯಕತ್ವ ನಡುವೆ ಇರುವ ಅಂತರವೆ, ಕಾರಣವಿರಬಹುದೆಂಬುದು' ನನ್ನ ಅನಿಸಿಕೆ.

ಇಷ್ಟೆಲ್ಲದರ ನಡುವೆಯೂ ದಲಿತ ಚಿಂತನೆ ಅತ್ಯಂತ ಆಳದಲ್ಲಿ ವ್ಯವಸ್ಥಿತವಾಗಿ ರೂಪುಗೊಳ್ಳುತ್ತಲೇ ಮೇಲೆ ಮಾತ್ರ ಅಮೂರ್ತವಾಗಿ ಕಾಣಿಸಿಕೊಳ್ಳುತ್ತಿದ್ದು ನಾಳಿನ ಸಾಧ್ಯತೆಗಳಿಗೆ ತನ್ನ ಸಮುದಾಯವನ್ನು ಆಧುನಿಕ ಜಗತ್ತಿನ ಎಲ್ಲ ವರಸೆಗಳಿಂದ ಸಿದ್ಧಮಾಡಿಕೊಳ್ಳುತ್ತಿದೆ. ನಮ್ಮ ಆಲೋಚನೆಗಳ ಮೂಲವೇ ಸಂಪೂರ್ಣವಾಗಿ ಬದಲಾಗಬೇಕು. ಭಾರತೀಯ ವೈಚಾರಿಕ ಮೀಮಾಂಸೆಯನ್ನು ಭಿನ್ನವಾಗಿ ರೂಪಿಸಿಕೊಳ್ಳುವುದಕ್ಕೆ ಇದು ಸಕಾಲ. ನಾವೆಲ್ಲ ನಮ್ಮ–ನಮ್ಮ ಸುಖ–ದುಃಖಗಳನ್ನು ನಮ್ಮ–ನಮ್ಮ ಸಮುದಾಯ

ನಾಯಕತ್ವದ ಹೊಣೆಗಾರಿಕೆ ಭಾರವಾಗ ಬಾರದು. ಆದರೆ ಇಂದು ನಾಯಕನಾಗುವುದು ಎಂದರೆ ಹಣ, ಅಂತಸ್ತು, ಪದವಿ, ಕುರ್ಚಿ ಪಡೆಯಲು ಇರುವಂತಹ ಒಂದು 'ಪಾಸ್‌ಪೋರ್ಟ್' ಆಗಿಬಿಟ್ಟಿದೆ. ಅದು ಬದಲಾಗಬೇಕು. ಅಂಬೇಡ್ಕರ್ ಒಬ್ಬರೆ ಅಂದು ಇಡೀ ದಲಿತ ಜಗತ್ತಿನ ಸಮಷ್ಟಿ ಪ್ರಜ್ಞೆಯನ್ನು ಹೊಂದಿರುವ ಬಹಳಷ್ಟು ಜನ ಯಾಕೆ ಈ ಪ್ರಜ್ಞೆಯ ಕುರಿತು ಚಿಂತಿಸುತ್ತಿಲ್ಲ ಅಂದು ಅಂಬೇಡ್ಕರ್‌ಗೆ ಸಾಥ್ ಕೊಡಲು ಯಾರು ಇಲ್ಲದೆ ಆ ಸಂದರ್ಭದಲ್ಲಿ ದಲಿತ ಹೋರಾಟಗಳು ಎಷ್ಟೊಂದು ಬಲಿಷ್ಟವಾಗಿತ್ತು. ಆದರೆ ಇಂದು ಅನೇಕ ನಾಯಕರಿದ್ದು, ಯಾಕೆ ದಲಿತ ಚಳವಳಿಗಳು ಸೋಲುತ್ತಿವೆ? ತನ್ನ ಪ್ರಜ್ಞೆಯನ್ನು ಕಳೆದುಕೊಳ್ಳುತ್ತಿವೆ? ಇದು ಪ್ರಶ್ನೆಯಾಗಿಯೇ ಉಳಿದುಬಿಟ್ಟಿದೆ. ಇದಕ್ಕೆ ಮುಖ್ಯವಾಗಿ 'ಸಾಮಾಜಿಕ ನಾಯಕತ್ವ ಮತ್ತು ಸಾಂಸ್ಕೃತಿಕ ನಾಯಕತ್ವ ನಡುವೆ ಇರುವ ಅಂತರವೆ, ಕಾರಣವಿರಬಹುದೆಂಬುದು' ನನ್ನ ಅನಿಸಿಕೆ.

ಗಳ ಸಾಧ್ಯತೆಗಳಲ್ಲಿ ಮಾತ್ರವೇ ಹುಡುಕುವಂತೆ ಸಾಮಾಜಿಕ ವ್ಯವಸ್ಥೆ ಇಂದು ನಮ್ಮನ್ನು ಕಟ್ಟಿ ಹಾಕಿದೆ. ಈ ತನಕ ಭಾರತೀಯ ಪ್ರಜ್ಞೆ ಯಾವ ಶ್ರೇಷ್ಠತೆಯ ಆಕಾರದಲ್ಲಿ ತನ್ನನ್ನು ನಿರ್ವಹಿಸಿಕೊಳ್ಳಲು ವ್ಯವಸ್ಥಿತ ಚಿಂತನ ಮಾದರಿಗಳನ್ನು ಕಟ್ಟಿಕೊಂಡಿತ್ತೊ ಅದನ್ನು ಮುರಿಯದೆ ಅನ್ಯ ಮಾರ್ಗವಿಲ್ಲ. ಈ ದೇಶದ ಮಹಾ ಮೇಧಾವಿಗಳ, ಸಂತರ, ಚಿಂತಕರ, ಸಾಹಿತಿಗಳ ನವನಾಗರಿಕರ ದೃಷ್ಟಿಯಿಂದ ಒಟ್ಟು ಸಾಮಾಜಿಕ ಪ್ರಜ್ಞೆಯನ್ನು ಗುರುತಿಸಿಕೊಳ್ಳುವ ಬದಲು ನಾವು ಅತ್ಯಂತ ಕೊನೆಯ ದೃಷ್ಟಿಯಿಂದ ನ್ಯಾಯದ ಸಮಾನತೆಯನ್ನೂ ವೈಚಾರಿಕ ಗ್ರಹಿಕೆಯನ್ನೂ ಕಂಡುಕೊಳ್ಳದಿದ್ದರೆ ನಮ್ಮ ಮುಂದಿನ ಕಾಲ ಮತ್ತಷ್ಟು ಹೊಸ ಬಗೆಯ ಅಪಮಾನತೆಗಳಿಗೆ ದಾರಿ ಮಾಡಿಕೊಡುತ್ತದೆ.

(ಮುಗಿಯಿತು)

ಅಡಿ ಟಿಪ್ಪಣಿಗಳು:

1. ದಲಿತ ಕಥನ–ಮೊಗಳ್ಳಿಗಣೇಶ್
2. ದಲಿತ ಚಿಂತನೆ–ಮೊಗಳ್ಳಿಗಣೇಶ್
3. ಕರ್ನಾಟಕದ ಸೂಫಿಗಳು–ರಹಮತ್ ತರೀಕೆರೆ
4. ಮೂರು ದಲಿತ ಕಮ್ಮಟಗಳು–ಕರ್ನಾಟಕ ಸಾಹಿತ್ಯ ಅಕಾಡೆಮಿ
5. Philosophy of History-willium H. Gray.
6. What is History?- E.H. CARR
7. History of India-Rameia Thafer
8. Dialectics of the concrete- KARELKOSIK

ಮೆರವಣಿಗೆ

(ಹಿಂದಿನ ಪುಟದಿಂದ)

ಮಾಸ್ತರರ ಹೆಂಡತಿಯ ಅಕ್ಕನ ಗಂಡ ಜಾಮೀನು ಕೊಟ್ಟು ಬಿಡಿಸಿಕೊಂಡು

ಬಂದ್ರು. ಮಾಧವಿಗೆ ಅಪ್ಪನ ನೋಡಿ ಅಳು ಉಕ್ಕಿ ಉಕ್ಕಿ ಬಂತು. ಅವರನ್ನು ಮುಟ್ಟಬೇಕು ಅನಿಸಿತು; ಮಾತಾಡಬೇಕೆನಿಸಲಿಲ್ಲ. ಬಹಳ ಹೊತ್ತು ಸುಮ್ಮನೆ ಪಿಕಿಪಿಕಿ ಮುಖ ನೋಡುತ್ತ ಕುಳಿತಳು. ಮೆಲ್ಲನ್ಯೆ "....ಅಪ್ಪಾ ಮೆರವಣಿಗೆಯ ಸೇಡನ್ನು ಗೌಡ್ರು ಹೀಗೆ ತೀರಿಸಿಕೊಂಡ್ರಾ" ಅಂದಳು. ಕ್ಷಣ ಹೊತ್ತು ಅಪ್ಪ ಮಾತಾಡಲಿಲ್ಲ. ಅವರ ಅಗಲ ಕಣ್ಣುಗಳು ಕೆಂಡವಾಗಿದ್ದವು. ತುಟಿ ಅದುರುತಿದ್ದವು. ಮನ ಭಾರವಾಗಿತ್ತು. ಮೆಲ್ಲನೆ ಮುಖವೆತ್ತಿದರು. ಅವರಿಗೆ ಬಾಡಿ ಬತ್ತಿಯಾಗಿದ್ದ ಮಗಳ ಮುಖ ನೋಡಲಾಗಲಿಲ್ಲ. "ಒಳ್ಳೆಯದು ಬರಬೇಕಾದ್ರ ನಾವು ಇದನ್ನೆಲ್ಲಾ ಎದುರಿಸಿ ಎದೆಗೊಟ್ಟು ನಿಲ್ಲಬೇಕು"– ಎಂದರು. ಅಪ್ಪನ ಮಾತು ಮೆಲುಕು ಹಾಕುತ್ತ ಮಾಧವಿ ಪುಸ್ತಕ ತೆಗೆದು ಓದಲು ಕುಳಿತಳು.

ಮಾಸ್ತರ ಕಾಕಾ ಬಂದ ಸುದ್ದಿ ಕೇಳಿ ಮಲ್ಲಪ್ಪ ಓಡೋಡಿ ಬಂದ. ಗೋಳೋ ಎಂದು ಅತ್ತು 'ಸುಮ್ಮಾಗೊ ಮಲ್ಲಪ್ಪಾ; ಜೀವನದಾಗ ಇದೆಲ್ಲಾ ಮಾಮೂಲು. ಪೋಲೀಸು, ಪೋಲೀಸ್ ಸ್ಟೇಷನ್ನು ಅಂದ್ರ ನಮ್ಮ ಜನಾ ಹಿಂಗ್ಯಾಕ ಭಯಾ ಪಡತಾರು?' ಅಂದರು. "ಅಲ್ಲೀ ಕಾಕಾ ನಿಮ್ಮಂಥವರಿಗೆ ಹಿಂಗ್ಯಾದ್ರ..." ಎಂದ ಮಲ್ಲಪ್ಪನ ಮಾತಿಗೆ ಅಲ್ಲೋ ನನಗ ಎಷ್ಟ ಸಲಾ ಹೇಳೇನಿ. ನಮ್ಮ ಕೈಯಾಗ ಅಧಿಕಾರ ಇಲ್ಲಾ ಅಂತಲೇ ಹಿಂಗಾಗೇತಿ. ಅದಕ್ಕ ನಾನು ಹೇಳೂದು–ಅಂದು ಅಂಬೇಡ್ಕರ್ ಜಯಂತಿ ದಿನ ನಾ ಹೇಳಿಲ್ಲಿಲ್ಲೇನು?... ನಮ್ಮ ಅಂಬೇಡ್ಕರ್‌ರು ಏನ್ ಹೇಳಿದ್ರೂ ಅಂತ. "ಮೊದಲು ನೀವೆಲ್ಲಾ ಸಾಲಿಕಲಿಬೇಕು. ಸಂಘ ಕಟ್ಟಬೇಕು. ನಿಮ್ಮ ಹಕ್ಕು–ಅಧಿಕಾರಕ್ಕಾಗಿ ಹೋರಾಟ ಮಾಡಬೇಕು. ನೀವು ಜಾಗೃತರಾದರ ನಾವ್ಯಕರಪಾ ಅನ್ಯಾಯ–ಶೋಷಣೆಗೆ ಒಳಗಾಗತೇವಿ. ನಮ್ಮ ಕೈಯಾಗ ಅಧಿಕಾರ ಇಲ್ಲ. ಹಣಾನೂ ಇಲ್ಲ. ನಮ್ಮ ಹೋರಾಟದ ಗುರಿ ಈಗ ಅಧಿಕಾರ ಪಡೆಯೋದು ಮೊದಲ ಆಗಬೇಕು" ಅಂತ. ಅದಕ್ಕ ಮಲ್ಲಪ್ಪಾ ನಾಹೇಳಿದ್ದನ್ನು ಸರಿಯಾಗಿ ವಿಚಾರ ಮಾಡು. ಮುಂದಿನ ಎಲೆಕ್ಷನ್‌ನ್ಯಾಗ ನೀನೇ ನಿಲ್ಲುವಿಯಂತೆ ಅಂದರು.

ಮಲ್ಲಪ್ಪನಿಗೆ ಮಾಸ್ತರ ಕಾಕಾನ ಮಾತು ಸರಿ ಅನಿಸ್ತು. ಮುಂದ ಎಲೆಕ್ಷನ್ ಬರುವುದರೊಳಗ ಎಲ್ಲಾ ಸರಿ ಮಾಡಬೇಕು. ಆ ಓಣಿ ಜನರನ್ನು ಹಾಗೂ ನಮ್ಮಂಗ ಅನ್ಯಾಯಕ್ಕೊಳಗಾದ ಅಸಾಯಕ ಜನರನ್ನೆಲ್ಲ ಕೂಡಿಸಬೇಕು. ಅದಕ್ಕಾಗಿ ಇನ್ಮುಂದೆ ಪ್ರತಿವಾರ ಅಥವಾ ತಿಂಗಳಿಗೊಮ್ಮೆಯಾದರೂ ಮೀಟಿಂಗ್ ಕೂಡಬೇಕು. ಕಷ್ಟದಾಗ ಇರೋರಿಗೆ ಸ್ವಲ್ಪ ನನ್ನ ಕೈಲಾದ ಸಹಾಯ ಮಾಡಕೋತ ಇರಬೇಕು–ಅಂತ ಮಲ್ಲಪ್ಪ ಮುಂದಿನ ಲೆಕ್ಕಾಚಾರ ಮಾಡುತ್ತ ಮಾಸ್ತರರ ಮನೆಯಿಂದ ಖುಷಿಯಿಂದ ಹೊರನಡೆದ.....

ಕುದಿಯುತ್ತಿರುವ ಆಲೋಚನೆಗಳು

ದಲಿತ್ ಡೈರಿ

ಚಂದ್ರಭಾನ್ ಪ್ರಸಾದ್

ಉತ್ತರಪ್ರದೇಶದ ಚುನಾವಣೆಗಳು ನನಗೆ ಅನೇಕ ಪಾಠಗಳನ್ನು ಕಲಿಸಿದೆ. ಆ ರಾಜ್ಯದ ದಲಿತ ಮನಸ್ಸುಗಳಲ್ಲಿ ಉ.ಪ್ರ. ಗೆಲುವು, ಸಂತಸ, ಸಂದೇಹಗಳು ಮುಂತಾಗಿ ಅನೇಕ ಆಲೋಚನೆಗಳು ಒಂದಕ್ಕೊಂದು ಡಿಕ್ಕಿ ಹೊಡೆಯುತ್ತಿವೆ.

ರಾಜಕೀಯ ಅಧಿಕಾರ ವ್ಯವಸ್ಥೆಯಲ್ಲಿ ಯಾವುದೇ ಪ್ರಯೋಜನವನ್ನು ಪಡೆಯದಿದ್ದರೂ ಸಹ ಸಾಮಾನ್ಯ ದಲಿತನೊಬ್ಬ ಖುಷಿಯಿಂದಿದ್ದಾನೆ. ಯಾವುದೇ ಸರ್ಕಾರ ಆತನ ಬದುಕಿನಲ್ಲಿ ಬದಲಾವಣೆಗಳನ್ನು ಪ್ರಚೋದಿಸಿದೆ ಎಂದೇನೂ ಅಲ್ಲ. ಬದುಕೆನ್ನುವುದು ಸಾಗುತ್ತಲೇ ಇರುವುದರಿಂದ ಬದಲಾವಣೆಗಳೂ ಸಹ ಅದರಿಂದಲೇ ಹುಟ್ಟಬೇಕು.

ಅತಿವಾಸ್ತವ ಅಥವಾ ಭ್ರಮೆ ಎನ್ನಿ! ವಸ್ತು ಸಂಗತಿಗಳು ಹಾಗೆಯೇ ಕಾಣುತ್ತವೆ. ಕಾಲೇಜಿಗೆ ಹೋಗುತ್ತಿರುವ ದಲಿತ ಅನೇಕ ಆಕಾಂಕ್ಷೆಗಳನ್ನು ಇಟ್ಟುಕೊಂಡಿದ್ದಾನೆ. ಆತನಿಗೆ ಭವಿಷ್ಯ ಉತ್ತಮವಾಗಿ ಕಾಣುತ್ತದೆ. ಶಾಲಾ ವಿದ್ಯಾಭ್ಯಾಸದಲ್ಲಿರುವವರಿಗೆ ಮತ್ತಷ್ಟು ಮೂಲ ಸೌಕರ್ಯಗಳು ಬೇಕಾಗಿವೆ.

ಉನ್ನತ ಸ್ಥಾನದ ಬಯಕೆಯಲ್ಲಿ ದಲಿತ ಅಧಿಕಾರಿ ಕಾಯುತ್ತಿದ್ದಾನೆ. ಕಳೆದ ಮೂರು ಬಾರಿ ಮಾಯಾವತಿ ಮುಖ್ಯ ಮಂತ್ರಿಯಾದಾಗ ಒಬ್ಬ ಸಾಮಾನ್ಯ ದಲಿತ ಅಧಿಕಾರಿ ಕಾರ್ಯದರ್ಶಿಯಾಗಿದ್ದ. ಪ್ರಮುಖ ಇಲಾಖೆಗಳನ್ನು ದಲಿತರು ಮುನ್ನಡೆಸಿದ್ದರು. ಈಗೇನು ಮಾಡುವುದು? ಯಾರನ್ನು ದೂರುವುದು? ಎಂದು ಒಂದು ಘಟಕದ ದಲಿತ ಸಾಮಾಜಿಕ ಕಾರ್ಯಕರ್ತರಿಗೆ ತೋಚುತ್ತಿಲ್ಲ. ಸಮಾಜ ದಲಿತ ವ್ಯಕ್ತಿಯನ್ನು ಆಧಿಕಾರದ ಗದ್ದುಗೆಯಲ್ಲಿ ಕೂರಿಸಿರುವುದರಿಂದ ಯಾರು ತಮಗೆ ಫಂಡ್ಸ್ ನೀಡುತ್ತಾರೆಂದು ದಲಿತ ಎನ್‌ಜಿಒಗಳು ಬೆಚ್ಚಿಬಿದ್ದಿವೆ.

ಈಗೇನು ಮಾಡುವುದು? ಯಾರನ್ನು ದೂರುವುದು? ಎಂದು ಒಂದು ಘಟಕದ ದಲಿತ ಸಾಮಾಜಿಕ ಕಾರ್ಯಕರ್ತರಿಗೆ ತೋಚುತ್ತಿಲ್ಲ. ಸಮಾಜ ದಲಿತ ವ್ಯಕ್ತಿಯನ್ನು ಆಧಿಕಾರದ ಗದ್ದುಗೆಯಲ್ಲಿ ಕೂರಿಸಿರುವುದರಿಂದ ಯಾರು ತಮಗೆ ಫಂಡ್ಸ್ ನೀಡುತ್ತಾರೆಂದು ದಲಿತ ಎನ್‌ಜಿಒಗಳು ಬೆಚ್ಚಿಬಿದ್ದಿವೆ.

ಆದರೆ ಇದಕ್ಕಿಂತಲೂ ಮೂಲಭೂತ ಪ್ರಶ್ನೆಯೆಂದರೆ ಸೈದ್ಧಾಂತಿಕ ನಿಲುವಿನದ್ದು. ಇದಕ್ಕೆ ವಿದ್ಯಾವಂತ ದಲಿತರು ಉತ್ತರಗಳನ್ನು ಕಂಡುಕೊಳ್ಳಲು ಹೆಣಗುತ್ತಿದ್ದಾರೆ. ಉತ್ತರಪ್ರದೇಶದಲ್ಲಿ ಮಾಯಾವತಿಯ ಮ್ಯಾಜಿಕ್ ಮಾಡಿರುವ ಕಸರತ್ತಿನಿಂದಾಗಿ, ಜಾತಿ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಕಿತ್ತೊಗೆಯಬೇಕೆಂದಿದ್ದ ಅನೇಕ ದಲಿತರು ನಿರಾಶರಾಗಿದ್ದಾರೆ.

ಮಾಯಾವತಿಯ ಯಶಸ್ಸು ದಲಿತ ಐಡೆಂಟಿಟಿಯನ್ನು ಜೀರ್ಣಿಸಿಕೊಳ್ಳುತ್ತದೆನ್ನುವ ಭಯ ಕೆಲವರನ್ನು ಕಾಡುತ್ತಿದೆ. ದಲಿತ–ಬ್ರಾಹ್ಮಣರ ಸಿದ್ಧಾಂತದಿಂದ ಗೆಲುವು ಪಡೆದ ಮಾಯಾವತಿಯನ್ನು ಟೀಕಿಸುತ್ತಿರುವ ಸಾಂಪ್ರದಾಯಿಕರಿಗೆ ಆ ಗೆಲುವು ಎಲ್ಲಾ ದಲಿತ ಚಳವಳಿಗಳಿಗೂ ಹಿನ್ನಡೆಯೆಂದೇ ಗೋಚರಿಸುತ್ತಿದೆ.

ದಲಿತ ಮನಸ್ಸುಗಳಲ್ಲಿ ಮೇಲಿನ ಹಲವಾರು ವಿಚಾರಗಳು ದಾಂದಲೆಯನ್ನೆಬ್ಬಿಸಿ ಬಿಟ್ಟಿರುವುದನ್ನು ನಾನು ಎರಡು ವಾರಗಳ ಕಾಲ ಉತ್ತರಪ್ರದೇಶದಲ್ಲಿ ಇದ್ದಾಗ ಕಂಡೆ. ದೆಹಲಿಗೆ ಹಿಂತಿರುಗಿದಾಗ ನಾನು ಮಾಡಿದ ಒಂದೇ ಒಂದು ಕೆಲಸ ಎಂದರೆ ಈ ಕುರಿತು ಯೋಚಿಸಿದ್ದೇ. ನನ್ನ ನಿರ್ಲಿಪ್ತ ಮನಸ್ಸು ಹೇಳುವುದೇನೆಂದರೆ, ದಲಿತ ಸೈದ್ಧಾಂತಿಕ ಆಯಾಮಗಳಿಗೆ ಒಂದು ಸಶಕ್ತಗೊಳಿಸುವಂಥ ವೇದಿಕೆ ಅನಿವಾರ್ಯವಾಗಿದೆ.

ನಿಜವಾಗಿಯೂ ನಾವು ಬಲಿಪಶುಗಳು. ನಾವು ವಿಜಯಿಗಳಾಗಿ ಹೊರಹೊಮ್ಮಲೇಬೇಕಾಗಿದೆ. ಉತ್ತರಪ್ರದೇಶದಲ್ಲಿಯಾದರೂ ಮಾಯಾವತಿಯ ನಾಯಕತ್ವದಲ್ಲಿ ದಲಿತರು ಜಯಶಾಲಿಗಳಾಗಿದ್ದಾರೆ.

ಆದರೆ ಉತ್ತರ ಪ್ರದೇಶದ ಒಂದು ದಲಿತ ಘಟಕಕ್ಕೆ ಅದು ಸೋಲುಗುಳಿತನವೇ ಆಗಿದೆ. ಜಯ ಎನ್ನುವುದು ಯಾವುದೇ ವ್ಯಕ್ತಿ ಅಥವಾ ಸಮಾಜವನ್ನು ತೃಪ್ತರನ್ನಾಗಿ ಮಾಡುತ್ತದೆ. ತನ್ನೊಳಗೇ ಈ ಸ್ಥಿತಿ ಸಿಟ್ಟು ಅಥವಾ ತಳಮಳವನ್ನುಂಟು ಮಾಡುತ್ತದೆ. ಆದ್ದರಿಂದ ಸಮಕಾಲೀನ ದಲಿತ ಚಳವಳಿ ಉತ್ತರ ನೀಡಬೇಕಾಗಿರುವ ಮುಖ್ಯ ಪ್ರಶ್ನೆಯೆಂದರೆ, 'ಮೇಲಿನ ತಳಮಳ ಎನ್ನುವುದು ವಸುನಿಷ್ಠವಾದುದೇ? ಜಯ ಅಥವಾ ತಳಮಳ ಇವುಗಳ ನಡುವೆ ದಲಿತ ಚಳವಳಿಯ ಆಯ್ಕೆ ಅಡಗಿದೆ.

ಯಾವಾಗ ವಿಘಟನೆ ಎನ್ನುವುದು ಚಾಲನೆ ಪಡೆಯುತ್ತದೋ ಆ ಪ್ರಕ್ರಿಯೆಯಲ್ಲೇ ದಲಿತರಿಗೆ ಯಶಸ್ಸು ಎನ್ನುವುದು ದೊರೆಯುವುದು. ಈ ಪ್ರಕ್ರಿಯೆ ಅಂತಿಮವಾಗಿ ಸಮಗ್ರತೆಯಲ್ಲಿ ಲೀನವಾಗಿಬಿಡುತ್ತದೆ. ಅಮೆರಿಕಾದ ಕಪ್ಪುಜನತೆಯ ಚಳವಳಿಯನ್ನೂ ಸಹ ಇದು ಕಾಡಿದ್ದುಂಟು. ಅವರೆಲ್ಲಾ ಜನಾಂಗೀಯ ಪ್ರತ್ಯೇಕತೆಗೆ ಹೋರಾಟ ನಡೆಸಿದ್ದರು. ಯಶಸ್ವೀ ಕಪ್ಪುಜನ ಪ್ರಬಲ ಬಿಳಿ ಸಮಾಜದತ್ತ ಚಲಿಸುತ್ತಿದ್ದಂತೆ ಅದರಲ್ಲಿ ಲೀನವಾಗುವ ಭಯ ಮೊದಮೊದಲು ಗಾಢವಾಗಿತ್ತು. ಅವರ ಐಡೆಂಟಿಟಿ ಬದಲಾವಣೆಯಾಗತೊಡಗಿತು.

ಬಿಳಿಯರ ಪರಿಕಲ್ಪಿತ ನೀಗ್ರೋ ಐಡೆಂಟಿಟಿಯನ್ನು ಅವರು ವಿರೋಧಿಸಿದ್ದರಲ್ಲದೆ, ತಮ್ಮ ಕಪ್ಪು ಐಡೆಂಟಿಗಾಗಿ ಅವರು ಹೋರಾಟ ನಡೆಸಿದರು. ಆದರೆ ಯಾವಾಗ ಒಂದು ವರ್ಗವಾಗಿ ಅವರು ಮುನ್ನಡೆದರೋ ಆಗ ಆ 'ಕಪ್ಪು' ಐಡೆಂಟಿಟಿಯನ್ನೂ ಸಹ ಅವರು ಒಪ್ಪಿಕೊಳ್ಳಲಿಲ್ಲ. ಅಲ್ಲಿ ಅವರು ಅಂತಿಮವಾಗಿ ಆಫ್ರಿಕಾ–ಅಮೇರಿಕಾ ಐಡೆಂಟಿಟಿಯನ್ನು ಒಪ್ಪಿಕೊಂಡರು. ಮತ್ತೆ ಅವರ ಸ್ಥಾನಮಾನದಲ್ಲಿ ಪ್ರಗತಿ ಕಂಡಾಗ ಅವರೆಲ್ಲಾ ಮತ್ತೇ ತಮ್ಮ ಕಪ್ಪು ಐಡೆಂಟಿಟಿಗೆ ಹೆಮ್ಮೆ ಯಿಂದ ವಾಪಸ್ಸಾದರು.

ಆದ್ದರಿಂದ ಅಸ್ತಿತ್ವದಲ್ಲಿರುವ ಎಲ್ಲಾ ದಲಿತ ಚಳವಳಿಗಳೂ ಸಹ ತಮ್ಮ ಧ್ಯೇಯ

ಅಸ್ತಿತ್ವದಲ್ಲಿರುವ ಎಲ್ಲಾ ದಲಿತ ಚಳವಳಿಗಳೂ ಸಹ ತಮ್ಮ ಧ್ಯೇಯಗಳಲ್ಲಿ ಬದಲಾವಣೆಯನ್ನು ಕಂಡುಕೊಳ್ಳಬೇಕಿದೆ. ಒಂದು ಪ್ರಮುಖ ಪ್ರಶ್ನೆಯನ್ನು ಅವುಗಳೆಲ್ಲಾ ಉತ್ತರಿಸಬೇಕಾಗಿದೆ, ಸಮಗ್ರತೆ ಮತ್ತು ಲೀನಗೊಳ್ಳುವಿಕೆ, ಪ್ರತ್ಯೇಕತೆ ಮತ್ತು ಪ್ರತ್ಯೇಕ ವಸತಿ ಪ್ರದೇಶಗಳು, ಪ್ರತ್ಯೇಕ ಬಾವಿಗಳು, ಪ್ರತ್ಯೇಕ ಬೀದಿಗಳು, ಎಲ್ಲವೂ ಪ್ರತ್ಯೇಕ ಎನ್ನುವುದರ ಮಧ್ಯೆಯಿರುವ ಭಿನ್ನತೆಯನ್ನು ಅರ್ಥೈಸುವುದು ಹೇಗೇ?' ಇದು ನಮ್ಮ ಆಸ್ತಿಯೇ? ಅದು ನಮ್ಮ ಮೇಲೆ ಹೇರಿದ್ದಾದ್ದರಿಂದ ನಾವು ಅದರ ವಿರುದ್ಧ ಹೋರಾಟ ನಡೆಸಿದೆವು. ಪ್ರತ್ಯೇಕತೆಯ ಘಟಕ ಎನ್ನುವುದು ಅವಮಾನವಲ್ಲದೆ ಮತ್ತೇನು? ನಾವೇ ನಮ್ಮ ಪ್ರತ್ಯೇಕತೆಯನ್ನು ಸ್ಥಿರಪಡಿಸಬೇಕೆ ಅಥವಾ ಸಮಾಜವನ್ನು ಪ್ರತ್ಯೇಕಿಸಿ ಉದ್ಯೋಗ ಕೇಂದ್ರಗಳು, ವ್ಯಾಪಾರ ಸ್ಥಳಗಳು, ಮತ್ತು ಕಾಲ್ ಸೆಂಟರ್‌ಗಳಿಗೆ ಪ್ರವೇಶ ಪಡೆಯಬೇಕೆ?

ಅನು : ಡೊಮಿನಿಕ್. ಡಿ

ಗಳಲ್ಲಿ ಬದಲಾವಣೆಯನ್ನು ಕಂಡುಕೊಳ್ಳಬೇಕಿದೆ. ಒಂದು ಪ್ರಮುಖ ಪ್ರಶ್ನೆಯನ್ನು ಅವು ಗಳೆಲ್ಲಾ ಉತ್ತರಿಸಬೇಕಾಗಿದೆ, 'ಸಮಗ್ರತೆ (integration) ಮತ್ತು ಲೀನಗೊಳ್ಳುವಿಕೆ (assimilation), ಪ್ರತ್ಯೇಕತೆ ಮತ್ತು ಪ್ರತ್ಯೇಕ ವಸತಿ ಪ್ರದೇಶಗಳು, ಪ್ರತ್ಯೇಕ ಬಾವಿಗಳು, ಪ್ರತ್ಯೇಕ ಬೀದಿಗಳು, ಎಲ್ಲವೂ ಪ್ರತ್ಯೇಕ ಎನ್ನುವುದರ ಮಧ್ಯೆ ಯಿರುವ ಭಿನ್ನತೆಯನ್ನು ಅರ್ಥೈಸುವುದು ಹೇಗೇ?' ಇದು ನಮ್ಮ ಆಯ್ಕೆಯೇ? ಅದು ನಮ್ಮ ಮೇಲೆ ಹೇರಿದ್ದಾದ್ದ ರಿಂದ ನಾವು ಅದರ ವಿರುದ್ಧ ಹೋರಾಟ ನಡೆಸಿದೆವು. ಪ್ರತ್ಯೇಕತೆಯ ಘಟಕ ಎನ್ನುವುದು ಅವಮಾನವಲ್ಲದೆ ಮತ್ತೇನು?

ತಮ್ಮೆಲ್ಲಾ ಆಯ್ಕೆಗಳನ್ನು ದಲಿತ ಚಳವಳಿಗಳು ಮರು-ವ್ಯಾಖ್ಯಾನಕ್ಕೊಳಪಡಿಸಬೇಕಾಗಿದೆ. ನಾವೇ ನಮ್ಮ ಪ್ರತ್ಯೇಕತೆಯನ್ನು ಸ್ಥಿರಪಡಿಸಬೇಕೆ ಅಥವಾ ಸಮಾಜವನ್ನು ಪ್ರತ್ಯೇಕಿಸಿ ಉದ್ಯೋಗ ಕೇಂದ್ರಗಳು, ವ್ಯಾಪಾರ ಸ್ಥಳಗಳು, ಮತ್ತು ಕಾಲ್ ಸೆಂಟರ್‌ಗಳಿಗೆ ಪ್ರವೇಶ ಪಡೆಯಬೇಕೆ?

ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಚಾರಿತ್ರಿಕವಾಗಿ ನಮ್ಮ ಮೇಲೆ ಹೇರಿರುವ ಸಾಮಾಜಿಕ ಐಡೆಂಟಿಟಿಗಳು ಅಥವಾ ಹಾಗೂ ನಾವೇ ರೂಢಿಸಿಕೊಂಡಿರುವುದನ್ನು ನಾವು ಬಿಡಬೇಕಾಗಿದೆಯಲ್ಲವೇ? ಡಾ. ಅಂಬೇಡ್ಕರ್ ಕಂಡಂತೆ ಜಾತಿನಿಷ್ಠ ಭಾರತೀಯ ಸಮಾಜವನ್ನು ಮೊದಲು ಜಾತಿ ತಟಸ್ಥವನ್ನಾಗಿ ಮಾಡುವ ಮೂಲಕವೇ ಜಾತಿ ರಹಿತ ಸಮಾಜವನ್ನಾಗಿ ಮಾಡುವುದು ಎಂದಲ್ಲವೇ?

ಭಾರತದ ಇತರೆಡೆಗಳಲ್ಲಿ ದಲಿತ ನಾಯಕತ್ವದ ಸರ್ಕಾರದ ಪ್ರಯೋಗವನ್ನು ವಿಸ್ತರಿಸಬೇಕಾದರೆ, ದಲಿತರೇ ಎಲ್ಲಾ ಅಧಿಕಾರವನ್ನು ಉಳಿಸಿಕೊಳ್ಳಬೇಕು ಎನ್ನುವುದು ಅರ್ಥಹೀನವಾದುದು. ದಲಿತರು ಅಲ್ಪಸಂಖ್ಯಾತರಾಗಿರುವುದರಿಂದ ಅಧಿಕಾರದಲ್ಲಿ ಪಾಲನ್ನಷ್ಟೇ ಪಡೆಯಬಹುದು. ಆದರೆ ಈ ಅಧಿಕಾರ ಗದ್ದುಗೆಯಲ್ಲಿ ದಲಿತ ನಾಯಕತ್ವ ಇರಲೇಬೇಕಾಗುತ್ತದೆ. ಉತ್ತರಪ್ರದೇಶದ ಚುನಾವಣೆಗಳು ಬದಲಾವಣೆಯ ಚಿಹ್ನೆಗಳನ್ನು ಸೂಚಿಸಿದೆ. ನಾವು ಸಹ ನಮ್ಮ ಆಲೋಚನೆಯಲ್ಲಿ ಮತ್ತು ರಾಷ್ಟ್ರ ಮಟ್ಟದಲ್ಲಿ ಬದಲಾಗಬೇಕಾಗಿದೆ.

ಬಂಡವಾಳಶಾಹಿ ಉತ್ತಮ

ನಾನು ಯಾವಾಗ ವರ್ಗರಹಿತ ಸಮಾಜದ ಕನಸನ್ನು ಕಾಣುತ್ತಿದ್ದೆನೋ ಆಗಲೇ ವಾಸ್ತವದಲ್ಲಿ ಜಾತಿ ಆಧಾರಿತ ಸಮಸ್ಯೆಗಳನ್ನು ನಾನು ಗಮನಿಸುತ್ತಿದ್ದೆ. ನನಗೆ ರಾಜಕೀಯ ಸೇರಬೇಕೆಂಬ ಆಸಕ್ತಿಯೇನೂ ಇರಲಿಲ್ಲ. ಆದರೂ ವಿದ್ಯಾರ್ಥಿ ಒಕ್ಕೂಟದ ಅಧ್ಯಕ್ಷ ಸ್ಥಾನಕ್ಕಾಗಿ ಚುನಾವಣೆಯಲ್ಲಿ ಸ್ಪರ್ಧಿಸಬಾರದೆಂಬ ಒತ್ತಡವನ್ನು ನನ್ನ ಮೇಲೆ ಹೇರಲಾಯಿತು. ಈ ಸಂಗತಿ ಒಂದು ಸವಾಲಾಗಿ ಪರಿಣಮಿಸಿದ್ದರಿಂದ ನಾನು ಚುನಾವಣೆಗೆ ನಿಲ್ಲಲು ನಿರ್ಧರಿಸಿದ್ದಲ್ಲದೆ ಆ ಸ್ಥಾನವನ್ನು ಗೆದ್ದುಕೊಂಡೆ. ಆ ದಿನಗಳಲ್ಲಿ ಒಕ್ಕೂಟದ ಪದಾಧಿಕಾರಿಗಳು ವಿದ್ಯಾರ್ಥಿಗಳು, ಟೀಚರ್ಸ್ ಮತ್ತು ಸಿಬ್ಬಂದಿ ಎದುರು ಪ್ರಮಾಣ ವಚನ ತೆದುಕೊಳ್ಳ ಬೇಕಿತ್ತು. ಇಡೀ ಸಮಾರಂಭವನ್ನೇ ಗದ್ದಲ ಎಬ್ಬಿಸಲಾಗುತ್ತದೆ ಎನ್ನುವ ಹೆದರಿಕೆಯೂ ಇತ್ತು. ಆ ಸಂದರ್ಭದಲ್ಲಿ ಸುಮಾರು 100 ಮಂದಿ ದಲಿತರು ಅಸ್ತ್ರಗಳೊಡನೆ ಆಯಕಟ್ಟಿನ ಜಾಗಗಳಲ್ಲಿ ನಿಂತಿದ್ದನ್ನು ಕಂಡ ಗೂಂಡಾಗಳು ಚಲ್ಲಾಪಿಲ್ಲಿಯಾಗಿ ಓಡಿಹೋದರು.

ನಾನು ವಿದ್ಯಾರ್ಥಿ ಒಕ್ಕೂಟದ ಅಧ್ಯಕ್ಷನಾಗಿ ಆಯ್ಕೆಯಾಗಿ ಇಂದಿಗೆ ಸುಮಾರು 30 ವರ್ಷಗಳಾದವು. ಆಗ ನಾನು 19 ವರ್ಷದವನಾಗಿ ಪ್ರಥಮ ಬಿಎ ತರಗತಿಯಲ್ಲಿ ಓದುತ್ತಿದ್ದೆ. ಅಲ್ಲದೆ ನನ್ನ ಏರಿಯಾದಲ್ಲಿ ಪ್ರಚಾರದಲ್ಲಿದ್ದ ಕಮ್ಯುನಿಸ್ಟ್ ಚಳವಳಿಯೊಂದಿಗೆ ಸಂಪರ್ಕದಲ್ಲಿದ್ದೆ.

ಈ ಉದಾಹರಣೆಯನ್ನು ನೀಡುವ ಮೂಲಕ ನಾನು ಹೇಳುವುದೇನೆಂದರೆ ಆಗ ನಾನು ವರ್ಗರಹಿತ ಸಮಾಜವನ್ನು ಬಯಸುವಂತೆ ನನಗೆ ತರಬೇತಿ ನೀಡಲಾಗಿತ್ತು. ಆದ್ದರಿಂದ ವರ್ಗರಹಿತ ಸಮಾಜದ ಬೆನ್ನುಹತ್ತಿ ನಾನು ಸಿಪಿಐ(ಎಂಎಲ್) ಸಂಘಟನೆಯನ್ನು ಸೇರಿದೆ. ಆದರೂ ನಾನೊಬ್ಬನೇ ಎಂದು ತಿಳಿಯುವುದು ಬೇಡ. ನನ್ನಂತೆಯೇ ಹಲವಾರು ದಲಿತರು ಅಥದ್ದೇ ದ್ವಂದ್ವದಲ್ಲಿ ಸಿಲುಕಿರುವುದನ್ನು ಕಾಣುತ್ತಿದ್ದೆ. ಇಂದಿಗೂ ಸಹ ದಲಿತರಲ್ಲಿ ಒಂದು ದೊಡ್ಡ ಗುಂಪು ತಾವು ಅಂಬೇಡ್ಕರ್ ಹಿತಾಸಕ್ತಿಗಳನ್ನೇ ಮುಂದುವರೆಸುತ್ತಿದ್ದೇವೆಂದು ಹೇಳುತ್ತಾರಾದರೂ ಅವರೆಲ್ಲಾ [illegible] ಆಗಿದ್ದಾರೆ.

ನಾನು ಯಾವಾಗ ವರ್ಗರಹಿತ ಸಮಾಜದ ಕನಸನ್ನು ಕಾಣುತ್ತಿದ್ದೆನೋ ಆಗಲೇ ವಾಸ್ತವದಲ್ಲಿ ಜಾತಿ ಆಧಾರಿತ ಸಮಸ್ಯೆಗಳನ್ನು ನಾನು ಗಮನಿಸುತ್ತಿದ್ದೆ. ನನಗೆ ರಾಜಕೀಯ ಸೇರಬೇಕೆಂಬ ಆಸಕ್ತಿಯೇನೂ ಇರಲಿಲ್ಲ. ಆದರೂ ವಿದ್ಯಾರ್ಥಿ ಒಕ್ಕೂಟದ ಅಧ್ಯಕ್ಷ ಸ್ಥಾನಕ್ಕಾಗಿ ಚುನಾವಣೆಯಲ್ಲಿ ಸ್ಪರ್ಧಿಸಬಾರದೆಂಬ ಒತ್ತಡವನ್ನು ನನ್ನ ಮೇಲೆ ಹೇರಲಾಯಿತು. ಈ ಸಂಗತಿ ಒಂದು ಸವಾಲಾಗಿ ಪರಿಣಮಿಸಿದ್ದರಿಂದ ನಾನು ಚುನಾವಣೆಗೆ ನಿಲ್ಲಲು ನಿರ್ಧರಿಸಿದ್ದಲ್ಲದೆ ಆ ಸ್ಥಾನವನ್ನು ಗೆದ್ದುಕೊಂಡೆ.

ಆ ದಿನಗಳಲ್ಲಿ ಒಕ್ಕೂಟದ ಪದಾಧಿಕಾರಿಗಳು ವಿದ್ಯಾರ್ಥಿಗಳು, ಟೀಚರ್ಸ್ ಮತ್ತು ಸಿಬ್ಬಂದಿ ಎದುರು ಪ್ರಮಾಣ ವಚನ ತೆಗೆದುಕೊಳ್ಳಬೇಕಿತ್ತು. ಇಡೀ ಸಮಾರಂಭವನ್ನೇ ಗದ್ದಲ ಎಬ್ಬಿಸಲಾಗುತ್ತದೆ ಎನ್ನುವ ಹೆದರಿಕೆಯೂ ಇತ್ತು. ಆ ಸಂದರ್ಭದಲ್ಲಿ ಸುಮಾರು 100 ಮಂದಿ ದಲಿತರು ಅಸ್ತ್ರಗಳೊಡನೆ ಆಯಕಟ್ಟಿನ ಜಾಗಗಳಲ್ಲಿ ನಿಂತಿದ್ದನ್ನು ಕಂಡ ಗೂಂಡಾಗಳು ಚಲ್ಲಾಪಿಲ್ಲಿಯಾಗಿ ಓಡಿಹೋದರು.

ಜಾತಿ ಸಮಸ್ಯೆಗಳನ್ನು ಎದುರಿಸಿದರೂ ಸಹ ವರ್ಗರಹಿತ ಸಮಾಜದಲ್ಲಿನ ನನ್ನ ಕನಸು ಅಚಲವಾಗಿಯೇ ಇತ್ತು. ಜಾತಿ ಎನ್ನುವುದು ಸೂಪರ್ ಸ್ಟ್ರಕ್ಚರ್ ಎಂದು ನಾನು ನನ್ನನ್ನೇ ವಂಚಿಸಿಕೊಂಡಿದ್ದು, ಅಂಥ ವ್ಯವಸ್ಥೆಯನ್ನು ಗಟ್ಟಿಯಾಗಿ ಹಿಡಿದಿರುವ ವಸ್ತು ಸಂಗತಿಗಳು ಬದಲಾದೊಡನೆ, ಜಾತಿ ಎನ್ನುವುದು ತನ್ನಷ್ಟಕ್ಕೆ ತಾನೇ ಕಳಚಿಬೀಳುವುದೆಂದು ನಂಬಿಸಲಾಗಿತ್ತು. ನಿಜವಾದ ಆಧಾರ ಸ್ತಂಭ ಜಾತಿಯೇ ಎನ್ನುವುದು ತದನಂತರದಲ್ಲಷ್ಟೆ ನನಗೆ ತಿಳಿದದ್ದು. ಎರಡು ವರ್ಷಗಳ ಹಿಂದೆಯಷ್ಟೆ ನಾನು ಶಹಜಹಾನ್‌ಪುರಕ್ಕೆ ಅಂಬೇಡ್ಕರ್ ವಾರ್ಷಿಕೋತ್ಸವಕ್ಕೆಂದು ಹೋಗಿದ್ದೆ. ಅಂದಿನ ಸಮಾರಂಭದಲ್ಲಿ ಹಿರಿಯ ದಲಿತ ವ್ಯಕ್ತಿಯೊಬ್ಬರು ಹೇಗೆ ಭಾರತೀಯ ಬಂಡವಾಳಶಾಹಿ ವ್ಯವಸ್ಥೆ ದಲಿತರನ್ನು ಶೋಷಿಸುತ್ತಿದೆಯೆಂದು ಅದ್ಭುತವಾಗಿ ಮಾತನಾಡುತ್ತಾ, ಡಾ. ಅಂಬೇಡ್ಕರ್‌ರವರೂ ಸಹ ತನ್ನ ಜೀವನವಿಡೀ ಬಂಡವಾಳಶಾಹಿ ವಿರುದ್ಧ ಹೋರಾಡಿದ್ದರೆಂದು ಕಣ್ಣಿಗೆ ಕಟ್ಟುವಂತೆ ಹೇಳುತ್ತಿದ್ದರು. ಆತನೊಬ್ಬ ಆ ಕಾರ್ಯಕ್ರಮದ ಸಂಘಟಕನಾದ್ದರಿಂದ ಕೊನೆಯಲ್ಲಿ ಆತನ ಭಾಷಣ ಇತ್ತು. ನಾನು ಅನಿವಾರ್ಯವಾಗಿ ಆತನ ಅರ್ಥಹೀನ ಭಾಷಣವನ್ನು ಆಲಿಸಬೇಕಿತ್ತು. ಹೀಗಿದ್ದರೂ ಸಹ ಆ ವ್ಯಕ್ತಿ ನನ್ನ ಪಟ್ಟಾ ಅಭಿಮಾನಿಯೇ ಆಗಿದ್ದ. ನನ್ನನ್ನು ಅಭಿನಂದಿಸುತ್ತಲೇ ನಾನು ಹೇಗೆ ದೆಹಲಿಯಲ್ಲಿ ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧ ಹೋರಾಟ ನಡೆಸುತ್ತಿದ್ದೇನೆಂದು ಭಾಷಣ ಬಿಗಿಯುತ್ತಿದ್ದ.

2001ರ ಡರ್ಬನ್ ಸಮಾವೇಶದಲ್ಲಿ ಹೆಸರಾಂತ ದಲಿತ ವಿದ್ವಾಂಸರೊಬ್ಬರು ನನ್ನಲ್ಲಿ ಮಾತನಾಡುತ್ತಾ ಹೀಗೆಂದರು, "ಭಾರತೀಯ ಸಂಪನ್ಮೂಲಗಳ ಮೇಲೆ ಹೇಗೆ ಅಮೇರಿಕಾ ಬದುಕುತ್ತಿದೆ". 1991ರಲ್ಲಿ ಜಾಗತೀಕರಣದ ಚಕ್ರ ಉರುಳಿಕೊಂಡು ಭಾರತಕ್ಕೆ ಪ್ರವೇಶ ಮಾಡಿದಾಗ ದಲಿತರಲ್ಲಿ ಅನೇಕರು ಅದರ ವಿರುದ್ಧ ಹೋರಾಟ ಮಾಡಿ ನಿಲ್ಲಿಸಿಬಿಡುತ್ತೇವೆಂದೇ ಮಾತನಾಡುತ್ತಿದ್ದರು.

ಒಂದೂವರೆ ದಶಕದ ನಂತರವೂ ಸಹ ಜಾಗತೀಕರಣ ಭಾರತದಲ್ಲಿ ಮತ್ತಷ್ಟು ಬೇರುಬಿಟ್ಟಿತೇ ವಿನಃ ಮತ್ತೇನೂ ಆಗಲಿಲ್ಲ. ಅಂದು ಅನೇಕ ದಲಿತರ ಕಲ್ಪನೆಯಲ್ಲಿ ಜಾಗತೀಕರಣ ಎನ್ನುವುದು ದಲಿತ ಸಮುದಾಯಕ್ಕೆ ಮಾರಕವಾದುದೆಂದೇ ಎನಿಸಿತ್ತು.

ಆದರೆ ಈಗ ನಮಗೆ ತಿಳಿದಿರುವಂತೆ ಯಾರು ಸಾಂಪ್ರದಾಯಿಕವಾಗಿ ಜಾತಿಯಿಂದ ಪ್ರಯೋಜನ ಪಡೆಯುತ್ತಿದ್ದಾರೋ ಅವರೆ ಇಂದು ಅದೇ ಜಾತಿ ವ್ಯವಸ್ಥೆಯಿಂದ ಮುಜುಗರಕ್ಕೊಳಗಾಗಿದ್ದಾರೆ. ಇದಕ್ಕೆ ಮುಖ್ಯ ಕಾರಣ ಜಾಗತೀಕರಣವೇ ಆಗಿದೆ. ಇಡೀ ಜಗತ್ತೇ ಪರಸ್ಪರ ಸಂಪರ್ಕದಲ್ಲಿರುವಾಗ ದಲಿತ ಸಮಸ್ಯೆ ಇಂದು ಜಾಗತಿಕ ಮಟ್ಟದಲ್ಲಿ ಮತ್ತಷ್ಟು ಗಮನವನ್ನು ಸೆಳೆಯುತ್ತಿದೆ. ದಲಿತ ಚಳವಳಿಯನ್ನು ಬೆಂಬಲಿಸುವ ಅನೇಕರು ಯೂರೋಪ್ ಮತ್ತು ಅಮೇರಿಕಾಗಳಲ್ಲಿ ಇದ್ದಾರೆ. ಯಾವಾಗ ಖಾಸಗಿ ವಲಯದಲ್ಲಿ ದಲಿತರಿಗೆ ಮೀಸಲಾತಿ ದೊರೆಯುತ್ತದೋ, ಅಂದು ಅದಕ್ಕೆ ಪಮುಖ ಕಾರಣ ಜಾಗತೀಕರಣವೇ ಎನ್ನುವುದರಲ್ಲಿ ಸಂಶಯವಿಲ್ಲ. ಜಾತಿವ್ಯವಸ್ಥೆಯ ಆಧಾರ ಸ್ತಂಭವಾಗಿರುವ ವೃತ್ತಿ ಮಡಿವಂತಿಕೆಯ ಮೂಲಕ್ಕೆ ಜಾಗ

ತೀಕರಣದ ತರ್ಕ ಕೊಡಲಿ ಪೆಟ್ಟು ನೀಡುತ್ತಿದೆ.

ಜಾಗತೀಕರಣದಿಂದ ಬಲಿಷ್ಠವಾಗಿರುವ ಬಂಡವಾಳಶಾಹಿಯಲ್ಲಿ ಎಂದಿಗಿಂತಲೂ ಇಂದು ವರ್ಗ ವಿಭಜನೆಯೂ ಕಣ್ಣಿಗೆ ರಾಚುತ್ತಿದೆ. ಆದರೆ ವರ್ಗಗಳು ಎದ್ದು ಕಾಣುತ್ತಿರುವಾಗಲೇ ಜಾತಿ ಎನ್ನುವುದು ಮಸುಕಾಗುತ್ತಿದೆ. ಬಂಡವಾಳಶಾಹಿ ವ್ಯವಸ್ಥೆ ಬೆಳೆದಷ್ಟು ಭಾರತದಲ್ಲಿ ಕೃಷಿ, ನಗರೀಕರಣ ಮತ್ತು ಕೈಗಾರೀಕರಣ ಮತ್ತಷ್ಟು ಬೆಳೆಯುತ್ತವೆ. ತೀವ್ರವಾದ ನಗರೀಕರಣ ಮತ್ತು ಕೈಗಾರೀಕರಣಗೊಂಡ ಭಾರತ ಎಂದರೆ ದಲಿತರು ಬದುಕಲಿಕ್ಕೆ ಒಳ್ಳೇ ಜಾಗ ಎಂದೇ ಅರ್ಥ.

ಆದ್ದರಿಂದ ದಲಿತ ಚಳವಳಿಯ ಗುರಿಗಳು ಎರಡು ವಿಧದ್ದು: ಒಂದು, ಬಂಡಾವಾಳಶಾಹಿಯ ಪ್ರಕ್ರಿಯೆಗಳಾದ ಕೈಗಾರೀಕರಣ ಮತ್ತು ನಗರೀಕರಣಗಳನ್ನು ತೀವ್ರಗೊಳಿಸುವುದು; ಎರಡು ಅವುಗಳಲ್ಲಿ ತಮ್ಮ ಪಾಲು ಪಡೆಯುವುದು. ಆದರೆ ಹಿಂದೆ ಹೇಳಿದಂತೆ ಬಂಡವಾಳಶಾಹಿ ವಿಸ್ತರಣೆ ಎಂದರೆ, ವರ್ಗ ವಿಭಜನೆಯನ್ನು ಮತ್ತಷ್ಟು ತೀವ್ರಗೊಳಿಸುವುದೆಂದೇ ಅರ್ಥ.

ಆದ್ದರಿಂದ, ಜಾತಿರಹಿತ ಭಾರತ ಮತ್ತು ಭಿನ್ನ ವರ್ಗಗಳಿಂದ ಕೂಡಿದ ಭಾರತಗಳೆರಡರ ಮಧ್ಯೆ ದಲಿತರ ಆಯ್ಕೆ ಅಡಗಿದೆ. ಎಲ್ಲಾ ಸಮಾಜಗಳಲ್ಲೂ ಒಂದಲ್ಲ ಒಂದು ವಿಧದ ವಿಭಾಗಗಳು ಇವೆ. ವರ್ಗರಹಿತ ಸಮಾಜ ಎಂದರೆ ಜಾತಿ ವ್ಯವಸ್ಥೆಯನ್ನು ಮುಂದುವರೆಸುವುದು ಎಂದೇ ಭಾವಿಸಬೇಕಿದೆ. ಅಂದರೆ ವರ್ಗಗಳನ್ನು ಮತ್ತಷ್ಟು ಬಲಪಡಿಸುವ ಬಂಡವಾಳಶಾಹಿ ವ್ಯವಸ್ಥೆಯೊಂದೇ ನಮ್ಮೆದುರಿರುವ ಆಯ್ಕೆ.

ಜಾತಿಯ ವ್ಯಾಖ್ಯಾನ ಎನ್ನೋದು ಅಸಮಾನತೆಯ ನಿಯಮದ ಮೇಲೆ ನಿಂತಿದೆ. ಅಲ್ಲಿ ದಲಿತರಿಗೆ ಸಮಾನತೆ ಎನ್ನೋದು ಎಂದೂ ಕಾಣುವುದಿಲ್ಲ. ಹೀಗಿರುವಾಗ ದಲಿತ ಚಳವಳಿಗಳೆಲ್ಲಾ ಸಮಾನತೆ ಎಂಬ ಆಲೋಚನೆಯ ಮೇಲೆಯಷ್ಟೆ ನಿಂತಿದೆಯಲ್ಲವೇ?

ಅಲ್ಲದೆ ಇತರ ಪ್ರಶ್ನೆಗಳೂ ಅಲ್ಲಿವೆ. ರಾಜಕೀಯ ಅಧಿಕಾರ, ಸಂಪತ್ತಿನ ಒಡೆತನ ಮತ್ತು ಜ್ಞಾನ – ಮುಂತಾದ ಕ್ಷೇತ್ರಗಳಲ್ಲಿ ದಲಿತರು ದಲಿತೇತರರೊಡನೆ ಸಮಾನವಾಗಿ ನಿಲ್ಲಬಹುದೇ? ಅಥವಾ ತಮ್ಮ ಯಾವುದೇ ಸಾಮಾಜಿಕ ಹಿನ್ನೆಲೆ ಇಲ್ಲದೆ ವ್ಯಕ್ತಿಗಳೆಲ್ಲರೂ ಸಂಪತ್ತು ಮತ್ತು ಅಧಿಕಾರದಲ್ಲಿ ಸಮಾನತೆಯನ್ನು ಹೊಂದುವುದು ಸಾಧ್ಯವೇ? ದಲಿತರೊಳಗಡಯೇ ಸಾರ್ವಜನಿಕವಾಗಿ ಎಲ್ಲಾ ವಿಷಯಗಳಲ್ಲೂ ಸಮಾನತೆ ಎನ್ನುವುದು ಸಾಧ್ಯವೇ?

ಉತ್ತರಗಳು ನಕಾರಾತ್ಮಕವಾಗಿರುತ್ತವೆ ಅಥವಾ ದ್ವಂದ್ವಾತ್ಮವಾಗಿರುತ್ತವೆ ಎಂದದಾರೆ, ದಲಿತ ಚಳವಳಿಗಳು ಸಮಾನತೆಯ ಬಗ್ಗೆ ತಮ್ಮ ಸ್ಪಷ್ಟತೆ ಪಡೆಯುವುದು ಅನಿವಾರ್ಯವಾಗಿದೆ. ದಲಿತ ಸಮುದಾಯಗಳನ್ನು ಕ್ಷಣ ಮರೆಯೋಣ. ದಲಿತ ಕುಟುಂಬಗಳೊಳಗೇ ಎಲ್ಲಾ ಸದಸ್ಯರು ಸಮಾನರಾಗಿ ಇರಲು ಸಾಧ್ಯವಿಲ್ಲ.

ಜಾತಿ ಭಾರತದಲ್ಲಿ ಎಲ್ಲರೂ ಸಹ ಅಸಮಾನರಾಗಿಯೇ ಹುಟ್ಟದ್ದಾರೆ. ಇತರೆಡೆಗಳಲ್ಲೂ ಎಲ್ಲರೂ ಸಹ

ದಲಿತ ಸಮುದಾಯದೊಳಗಿರುವ ವರ್ಗ ವಿಭಜನೆ ಎನ್ನುವುದು ಪ್ರಗತಿಯ ಚಿನ್ಹೆಯಾದರೆ ಇದೇ ತರ್ಕ ಭಾರತೀಯ ಸಮಾಜಕ್ಕೂ ಅನ್ವಯಿಸಬೇಕು. ಇದು ನಿಜವಾದರೆ ಸಮಾನತೆಯ ಪರಿಕಲ್ಪನೆ ಸಮಸ್ಯಾತ್ಮಕವಾಗುತ್ತದೆ. ತಮ್ಮ ಸಮುದಾಯದೊಳಗೇ ಇರುವ ವರ್ಗ ವಿಭಜನೆಯ ಬಗ್ಗೆ ದಲಿತ ನಾಯಕತ್ವಕ್ಕೆ ಸಮಸ್ಯೆ ಇಲ್ಲವಾದರೆ, ಅವರೇಕೆ ಭ್ರಮಾತ್ಮಕವಾದ ಸಮಾನತೆಯ ಬೆನ್ನತ್ತಿದ್ದಾರೆ? ಅನುಭವ ತೋರಿಸಿರುವಂತೆ, ಮೊದಲ ಹಂತದಲ್ಲೇ ಜನರನ್ನು ಭ್ರಮೆ ಎನ್ನುವುದು ಅತಿಯಾದ ಅಜ್ಞಾನಕ್ಕೆ ಕಟ್ಟಿಹಾಕುತ್ತದೆ. ತದ ನಂತರದ ಎಲ್ಲಾ ಹಂತಗಳೂ ಸಹ ಜನರನ್ನು ಮತ್ತೆ ಮತ್ತೆ ಅಜ್ಞಾನದ ನಿರಕುಂಶತನಕ್ಕೆ ಸ್ಥಿರೀಕರಿಸಲಾಗುತ್ತದೆ. ಈ ನಡುವೆ ಭ್ರಮೆಯಲ್ಲಿ ಸಿಕ್ಕ ಜನ ಸ್ವಗೌರವವನ್ನು ಕಳೆದುಕೊಳ್ಳುತ್ತಾರೆ ಮತ್ತು ಹತಾಶರಾಗಿ ಸುತ್ತುತ್ತಿರುತ್ತಾರಷ್ಟೆ. ಈಗಾಗಲೇ ಚರಿತ್ರೆ ನಮ್ಮನ್ನು ವಂಚಿಸಿದೆ. ಅದನ್ನೆ ವರ್ತಮಾನದಲ್ಲಿ ಮುಂದುವರೆಸುವಂತೆ ಮಾಡಿದೆ. ಹೀಗಿರುವಾಗ ಯಾವುದು ಪ್ರಸ್ತುತ ಸಾಮಾಜಿಕ ತರ್ಕಕ್ಕೆ ನಿಲುಕುವುದಿಲ್ಲವೋ ಅಂಥದನ್ನು ದಲಿತರೇಕೆ ನಿರೀಕ್ಷಿಸಬಾರದು?

ಅಸಮಾನರಾಗಿಯೇ ಹುಟ್ಟಿದ್ದಾರೆ. ಆದರೂ ಅವರೆಲ್ಲಾ ಸ್ವತಂತ್ರ / ಮುಕ್ತರಾಗಿದ್ದಾರೆ. ಭಾರತದಲ್ಲಿ ಹುಟ್ಟಿದಾಕ್ಷಣವೇ ಎಲ್ಲರೂ ಸಹ ಜಾತಿ ಶ್ರೇಣೀಕರಣದಲ್ಲಿ ವಿಭಜಿತರಾಗುತ್ತಾರೆ. ಇತರೆಡೆಗಳಲ್ಲಿ ಬಹುರೂಪಿ ಜನಾಂಗಗಳನ್ನು ಹೊರತುಪಡಿಸಿದಲ್ಲಿ, ವ್ಯಕ್ತಿಗಳು ಸಮಾನತೆಯ ಸಾಧ್ಯತೆಗಳಲ್ಲೇ ಹುಟ್ಟುತ್ತಾರೆ. ಅವರ ಭವಿಷ್ಯವೇನೂ ಪೂರ್ವನಿಗದಿತವಾಗಿರುವುದಿಲ್ಲ.

ಆದರೆ, ದಲಿತರ ಸ್ಥಾನಮಾನ ಪೂರ್ವನಿಗದಿತವಾಗಿರುವುದರಿಂದ ದಲಿತ ಚಳವಳಿಗಳೆಲ್ಲಾ ಬದಲಾವಣೆಯ ವ್ಯಾಕರಣದಲ್ಲಿ ನಂಬಿಕೆ ಇಟ್ಟಿದ್ದು, ಸಮಾನತೆಯ ಕನಸನ್ನು ಕಾಣುತ್ತಾರೆ. ಜಗತ್ತಿನ ಯಾವುದೇ ಭಾಗದಲ್ಲಿ ಸಮಾನತೆಯೆನ್ನುವುದು ಅಸ್ತಿತ್ವದಲ್ಲಿ ಇಲ್ಲವಾದ್ದರಿಂದ ನಾವು ಭ್ರಮೆಯ ಬೆನ್ನತ್ತಿದ್ದೇವೆಯೇ?

ಭ್ರಮೆಗಳು ಸ್ವ ಕೇಂದ್ರವಾಗಿರುವುದರಿಂದ ಜನರನ್ನು ಕತ್ತಲೆಯ ಸುರಂಗಮಾರ್ಗದೊಳಗೆ ಸಿಕ್ಕಿಕೊಳ್ಳುವಂತೆ ಮಾಡುತ್ತವೆ. ರಷ್ಯಾ ಮತ್ತು ಪೂರ್ವ ಯೂರೋಪಿನ ಜನರು ಅದನ್ನೇ ಜೀವಿಸಿದ್ದರು. ಮುಕ್ಕಾಲು ಶತಮಾನ ಅವರೆಲ್ಲಾ ಸಮಾನತೆಯನ್ನು ಬೆನ್ನಟ್ಟಿದ್ದರು. ಆದರೆ ನಂತರದಲ್ಲಿ ಅದು ದುರಂತವೆನಿಸಿತು. ಈಗ ಅವರು ಅಸಮಾತೆಗೆ ತವರಾದ ಪಶ್ಚಿಮ ಯೂರೋಪಿನ ಕನಸನ್ನು ಬೆನ್ನತ್ತಿದ್ದಾರೆ. ಸಮಾನತೆಯಿಲ್ಲದ ಪಶ್ಚಿಮ ಯೂರೋಪಿನಲ್ಲಿ ಜನ ತಮ್ಮ ಎದುರಿರುವ ಪೂರ್ವದ ಜನಕ್ಕಿಂತ ಹೆಚ್ಚಾಗಿ ಸಂತುಷ್ಟರಾಗಿದ್ದಾರೆ. ವರ್ಗ ಸಮಾಜಗಳು ಸಮಾನತೆಯನ್ನು ತಿರಸ್ಕರಿಸಿಬಿಡುತ್ತವೆ. ಆದರೆ ಎಲ್ಲರಿಗೂ ಸಮಾನ ಅವಕಾಶಗಳನ್ನು ಕಲ್ಪಿಸುತ್ತವೆ.

ದಲಿತ ಸಮುದಾಯದೊಳಗೇ ಇರುವ ಎಲ್ಲಾ ದಲಿತ ಚಳವಳಿಯ ನೇತಾರರು ಭಿನ್ನವಾದ ವರ್ಗದಲ್ಲೇ ಇದ್ದಾರೆ. ಅವರೆಲ್ಲಾ ಹಿಂದೆ ಸರ್ಕಾರಿ ನೌಕರರು, ಟೀಚರ್‌ಗಳು, ಪ್ರೊಫೆಸರ್‌ಗಳು, ವೃತ್ತಿಪರರು, ಪಾರ್ಲಿಮೆಂಟೇರಿಯನ್ಸ್ ಹಾಗೂ ಬರಹಗಾರರಾಗಿದ್ದವರು. ಅವರೆಲ್ಲಾ ಎಲ್ಲಾ ದಲಿತ ಸಮುದಾಯವನ್ನು ಪ್ರತಿನಿಧಿಸುತ್ತಿದ್ದಾರೆ. ಆದರೆ ಅವರ್ಯಾರೂ ಸಹ ತಮ್ಮೊಳಗೇ ಇರುವ ವರ್ಗ ವಿಭಜನೆಯ ವಿರುದ್ಧ ಹೋರಾಡಲಾಗಿಲ್ಲ. ಆದರೆ ಈ ಸಾಧನೆಗೈದ ದಲಿತರು ಇಲ್ಲದಿದ್ದಲ್ಲಿ ದಲಿತ ಸಮುದಾಯ ಧ್ವನಿ ಇಲ್ಲದಂತಾಗುತ್ತಿತ್ತು ಎಂದು ಮತ್ತೆ ಹೇಳಬೇಕಾಗಿಲ್ಲ.

ದಲಿತ ಸಮುದಾಯದೊಳಗಿರುವ ವರ್ಗ ವಿಭಜನೆ ಎನ್ನುವುದು ಪ್ರಗತಿಯ ಚಿನ್ಹೆಯಾದರೆ ಇದೇ ತರ್ಕ ಭಾರತೀಯ ಸಮಾಜಕ್ಕೂ ಅನ್ವಯಿಸಬೇಕು. ಇದು ನಿಜವಾದರೆ ಸಮಾನತೆಯ ಪರಿಕಲ್ಪನೆ ಸಮಸ್ಯಾತ್ಮಕವಾಗುತ್ತದೆ. ತಮ್ಮ ಸಮುದಾಯದೊಳಗೇ ಇರುವ ವರ್ಗ ವಿಭಜನೆಯ ಬಗ್ಗೆ ದಲಿತ ನಾಯಕತ್ವಕ್ಕೆ ಸಮಸ್ಯೆ ಇಲ್ಲವಾದರೆ, ಅವರೇಕೆ ಭ್ರಮಾತ್ಮಕವಾದ ಸಮಾನತೆಯ ಬೆನ್ನತ್ತಿದ್ದಾರೆ?

ಅನುಭವ ತೋರಿಸಿರುವಂತೆ, ಮೊದಲ ಹಂತದಲ್ಲೇ ಜನರನ್ನು ಭ್ರಮೆ ಎನ್ನುವುದು ಅತಿಯಾದ ಅಜ್ಞಾನಕ್ಕೆ ಕಟ್ಟಿಹಾಕುತ್ತದೆ. ತದ ನಂತರದ ಎಲ್ಲಾ ಹಂತಗಳೂ ಸಹ ಜನರನ್ನು ಮತ್ತೆ ಮತ್ತೆ ಅಜ್ಞಾನದ ನಿರಕುಂಶತನಕ್ಕೆ ಸ್ಥಿರೀಕರಿಸಲಾಗುತ್ತದೆ.

ಈ ನಡುವೆ ಭ್ರಮೆಯಲ್ಲಿ ಸಿಕ್ಕ ಜನ ಸ್ವಗೌರವವನ್ನು ಕಳೆದುಕೊಳ್ಳುತ್ತಾರೆ ಮತ್ತು ಹತಾಶರಾಗಿ ಸುತ್ತುತ್ತಿರುತ್ತಾರಷ್ಟೆ. ಈಗಾಗಲೇ ಚರಿತ್ರೆ ನಮ್ಮನ್ನು ವಂಚಿಸಿದೆ. ಅದನ್ನೆ ವರ್ತಮಾನದಲ್ಲಿ ಮುಂದುವರೆಸುವಂತೆ ಮಾಡಿದೆ. ಹೀಗಿರುವಾಗ ಯಾವುದು ಪ್ರಸ್ತುತ ಸಾಮಾಜಿಕ ತರ್ಕಕ್ಕೆ ನಿಲುಕುವುದಿಲ್ಲವೋ ಅಂಥದನ್ನು ದಲಿತರೇಕೆ ನಿರೀಕ್ಷಿಸಬಾರದು?

ಆದ್ದರಿಂದ ದಲಿತ ಚಳವಳಿ ಬದುಕನ್ನು ಉತ್ತೇಜಿಸುವ ಸಮಾನ ಅವಕಾಶಗಳಿಗಾಗಿಯಷ್ಟೇ ಬೆನ್ನತ್ತಬೇಕೇ ವಿನಃ ಮತ್ತೇನೂ ಅಲ್ಲ. ಸಮಾನತೆ ಎನ್ನುವುದು ಸಾಮಾಜಿಕ ಪ್ರಕ್ರಿಯೆಗಳಿಂದಲೇ ವಿಕಾಸಹೊಂದಬೇಕಾಗಿದೆ. ಮೊದಲು ಅದೊಂದು ಪರಿಕಲ್ಪನೆಯಾಗಿ ಹುಟ್ಟಬೇಕು, ಅನಂತರದಲ್ಲಿ ಅದು ಸಿದ್ಧಾಂತವಾಗಬೇಕು. ಇಲ್ಲೇ ರಾಜ್ಯಾಂಗ ಸಾಮಾಜಿಕ ಮಧ್ಯಸ್ಥನಾಗಿ ಕಾರ್ಯ ಮಾಡಬೇಕಾಗಿರುವುದು. ಸಾರ್ವಜನಿಕ ರಂಗಗಳಾದ ಆರ್ಥಿಕತೆ, ರಾಜಕೀಯ ಅಧಿಕಾರ, ಜ್ಞಾನ, ಸಂಸ್ಕೃತಿ – ಇವುಗಳಲ್ಲಿ ದಲಿತರು/ಆದಿವಾಸಿಗಳು ತಮ್ಮ ಪಾಲನ್ನು ಪಡೆಯುವುದನ್ನು

ಸಮಾನತೆ ಎನ್ನುವುದು ಭ್ರಮೆಯೇ?

ಸಮಾಜ ತಪ್ಪಿಸುತ್ತದೆಯಾದ್ದರಿಂದ ಹುಟ್ಟಿನ ಆಧಾರದ ಮೇಲೆ ನಿಲ್ಲುವ ತಿರಸ್ಕಾರಗಳು ಮತ್ತು ಅನುಕೂಲಗಳ ವಿರುದ್ಧ ರಾಜ್ಯಾಂಗವು ಕ್ರಮ ಕೈಗೊಳ್ಳಬೇಕಾಗಿದೆ.

ಸಕಾರಾತ್ಮಕ ಕ್ರಿಯೆ ಎನ್ನುವುದು ಪ್ರಜಾಪ್ರಭುತ್ವದ ಅನಿವಾರ್ಯ ಅಂಗವಾಗಿದೆ. ಹೀಗಿರುವಾಗ ದಲಿತ ಚಳವಳಿಯು ಸಮಾನತೆಯೆಂಬ ಭ್ರಮೆಯ ಬಂಧನದಿಂದ ಹೊರ ಬರಬೇಕಾಗಿದೆ. ಉಳಿದದ್ದನ್ನು ವರ್ಗಪ್ರೇರಿತ ಸಮಾಜ ಮಾಡುತ್ತದೆ. ಭಾರತ ವರ್ಗ ಸಮಾಜಕ್ಕಾಗಿ ಆಶಿಸುತ್ತಿದೆ. ಆದ್ದರಿಂದ ಭಾರತೀಯ ಬಂಡವಾಳಶಾಹಿ ಸಕಾರಾತ್ಮಕ ಕ್ರಿಯೆಗೆ ಒಪ್ಪಿಗೆಯನ್ನು ಸೂಚಿಸುತ್ತಿದೆ.

ಭಾರತ ಪ್ರಗತಿಯ ಪಥವನ್ನು ತುಳಿಯುತ್ತಿದೆಯಾದರೆ ಅವರ ಆಲೋಚನೆಗಳಲ್ಲಿ ಬದಲಾವಣೆಯ ಅಗತ್ಯ ಅನಿವಾರ್ಯವಾಗಿದೆ.

ಬಂಡವಾಳಶಾಹಿ ಸಾಮಾಜಿಕ ವ್ಯವಸ್ಥೆಯನ್ನು ಈ ಹಿಂದೆ ನಾವು ಹೊಂದಿಲ್ಲವಾದದ್ದರಿಂದ ಅದರಲ್ಲಿ ನಿರೀಕ್ಷಿಸುವಂತದ್ದು ಏನೂ ಇಲ್ಲ. ಆದರೆ ಜಾಗತೀಕರಣದಿಂದಾಗಿ ನಾವು ಬಂಡವಾಳಶಾಹಿ ಸಮಾಜವಾಗುವತ್ತ ದಾಪುಕಾಲಿಡುತ್ತಿದ್ದೇವೆ. ಆದರೆ ಭಾರತದಲ್ಲಿ ಹೊಸ ಸಾಮಾಜಿಕ ವ್ಯವಸ್ಥೆಯನ್ನು ಬಯಸುವವರೆಲ್ಲಾ ನಿರಾಶರಾಗಿದ್ದಾರೆ. ಜಾತಿ ವ್ಯವಸ್ಥೆಯ ಅನೇಕ ಉದಾಹರಣೆಗಳು ನಮ್ಮೆದುರು ಇವೆ. ಆ ವ್ಯವಸ್ಥೆ ಎಷ್ಟು ಅಮಾನವೀಯವಾದುದು ಎಂದು ದಲಿತರಿಗೆ ಗೊತ್ತಿದೆ.

ಉತ್ತರ ಭಾರತದ ಹಳ್ಳಿಯೊಂದರಲ್ಲಿ ದ್ವಿಜ/ಶೂದ್ರ ಅಥವಾ ಒಬಿಸಿ ವ್ಯಕ್ತಿಯೊಬ್ಬ ಎಷ್ಟೇ ಬಡವನಾಗಿದ್ದರೂ, ಅವರಿಗೆ ದಿನವೊಂದಕ್ಕೆ 1000/-ರೂ. ನೀಡುವ ಆಮಿಷವೊಡ್ಡಿದರೂ ಸಹ ದಲಿತನಿಗಾಗಿ ದುಡಿಯಲು ಒಪ್ಪುವುದಿಲ್ಲ. ಉದಾಹರಣೆಗೆ ಆಂಧ್ರಪ್ರದೇಶದ ಹಳ್ಳಿಯೊದರಲ್ಲಿ ಒಬ್ಬ ಬ್ರಾಹಣ/ಕಮ್ಮ/ರೆಡ್ಡಿ ಜಾತಿಯ ವ್ಯಕ್ತಿ ದಲಿತನಿಗಾಗಿ ಕೆಲಸ ಮಾಡಲು ಸಾಧ್ಯವಿಲ್ಲ. ಇದರ ಬಗ್ಗೆ ದಲಿತ ಕಾರ್ಯಕರ್ತರಾಗಿರುವ ಬೊಜ್ಜ ತಾರಕಮ್, ಅರಣ್ ಕೆ ಪಿಲ್ಲಿ, ಅಥವಾ ಸುರೇಶ್ ಲೀಲೆ ಇನ್ನಷ್ಟು ತಿಳಿಸಿಕೊಡಬೇಕು.

ಹೀಗಿದ್ದರೂ, ಬ್ರಾಹಣ/ಕಮ್ಮ/ರೆಡ್ಡಿ/ಶೂದ್ರ ಅಥವಾ ಒಬಿಸಿ ವ್ಯಕ್ತಿಯೊಬ್ಬ ನಗರ ಪ್ರದೇಶದಲ್ಲಿ ದಿನಕ್ಕೆ ರೂ100/- ಸಿಕ್ಕರೂ ದಲಿತನಿಗಾಗಿ ದುಡಿಯಲು ಒಪ್ಪಿಕೊಳ್ಳುತ್ತಾನೆ. ಹಾಗೆಯೇ ಒಬ್ಬ ಹೆಂಗಸು ದಿನಕ್ಕೆ ರೂ.50/-ಸಿಕ್ಕರೂ ದಲಿತನ ಮನೆಯಲ್ಲಿ ಕೆಲಸಮಾಡಲು ಒಪ್ಪಿಕೊಳ್ಳುತ್ತಾಳೆ. ಲಕ್ನೋ/ದೆಹಲಿ ನಗರಗಳಲ್ಲಿ ಇದು ಸಾಧ್ಯವಾಗುತ್ತಿದೆ ಎಂದರೆ ದೇಶದ ಉಳಿದ ನಗರಗಳಲ್ಲೂ ಇದು ಸಾಧ್ಯ ಎನ್ನುವುದನ್ನು ನಾವು ಊಹಿಸಿಕೊಳ್ಳಬಹುದು. ಇಲ್ಲಿ ನಾನು ಯಾವುದೇ ಕಾರಣಕ್ಕೂ ದ್ವಿಜ/ಶೂದ್ರ ಸಮುದಾಯಗಳಲ್ಲಿನ ಬಡವರನ್ನು ಹಂಗಿಸುತ್ತಿಲ್ಲ. ಇದನ್ನು ನಾನು ಏಕೆ ಉದಾಹರಿಸುತ್ತಿದ್ದೇನೆಂದರೆ ದಲಿತರಲ್ಲಿಯೇ ಒಂದು ಗುಂಪು ಬಂಡವಾಳಶಾಹಿ ವಿರುದ್ಧ ಇದೆ – ಅದನ್ನು ಸ್ಪಷ್ಟಪಡಿಸುವ ಸೈದ್ಧಾಂತಿಕ ಉದ್ದೇಶಕ್ಕಾಗಿಯಷ್ಟೆ ಅದನ್ನು ಚರ್ಚಿಸಿದ್ದು. ದುರಂತವೆಂದರೆ ಈ ದಲಿತ ಗುಂಪು ಪರೋಕ್ಷವಾಗಿ ಜಾತಿ ವ್ಯವಸ್ಥೆಯನ್ನು ಹಾಗೆ ಉಳಿಸಿಕೊಳ್ಳುತ್ತದೆ.

ಆದ್ದರಿಂದ ಇಲ್ಲಿರುವ ಮುಖ್ಯ ಪ್ರಶ್ನೆಯೆಂದರೆ: ಗ್ರಾಮವೊಂದರಲ್ಲಿ ವಾಸಿಸುವ ಬಡ ದ್ವಿಜನೊಬ್ಬ ಹಣಕಳೆದುಕೊಳ್ಳಲು ತಯಾರಿರುವನಂತೆ ವರ್ತಿಸುವುದು ಮತ್ತು ನಗರದಲ್ಲಿ ಕೇವಲ 100/-ರೂಗೆ ದುಡಿಯಲು ಒಪ್ಪಿಕೊಳ್ಳುವುದು ಏಕೆ? ಇದಕ್ಕೆ ಉತ್ತರವೆಂದರೆ, ನಗರ ವ್ಯವಸ್ಥೆ ಬಹುವಾಗಿ ಬಂಡವಾಳಶಾಹಿ ವ್ಯವಸ್ಥೆಯಾಗಿದ್ದು ಹಳ್ಳಿಯೊಂದು ಜಾತಿ ವ್ಯವಸ್ಥೆಯಿಂದ ಕೂಡಿದ್ದಾಗಿದೆ.

ಬಂಡವಾಳಶಾಹಿಯ ಶಕ್ತಿ

ನಗರಗಳಲ್ಲಿ ಜಾತಿ ಐಡೆಂಟಿಟಿಗಳು ಮಸುಕಾಗಿಬಿಡುತ್ತವೆ ಮತ್ತು ಜಾತಿ ಆಧಾರಿತ ತಾರತಮ್ಯಗಳು ಆದಷ್ಟು ಕಡಿಮೆಯಾಗುತ್ತವೆಂದು ಬಂಡವಾಳಶಾಹಿ ವಕ್ತಾರರು ವಾದಿಸಬಹುದು. ಇದರರ್ಥವೆಂದರೆ ಭಾರತ ಪೂರ್ತಿ ನಗರೀಕರಣಗೊಂಡರೆ ಜಾತಿ ತಾರತಮ್ಯಗಳು ಕಮ್ಮಿಯಾಗುತ್ತವೆಂದು ಅರ್ಥವೇ. ಅದು ನಿಜವೆಂದೇ ಭಾವಿಸೋಣ. ಆದರೆ ಪ್ರಶ್ನೆಯೆಂದರೆ, ಭಾರತ ನಗರೀಕರಣವಾಗುವುದಕ್ಕೆ ಅಗತ್ಯ ಅಥವಾ ಅದನ್ನು ತಡೆಯುವುದಾದರೂ ಯಾವುದು?

ಪುರಾತನ ಜಗತ್ತಿನಲ್ಲಿ ಕಾಶಿ ಒಂದು ನಗರವಾಗಿತ್ತೆಂದು ಅನೇಕರು ವಾದಿಸುತ್ತಾರೆ. ಇದು ನಿಜವೆಂದು ಒಪ್ಪಿಕೊಂಡು ಎತ್ತುವ ಪ್ರಶ್ನೆಯೆಂದರೆ, ಅದೊಂದು ನಗರವಾಗಿ ವಿಸ್ತಾರವಾಗುವುದನ್ನು ತಡೆದದ್ದು ಯಾವುದು? ಯೂರೋಪ್ ಕಾಶಿಯ ನಂತರವಷ್ಟೇ ನಗರೀಕರಣ ಪ್ರಕ್ರಿಯೆಯಲ್ಲಿ ತೊಡಗಿದ್ದು. ಆದರೆ ಕೇವಲ 500 ವರ್ಷಗಳಲ್ಲೇ ಅದು ನಗರವಾಗಿ ಮಾರ್ಪಟ್ಟಿತು. ಕಾಶಿ ನಗರ ಕೇಂದ್ರವಾಗಿ ಬೆಳೆಯುತ್ತಿರುವಾಗ ಯೂರೋಪ್ ಎನ್ನುವುದು ಯಾರಿಗೂ ತಿಳಿದಿರಲಿಲ್ಲವಲ್ಲ.

ಜಾತಿ ವ್ಯವಸ್ಥೆ ಎನ್ನುವುದು ನಮಗೆ ತಿಳಿದಿರುವಂತೆ ಒಂದು ಸ್ವ-ಕೇಂದ್ರತ ತೃಪ್ತ ಸಾಮಾಜಿಕ ಬದುಕನ್ನಷ್ಟೆ ಸ್ಥಿರೀಕರಿಸುತ್ತದೆ. ಇಲ್ಲಿ ಸುಖ ಎನ್ನುವುದು ಜಾತಿ ವ್ಯವಸ್ಥೆಯ ಸುತ್ತಲಿದ್ದು, ಅತಿ ಕಮ್ಮಿ ಪದಾರ್ಥ ಪ್ರಪಂಚವನ್ನು ಹೊಂದಿರುತ್ತದೆ. ಇದು ಜನರನ್ನು ಯಾವುದೇ ಬೇಡಿಕೆಗಳಿಲ್ಲದವರಂತೆ ಮಾಡಿ, ಅವರ ಉತ್ಪಾದನಾ ಶಕ್ತಿಯನ್ನು ಕುಂಠಿತಗೊಳಿಸುತ್ತದೆ. ಇಂಥ ಸಮಾಜವು ಹಳೆಯದಾದ ಬೆಂಕಿಪೊಟ್ಟಣದಂತೆ ತನ್ನ ಸಾಮರ್ಥ್ಯವನ್ನು ಕಳೆದು ಕೊಂಡಿರುತ್ತದೆ. ಜಾತಿ ಭಾರತ ಸ್ಟೀಲ್‌ನ್ನು ಕರಗಿಸಿ ಯಂತ್ರಗಳನ್ನು ಉತ್ಪತ್ತಿ ಮಾಡಬೇಕಾಗಿರಲಿಲ್ಲ. ಅದು ನಿಸರ್ಗ ನೀಡಿದ ಕೊಡುಗೆಯಲ್ಲೇ ತೃಪ್ತಿಯನ್ನು ಕಂಡಿತ್ತು. ಗ್ರಾಹಕ ಪ್ರವೃತ್ತಿ ಮತ್ತು ಬೇಡಿಕೆಗಳನ್ನು ಅತಿಯಾಗಿ ಉತ್ಪತ್ತಿಮಾಡುವುದೇ ಬಂಡವಾಳಶಾಹಿ. ನೀವು ಎಷ್ಟು ಬೇಕಾದರೂ ಜೀರ್ಣಿಸಿಕೊಳ್ಳಿ. ಈ ತೃಪ್ತಿಯಿಲ್ಲದ ಅಗತ್ಯ ಯೂರೋಪನ್ನು ಸ್ಟೀಲ್ ಕರಗಿಸಿ ಯಂತ್ರಗಳನ್ನು ತಯಾರಿಸುವಂತೆ ಮಾಡಿತು. ಸ್ವಲ್ಪ ಕಾಲದಲ್ಲೇ ಯೂರೋಪ್ ಕೈಗಾರಿಕೆಗಳಿಂದ ಕೂಡಿದ ನಗರ ಸಮಾಜವಾಗಿ ಪರಿವರ್ತನೆ ಗೊಂಡಿತು.

ಜಾತಿ ವ್ಯವಸ್ಥೆ ಎನ್ನುವುದು ನಮಗೆ ತಿಳಿದಿರುವಂತೆ ಒಂದು ಸ್ವ-ಕೇಂದ್ರಿತ ತೃಪ್ತ ಸಾಮಾಜಿಕ ಬದುಕನ್ನಷ್ಟೆ ಸ್ಥಿರೀಕರಿಸುತ್ತದೆ. ಇಲ್ಲಿ ಸುಖ ಎನ್ನುವುದು ಜಾತಿ ವ್ಯವಸ್ಥೆಯ ಸುತ್ತಲಿದ್ದು, ಅತಿ ಕಮ್ಮಿ ಭೌತಿಕ ಪ್ರಪಂಚವನ್ನು ಹೊಂದಿರುತ್ತದೆ. ಇದು ಜನರನ್ನು ಯಾವುದೇ ಬೇಡಿಕೆಗಳಿಲ್ಲದವರಂತೆ ಮಾಡಿ, ಅವರ ಉತ್ಪಾದನಾ ಶಕ್ತಿಯನ್ನು ಕುಂಠಿತಗೊಳಿಸುತ್ತದೆ. ಇಂಥ ಸಮಾಜವು ಹಳೆಯದಾದ ಬೆಂಕಿಪೊಟ್ಟಣದಂತೆ ತನ್ನ ಸಾಮರ್ಥ್ಯವನ್ನು ಕಳೆದುಕೊಂಡಿರುತ್ತದೆ. ಜಾತಿ ಭಾರತ ಸ್ಟೀಲ್‌ನ್ನು ಕರಗಿಸಿ ಯಂತ್ರಗಳನ್ನು ಉತ್ಪತ್ತಿ ಮಾಡಬೇಕಾಗಿರಲಿಲ್ಲ. ಅದು ನಿಸರ್ಗ ನೀಡಿದ ಕೊಡುಗೆಯಲ್ಲೇ ತೃಪ್ತಿಯನ್ನು ಕಂಡಿತ್ತು.

ಗ್ರಾಹಕ ಪ್ರವೃತ್ತಿ ಮತ್ತು ಬೇಡಿಕೆಗಳನ್ನು ಅತಿಯಾಗಿ ಉತ್ಪತ್ತಿಮಾಡುವುದೇ ಬಂಡವಾಳಶಾಹಿ. ನೀವು ಎಷ್ಟು ಬೇಕಾದರೂ ಜೀರ್ಣಿಸಿಕೊಳ್ಳಿ. ಈ ತೃಪ್ತಿಯಿಲ್ಲದ ಅಗತ್ಯ ಯೂರೋಪನ್ನು ಸ್ಟೀಲ್ ಕರಗಿಸಿ ಯಂತ್ರಗಳನ್ನು ತಯಾರಿಸುವಂತೆ ಮಾಡಿತು. ಸ್ವಲ್ಪ ಕಾಲದಲ್ಲೇ ಯೂರೋಪ್ ಕೈಗಾರಿಕೆಗಳಿಂದ ಕೂಡಿದ ನಗರ ಸಮಾಜವಾಗಿ ಪರಿವರ್ತನೆಗೊಂಡಿತು.

ಒಂದೂವರೆ ದಶಕಗಳ ಹಿಂದೆ ಮೊಬೈಲ್ ಫೋನ್ ಇಲ್ಲದೆ ಬದುಕು ಸಾಗಿತ್ತು. ಆದರೆ ಇಂದು ಎಲ್ಲರಿಗೂ ಅದು ಅಗತ್ಯವಾಗಿಬಿಟ್ಟಿದೆ. ಅದರ ಅಗತ್ಯ ಎಷ್ಟಾಗಿದೆಯೆಂದರೆ ಗ್ರಾಮೀಣ ಪ್ರದೇಶದಲ್ಲೂ ಅದು ಇಲ್ಲದೆ ಯಾರೂ ಸಹ ಇರಲು ಸಾಧ್ಯವಿಲ್ಲದಂತಾಗಿದೆ. ಕಂಪ್ಯೂಟರ್ ಇಂಜನಿಯರ್ ಅಥವಾ ಪ್ರೊಫೆಸರ್‌ಗಳಾಗದೆ ಬಡವರಾಗಿ ಉಳಿದಿರುವ ದ್ವಿಜರು ಅಂಥ ಮೊಬೈಲ್‌ಗಳನ್ನು ಪಡೆದುಕೊಳ್ಳುವುದಾದರೂ ಹೇಗೆ? ಬಡ ಶೂದ್ರ ಅಥವಾ ಒಬಿಸಿಗಳ ಪಾಡೇನು? ಇವರ‍್ಯಾರು ಸಹ ಭೂಮಾಲೀಕರು ಅಥವಾ ಆಸ್ತಿ ವ್ಯವಹಾರ ಮಾಡುವ ಪಟುಗಳಾಗಿ ಹೊರಹೊಮ್ಮಲಾರರು.

ಬಂಡವಾಳಶಾಹಿ ಎನ್ನುವುದು ಇಂದು ಕರೆ ನೀಡುತ್ತಿದೆ. ಮೊಬೈಲ್ ಬಯಸುವ ದ್ವಿಜರು/ಶೂದ್ರರು ದಲಿತನಾದರೂ ಸರಿಯೇ, ಆತನಿಗೆ ದುಡಿದು ಮೊಬೈಲ್ ಪಡೆದುಕೊಳ್ಳಬೇಕೆ ಅಥವಾ ತನ್ನ ಮನೆಯಲ್ಲಿ ಮುಸುರೆ ತೊಳೆಯುತ್ತಾ ಕೂರಬೇಕೆ ಎನ್ನುವುದನ್ನು ಅವರೇ ನಿರ್ಧರಿಸಬೇಕಿದೆ. ಗ್ರಾಹಕ ಪ್ರವೃತ್ತಿಯ ಬಂಡವಾಳಶಾಹಿ ಜಗತ್ತಿನಲ್ಲಿ ಮೊಬೈಲ್ ಎನ್ನುವುದನ್ನಾದರೂ ಪ್ರತಿಯೊಬ್ಬರೂ ಹೊಂದಿರಬೇಕು. ಇದುವೆ ಅಲ್ಲವೇ ಜಾತಿ ಶ್ರೇಣೀಕರಣವನ್ನು ಮುಕ್ತಗೊಳಿಸುವ ಬಂಡವಾಳಶಾಹಿಯ ಶಕ್ತಿ.

ಹೀಗಿದ್ದರೂ ಭಾರತವನ್ನು ಮುಕ್ತಗೊಳಿಸಲು ಮತ್ತಷ್ಟು ಜಾಗತಿಕ ಸ್ಪರ್ಧಿಗಳ ಅಗತ್ಯ ಇದೆ ಎನ್ನುವುದನ್ನು ನಾವು ಮರೆಯಬಾರದು. □



ಬುದ್ಧಾಯಣ

೨೫

ಬುದ್ಧ ನಾನಿನ್ನು ಹಗಲುಗನಸು ಕಾಣಲಾರೆ!

'ನಿನ್ನ ಈ ಕೀಳರಿಮೆಗೆ ಸಕಾರಣವಿಲ್ಲ. ಹುಟ್ಟಿನಿಂದ ಯಾರೂ ಕೀಳಲ್ಲ. ಜಾತಿಯಿಂದ ಯಾರೂ ಮೇಲಲ್ಲ ಕೆಟ್ಟ ನಡತೆಯೆ ಕೀಳುಜಾತಿ, ಉತ್ತಮ ನಡತೆಯೇ ಉನ್ನತ ಜಾತಿ. ಆದ್ದರಿಂದ ನಿನ್ನ ಕೀಳರಿಮೆಯಿಂದ ಹೊರ ಬಾ. ಗೆಳೆಯನೊಬ್ಬ ತನ್ನ ಪರಮಾಪ್ತ ಗೆಳೆಯನನ್ನು ಬಲು ವರ್ಷಗಳ ಬಳಿಕ ಸಂಧಿಸಿದಷ್ಟೇ ಸರಳವಾಗಿ ನನ್ನತ್ತಿರ ಬಾ. ನನ್ನನ್ನು ತಬ್ಬಿಕೋ! ಹ್ನು... ಬಾ... ಹಾಗೆ... ಹಾಗೇ... ಒಂದೊಂದೇ, ಹೆಜ್ಜೆ ಮುಂದಿಟ್ಟು ಬಾ... ಭಲೇ... ನಾನೀಗ ನಿನ್ನ ಮೆಚ್ಚಿದೆ. ಹಾಗ ಬೆಚ್ಚಿದ ಹರಿಣಿಯಂತೆ ನಿಂತದೇಕೆ? ತೆರೆದು ನಿಂತಿರುವ ನನ್ನ ತೋಳು ತೆಕ್ಕೆಯಲ್ಲಿ ಒಂದೆಜ್ಜೆ ಮುಂದಿಟ್ಟು ತಬ್ಬಬಾರದೆ?'

ಸಿ. ಎಚ್. ರಾಜಶೇಖರ್

ಸುನೀತನೆಂಬುವನು ರಾಜಗೃಹದಲ್ಲಿ ಬೀದಿ ಗುಡಿಸುವ ಕಾಯಕದ ಜಾಡಮಾಲಿ. ಜಾತಿಯಲ್ಲಿ ಅಂತ್ಯಜ. ಸಮಾಜದಲ್ಲಿ ಕಟ್ಟ ಕಡೆಯವ. ಬಡತನವೇ ಅವರ ಬದುಕು. ವಿದ್ಯೆ ಎಂದರೆ ಏನೆಂಬುದೇ ತಿಳಿಯದವನು. ಜ್ಞಾನವೆಂದರೆ ಏನೆಂದು ಅರಿಯದ ಮುಗ್ಧ, ಆದರೂ ಅವರ ಒಳ ಮನಸ್ಸು ವಿದ್ಯೆ. ಮತ್ತು ಜ್ಞಾನಕ್ಕಾಗಿ ಹಂಬಲಿಸಿ ಕನಸು ಕಾಣುತ್ತಿತ್ತು.

ಒಂದು ಬೆಳಗಿನ ಜಾವ ಸುನೀತನು ಬೀದಿಯ ಕಸ ಗುಡಿಸಿ ಒಂದು ಕಡೆ ಕಲೆಹಾಕಿ ಕುಕ್ಕೆಯಲ್ಲಿ ತುಂಬಿಕೊಂಡು ಅದನ್ನು ಅಡ್ಡೆಗೆ ಕಟ್ಟಿಕೊಂಡು ಹೆಗಲ ಮೇಲೆ ಹೊತ್ತು ಸಾಗಿಸುತ್ತಿದ್ದ. ಆಗ ದೂರದಲ್ಲಿ ವಾಯುವಿಹಾರಕ್ಕೆ ಬರುತ್ತಿದ್ದ ಪವಿತ್ರಾತ್ಮನಾದ ಬುದ್ಧನನ್ನು ಗುರುತಿಸಿದನು.

ಅವನ ಹೃದಯವು ಆನಂದ, ಆಶ್ಚರ್ಯ ಮತ್ತು ಧನ್ಯತಾಭಾವ ದಿಂದ ತುಂಬಿ ತುಳುಕಿತು. ಆ ಅಸಹ್ಯವನ್ನು ಹೊತ್ತು ಬುದ್ಧನ ಮುಂದೆ ಹೋಗುವುದು ನಾನು ಅವನಿಗೆ ಮಾಡುವ ಅಪನಿಂದನೆ ಎಂದು ಬಗೆದನು ಸುನೀತ. ಹೆಗಲ ಮೇಲಿದ್ದ ಅಡ್ಡೆಯನ್ನು ಸಮೀಪದ ಗೋಡೆಯ ಮರೆಯಲ್ಲಿ ಅಡಗಿಸಿಟ್ಟ, ತಾನೊಂದು ಮರದ ಮರೆಯಲ್ಲಿ ನಿಂತು ಆ ಪೂಜ್ಯ ಗುರುದೇವ ಬರುವುದನ್ನು ನೋಡುತ್ತಾ ನಿಂತ.

ಪೂರ್ವದಲ್ಲಿ ಹುಟ್ಟುವ ಉದಯ ಸೂರ್ಯನೇ ಬುದ್ಧನ ರೂಪ ತಳೆದು ತನ್ನತ್ತಲೇ ನೆಡೆದು ಬಂದಂತೆ ಅವನ ಕಣ್ಣಿಗೆ ಕಂಡಿತು. ಮರದ ಮರೆಯಿಂದ ಒಂದು ಹೆಜ್ಜೆ ಮುಂದೆ ಬಂದು ಅತುಲ ಭಕ್ತಿಭಾವದಿಂದ ಬುದ್ಧನಿಗೆ ನಮಸ್ಕರಿಸಿ ಮತ್ತೆ ಮರದ ಮರೆಯಲ್ಲಿ ಅಡಗಿ ನಿಂತನು ಇದನ್ನು ಕಂಡ ಬುದ್ಧನು ಸುನೀತನ ಬಳಿ ಸಾಗಿ ಅವನ ಎದುರು ನಿಂತು ತನ್ನ ದಿವ್ಯ ಮಧುರ ಧ್ವನಿಯಲ್ಲಿ:

'ಎಲೈ ಮಿತ್ರನೇ, ನೀನು ಯಾರು? ನನ್ನನ್ನು ಕಂಡು ಹೀಗೇಕೆ ದೂರ ಸರಿಯುತ್ತಿದ್ದೀಯಾ ಕಾರಣವೇನು?' ಎನ್ನಲು

'ಗುರುದೇವ ಮಿತ್ರನೆಂಬ ಸಂಭೋದನೆಗೆ ನಾನು ಅರ್ಹನಲ್ಲ. ನಾನು ಕುಲದಲ್ಲಿ ಅಂತ್ಯಜ. ಕಸುಬಿನಲ್ಲಿ ಜಾಡಮಾಲಿ. ಹೆಸರು ಸುನೀತ, ತಮ್ಮ ಸಮೀಪ ಬರುವ ತಮ್ಮ ಪವಿತ್ರ ಪಾದ ಮುಟ್ಟಿ ನಮಸ್ಕರಿಸುವ ಪುಣ್ಯ ಈ ಜನ್ಮದಲ್ಲಿ ಇನ್ನೆಲ್ಲಿ ತಂದೆ!'

'ಎಲೈ ಸುನೀತನೇ, ಅವರಿವರು ಮಾಡಿದ ಪಾಪದ ಕಸ ಗುಡಿಸಿ ಸ್ವಚ್ಛಗೊಳಿಸುವ ನೀನು ಪಾಪಾತ್ಮನಾಗಲು ಹೇಗೆ ಸಾಧ್ಯ?'

'ಪ್ರಭುವೇ, ಕೀಳು ಜಾತಿ ಎಂಬುದು ನನಗೆ ತಲೆ ತಲೆಮಾರುಗಳಿಂದ ಆನುವಂಶಿಕವಾಗಿ ಬಂದ ಬಳುವಳಿ'

'ನಿನ್ನ ಈ ಕೀಳರಿಮೆಗೆ ಸಕಾರಣವಿಲ್ಲ. ಹುಟ್ಟಿನಿಂದ ಯಾರೂ ಕೀಳಲ್ಲ. ಜಾತಿಯಿಂದ ಯಾರೂ ಮೇಲಲ್ಲ ಕೆಟ್ಟ ನಡತೆಯೆ ಕೀಳು ಜಾತಿ, ಉತ್ತಮ ನಡತೆಯೇ ಉನ್ನತ ಜಾತಿ. ಆದ್ದರಿಂದ ನಿನ್ನ ಕೀಳರಿಮೆಯಿಂದ ಹೊರ ಬಾ. ಗೆಳೆಯನೊಬ್ಬ ತನ್ನ ಪರಮಾಪ್ತ ಗೆಳೆಯನನ್ನು ಬಲು ವರ್ಷಗಳ ಬಳಿಕ ಸಂಧಿಸಿದಷ್ಟೇ ಸರಳವಾಗಿ ನನ್ನತ್ತಿರ ಬಾ. ನನ್ನನ್ನು ತಬ್ಬಿಕೋ! ಹ್ನು... ಬಾ... ಹಾಗೆ... ಹಾಗೇ... ಒಂದೊಂದೇ, ಹೆಜ್ಜೆ ಮುಂದಿಟ್ಟು ಬಾ... ಭಲೇ... ನಾನೀಗ ನಿನ್ನ ಮೆಚ್ಚಿದೆ. ಹಾಗೆ ಬೆಚ್ಚಿದ ಹಣಿಯಂತೆ ನಿಂತದೇಕೆ? ತೆರೆದು ನಿಂತಿರುವ ನನ್ನ ತೋಳು ತೆಕ್ಕೆಯಲ್ಲಿ ಒಂದೆಜ್ಜೆ ಮುಂದಿಟ್ಟು ತಬ್ಬಬಾರದೆ? ಹ್ಹಾ... ಹಾಗೇ...! ಹೀಗೆ... ಹೀಗೆ... ಈಗ ನೀನು ನನ್ನ ನಿಜ ಗೆಳೆಯ.'

ಬುದ್ಧನ ಬಳಿ ಸಾಗಿ ಅವನ ಪಾದಗಳನ್ನು ಮುಟ್ಟಿ ನಮಸ್ಕರಿಸಿ ಅವನನ್ನು ತಬ್ಬಿಕೊಂಡಾಗ ಸುನೀತನಿಗೆ ಜಗದೆಲ್ಲ ಆನಂದ ಅವನೊಬ್ಬನಿಗೆ ಆದಂತಾಯಿತು. ಆ ಸಂತೋಷಾತಿರೇಕವನ್ನು ತಡೆಯಲಾರದೆ ಆನಂದಭಾಷ್ಪವನ್ನು ಸುರಿಸುತ್ತಿದ್ದ ಸುನೀತನನ್ನು ಉದ್ದೇಶಿಸಿದ ಬುದ್ಧ:

'ಏಕೆ ಸುನೀತ ಕಣ್ಣೀರು ಸುರಿಸುತ್ತೀದ್ದಿಯೇ!?'

'ಕಣ್ಣಿರಲ್ಲ ಪ್ರಭುವೇ, ಇದು ಆನಂದಭಾಷ್ಪ ಜನ್ಮಜನ್ಮಾಂತರಗಳ ದುಃಖ! ಮತ್ತು ಪಾಪಗಳೆಲ್ಲ ಕಳೆದು ನಾನಿಂದು ಪುನೀತನಾದೆ!!'

'ಸುನೀತ, ಈ ಹುಚ್ಚು ಮತ್ತು ಅರ್ಥಹೀನವಾದ ಮಾತಿನಿಂದ ಯಾರು ಯಾರನ್ನು ಮೆಚ್ಚಿಸಲು ಸಾಧ್ಯವಿಲ್ಲ. ನನ್ನನ್ನು ಸಂತೈಸುವ ಸಲುವಾಗಿಯಾದರು ನೀನು ಸುಳ್ಳು ಹೇಳಬಾರದು, ಏಕೆಂದರೆ, ಗುಡಿಯೊಳಗಿನ ದೇವರನೋ, ಗುರುವನೋ, ಸಂನ್ಯಾಸಿಯನೋ ಭಿಕ್ಷುವನೋ, ಯಾರು ಯಾರಾದರೂ ಮುಟ್ಟುವ, ಸ್ಪರ್ಶಿಸುವ



ಆಲಂಗಿಸುವ ಮೂಲಕ ನಮ್ಮ ಜನ್ಮಜನ್ಮಾಂತರಗಳ ದುಃಖ, ಮತ್ತು ಪಾಪಗಳ್ಳು ಕಳೆದು ನಾವುಗಳು ಪುನೀತರಾಗುವುದಾದರೆ ಈ ಜಗತ್ತಿ ನಲ್ಲಿ ದುಃಖ, ಅವಿದ್ಯೆ ಮತ್ತು ಹಿಂಸೆಯೇ ಇರುತ್ತಿರಲಿಲ್ಲ! ಹಾಗಾಗಿ ಈ ಮಿಲನದಲ್ಲಿ ಯಾವುದೇ ಹೆಚ್ಚುಗಾರಿಕೆಯನ್ನು ಭ್ರಮೆಯನ್ನು ಕಲ್ಪಿಸಿಕೊಳ್ಳಬೇಡ.!!'

'ಗುರುದೇವ, ನಾನು ವಿದ್ಯೆ ಮತ್ತು ಜ್ಞಾನವಿಲ್ಲದ ಹೆಡ್ಡ. ನನ್ನ ಕಣ್ಣು ಮತ್ತು ಮನಸ್ಸಿಗೆ ಅನ್ನಿಸಿದ್ದನಷ್ಟೇ ವ್ಯಕ್ತಪಡಿಸಿದೆ.'

'ಗೆಳೆಯಾ ಸುನೀತ, ನಿನ್ನ ಈ ಕಸುಬಿನಲ್ಲಿ ಸುಖ ಸಂತೋಷ ತೃಪ್ತಿಯನ್ನು ಕಂಡು-ಕೊಂಡಿರುವೆಯಾ?'

'ಅವಮಾನ, ಅಪನಿಂದನೆ, ತುಚ್ಛ ನೋಟವನಲ್ಲದೇ ಬೇರೇನನ್ನು ಕಂಡಿಲ್ಲ. ಗುರುದೇವಾ...!!!'

'ನೀನು ಎಂದಾದರೂ ಕನಸು ಕಂಡಿದ್ದೀಯಾ?!'

'ನನಗೆ ರಾತ್ರಿಯಲ್ಲಿ ಕನಸುಗಳು ಬೀಳುವದೇ ಇಲ್ಲ, ಬರೀ ಹಗಲುಗನಸು ಮಾತ್ರ!'

'ಏನು ನಿನ್ನ ಹಗಲುಗನಸು?'

'ಹಗಲಲ್ಲಿ ದಣಿದು ಸುಸ್ತಾಗಿ ನೆಲಕ್ಕೊರಗಿದಾಗ ಅಥವಾ ಮರಕ್ಕೊರಗಿದರೆ ಸಾಕು ನನ್ನ ಕಣ್ಣೆದುರು ನಾನು ವಿದ್ಯೆ ಕಲಿತಂತೆ, ಜ್ಞಾನಿ ಆದಂತೆ ಕನಸು ಕಾಣುತ್ತೇನೆ. ನನ್ನ ಈ ಕನಸನ್ನು ನನಸು ಮಾಡಿಕೊಳ್ಳುವ ಸಲುವಾಗಿ ನಾನು ಕಾಣದ ಗುರುವಿಲ್ಲ. ಸಂಧಿಸದ ಸಂನ್ಯಾಸಿ ಇಲ್ಲ. ಅವರೆಲ್ಲರ ಒಂದೇ ಬೈಗುಳವೆಂದರೆ: ನೀನು ಅಪವಿತ್ರ, ಛಿ... ತೊಲಗಾಚೆ! ಎಂಬುದೇ ಆಗಿದೆ. ಗುರುದೇವ ಹಾಗಾದರೆ 'ಪವಿತ್ರ' ಎಂದರೇನು? ಪವಿತ್ರ ಮನುಷ್ಯ ಎಂದರೆ ಯಾರು?'

'ಪ್ರಿಯ ಸುನೀತನೇ, ಕ್ಷಮೆ ಮತ್ತು ದಯೆಯೇ ಧರ್ಮದ ಮೂಲ. ಸರ್ವರಿಗೂ ಸರಿ ಕಂಡ ಸನ್ಮಾರ್ಗದಲ್ಲಿ ಯಾರು ನಡೆಯುತ್ತಾರೋ, ಸದ್ಗುಣವನ್ನು ಯಾರು ಆಚರಣೆಗೆ ತರುತ್ತಾರೋ ಅಂತವರ ಜೀವನವೇ 'ಪವಿತ್ರ...!'

'ಗುರುದೇವ ಅಂತರ್‌ದೃಷ್ಟಿ ಎಂದರೇನು?'

'ಬೀದಿಯ ತಿಪ್ಪೆಯ ಮೇಲೆ ಮಧುರ ಹಾಗೂ ಸುವಾಸಿತ ಹೂವು ಹೇಗೆ ಹುಟ್ಟುತ್ತದೆಯೋ ಹಾಗೆಯೇ, ಕೊಳಕು ಹಾಗೂ ಕುರುಡು ಪ್ರಾಪಂಚಿಕರ ಮಧ್ಯೆ ನಿನ್ನಂತಹ ಸುನೀತ ಹುಟ್ಟಿರುವುದೇ: ಅಂತರ್‌ದೃಷ್ಟಿ...!'

'ಎಲೈ ಸುನೀತನೇ ನನ್ನ ಮಿತ್ರನೇ, ಈ ರೀತಿಯ ನಿನ್ನ ಕೀಳು ಜೀವನದಿಂದ ನಿನಗೇನಾಗಬೇಕು? ನನ್ನೊಂದಿಗೆ ಬರಲಾರೆಯಾ...?!'

ಸುನೀತನು ಅಮೃತ ಸಿಂಚನವಾದವಂತೆ ಸಂತಸಗೊಂಡು:

'ಗುರುದೇವ, ಇನ್ನೂ ಮುಂದೆ ನಾನು ರಾತ್ರಿಯಲ್ಲಿ ಕನಸು ಕಾಣುತ್ತೇನೆ!'

ಎನ್ನು ಸುನೀತನನ್ನು ಉದ್ದೇಶಿಸಿದ ಬುದ್ಧ ಹೀಗೆ ನುಡಿದ:

'ಪ್ರಿಯ ಗೆಳೆಯ ಸುನೀತನೇ, ಕನಸುಗಳೇ ಮನುಷ್ಯನ ನಿಜ ಆಭರಣ!'

'ಹೌದು ಗುರುದೇವಾ, ನೀನು ನನ್ನಂತವನ ಕನಸು ಮತ್ತು ಹೋರಾಟದ ಮತ್ತೊಂದು ಮುಖ!!' ನೀನು ನಿಜಕ್ಕೂ ದುರ್ಬಲರ ದೊರೆಯೇ ಸರಿ...!! ಸಮಾನತೆಯ ಹರಿಕಾರನೇ ಸರಿ...!!!' ಎಂದು ತಲೆಬಾಗಿ ಬುದ್ಧನನ್ನು ಹಿಂಬಾಲಿಸಿದ. □

ಆನಂದ ಬೋಧಿಯ ಕಥೆ

ಒಮ್ಮೆ ಬುದ್ಧರ ಪರಮ ಶಿಷ್ಯನಾದ ಆನಂದನು ತನ್ನ ಗುರುವನ್ನು ಕುರಿತು ಹೀಗೆ ಪ್ರಶ್ನಿಸಿದ

'ಭಂತೆ, ಚೈತ್ರ್ಯಗಳಲ್ಲಿ ಎಷ್ಟು ವಿಧ?'

'ಆನಂದ, ಮೂರು ವಿಧ!'

ಅವುಗಳು ಯಾವುವು?'

'ಮೊದಲನೆಯದು ಶಾರೀರಿಕ ಚೈತ್ರ್ಯ, ಎರಡನೆಯದು ಮಾನಸಿಕ ಚೈತ್ರ್ಯ ಮೂರನೆಯದು ಪಾರಿಭೋಗಿಕ ಚೈತ್ರ್ಯ!'

'ಭಂತೆ, ತಾವುಗಳು ಬದುಕಿರುವಾಗಲೆ ತಮ್ಮ ಸ್ಮರಣಾರ್ಥ ಸ್ಮಾರಕಗಳನ್ನು ನಿರ್ಮಿಸಬಹುದೆ?'

'ಎಲೈ ಆನಂದ, ನನ್ನ ದೃಷ್ಟಿಯಲ್ಲಿ ಸ್ಮಾರಕಗಳೆಂದರೆ ಕೇವಲ ನಿರ್ಜೀವ ವಸ್ತುಗಳ ಸಂಕೇತವಷ್ಟೇ ಆಗಿರಬಾರದು. ನಿಜವಾದ ಚೈತ್ರ್ಯವೆಂದರೆ ಆ ಮಹಾತ್ಮನ ತತ್ತ್ವ ಸಿದ್ಧಾಂತ ಮತ್ತು ಆತನ ಧರ್ಮವನ್ನು ತಮ್ಮ ಬದುಕಿನಲ್ಲಿ ಆಚರಣೆಗೆ ತರುವುದೇ ಆಗಿದೆ!'

'ಭಂತೆ, ನನ್ನನ್ನು ತಪ್ಪಾಗಿ ಭಾವಿಸಬೇಡಿ, ನಾನು ಈ ವಿಷಯವನ್ನು ಯಾವ ಹಿನ್ನೆಲೆಯಲ್ಲಿ ಪ್ರಸ್ತಾಪಿಸಿದೆ ಎಂದರೆ, ಚೇತನವನದಲ್ಲಿ ತಾವಿಲ್ಲದ ಸಮಯದಲ್ಲಿ ಭಿಕ್ಕುಗಳು ಮತ್ತು ಉಪಾಸಕರು ತಮ್ಮನ್ನು ಕಾಣಲು ಬರುತ್ತಾರೆ. ತಮ್ಮ ಉಪದೇಶವನ್ನು ಕೇಳಲು ಬಯಸುತ್ತಾರೆ. ಗಂಧದ ಕಡ್ಡಿ ಮತ್ತು ಹೂವುಗಳೊಂದಿಗೆ ಬರುತ್ತಾರೆ. ತಮ್ಮನ್ನು ಕಾಣದವರಿಗೆ ಗಂಧದ ಕುಟೀರದ ಬಾಗಿಲಲ್ಲಿ ಆ ಗಂಧ ಮಾಲೆಯನ್ನು ಇರಿಸಿ ಕೈ ಮುಗಿದು ನಿಟ್ಟುಸಿರು ಬಿಟ್ಟು ಹಿಂದಿರುಗುತ್ತಾರೆ. ಆದ್ದರಿಂದ ಒಂದು ಚೈತ್ರ್ಯವಿದ್ದರೆ ಆ ಮೂಲಕ ತಮ್ಮನ್ನು ಮನದಲ್ಲಿ ಪ್ರತಿನಿಧಿಸಿಕೊಂಡು ಧನ್ಯರಾಗುತ್ತಾರೆ. ಆ ಬಗ್ಗೆ ಶ್ರಾವಸ್ಥಿ ದೊರೆ ಅನಾಥವಂತಿಕ ಮತ್ತು ಮಹಾ ಉಪಾಸಕಿ ವಿಶಾಖರು ತಮ್ಮ ಬಳಿ ಚರ್ಚಿಸಲು ಬೇಡಿದರು'

'ಆನಂದ, ನಾನು ಪರಿನಿಬ್ಬಾಣ ಹೊಂದುವ ತನಕ ಶಾರೀರಿಕ ಚೈತ್ರ್ಯವನ್ನು ನಿರ್ಮಿಸುವುದು ಥರವಲ್ಲ. ಇನ್ನೂ' ಮಾನಸಿಕ ಚೈತ್ರ್ಯ ಅವರವರ ಮನದಲ್ಲಿಯೇ ನೆಲೆನಿಲ್ಲತಕ್ಕದ್ದು. ಆದ್ದರಿಂದ ನಾನು ಬದುಕಿರುವಾಗ ಅಥವಾ ಪರಿನಿಬ್ಬಾಣ ಹೊಂದಿದ ಮೇಲೂ ಮಹಾಬೋಧಿ ಚೈತ್ರ್ಯವನ್ನು ನಿರ್ಮಿಸಬಹುದು!' ಎನ್ನಲು ಮಹಾ ಮೊಗ್ಗಲಾಯನರು ಗಯೆಗೆ ತೆರಳಿ ಬುದ್ಧರಿಗೆ ಜ್ಞಾನೋದಯ ತಂದುಕೊಟ್ಟ ಮಹಾಬೋಧಿ ವೃಕ್ಷಕ್ಕೆ ನಮಿಸಿ ಅದನ್ನು ಮೂರು ಸುತ್ತು ಪ್ರದಕ್ಷಿಣೆ ಹಾಕಿ ಗಂಧ ಮಾಲೆಯನ್ನು ಅರ್ಪಿಸಿದ ಬಳಿಕ ತಲೆಬಾಗಿ ನಮಿಸುತ್ತಾ:

'ಲೋಕಕ್ಕೇ ಬೆಳಕನ್ನು ನೀಡಿದ ಎಲೈ ಮಹಾಬೋಧಿಯೇ ನಿನ್ನ ಕಳಿತ ಫಲವನ್ನು ಕೊಂಡ್ಯೊಯಲು ನೂರಾರು ಗ್ರಾಮದಿಂದ ನಡೆದು ಬಂದಿದ್ದೇನೆ. ಮುಂದೆ ನೀನು ಲೋಕದಲ್ಲಿ ಬುದ್ಧರ ಸಂಕೇತವಾಗಿ ಸದಾ ಕಾಲವು ಶೋಭಿಸುವಂತವನಾಗು...!' ಎಂದು ತಮ್ಮ ಮನದಾಳದ ಇಂಗಿತವನ್ನು ವ್ಯಕ್ತಪಡಿಸುತ್ತಾ ಒಂದು ಕಳಿತ ಫಲವನ್ನು ಆಯ್ದು ಅದರ ಬೀಜವನ್ನು ಸಂಗ್ರಹಿಸಿಕೊಂಡು ಶ್ರಾವಸ್ತಿಗೆ ಹಿಂದಿರುಗಿದರು.

ಶ್ರಾವಸ್ತಿ ನರೇಶನು ಚೇತನವನದ ಗಂಧದ ಕುಟೀರದ ಹೆಬ್ಬಾಗಿಲ ಎದುರು ಆಳವಾದ ಗುಂಡಿಯನ್ನು ತೋಡಿ ಒಂದು ಚಿನ್ನದ ದೊಡ್ಡ ಕಡಾಯದ ತಳವನ್ನು ತೂತು ಮಾಡಿ ಆ ಗುಂಡಿಯಲ್ಲಿ ಇಟ್ಟರು. ಆ ಚಿನ್ನದ ಕಡಾಯಿಗೆ ಗೊಬ್ಬರ ಮತ್ತು ಮಣ್ಣನ್ನು ತುಂಬಿಸಿದ ಬಳಿಕ ಹೀಗೆ ಯೋಚಿಸಿದರು. ನಾನು ಈ ರಾಜ್ಯದ ಮಹಾರಾಜನೇ ಇರಬಹುದು, ರಾಜ್ಯಬರಬಹುದು ಯಾವುದಾದರೂ ಕ್ಷಣದಲ್ಲಿ ಹೋಗಬಹುದು-ಆದ್ದರಿಂದ ನನ್ನ ರಾಜಪದವಿ ಶಾಶ್ವತವಲ್ಲ. ಆದರೆ ಮಹಾದಾನಿಯೂ ಶೀಲವಂತನೂ ಆದ ಮಹಾಶ್ರೇಷ್ಠ ಅನಾಥಪಿಂಡಿಕನೂ ಮಹಾತ್ಮನೇ ಸರಿ. ಆತನೇ ಸರಿಯಾದ ಅಧಿಕಾರಿ ಎಂದು ಬಗೆದು ಆತನಿಂದಲೇ ಆ ಚಿನ್ನದ ಕಡಾಯಕ್ಕೆ ಬೋಧಿ ಬೀಜವನ್ನು ನೆಡಿಸಿದ.

ಬಳಿಕ ಅದು ಹೆಮ್ಮರವಾಗಿ ಬೆಳೆಯಿತು. ಬುದ್ಧರ ಚೇತನವನದಲ್ಲಿ ಇಲ್ಲದ ಸಂದರ್ಭದಲ್ಲಿ ಭಿಕ್ಕುಗಳು ಮತ್ತು ಉಪಾಸಕರು ಬುದ್ಧನ ಅನುಪಮ ರೂಪವನ್ನು ಮನದಲ್ಲಿ ನೆನೆದು ತಾವು ತಂದ ಗಂಧ ಮಾಲಿಕೆಯನ್ನು ಆ ಮಹಾಬೋಧಿಗೆ ಅರ್ಪಿಸುತ್ತಿದ್ದರು. ಅದಕ್ಕೆ ನಮಿಸಿದ ಬಳಿಕ ಅದರ ವಿಶಾಲವೂ ವಿಸ್ತಾರವೂ ಮತ್ತು ತಂಪಾದ ನೆರಳಿನ ಅಡಿಯಲ್ಲಿ ಕುಳಿತು ಬುದ್ಧರ ತತ್ತ್ವ, ಸಿದ್ಧಾಂತ ಮತ್ತು ಧರ್ಮವನ್ನು ಕುರಿತು ಧ್ಯಾನ ಮಾಡುತ್ತಿದ್ದರು. ತಮ್ಮ ದುಃಖ, ದುಃಖದ ಮೂಲ, ದುಃಖದ ನಿವಾರಣೆ ಮತ್ತು ದುಃಖ ನಿವಾರಣಾ ಮಾರ್ಗಗಳನ್ನು ಕಂಡು ಕೊಳ್ಳುತ್ತಿದ್ದರು. ಆ ಮೂಲಕ ಶಾಂತಿ ಮತ್ತು ಯಶಸ್ಸನ್ನು ಪಡೆದುಕೊಳ್ಳುತ್ತಿದ್ದರು. ಬಳಿಕ ಹೊಸ ಬದುಕು ಮತ್ತು ಭರವಸೆಯೊಂದಿಗೆ ಮರಳತೊಡಗಿದರು.

ಹೀಗೆ ಬುದ್ಧರಿಗೆ ಅವರ ತತ್ತ್ವ, ಸಿದ್ಧಾಂತ ಮತ್ತು ಧರ್ಮಕ್ಕೆ ನಾಲ್ಕು ನಿತ್ಯಸತ್ಯ ಹಾಗೂ ಅಷ್ಟಾಂಗ ಮಾರ್ಗಕ್ಕೆ ಆ ಮಹಾಬೋಧಿಯು ಚೈತ್ರ್ಯವಾಗಿ ಇತಿಹಾಸ ನಿರ್ಮಿಸಿತು. ಅದನ್ನು ಅರಿತ ಬುದ್ಧರು ಶ್ರಾವಸ್ತಿಯ ರಾಜನನ್ನು ಕುರಿತು:

'ಎಲೈ ರಾಜನೇ ಇದು ಬುದ್ಧಬೋಧಿ ಎನ್ನುವ ಬದಲು 'ಆನಂದಬೋಧಿ' ಎಂದೇ ಪ್ರಸಿದ್ಧವಾಗಲಿ!' ಎಂದಾಗ ಮಹಾರಾಜ ಮತ್ತು ಆನಂದರು ಬುದ್ಧರಿಗೆ ನಮಿಸುತ್ತಾ:

'ಅದು ತಮ್ಮ ಮತ್ತೊಂದು ಉದಾರಗುಣದ ದ್ಯೋತಕ...!!' ಎಂದರು. □

'SAMVADA' Kannada Monthly, Sept 2007 RNI-KAR KAN/2002/9246 CPMG/KA/BGW-706/2006-08
Office of Posting: RAJAJINAGAR HO, Date of Posting: 27-28 of Every Month

ಕೇಂದ್ರ ಸಾಹಿತ್ಯ ಅಕಾದೆಮಿ,
ದಕ್ಷಿಣ ಪ್ರಾದೇಶಿಕ ಕಚೇರಿ, ಸೆಂಟ್ರಲ್ ಕಾಲೇಜ್ ಆವರಣ,
ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು-560001

ಹೊಸ ಕನ್ನಡ ಪ್ರಕಟಣೆಗಳು

ಕಾದಂಬರಿಗಳು:

* ಆ ದೀರ್ಘ ಮೌನ (ಇಂಗ್ಲೀಷ್ ಮೂಲ: ಶಶಿ ದೇಶಪಾಂಡೆ, ಅನು : ವಿಜಯ ಕಣೇಕಲ್ 120.00
* ಆರು ಅಡಿ ಭೂಮಿ (ಉರ್ದೂ ಮೂಲ: ಅಬ್ದುಸ್ಸಮದ್; ಅನು: ಪಂಚಾಕ್ಷರಿ ಹಿರೇಮಠ 150.00
* ಅರ್ಧನಾರೀಶ್ವರ (ಹಿಂದಿ ಮೂಲ: ವಿಷ್ಣು ಪ್ರಭಾಕರ್; ಅನು: ಎಸ್.ಎಮ್. ರಾಮಚಂದ್ರಸ್ವಾಮಿ) 250.00
* ನೀಲಿಚಂದಿರ (ಹಿಂದಿ ಮೂಲ: ಶಿವಪ್ರಸಾದ ಸಿಂಹ; ಅನು: ಪಿ. ಶಶಿಕಲಾ) 350.00
* ಚಿಟ್ಟಾಲಹು (ಪಂಜಾಬೀ ಮೂಲ: ನಾನಕ್ ಸಿಂಗ್; ಅನು: ಲವ್‌ಲೀನ್ ಜಾಲಿ, ವಿಜಯಲಕ್ಷ್ಮಿ ಅರಸ್) 85.00
* ಗೋಡೆಯಲ್ಲಿ ಒಂದು ಕಿಟಕಿ ಇರುತ್ತಿತ್ತು (ಹಿಂದಿ ಮೂಲ: ವಿನೋದಕುಮಾರ್ ಶುಕ್ಲ; ಅನು: ತೇಜಸ್ವಿ ಕಟ್ಟಿಮನಿ) 100.00

ಕಥಾ ಸಂಕಲನ:

* ಸ್ವರ್ಣಕಮಲಗಳು (ತೆಲುಗು ಮೂಲ: ಇಲ್ಲಿಂದಲ ಸರಸ್ವತೀದೇವಿ; ಅನು-ಪಿ. ವೇಣು-ಗೋಪಾಲ್) 300.00
* ಸಿ.ವಿ. ಶ್ರೀರಾಮನ್ ಕತೆಗಳು (ಮಲಯಾಳಂ; ಅನು-ಅಶೋಕ್ ಕುಮಾರ್) 300.00
* ದೇವರ ಮನೆ ಇತರ ಕತೆಗಳು (ಒರಿಯಾ; ಅನು ಸೀತಾರಾಮಯ್ಯ ಸೊಮನಾಥ್) 125.00
* ತಂದೆಯ ಸ್ನೇಹಿತ (ತಮಿಳು; ಅಶೋಕ ಮಿತ್ರನ್; ಅನು: ಶೇಷನಾರಾಯಣ) 100.00
* ಸಮಕಾಲೀನ ಭಾರತೀಯ ಇಂಗ್ಲಿಷ್ ಸಣ್ಣ ಕಥೆಗಳು (ಸಂ.ಶಿವ್.ಕೆ. ಕುಮಾರ್; ಅನು ಮಹಾಬಲೇಶ್ವರ ಕಾಟ್ರಹಳ್ಳಿ) 150.00
  ಉಲ್ಲಂಘನ (ಒರಿಯಾ; ಪ್ರತಿಭಾ ರಾಯ್; ಅನು ಸ್ನೇಹಲತಾ ರೋಹಿಡೇಕರ್) 160.00

ಕಾವ್ಯ:

* ಕನ್ನಡ ಸಾನೆಟ್ ಸಂಗ್ರಹ (ಸಂ.ಹೆಚ್.ಎಸ್. ವೆಂಕಟೇಶಮೂರ್ತಿ) 85.00
* ಶಬ್ದ ಗರ್ಭಿತ ಆಕಾಶ (ಒರಿಯಾ ಮೂಲ: ಸೀತಾಕಾಂತ್ ಮಹಾಪಾತ್ರ; ಅನು: ಕಮಲಾ ಹೆಮ್ಮಿಗೆ) 90.00
* ಸಂಬಂಧ (ಇಂಗ್ಲಿಷ್: ಜಯಂತ ಮಹಾಪಾತ್ರ; ಅನು: ಲಕ್ಷ್ಮೀನಾರಾಯಣಭಟ್) 50.00
* ತಮಿಳು ಕವಿತೆಗಳು (ಸಂಪಾದಕರು: ಚಂದ್ರಶೇಖರ ಕಂಬಾರ ಮತ್ತು ಓ. ಎಲ್ ನಾಗಭೂಷಣ ಸ್ವಾಮಿ) 40.00
* ಆಧುನಿಕ ಮಹಾಭಾರತ (ಗುಂಟೂರು ಶೇಷೇಂದ್ರಶರ್ಮರ ತೆಲುಗು ಆಧುನಿಕ ಮಹಾಕಾವ್ಯ;
  ಅನು: ಅರ್ಕಸಾಲಿ ವೃಷಭೇಂದ್ರಾಚಾರ್) 200.00
* ಮಲಯಾಳದ ಜಾನಪದ ಹಾಡುಗಳು (ಸಂ. ಅಯ್ಯಪ್ಪ ಪಣಿಕ್ಕರ್; ಅನು: ಸಿ. ರಾಘವನ್) 125.00

ಇತರ

* ಸೌಗಂಧಿಕಾ ಪರಿಣಯ (ಮುಮ್ಮಡಿ ಕೃಷ್ಣರಾಜ ಒಡೆಯರ್; ಸಂ.ಹೆಚ್.ಎಸ್. ಶ್ರೀಮತಿ) 600.00
* ತತ್ವಮಸಿ (ಮಲಯಾಳಂ ಮೂಲ: ಸುಕುಮಾರ್ ಅಳಿಕ್ಕೋಡ್, ಅನು: ವಿ. ಗೋಪಾಲಕೃಷ್ಣ) 200.00
* ಭಾರತೀಯ ಇಂಗ್ಲೀಷ್ ಸಾಹಿತ್ಯ ಚರಿತ್ರೆ (ಎಂ.ಕೆ. ನಾಯಕ್; ಅನು: ಬಸವರಾಜ ನಾಯ್ಕರ್) 200.00
* ತೆಲುಗು-ಕನ್ನಡ ನಿಘಂಟು (ಸಂ.ಪಾಣ್ಯಂ ರಾಮಶೇಷ ಶಾಸ್ತ್ರಿ) 150.00
* ಟೀಕಾ ಸ್ವಯಂವರ: ಮರಾಠಿ ವಿಮರ್ಶಾ ಕೃತಿ (ಬಾಲಚಂದ್ರ ನೇಮಾಡೆ; ಅನು: ಚಂದ್ರಕಾಂತ ಪೋಕಳೆ) 180.00
* ಪಂಡಿತ ತಾರಾನಾಥರು ಬದುಕು ಮತ್ತು ಬರಹ: ಎಂ. ಧ್ರುವನಾರಾಯಣ 75.00

ಭಾರತೀಯ ಸಾಹಿತ್ಯ ನಿರ್ಮಾಪಕರು (ಒಂದು ಪ್ರತಿ ರೂ. 25.00)

* ವ. ರಾ. (ವ. ರಾಮಸ್ವಾಮಿ) * ನಿರಂಜನ * ಸರ್ವಜ್ಞ * ಮಹಾಕವಿ ಶ್ರೀ ಶ್ರೀ * ರಾಚಕೊಂಡ ವಿಶ್ವನಾಥಶಾಸ್ತ್ರಿ
* ಜಿ.ಪಿ. ರಾಜರತ್ನಂ * ತೀನಂ. ಶ್ರೀಕಂಠಯ್ಯ * ಮಹಾಮಹೋಪಾಧ್ಯಾಯ ಗೋಪೀನಾಥ ಕವಿರಾಜ